TIGHT BINDING BOOK

UNIVERSAL LIBRARY
OU_200398
UNIVERSAL LIBRARY

# ಸತಿ ವಿರಾಜ

## ೧

ಸಪ್ತಗ್ರಾಮ ಬಂಗಾಲದ ಹುಗುಳಿ ಜಿಲ್ಲೆಯ ಒಂದು ಹಳ್ಳಿ. ಅಲ್ಲಿ ನೀಲಾಂಬರ ಚಕ್ರವರ್ತಿ, ಪೀತಾಂಬರ ಚಕ್ರವರ್ತಿ ಎಂಬ ಅಣ್ಣತಮ್ಮಂದಿರು ವಾಸಿಸುತ್ತಿದ್ದರು. ನೀಲಾಂಬರ ಚಕ್ರವರ್ತಿಯಲ್ಲಿ ಕೆಲವು ವಿಶಿಷ್ಟ ಗುಣಗಳಿದ್ದವು. ಯಾರಾದರೂ ಸತ್ತರೆಂಬ ಸುದ್ದಿ ಅವನ ಕಿವಿಗೆ ಬೀಳುವುದೇ ತಡ, ಮೃತನ ಅಗ್ನಿಸಂಸ್ಕಾರಕ್ಕಾಗಿ ಅವನ ಕುಟುಂಬದವರಿಗೆ ನೆರವಾಗಲು ತಕ್ಷಣ ನೀಲಾಂಬರ ಸಿದ್ಧನಾಗುತ್ತಿದ್ದ. ಭಜನೆ ಮಾಡುವುದು, ಡೋಲು ಬಾರಿಸುವುದು, ಬಂಗಿ ಸೇದುವುದು ಇವೇ ಅವನ ನಿತ್ಯವಿಧಿಗಳು. ಈ ಎಲ್ಲಾ ಮಾತುಗಳಲ್ಲಿ ತಾನೇ ಶ್ರೇಷ್ಠನೆಂಬ ಹೆಮ್ಮೆ ಅವನಿಗಿರಲಿಲ್ಲ. ನೀಲಾಂಬರನ ಎತ್ತರವಾದ ಗೌರವರ್ಣದ ಶರೀರದಲ್ಲಿ ಅಸಾಧಾರಣ ಬಲವಿತ್ತು. ಪರೋಪಕಾರಿಯೆಂದು ಅವನು ಹಳ್ಳಿಯಲ್ಲೆಲ್ಲ ತುಂಬಾ ಹೆಸರಾಗಿದ್ದನು. ಆದರೂ ಆತನನ್ನು ನಿಂದಿಸುವವರೂ ಅಲ್ಲಿರದಿರಲಿಲ್ಲ. ನೀಲಾಂಬರ ಚಕ್ರವರ್ತಿ ಹಳ್ಳಿಯ ಹೆಬಗನೆಂದು ದೂಷಿಸುವ ಅನೇಕ ಜನರೂ ಅಲ್ಲಿದ್ದರು.

ನೀಲಾಂಬರನ ತಮ್ಮ ಪೀತಾಂಬರ ತೀರ ಭಿನ್ನಪ್ರಕೃತಿಯ ಮನುಷ್ಯ. ಅವನು ನೀಲಾಂಬರನಂತೆ ಎತ್ತರನೂ ಅಲ್ಲ, ಬಲಿಷ್ಠನೂ ಅಲ್ಲ. ಬಡವಾದ ಕುಳ್ಳ ದೇಹ ಅವನದು. ಸಾವಿನ ಸುದ್ದಿ ಕೇಳಿದರೆ ಮೈಮೇಲೆ ಮುಳ್ಳು ಬಂದಂತಾಗಿ ಅವನ ಕೈಕಾಲುಗಳೇ ಏಳುತಿದ್ದಿಲ್ಲ. ಅಣ್ಣನಂತೆ ಆತ ಎಳ್ಳಷ್ಟೂ ಅಲೌಕಿಕ ವ್ಯಕ್ತಿಯಾಗಿರಲಿಲ್ಲ. ಹಳ್ಳಿಯ ಹೆಬಗನೆಂದು ಕರೆಸಿಕೊಳ್ಳುವ ಯಾವ ಕೆಲಸವನ್ನೂ ಆತ ಮರೆತು ಕೂಡ ಮಾಡುತ್ತಿರಲಿಲ್ಲ.

ಬೆಳಿಗ್ಗೆ ಊಟ-ಉಡಿಗೆ ಮುಗಿಸಿ ಕಂಕುಳಲ್ಲಿ ಕಾಗದಪತ್ರದ ಗಂಟೆಟ್ಟುಕೊಂಡು ಪೀತಾಂಬರ ಮನೆಯಿಂದ ಹೊರಬೀಳುತಿದ್ದ. ಹುಗುಳಿ ಕಚೇರಿಯನ್ನು ಸೇರಿದನಂತರ ಸನಿಹದ ಆಲದ ಮರದಡಿಯಲ್ಲಿ ತನ್ನ ಆಸನ ಹಾಕುತಿದ್ದ. ಅಲ್ಲಿಯೆ ಕುಳಿತು ದಿನವೆಲ್ಲವೂ ಜನರ ಅರ್ಜಿಗಳನ್ನು ಬರೆದು ಕೊಡುತಿದ್ದ. ಇದರಿಂದ ದೊರೆತಷ್ಟು ಹಣವನ್ನು ತೆಗೆದುಕೊಂಡು ಸಂಜೆಯ

ಮುನ್ನ ಮನೆ ಸೇರುತಿದ್ದ. ಒಡನೆಯೆ ತಾನು ದಿಸವೆಲ್ಲವೂ ಶ್ರಮವಹಿಸಿ ಗಳಿಸಿದ ಹಣವನ್ನು ಪೆಟ್ಟಿಗೆಯಲ್ಲಿರಿಸುತಿದ್ದ. ರಾತ್ರಿ ಮಲಗುವ ಮುನ್ನ ಪೀತಾಂಬರ ತಾನೆ ಬಾಗಿಲು ಕಿಟಿಕೆಗಳನ್ನು ಮುಚ್ಚುತಿದ್ದ. ಹಾಗೂ ಹೆಂಡತಿ ಯಿಂದ ಅವುಗಳನ್ನು ಅನೇಕ ಬಾರಿ ನೋಡಿಸಿದ ನಂತರವೆ ನಿದ್ದೆಹೋಗುತಿದ್ದ.

ಇಂದು ನಸುಕಿನಲ್ಲಿ ನೀಲಾಂಬರ ದೇವೀಮಂದಿರದ ಒಂದು ಮೂಲೆ ಯಲ್ಲಿ ಕುಳಿತು ತಂಬಾಕು ಸೇದುತಿದ್ದ. ಅಷ್ಟರಲ್ಲಿ ಅವನ ಅವಿವಾಹಿತ ತಂಗಿ ಹರಿಮತಿಯು ಸದ್ದಿಲ್ಲದೆ ಬಂದು ಆತನ ಹಿಂದೆ ಮೊಂಡೆಯೂರಿ ಕುಳಿತು ಅಣ್ಣನ ಬೆನ್ನಿನಲ್ಲಿ ಮುಖ ಮರೆಸಿ ಅಳತೊಡಗಿದಳು. ನೀಲಾಂಬರ ಗುಡಗುಡಿಯನ್ನು ಗೋಡೆಗಾನಿಸಿ ಅಂದಾಜಿನಿಂದ ತನ್ನ ಕೈಯನ್ನು ಹಿಂದಕ್ಕೆ ಚಾಚಿ ತಂಗಿಯ ತಲೆಯ ಮೇಲೆ ಇಟ್ಟ. ಬಳಿಕ ಸ್ನೇಹಪೂರ್ವಕವಾಗಿ "ನಸುಕಿನಲ್ಲಿಯೇ ಏಕೆ ಅಳುತ್ತಿರುವೆ ತಂಗೀ ?'' ಎಂದು ವಿಚಾರಿಸಿದ.

ಹರಿಮತಿ ತನ್ನ ಕಣ್ಣುಜ್ಜುತ್ತ ಅಣ್ಣನ ಬೆನ್ನನ್ನೆಲ್ಲಾ ತೋಯಿಸುತ್ತ "ಅತ್ತಿಗೆ ನನ್ನ ಕೆನ್ನೆಗೆ ಹೊಡೆದು ಕುರುಡಿಯೆಂದು ಬಯ್ದಳು'' ಎಂದು ದೂರು ಹೇಳಿದಳು.

ನೀಲಾಂಬರ ನಗುತ್ತ - ''ಕುರುಡಿ ಎಂದು ಬಯ್ದಳೆ? ಇಷ್ಟು ಸುಂದರ ಕಣ್ಣುಗಳಿದ್ದೂ ನಿನಗೆ ಕುರುಡಿ ಎನ್ನುವಾಕೆಯೆ ಕುರುಡಿ. ಆದರೆ ಅವಳು ನಿನಗೆ ಏಟು ಕೊಟ್ಟಿದ್ದೇಕೆ ?"

ಹರಿಮತಿಯು ಅಳುತ್ತಅಳುತ್ತ - ''ಅಕಾರಣವಾಗಿ'' ಎಂದಳು.

"ಅಕಾರಣವಾಗಿಯೆ ? ಸರಿ, ವಿಚಾರಿಸೋಣ ನಡೆ" ಎಂದು ತಂಗಿಯ ಕೈ ಹಿಡಿದುಕೊಂಡು ಮನೆಗೆ ಬಂದವನೆ ನೀಲಾಂಬರನು "ವಿರಾಜ ?" ಎಂದು ಕೂಗಿದ.

ಹಿರಿ ಸೊಸೆಯ ಹೆಸರು ವಿರಾಜ. ಒಂಬತ್ತು ವರುಷದವಳಿದ್ದಾಗಲೆ ಅವಳ ಮದುವೆಯಾಯಿತು. ಅವಳು ಇಲ್ಲಿ ಕಾಲಿಟ್ಟಂದಿನಿಂದಲೆ ವಿರಾಜ ಎಂಬ ಹೆಸರಿನಿಂದಲೇ ಪ್ರಸಿದ್ಧಳಾಗಿದಾಳೆ. ಈ ಪ್ರಸಂಗ ನಡೆದಾಗ ಹಿರಿ ಸೊಸೆ ವಿರಾಜಳ ವಯಸ್ಸು ೧೯-೨೦ ಇರಬಹುದು. ಅತ್ತೆಯು ಕಾಲವಾದ ನಂತರ ಅವಳೆ ಮನೆಯ ಯಜಮಾನಿತಿ.

ಸೊಸೆ ವಿರಾಜಳಂತಹ ಸುಂದರ ಸ್ತ್ರೀ ಸಾಧಾರಣವಾಗಿ ಅಪರೂಪ ವೆಂದೇ ಹೇಳಬಹುದು. ಸಪ್ತ–ಗ್ರಾಮ ಅದೇಕೆ ಅದರ ಸುತ್ತಮುತ್ತಲಿನ ಗ್ರಾಮಗಳಲ್ಲಿಯೂ ಅಷ್ಟು ಸುಂದರಿಯಾದ ಯಾವ ಸ್ತ್ರೀಯೂ ಇರಲೇ ಇಲ್ಲ. ನಾಲ್ಕೈದು ವರುಷಗಳ ಹಿಂದೆ ಅವಳಿಗೆ ಒಂದು ಗಂಡುಮಗು ಹುಟ್ಟಿತ್ತು; ಆದರೆ ಹೆರಿಗೆಯ ಕೋಣೆಯಲ್ಲಿಯೆ ಅವಳ ಮಡಿಲನ್ನು ಬರಿದು ಮಾಡಿ ಈ ಲೋಕವನ್ನು ಬೀಳ್ಕೊಟ್ಟಿತು. ಆಮೇಲೆ ಅವಳಿಗೆ ಮಕ್ಕಳಾಗಲೆ ಇಲ್ಲ. ನೀಲಾಂಬರನು ಕೂಗಿದಾಗ ಅವಳು ಅಡುಗೆಮನೆಯಲ್ಲಿ ಕೆಲಸ ಮಾಡು ತಿದ್ದಳು. ಗಂಡನ ಕರೆ ಕೇಳಿ ಹೊರಬಂದಳು. ಅಣ್ಣ ತಂಗಿಯರು ಒಟ್ಟಿಗೆ ಇದ್ದುದನ್ನು ನೋಡಿದೊಡನೆಯೆ ಅವಳು ಕೆಂಡದಂತಾದಳು. ಒಗರು ದನಿಯಲ್ಲಿ – "ಕತ್ತೆ – ನೀನು ದೂರು ಹೇಳಲು ಹೋದದ್ದೊ ?" ಎಂದು ಸಿಡುಕಿದಳು.

ನೀಲಾಂಬರ ಒಡನುಡಿದ - "ಏಕೆ ದೂರು ಹೇಳಕೂಡದು? ಅವಳನ್ನು ಕುರುಡಿಯೆಂದು ನೀನು ಬಯ್ದದ್ದರಿಂದ ಅವಳಿಗಾವ ಹಾನಿಯೂ ಇಲ್ಲ. ಏಕೆಂದರೆ ಆ ಮಾತು ಸತ್ಯವಲ್ಲ. ಅಲ್ಲದೆ ಅಂತಹ ಸುಳ್ಳು ಮಾತು ಆಡಿದುದಕ್ಕೆ ನೀನೆ ಪಾಪಕ್ಕೆ ಹೊಣೆಯಾಗಬೇಕಾಗುವುದು. ಅದಿರಲಿ, ನೀನು ಅವಳಿಗೆ ಏಟು ಕೊಟ್ಟಿದ್ದೇಕೆ ?"

"ಇಷ್ಟು ದೊಡ್ಡವಳಾಗಿ ಬೆಳೆದರೂ ಇವಳಿಗೆ ಸ್ವಲ್ಪವೂ ಬುದ್ಧಿ ಇಲ್ಲ. ಹಾಸಿಗೆಯಿಂದೆದ್ದ ಕೂಡಲೆ ಇವಳು ಮುಖವನ್ನೂ ತೊಳೆಯ ಲಿಲ್ಲ; ಬಟ್ಟೆಯನ್ನೂ ಬದಲಿಸಲಿಲ್ಲ. ನೇರವಾಗಿ ಹಟ್ಟಿಗೆ ಬಂದವಳೆ ಕರು ವನ್ನು ಬಿಚ್ಚಿ ಬಾಯ್ದೆರೆದು ನೋಡುತ್ತ ನಿಂತಿದಾಳೆ. ಇವೊತ್ತು ಒಂದು ಹನಿ ಹಾಲು ಸಹ ಸಿಗಲಿಲ್ಲ. ಇವಳ ಚರ್ಮ ಸುಲಿಯಬೇಕು" ಎಂದು ಜರೆದಳು ವಿರಾಜ.

ನೀಲಾಂಬರನೆಂದ - "ಹಾಗಲ್ಲ - ನೀನು ಹಟ್ಟಿಗೆ ಹೋಗುವ ಬದಲು ಒಕ್ಕಲುಗಿತ್ತಿಯನ್ನು ಕಳಿಸಬೇಕಿತ್ತು. ಇರಲಿ - ಕರು ಬಿಚ್ಚಲು ನೀನೇಕೆ ಹಟ್ಟಿಗೆ ಹೋದೆ ತಂಗೀ ? ಈ ಕೆಲಸವಂತೂ ನಿನ್ನದಲ್ಲವೆ ಅಲ್ಲ."

ದೊಡ್ಡಣ್ಣನ ಹಿಂದೆ ನಿಂತ ಹರಿಮತಿಯು ಮೆತ್ತಗೆ ಹೇಳಿದಳು - "ಹಾಲು ಕರೆದಾಗಿದೆಯೆಂದು ನಾ ತಿಳಿದಿದ್ದೆ."

"ಇನ್ನೆಂದೂ ಹೀಗೆ ಮಾಡಬೇಡ" ಎಂದು ನುಡಿದು ವಿರಾಜ ಪುನಃ ಅಡುಗೆಮನೆ ಪ್ರವೇಶಿಸಬೇಕೆನ್ನುವಾಗಲೆ ನೀಲಾಂಬರನು ನಗುತ್ತ "ನೀನೂ ಸಹ ಇದೆ ವಯಸ್ಸಿನಲ್ಲಿ ಪಂಜರದ ಬಾಗಿಲನ್ನು ತೆರೆದುಬಿಟ್ಟು ಅಮ್ಮನ ಹಕ್ಕಿಯನ್ನು ಹಾರಬಿಟ್ಟೆ. ಪಂಜರ ಹಕ್ಕಿ ಹಾರಲಾರದೆಂದು ಆಗ ನಿನ್ನ ತಿಳಿವಳಿಕೆ ಇತ್ತು. ನಿನಗೆ ಆ ಸಂಗತಿ ನೆನಪಿದೆಯಲ್ಲವೆ?"

ವಿರಾಜ ಹೊರಳಿ ನಿಂತು ಮುಗುಳು ನಗೆ ಬೀರುತ್ತ - "ನೆನಪಂತೂ ಇದೆ. ಆದರೆ ಆಗ ನನ್ನ ವಯಸ್ಸು ಇವಳಷ್ಟು ಆಗಿರಲಿಲ್ಲ. ಇನ್ನೂ ಚಿಕ್ಕವಳಿದ್ದೆ" ಎಂದು ಅಲ್ಲಿಂದ ಹೊರಟು ತನ್ನ ಕೆಲಸದಲ್ಲಿ ತೊಡಗಿಕೊಂಡಳು.

"ನಡೆ ಅಣ್ಣಾ, ತೋಟಕ್ಕೆ ಹೋಗಿ ಮಾವಿನ ಗಿಡದಲ್ಲಿ ಹಣ್ಣುಗಳಾಗಿವೆಯೊ ಇಲ್ಲವೊ ನೋಡೋಣ" ಎಂದಳು ಹರಿಮತಿ.

"ಆಗಲಿ ತಂಗಿ, ಹೋಗೋಣ ನಡೆ."

ಯದುಚಾಕರ ಮನೆಯೊಳಗೆ ಹೋಗಿ - "ನಾರಾಯಣ ಬಾಬಾ ಅವರು ಹೊರಗೆ ಕುಳಿತುಕೊಂಡಿದ್ದಾರೆ" ಎಂದು ಕೂಗಿ ಹೇಳಿದ.

ಕೇಳಿ ನೀಲಾಂಬರ ಇಳಿದೇ ಹೋದ. ಬೀಳುದನಿಯಲ್ಲಿ - "ಅವರು ಈಗಾಗಲೆ ಬಂದು ಕುಳಿತುಬಿಟ್ಟರೆ?" ಎಂದ.

ಈ ಸಂಗತಿ ಕಿವಿಗೆ ಬೀಳುತ್ತಲೆ ವಿರಾಜ ತ್ವರೆಯಾಗಿ ಅಡುಗೆಮನೆಯಿಂದ ಬಂದು ಏರುದನಿಯಲ್ಲಿ - "ಚಿಕ್ಕಪ್ಪನಿಗೆ ತಮ್ಮ ಮನೆಗೆ ಹೋಗಲು ಹೇಳಿ" ಎಂದು ಗಂಡನ ಮುಖವನ್ನೆ ದಿಟ್ಟಿಸುತ್ತ - "ಬೆಳಗುಬೆಳಗಾಗುತ್ತಲೆ ಈ ಜನ ಹೀಗೆ ಪೀಡಿಸತೊಡಗಿದರೆ ನಾನು ಹಣೆ ಜಜ್ಜಿಕೊಂಡು ಸತ್ತೇ ಹೋಗುವೆ. ಇತ್ತೀಚೆ ಇದೆಲ್ಲ ಏನು ನಡೆದಿದೆ?"

ನೀಲಾಂಬರನು ಉತ್ತರವೀಯದೆ ತಂಗಿಯ ಕೈ ಹಿಡಿದುಕೊಂಡು ಮೌನವಾಗಿ ತೋಟಕ್ಕೆ ನಡೆದ.

ತೋಟದ ಒಂದು ಬದಿಯಿಂದ ಸರಸ್ವತಿ ನದಿಯು ಹರಿಯುತಿತ್ತು. ಅದರ ಕ್ಷೀಣಧಾರೆಯು, ಪರಲೋಕ ಯಾತ್ರೆಗೆ ಪೂರ್ಣಸಿದ್ಧನಾಗಿ ಕುಳಿತ ವ್ಯಕ್ತಿಯ ಶ್ವಾಸೋಚ್ಛ್ವಾಸದಂತೆ ಆಗಲೂ ಮಂದವಾಗಿ ಹರಿಯುತಿತ್ತು. ನದಿಯು ಪಾಚಿಯಿಂದ ತುಂಬಿಹೋಗಿತ್ತು. ಹಳ್ಳಿಗರು ನೀರು ತುಂಬಲು ನದಿ

ಯಲ್ಲಿ ಆಗೆದ ಒರತೆಗಳಲ್ಲಿ ಮಾತ್ರ ಪಾಚಿಯಿರಲಿಲ್ಲ. ಅಲ್ಲದೆ ಅವುಗಳ ಬಳಿಯಲ್ಲಿಯೆ ಹರಿಯುತಿದ್ದ ಝರಿಗಳಲ್ಲಿಯೂ ಪಾಚಿಯಿರಲಿಲ್ಲ. ಆ ಝರಿಗಳು ಯಾವಾಗಲೂ ನೀರುದುಂಬಿ ಹರಿಯುತಿದ್ದವು. ಅವು ಅಷ್ಟೊಂದು ಆಳವಾಗಿಯೂ ಇರಲಿಲ್ಲ. ಅವುಗಳ ಅಡಿಯಲ್ಲಿ ಬಿದ್ದಿದ್ದ ಸಿಂಪು, ಬೆಣಚುಗಲ್ಲುಗಳು ಸೂರ್ಯ ಪ್ರಕಾಶದಲ್ಲಿ ನೂರಾರು ರತ್ನಮಣಿಗಳಂತೆ ಥಳಥಳವಾಗಿ ಹೊಳೆಯುತ್ತ•ಕಣ್ಣಿಗೆ ರಮಣೀಯವಾಗಿ ತೋರುತಿದ್ದವು. ನದಿಯ ದಂಡೆಯ ಮೇಲೊಂದು ಕರಿಬಂಡೆಯಿತ್ತು. ಸನಿಹದಲ್ಲಿಯೆ ಒಂದು ಸಮಾಧಿಸ್ತೂಪವೂ ಇತ್ತು. ಈ ಕಲ್ಲುಬಂಡೆ ಆ ಸಮಾಧಿಸ್ತೂಪದ ಪ್ರಾಕಾರದ ಒಂದು ಭಾಗ. ಬಹು ಹಿಂದೆ ಯಾವುದೋ ಕಾಲದಲ್ಲಿ ಮಳೆಯ ಪ್ರಚಂಡ ಪ್ರವಾಹದೇಟಿಗೆ ಆ ಪ್ರಾಕಾರದಿಂದ ಕೊಚ್ಚಿಹೋಗಿ ನೀರಿನ ಸೆಳೆತದಿಂದ ಜರಿಯುತ್ತ ಜರಿಯುತ್ತ ಅಲ್ಲಿ ಬಂದು ಬಿದ್ದಿತ್ತು. ನೀಲಾಂಬರನ ಮನೆಯ ಹೆಂಗುಸರು ಮೃತಾತ್ಮನ ಶಾಂತಿಗಾಗಿ ನಿತ್ಯ ಸಾಯಂಕಾಲ ಆ ಬಂಡೆಯ ಬದಿ ನೀಲಾಂಜನವನ್ನಿಡುತ್ತಿದ್ದರು. ತಂಗಿಯ ಕೈ ಹಿಡಿದುಕೊಂಡು ನೀಲಾಂಬರ ಅಲ್ಲಿಗೆ ಬಂದು, ಅದೇ ಬಂಡೆಯ ಮೇಲೆ ಕುಳಿತ. ನದಿಯ ಇಬ್ಬದಿಯಲ್ಲಿಯೂ ಮಾವಿನ ದೊಡ್ಡ ದೊಡ್ಡ ತೋಪುಗಳೂ ಬಿದಿರುಮೆಳೆಯ ಗುಂಪುಗಳೂ ಇದ್ದವು. ಒಂದೆರಡು ಆರಳೆಯ ಮರಗಳೂ ಆಲದಮರಗಳೂ ಇದ್ದವು. ಆ ಮರಗಳು ಬಹು ಪ್ರಾಚೀನ ಕಾಲದವು. ಅವುಗಳ ಟೊಂಗೆಗಳು ನದಿಯ ಮುಖದವರೆಗೂ ಬಾಗಿದ್ದವು. ಆ ಟೊಂಗೆಗಳ ಮೇಲೆ ಅದೆಷ್ಟೊ ವರುಷಗಳಿಂದ ಅದೆಷ್ಟೊ ಪಕ್ಷಿಗಳು ತಮ್ಮ ಗೂಡುಗಳನ್ನು ಕಟ್ಟಿವೆ. ಎಷ್ಟೋ ಮರಿಗಳನ್ನು ಪಾಲಿಸಿ ಬೆಳೆಸಿವೆ. ಎಷ್ಟೊ ಹಣ್ಣು ಹಂಪಲು ತಿಂದಿವೆ, ಕಲರವವಾಡಿವೆ. ಇಂತಹದೆ ಒಂದು ಮರದ ತಂಪು ನೆಳಲಿನಲ್ಲಿ ಅಣ್ಣ ತಂಗಿಯರು ಸ್ವಲ್ಪಸಮಯ ಮೌನವಾಗಿ ಕಳೆದರು.

ಒಮ್ಮಿಗೇ ಹರಿಮತಿ ಅಣ್ಣನ ಬಳಿ ಮತ್ತಿಷ್ಟು ಸರಿದು - "ಹೌದಣ್ಣಾ- ಅತ್ತಿಗೆ ನಿನ್ನನ್ನು ಸನ್ಯಾಸಿಯೆಂದು ಏಕೆ ಕರೆಯುವಳು ? "

ನೀಲಾಂಬರನು ತನ್ನ ಕೊರಳಲ್ಲಿಯ ತುಳಸಿಯ ಮಾಲೆಯನ್ನು ತೋರಿಸಿ ನಗುತ್ತಲೆ ನುಡಿದ - "ನಾನು ಸನ್ಯಾಸಿ. ಆದುದರಿಂದಲೆ ಹಾಗೆಂದು ಕರೆಯುತ್ತಾಳೆ."

ಹರಿಮತಿಯು ಅಣ್ಣನ ಈ ಮಾತನ್ನು ನಂಬದಾದಳು. ಎಂದಳು: "ನೀನು ಸನ್ಯಾಸಿ ಹೇಗೆ? ಸಾಧು ಸನ್ಯಾಸಿಗಳಂತೂ ಬಿಕ್ಕೆ ಬೇಡುತ್ತ ಅಲೆಯುತ್ತಾರೆ. ಹೌದಣ್ಣಾ, ಅವರೇಕೆ ಬಿಕ್ಕೆ ಬೇಡುವರು?"

"ಅವರ ಬಳಿ ಏನೂ ಇರುವುದಿಲ್ಲ ತಂಗೀ. ಆದುದರಿಂದಲೆ ಬಿಕ್ಕೆ ಬೇಡುವರು."

ಅಣ್ಣನ ಮುಖವನ್ನೆ ದಿಟ್ಟಿಸುತ್ತ ಹರಿಮತಿಯು ಕೇಳಿದಳು - "ಆ ಜನರ ಬಳಿ ಏನೂ ಇರುವುದಿಲ್ಲವೆ? ಕೆರೆ, ತೋಟ - ಪಟ್ಟಿ, ಧಾನ್ಯ - ದವಸ ಇವಾವುವೂ ಇರುವುದಿಲ್ಲವೆ?"

ತಂಗಿಯ ತಲೆಗೂದಲುಗಳಲ್ಲಿ ಸ್ನೇಹಪೂರ್ವಕವಾಗಿ ಬೆರಳುಗಳನ್ನಾಡಿಸುತ್ತ ನೀಲಾಂಬರನೆಂದ - "ಇಲ್ಲವಮ್ಮ. ಅವರ ಬಳಿ ಏನೂ ಇರುವುದಿಲ್ಲ. ಅಲ್ಲದೆ ಸಾಧು ಸನ್ಯಾಸಿಗಳು ತಮ್ಮೊಂದಿಗೆ ಯಾವ ವಸ್ತುಗಳನ್ನೂ ಇಟ್ಟುಕೊಳ್ಳಕೂಡದು."

"ಹಾಗಾದರೆ ಎಲ್ಲರೂ ಅವರಿಗೆ ಅಲ್ಪಸ್ವಲ್ಪ ಏಕೆ ಕೊಡಕೂಡದು?"

ನೀಲಾಂಬರನೆಂದ - "ಅಯ್ಯೋ ಹುಚ್ಚಿ, ಸ್ವತಃ ನಿನ್ನ ಅಣ್ಣ ಸಾಧು ಸನ್ಯಾಸಿಗಳಿಗೆಂದಾದರೂ ಏನಾದರೂ ಕೊಟ್ಟಿದ್ದನ್ನು ನೋಡಿದೆಯಾ?"

"ಹಾಗಾದರೆ ಏಕೆ ಕೊಟ್ಟಿಲ್ಲ ಅಣ್ಣಾ? ನಮ್ಮ ಬಳಿ ಇಷ್ಟೊಂದಿದೆಯಲ್ಲ?"

ನೀಲಾಂಬರನು ಮುಗುಳು ನಗುತ - "ಆದರೂ ನಿನ್ನಣ್ಣ ಏನೂ ಕೊಡಲಾರ. ಒಬ್ಬ ರಾಜನೊಂದಿಗೆ ನಿನ್ನ ಮದುವೆಯಾಗಿ, ನೀನು ರಾಣಿಯಾದಾಗ ಸಾಧುಸಂತರಿಗೆ ಸಾಕಷ್ಟು ಅನ್ನ, ಬಟ್ಟೆ-ಬರೆ ಕೊಡುವೆಯಂತೆ ತಂಗೀ!"

ಹರಿಮತಿಯು ಆಗ ತಿಳಿವಳಿಕೆಯಿಲ್ಲದ ಹುಡುಗೆ. ಆದರೂ ಅಣ್ಣನ ಈ ಮಾತಿನಿಂದ ನಾಚಿಗೊಂಡಳು. ಅವನ ಮಡಿಲಲ್ಲಿ ಮುಖ ಹುದುಗಿಸಿ "ಹೋಗು" ಎಂದಳು.

ನೀಲಾಂಬರ ತನ್ನ ಎರಡೂ ಕರಗಳಿಂದ ಅವಳ ಮಸ್ತಕವಿಡಿದು ಮುದ್ದಿಟ್ಟ. ತಂದೆ ತಾಯಿಗಳ ಮಡಲಿನಿಂದ ದೂರಳಾದ ತನ್ನ ಈ ತಂಗಿಯನ್ನು ತುಂಬಾ ಪ್ರೀತಿಸುತ್ತಿದ್ದ. ಇಂದಿಗೆ ಏಳು ವರ್ಷಗಳ ಹಿಂದೆ ಹರಿ

ಮತಿಯ ವಿಧವೆ ತಾಯಿ, ಅವಳನ್ನು ತನ್ನ ಹಿರಿಯ ಮಗ ಸೊಸೆಯಂದಿರಿಗೆ ಒಪ್ಪಿಸಿ ಈ ಸಂಸಾರದಿಂದ ತನ್ನ ಪರಲು ಹರಿದುಕೊಂಡಾಗ ಹರಿಮತಿಯು ಕೇವಲ ಮೂರು ವರುಷದವಳು. ಅಂದಿನಿಂದ ನೀಲಾಂಬರನೆ ಅವಳ ಪಾಲನ ಪೋಷಣೆ ಮಾಡುತ್ತ ಬಂದಿದಾನೆ. ಅವನು ಹಳ್ಳಿಯ ಎಲ್ಲ ರೋಗಿಗಳ ಸೇವೆ ಮಾಡುತಿದ್ದ. ಶವದ ಅಗ್ನಿಸಂಸ್ಕಾರದಲ್ಲಿ ಮೃತರ ಮನೆಯವರಿಗೆ ನೆರವಾಗುತಿದ್ದ ; ನಿತ್ಯವೂ ಭಜನೆ ಮಾಡುತಿದ್ದ; ಮನದಣಿ ಬಂಗಿ ಸೇದುತಿದ್ದ. ಆದರೂ ತನ್ನ ತಾಯಿಯ ಅಂತಿಮ ಆದೇಶದ ಅಪಮಾನವನ್ನು ಆತ ಒಂದು ಕ್ಷಣವೂ ಮಾಡಲಿಲ್ಲ. ಅತ್ಯಂತ ಸ್ನೇಹದಿಂದ ಅವಳನ್ನು ತೊಡೆಯ ಮೇಲೆ ಲಾಲಿಸಿ ಆಡಿಸಿ ಇಷ್ಟು ದೊಡ್ಡವಳನ್ನಾಗಿ ಮಾಡಿದ್ದಾನೆ. ಆದುದರಿಂದಲೆ ಹರಿಮತಿಯು ತಾಯ ಮಡಲಿಗೆ ಸಮಾನವಾದ ಅಣ್ಣನ ಮಡಲಲ್ಲಿ ನಿಸ್ಸಂಕೋಚಭಾವದಿಂದ ಮುಖ ಹುದುಗಿಸಿ ಸುಮ್ಮನೆ ಬಿದ್ದಿದ್ದಳು.

"ಪುಟ್ಟೀ, ಅಮ್ಮನವರು ಕರೆಯುತಿದ್ದಾರೆ. ಬಾ, ಹಾಲು ಕುಡಿದು ಹೋಗು" ಎಂದು ಹಳೆಯ ಒಕ್ಕಲುಗಿತ್ತಿ ಮರೆಯಲ್ಲಿ ನಿಂತು ಕೂಗಿದಳು.

ಮೊಗವೆತ್ತಿ ಹರಿಮತಿಯು ಅನುನಯಪೂರ್ಣ ಸ್ವರದಲ್ಲಿ - "ಅಣ್ಣಾ, ನೀನು ಸ್ವಲ್ಪ ಹೇಳು ಅವಳಿಗೆ. ನಾನು ಈಗ ಹಾಲು ಕುಡಿಯುವುದಿಲ್ಲ," ಎಂದಳು.

"ಏಕೆ ಕುಡಿಯುವುದಿಲ್ಲ ತಂಗೀ ?"

"ನನಗೀಗ ಸ್ವಲ್ಪವೂ ಹಸಿವೆಯೆನಿಸುತ್ತಿಲ್ಲ."

ನೀಲಾಂಬರನೆಂದ - "ನಿನ್ನ ಈ ಮಾತಿನ ಮೇಲೆ ನಾನು ವಿಶ್ವಾಸವಿಡಬಹುದಾದರೂ, ನಿನ್ನ ಕೆನ್ನೆ ಬಾರಿಸುವವಳಿಗೆ ಈ ಮಾತಿನ ಮೇಲೆ ಖಂಡಿತವಾಗಿ ವಿಶ್ವಾಸವುಂಟಾಗದು."

ಮರೆಯಲ್ಲಿ ನಿಂತಿದ್ದ ದಾಸಿ ಪುನಃ "ಪುಟ್ಟೆ ?" ಎಂದು ಕೂಗಿದಳು.

ನೀಲಾಂಬರನು ಒತ್ತಾಯದಿಂದ ಅವಳನ್ನು ಎದ್ದುನಿಲ್ಲಿಸಿ, "ಹೋಗು ತಂಗೀ, ನೀನು ಬಟ್ಟೆ ಬದಲಿಸಿ ಹಾಲು ಕುಡಿದು ಬಾ. ನಾನು ಇಲ್ಲಿಯೆ ಕುಳಿತಿರುವೆ" ಎಂದ.

ಹರಿಮತಿಯು ಮುಖದಲ್ಲಿ ಅಪ್ರಸನ್ನತೆಯನ್ನು ತೋರುತ್ತ ಹೊರಟು ಹೋದಳು.

ಯಾವ ದಿನ ಈ ಘಟನೆಯಾಯಿತೊ ಅಂದೇ ಮಧ್ಯಾಹ್ನ ವಿರಾಜ ಗಂಡನಿಗೆ ಉಣಬಡಿಸಿ ತಟ್ಟೆಯ ಬಳಿ ಬಂದು ಕುಳಿತು - "ಅಲ್ಲಾ, ಇನ್ನು ನಿತ್ಯ ನಿಮ್ಮ ಊಟಕ್ಕೆ ಯಾವ ಬಗೆಯ ಅಡುಗೆ ಮಾಡಬೇಕು? ಇದು ತಿನ್ನುವುದಿಲ್ಲ, ಅದು ಬೇಡ ಎಂದು ನೀವು ಹೇಳುವಿರಿ. ನಿಮಗೆ ಎಲ್ಲವೂ ಅಪಥ್ಯವಾಗಿವೆ. ಕೊನೆಗೆ ಮೀನು ತಿನ್ನುವುದನ್ನೂ ಬಿಟ್ಟುಬಿಟ್ಟಿರಿ" ಎಂದಳು.

ನೀಲಾಂಬರನು ಊಟ ಮಾಡಲು ಕುಳಿತುಕೊಳ್ಳುತ್ತ - "ಅಲ್ಲೆ - ನೀನು ಎಷ್ಟು ಒಳ್ಳೆಒಳ್ಳೆಯ ತರಕಾರಿ ಮಾಡಿರುವೆ. ಅದು ಸಾಲದೆ?" ಎಂದ.

"ಏನು ಒಳ್ಳೆಯ ತರಕಾರಿ, ಇಂತಹ ಒಣಕಲು ಸೊಣಕಲು ಪಲ್ಲೆಯೊಂದಿಗೆ ಗಂಡಸರು ಎಂದಾದರೂ ಊಟಮಾಡಲು ಸಾಧ್ಯವೆ? ಬೇಕಾದ ವಸ್ತುಗಳನ್ನು ಕೊಂಡು ತರಲು ಇದು ಪಟ್ಟಣವಲ್ಲ. ಇದಂತೂ ಹೇಳಿ ಕೇಳಿ ಹಳ್ಳಿ. ಇಲ್ಲಿ ಇದ್ದು ಬಿದ್ದ ಆಸರೆಯೆಂದರೆ ಕೆರೆಯ ಮೀನು ಮಾತ್ರ. ಇತ್ತಿತ್ತಲಾಗಿ ನೀವೂ ಮೀನು ತಿನ್ನುವುದನ್ನು ಬಿಟ್ಟುಬಿಟ್ಟಿರಿ — ಪುಟ್ಟೀ! ಎಲ್ಲಿ ಹೋದೆಯೇ? ಬಾ ಸ್ವಲ್ಪ ಗಾಳಿಹಾಕು.— ಊಹೂಂ ಅದೆಂದಿಗೂ ಆಗದು. ಇಂದು ತಟ್ಟೆಯಲ್ಲಿ ಒಂದಗಳು ಅನ್ನ ಉಳಿದುದಾದರೆ ನಿಮ್ಮ ಪಾದಗಳ ಮೇಲೆ ಬಿದ್ದು ಪ್ರಾಣಬಿಡುವೆ."

ನೀಲಾಂಬರನು ತುಟಿಬಿಚ್ಚದೆ ಸೂಸುನಗೆ ಬೀರುತ್ತ ಊಟ ಮಾಡತೊಡಗಿದ.

ವಿರಾಜ ಸಿಡಿಮಿಡಿಗೊಂಡು - "ಯಾಕೆ ನಗುತಿದ್ದೀರಿ ನೀವು? ನನ್ನ ದೇಹದಲ್ಲಿ ಬೆಂಕಿಯಿಟ್ಟಂತಾಗಿದೆ. ದಿನಗಳೆದಂತೆ ನಿಮ್ಮ ಆಹಾರ ಕಡಿಮೆಯಾಗತೊಡಗಿದೆಯೆಂಬ ಬಗ್ಗೆ ನಿಮಗೆ ಅರಿವಿದೆಯೆ? ನಿಮ್ಮ ಮೈಯೆಲುಬುಗಳೆಲ್ಲವೂ ಎದ್ದು ಕಾಣತೊಡಗಿವೆ. ಇಷ್ಟಾದರೂ ಆ ಕಡೆಗೆ ನಿಮ್ಮ ಲಕ್ಷ್ಯವಿದೆಯೆ? ನಿಮ್ಮ ದೇಹದ ಅವಸ್ಥೆ ಸ್ವಲ್ಪ ನೋಡಿಕೊಳ್ಳಿ."

ನೀಲಾಂಬರನೆಂದ - "ಹಾಂ. ನನಗೆ ಲಕ್ಷ್ಯವಿದೆ. ಇದೆಲ್ಲ ನಿನ್ನ ಭ್ರಮೆ."

ವಿರಾಜ ನುಡಿದಳು - " ಭ್ರಮೆಯೆ ? ನೀವು ಯಾವುದೇ ದಿನ ಎಣಿಸಿ ಒಂದು ಅನ್ನದ ಅಗಳು ಕಡಿಮೆ ತಿಂದರೂ ನಾನು ತೋರಿಸಬಲ್ಲೆ. ಅಲ್ಲದೆ ನಿಮ್ಮ ದೇಹದ ಯಾವ ಭಾಗವೂ ಎಳ್ಳ ಮೊನೆಯುಷ್ಟು ಸೊರಗಿದರೂ ಎಲ್ಲೆಲ್ಲಿ ಎಷ್ಟೆಷ್ಟು ಸೊರಗಿದೆಯೆಂದು ಆ ಭಾಗದಲ್ಲಿ ಬೆರಳಿಟ್ಟು ತೋರಿಸ ಬಲ್ಲೆ. ಪ್ರತಿಯೊಂದು ವಿಷಯದಲ್ಲಿ ನಾನು ಅದೆಷ್ಟು ದೃಷ್ಟಿಯಿಟ್ಟಿದೇ ನೆಂದು ನೀವೇನು ಬಲ್ಲಿರಿ ? — ಹೋಗು ಮಗೂ, ಬೀಸಣಿಕೆ ಇಟ್ಟು ನಿನ್ನ ಅಣ್ಣನವರಿಗೆ ಹಾಲು ತಾ."

ಹರಿಮತಿಯು ಒಂದು ಬದಿಗೆ ನಿಂತು ಗಾಳಿಬೀಸಲು ಆರಂಭಿಸಿದ್ದಳು. ಅತ್ತಿಗೆಯ ಆಣತಿಯಂತೆ ಬೀಸಣಿಕೆ ಇಟ್ಟು ಹಾಲು ತರಲು ಹೋದಳು.

ವಿರಾಜಳೆಂದಳು - " ಧರ್ಮಕರ್ಮಗಳನ್ನು ಮಾಡಲು ಇನ್ನೂ ಎಷ್ಟೋ ದಿನಗಳು ಬಿದ್ದಿವೆ. ಇಂದು ಆ ಮನೆಯ ಸೋದರತ್ತೆ ಬಂದಿದ್ದರು. ನಿಮ್ಮ ವಿಷಯ ತಿಳಿದು, ಈ ಚಿಕ್ಕ ವಯಸ್ಸಿನಲ್ಲಿಯೆ ಮೀನು ತಿನ್ನುವುದನ್ನು ಬಿಟ್ಟರೆ ಕಣ್ಣಿನ ಕಾಂತಿ ಕಡಮೆಯಾಗುವುದೆಂದೂ ಶರೀರ ದುರ್ಬಲವಾಗು ವುದೆಂದೂ ಹೇಳಿದರು. ಇಲ್ಲ ಇಲ್ಲ, ಹಾಗೆಂದಿಗೂ ಆಗಗೊಡಲಾರೆ. ಕೊನೆಗೆ ಏನಾದರೂ ಅನಿಷ್ಟ ಸಂಭವಿಸಿದರೆ ? ನೀವು ಮೀನು ತಿನ್ನುವು ದನ್ನು ಬಿಡುವುದಕ್ಕೆ ನಾನೆಂದಿಗೂ ಒಪ್ಪೆನು."

ನೀಲಾಂಬರ ನಕ್ಕುಬಿಟ್ಟ. " ನನ್ನ ಪರವಾಗಿ ನೀನೆ ರಾಶಿ ರಾಶಿ ಮೀನು ತಿನ್ನುತ್ತಿರು. ನೀನು ತಿನ್ನುವುದರಿಂದ ನನ್ನ ದೇಹಕ್ಕೆ ಲಾಭ ಉಂಟಾಗುವುದು " ಎಂದ ನೀಲಾಂಬರ.

ವಿರಾಜ ಸಿಟ್ಟು ಬೆಂಕಿಯಾದಳು. " ಹೊಲೆಮಾದಿಗರಂತೆ ಪುನಃ ಬಾಯಿ ಬಡೆಯಲು ಪ್ರಾರಂಭಿಸಿದಿರಾ ನೀವು ? " ಎಂದು ಸಿಡಿದಳು.

ಸ್ವಲ್ಪ ತಣ್ಣಗಾಗಿ ನೀಲಾಂಬರ ಪುನಃ ಹೇಳತೊಡಗಿದ. " ನೆನಪು ಇರೋದಿಲ್ಲೆ? ಚಿಕ್ಕಂದಿನ ಚಟ ಹುಗಿದರೂ ಹೋಗದು. ನಾನು ಅದೆಷ್ಟು ಸಲ ನಿನ್ನ ಕಿವಿ ಹಿಂಡಿದೇನೆ ! ನೆನಪಿದೆಯೆ ನಿನಗೆ ? "

ವಿರಾಜ ಮುಖ ಹೊರಳಿಸಿ ನಗತೊಡಗಿದಳು. ಬಳಿಕ ಹೇಳಿದಳು - " ಅದೇಕೆ ನೆನಪಿಲ್ಲ ? ನಾನು ನಿಮಗಿಂತ ಚಿಕ್ಕವಳಾಗಿದ್ದರಿಂದ ನನ್ನನ್ನೆಷ್ಟು

ಪೀಡಿಸಿದ್ದೀರಿ! ಮಾವನವರ, ಅತ್ತೆಯವರ ಕಣ್ಣಿಗೆ ಬೀಳದಂತೆ ಅದೆಷ್ಟು ಬಾರಿ ನೀವು ನನ್ನಿಂದ ಚಿಲುಮೆಯನ್ನು ತುಂಬಿಸಿಕೊಂಡಿದ್ದೀರಿ! ನೀವೇನು ಕಡಿಮೆ ಮನುಷ್ಯರಲ್ಲ!"

ನೀಲಾಂಬರ ಬಿದ್ದುಬಿದ್ದು ನಗತೊಡಗಿದ. ನಗೆ ಸ್ವಲ್ಪ ಕಡಿಮೆಯಾದಾಗ - "ಹಾಗಾದರೆ ಇಂದಿಗೂ ಆ ವಿಷಯವೆಲ್ಲ ನಿನಗೆ ಚೆನ್ನಾಗಿ ಜ್ಞಾಪಕವಿದೆ? ಆದರೆ ಅಂದಿನಿಂದಲೆ ನಾನು ನಿನ್ನನ್ನು ಪ್ರೀತಿಸತೊಡಗಿದೆ."

ತನ್ನ ನಗೆಯನ್ನು ತಡೆದು ವಿರಾಜಳೆಂದಳು - "ನಾನು ಅದೆಲ್ಲ ಬಲ್ಲೆ. ಈಗ ನಿಮ್ಮ ಬಡಬಡಿಕೆ ನಿಲ್ಲಿಸಿ. ಪುಟ್ಟಿ ಬರುತಿದ್ದಾಳೆ."

ಹರಿಮತಿ ಹಾಲಿನ ಪಾತ್ರೆಯನ್ನು ದೊಡ್ಡಣ್ಣನ ತಟ್ಟೆಯ ಬಳಿ ಇಟ್ಟು ಪುನಃ ಗಾಳಿಹಾಕತೊಡಗಿದಳು. ವಿರಾಜ ಎದ್ದು ಕೈತೊಳೆದು ಗಂಡನ ಬಳಿ ಪುನಃ ಬಂದು ಕುಳಿತು - "ಬೀಸಣಿಕೆ ತಾ ಮಗೂ, ನೀನು ಆಟವಾಡಲು ಹೋಗು" ಎಂದು ಹೇಳಿದಳು.

ಪುಟ್ಟಿ ಹೋದನಂತರ ಗಾಳಿ ಬೀಸುತ್ತ ಬೀಸುತ್ತ ವಿರಾಜಳೆಂದಳು - "ನಿಜ ಹೇಳುವೆ. ಇಷ್ಟು ಚಿಕ್ಕ ವಯಸ್ಸಿನಲ್ಲಿ ಮದುವೆ ಮಾಡುವುದು ಒಳಿತಲ್ಲ."

"ಅದೇಕೆ? ಕನ್ಯೆಯ ಲಗ್ನ ಚಿಕ್ಕ ವಯಸ್ಸಿನಲ್ಲಿಯೆ ಮಾಡುವುದು ಯೋಗ್ಯವೆಂದು ನನ್ನ ಅಭಿಪ್ರಾಯ" ಎಂದ ನೀಲಾಂಬರ.

ವಿರಾಜ ತಲೆಯಲ್ಲಾಡಿಸುತ್ತ - "ಅಲ್ಲ, ಅದು ಯೋಗ್ಯವಲ್ಲ. ನನ್ನ ಮಾತು ಬೇರೆ. ಅದಕ್ಕೆ ಕಾರಣವಿಷ್ಟೆ. ನಾನು ನಿಮ್ಮಂತಹರ ಕೊರಳಿಗೆ ಬಿದ್ದೆ. ಅಲ್ಲದೆ ನನಗೆ ಪೀಡಕಳೂ, ಉಪದ್ರವಿಯೂ ಆದ ನಾದಿನಿಯಾಗಲಿ ಸವತಿಯಾಗಲಿ ಯಾರೂ ಇಲ್ಲ. ಹತ್ತು ವರುಷದವಳಿದ್ದಾಗಲೆ ನಾನು ಇಲ್ಲಿ ಯಜಮಾನಿಯಾಗಿದ್ದೇನೆ. ಆದರೆ ಬೇರೆ ಹತ್ತು ಜನರಿರುವ ಮನೆತನಗಳ ಸ್ಥಿತಿಯಂತೂ ನೋಡುತ್ತಿದ್ದೇನಷ್ಟೆ. ಚಿಕ್ಕ ವಯಸ್ಸಿನಲ್ಲಿಯೆ ಪ್ರಾರಂಭವಾದ ದೂರು-ಬೈಗಳು, ಹೊಡೆತ-ಬಡೆತ ಹಿರಿಯ ವಯಸ್ಸಿನಲ್ಲಿಯೂ ನಿಲ್ಲುವುದಿಲ್ಲ. ಕೊನೆಯ ಮಟ್ಟಿಗೆ ಬೈಗಳಂತೂ ಸಾಗಿಯೆ ಸಾಗುತ್ತವೆ. ಆದುದರಿಂದಲೆ ನಾನು ಪುಟ್ಟಿಯ ಮದುವೆಯ ಪ್ರಸ್ತಾಪವನ್ನು ನಾಲಿಗೆಯ ಮೇಲೂ ಎತ್ತುವುದಿಲ್ಲ. ಇಲ್ಲದಿದ್ದರೆ ಈಗಾಗಲೆ ಅವಳ ಮದುವೆಯ ಪ್ರಸ್ತಾಪ

ಎಲ್ಲೆಲ್ಲಿಯೂ ನಡೆಯುತಿತ್ತು. ಮೊನ್ನೆ 'ರಾಜೇಶ್ವರಿ ಸ್ಥಳ'ದ ಘೋಷಾಲ ಮನೆತನದ ಪುರೋಹಿತನ ಹೆಂಡತಿಯು ಇವಳ ಮದುವೆಯ ಪ್ರಸ್ತಾಪವೆತ್ತಲು ಬಂದಿದ್ದಳು. ಪುಟ್ಟಿಯನ್ನು ತಮ್ಮ ಮನೆಯ ಸೊಸೆಯನ್ನಾಗಿ ಮಾಡಿಕೊಳ್ಳಲು ಘೋಷಾಲ ಮಹೋದಯರ ಹಿರಿಯಾಸೆಯೆಂದು ಅವಳು ಹೇಳುತಿದ್ದಳು. ಆ ಬಗ್ಗೆ ಅವರು ಸಾಕಷ್ಟು ಹಣ ವೆಚ್ಚಮಾಡಲೂ ಸಿದ್ಧರಿದ್ದಾರಂತೆ. ನಾವು ಘೋಷಾಲ ಮಹೋದಯರ ಮಗನಿಗೆ ಪುಟ್ಟಿಯನ್ನು ಕೊಡಲು ಒಪ್ಪಿದರೆ ಸೊಸೆಯ ಮೈಮೇಲೆಲ್ಲ ಆಭರಣ ಹಾಕುವರೆಂದೂ, ಅಲ್ಲದೆ ನಮಗೆ ಒಂದು ಸಾವಿರ ರೂಪಾಯಿ ನಗದಾಗಿ ಕೊಡುವರೆಂದೂ ಅವಳು ಹೇಳಿದಳು. 'ಆದರೆ ಇನ್ನೆರಡು ವರುಷಗಳ ವರೆಗೆ ನಾನು ಪುಟ್ಟಿಯ ಲಗ್ನ ಮಾಡುವದಿಲ್ಲ'ವೆಂದು ಅವಳಿಗೆ ಸ್ಪಷ್ಟವಾಗಿ ಹೇಳಿದೆ."

ನೀಲಾಂಬರ ಮೊಗವೆತ್ತಿ ಚಕಿತ ದೃಷ್ಟಿಯಿಂದ ಹೆಂಡತಿಯ ಕಡೆಗೆ ನೋಡಿ "ಏನು, ನೀನು ಕನ್ಯಾದಕ್ಷಿಣೆ ತೆಗೆದುಕೊಂಡು ಪುಟ್ಟಿಯ ಲಗ್ನ ಮಾಡುವೆಯಾ? ಕನ್ಯಾವಿಕ್ರಯ ಮಾಡುವ ಇಚ್ಛೆಯಿದೆಯೇನೆ ನಿನಗೆ?"

ವಿರಾಜ ಸಿಡಿದು "ಏಕೆ ಕೂಡದು? ನನಗೆ ಗಂಡುಮಗ ಹುಟ್ಟಿದ್ದರೆ ಅವನಿಗಾಗಿ ಹಣತೆತ್ತು ಹೆಣ್ಣು ತರುವ್ರದು ತಪ್ಪಾಗುತಿತ್ತೆ? ನನಗಾಗಿ ನೀವು ಮೂರುನೂರು ರೂಪಾಯಿ ಕೊಟ್ಟು ಕೊಂಡಿಲ್ಲವೆ? ನಿಮ್ಮ ತಮ್ಮನ ಮದುವೆಗಾಗಿ ಐದುನೂರು ರೂಪಾಯಿ ಕೊಡಬೇಕಾಗಿ ಬರಲಿಲ್ಲವೆ? ಎಂದಮೇಲೆ ಪುಟ್ಟಿಯ ಮದುವೆಯಲ್ಲಿ ನಾನೇಕೆ ಹಣ ಪಡೆಯಬಾರದು? ಈ ವಿಷಯದಲ್ಲಿ ನೀವು ಮಾತನಾಡುವ ಆವಶ್ಯಕತೆಯಿಲ್ಲ. ನಮ್ಮ ಪದ್ಧತಿಯನ್ನು ನಾನು ಅನುಸರಿಸುವೆ."

ಹೆಂಡತಿಯ ಈ ಮಾತು ಕೇಳಿ ನೀಲಾಂಬರ ಮತ್ತಿಷ್ಟು ಅಚ್ಚರಿಗೊಂಡ. ಅಸಂತುಷ್ಟನಾಗಿ "ನಮ್ಮಲ್ಲಿ ಕನ್ಯಾವಿಕ್ರಯ ಪದ್ಧತಿಯಿದೆಯೆಂದು ನಿನಗಾರು ಹೇಳಿದರು? ನಮ್ಮ ಕುಲದಲ್ಲಿ ಕನ್ಯಾಪಕ್ಷದವರಿಗೆ ಸ್ವಲ್ಪ ಹಣ ಕೊಡುವ ಪರಿಪಾಠವುಂಟು. ಆದರೆ ವರಪಕ್ಷದವರಿಂದ ನಾವು ಒಂದು ಕಾಸು ಸಹ ಪಡೆಯುವುದಿಲ್ಲ. ನನ್ನ ಯಥಾಶಕ್ತಿ ಹತ್ತು ರೂಪಾಯಿಯಾದರೂ ಕೊಟ್ಟು ನಾನು ಪುಟ್ಟಿಯ ಮದುವೆ ಮಾಡುವೆ, ಅವಳ ಧರ್ಮವಿವಾಹ ಮಾಡುವೆ."

ಗಂಡನ ಮುಖ ಕಂಣುಗಳ ಭಾವವನ್ನು ನೋಡಿ ವಿರಾಜಳಿಗೆ ನಗು ಬಂದಿತು. "ಆಗಲಿ ಹಾಗೆಯೇ ಆಗಲಿ. ಈಗಂತೂ ಮೊದಲು ಊಟ ಮಾಡಿರಿ. ಮನಸ್ಸು ವಿರಸಮಾಡಿಕೊಂಡು ಅರಹೊಟ್ಟೆಯಿಂದ ಏಳಬೇಡಿ" ಎಂದಳು ವಿರಾಜ.

ನೀಲಾಂಬರ ನಕ್ಕು ನುಡಿದ-"ನಾನು ಹಾಗೆ ಅರಹೊಟ್ಟೆಯಿಂದ ಎದ್ದುದುಂಟೆ?"

ವಿರಾಜ ಒಪ್ಪಿದಳು-"ಇಲ್ಲಿಲ್ಲ. ಒಂದು ದಿನವೂ ಇಲ್ಲ. ಈ ಅಪವಾದ ಹೇರಲು ನಿಮ್ಮ ವೈರಿಗೂ ಸಾಧ್ಯವಿಲ್ಲ. ಈ ಬಗ್ಗೆ ಅದೆಷ್ಟು ದಿನ ನಾನು ಉಪ ವಾಸದಿಂದ ಇರಬೇಕಾಯಿತೆಂದು ನೆಗೆಂಣಿಯೆ ಬಲ್ಲಳು—ಇದೇನು? ಊಟ ಮುಗಿಸಿಬಿಟ್ಟಿರಾ ನೀವು?"

ವಿರಾಜ ವ್ಯಗ್ರಳಾಗಿ ಬೀಸಣಿಗೆ ಚೆಲ್ಲಿಬಿಟ್ಟಳು. ಹಾಲಿನ ಪಾತ್ರೆಯನ್ನು ಗಟ್ಟಿಯಾಗಿ ಹಿಡಿದು—"ನನ್ನಾಣೆ ನಿಮಗೆ. ಈಗಲೆ ಏಳಬೇಡಿ—ಏ ಪುಟ್ಟೀ, ಓಡಿಹೋಗಿ ಚಿಕ್ಕ ಅತ್ತಿಗೆಯಿಂದ ಎರಡು ಸಂದೇಶ ಕೇಳಿತಾ.—ಇಲ್ಲಿಲ್ಲ. ತಲೆಯಲ್ಲಾಡಿಸುವುದರಿಂದ ಕೆಲಸವಾಗದು. ನಿಮ್ಮ ಹೊಟ್ಟೆ ಎಂದಿಗೂ ತುಂಬಿಲ್ಲ. ಅಮ್ಮಯ್ಯ! ನಿಜ ಹೇಳುವೆ ನೋಡಿ—ಹಾಗಾದರೆ ನಾನೂ ಉಪವಾಸವೆ ಇದ್ದುಬಿಡುವೆ. ರಾತ್ರಿ ಒಂದು ಗಂಟೆಯವರೆಗೆ ನಿದ್ದೆಗೆಟ್ಟು ಸಂದೇಶ ಮಾಡಿದ್ದೇನೆ."

ಚಿಕ್ಕ ತಟ್ಟೆಯೊಂದರಲ್ಲಿ ಸಂದೇಶ ಸಜ್ಜಾಗಿ ಇಟ್ಟಿತ್ತು. ಆ ತಟ್ಟೆಯನ್ನೆ ಎತ್ತಿತಂದು ಅಂಣನ ಎದುರಿನಲ್ಲಿ ಹರಿಮತಿಯು ಇಟ್ಟಳು.

ನೀಲಾಂಬರ ನಕ್ಕುಬಿಟ್ಟು—"ಆಗಲಿ; ನೀನೆ ಹೇಳು, ಈ ಹೊತ್ತಿನಲ್ಲಿ ಇಷ್ಟೊಂದು ಸಂದೇಶ ನಾನು ತಿನ್ನಲು ಸಾಧ್ಯವೆ?" ಎಂದ.

ತಟ್ಟೆಯಲ್ಲಿ ಅದೆಷ್ಟು ಸಿಹಿತಿಂಡಿಯಿದೆಯೆಂದು ವಿರಾಜ ನೋಡಿ ಮುಖ ಕೆಳಗೆಮಾಡಿ ಹೇಳಿದಳು: "ತಟ್ಟೆಯಕಡೆಗೆ ಲಕ್ಷ್ಯಗೊಡಬೇಡಿ. ಮಾತು ಆಡುತ್ತ ಆಡುತ್ತ ಒಂದೊಂದೆ ಬಾಯಿಯಲ್ಲಿ ಹಾಕಿ. ಎಂದರೆ ಅದೆಲ್ಲ ಮುಗಿಸ ಬಹುದು."

"ಎಂದರೆ ತಿನ್ನಲೆ ಬೇಕೆ, ಏನೇ?"

"ಹಾಂ – ಒಂದೆ ಮಾನು ತಿನ್ನಬೇಕು. ಇಲ್ಲದಿದ್ದರೆ ಈ ತಿನಿಸನ್ನು ಸ್ವಲ್ಪ ಹೆಚ್ಚು ಪ್ರಮಾಣದಲ್ಲಿ ತಿನ್ನಬೇಕು"

ನೀಲಾಂಬರ ತಟ್ಟೆಯನ್ನು ಬಳಿಗೆ ಎಳೆದುಕೊಂಡು – "ಒತ್ತಾಯವಾಗಿ ತಿನ್ನಿಸುವ ನಿನ್ನ ಈ ಹಿಂಸೆಗಾಗಿ ಓಡಿ ಕಾಡುಸೇರಲಾ ಎನ್ನುವಷ್ಟು ಗಾಬರಿಯಾಗಿದೇನೆ."

"ಅಂಣಾ ನನಗೂ......" ಎಂದು ತಡವರಿಸಿದಳು ಪುಟ್ಟಿ.

ಪುಟ್ಟಿಯನ್ನು ಗದರುತ್ತ ವಿರಾಜಳೆಂದಳು – "ಸುಮ್ಮನಿರೆ ಬೋಕಾಣಿ. ನನ್ನನ್ನು ಕಾಡದಿದ್ದರೆ ನಿನ್ನ ಜೀವ ನಿಲ್ಲುವುದಿಲ್ಲ. ಮಾತುಮಾತಿಗೆ ಏನಾದರೊಂದು ದೂರು ಇದ್ದೇ ಇದೆ. ಮುಂದೆ ಅತ್ತೆಯ ಮನೆಗೆ ಹೋದಾಗ ಅದರ ಫಲ ಉಣ್ಣುವೆಯಂತೆ."

## ೨

ಈ ಘಟನೆಯಾಗಿ ಒಂದೂವರೆ ತಿಂಗಳು ಸಂದಿತು. ನೀಲಾಂಬರನಿಗೆ ಬಹಳ ಜ್ವರ ಬಂದುದರಿಂದ ಈ ಐದು ದಿನಗಳಿಂದ ಅವನ ಪ್ರಕೃತಿ ಕೆಟ್ಟು ಹೋಗಿತ್ತು. ಇಂದು ಅವನಿಗೆ ಜ್ವರವಿರಲಿಲ್ಲ. ಬೆಳಿಗ್ಗೆ ಅವನಿಗೆ ಸ್ವಲ್ಪ ಹಗುರೆನಿಸುತಿತ್ತು. ಸ್ವತಃ ವಿರಾಜಳೆ ಗಂಡನ ಮಾಸಿದ ದೋತರ ಬಿಚ್ಚಿ ಹಸನಾದ ದೋತರ ಉಡಿಸಿದಳು. ಬಳಿಕ ಹಾಸಿಗೆಯನ್ನು ಕೊಡಹಿ ಹಾಸಿ, ಗಂಡನನ್ನು ಮಲಗಿಸಿ ತನ್ನ ನಿತ್ಯಮನೆಗೆಲಸಕ್ಕೆ ಹೋದಳು. ಹೊರಗೆ ತೆಂಗುಮರವೊಂದಿತ್ತು. ನೀಲಾಂಬರ ಕಿಟಕಿಯಿಂದ ಅದರೆಡೆ ನೋಡುತ್ತ ಸುಮ್ಮನೆ ಒರಗಿದ್ದ. ತಂಗಿ ಹರಿಮತಿಯು ಸನಿಹದಲ್ಲಿಯೆ ಕುಳಿತು ಬೀಸಣಿಕೆಯಿಂದ ಗಾಳಿಹಾಕುತಿದ್ದಳು. ಸ್ವಲ್ಪ ಸಮಯದನಂತರ ಮೈತೊಳೆದು ರೇಶಿಮೆ ಸೀರೆಯುಟ್ಟುಕೊಂಡು ವಿರಾಜ ಒಳಗೆ ಬಂದಳು. ಅವಳ ಒದ್ದೆಗೂದಲುಗಳು ಬೆನ್ನಿನಮೇಲೆ ಇಳಿಬಿದ್ದಿದ್ದವು. ಅವಳ ಮುಖದಿಂದ ಹೊರಹೊಮ್ಮುತಿದ್ದ ಪ್ರಭೆಯಿಂದ ಕೋಣೆಯೆಲ್ಲವೂ ಉಜ್ವಲವಾದಂತೆ ತೋರಿತು. ಹೆಂಡತಿಯ ಕಡೆಗೆ ನೋಡಿ – "ಇದೇನು ವಿಶೇಷ?" ಎಂದ ನೀಲಾಂಬರ.

"ನಾನು ಹೋಗಿ ಬಾಬಾ ಪಂಚಾನಂದರ ಪೂಜಾಸಾಮಗ್ರಿ ಕಳುಹಿಸಿ ಬರಲೆ?'' ಎಂದು ವಿರಾಜ ಗಂಡನ ತಲೆಯಬಳಿ ಮಂಡೆಯೂರಿ ಕುಳಿತು ಕೈಯಿಂದ ಗಂಡನ ಜ್ವರದ ತಾಪವನ್ನು ಪರೀಕ್ಷಿಸಿ– "ಇಲ್ಲ, ಜ್ವರವೇನೂ ಇಲ್ಲ. ದೇವರೆಬಲ್ಲ! ಈ ವರುಷ ಜಗದಂಬೆಯ ಇಚ್ಛೆ ಏನಿದೆಯೊ? ಇತ್ತಿತ್ತ ಎಲ್ಲಿನೋಡಿದಲ್ಲಿ ಹಾಹಾಕಾರವೆ ಹಾಹಾಕಾರ! ಇಂದು ಬೆಳಗ್ಗೆ ಕೇಳಿದೆ– ನಮ್ಮ ಮೋತಿ ಮೆಹತರನ ಮಗನ ಮೈಮೇಲೆ ಸಿಡುಬು ಎದ್ದಿದೆಯಂತೆ. ಅಡಿಯಿಂದ ಮುಡಿಯವರೆಗೆ ಸಾಸಿವೆಯಷ್ಟು ಸ್ಥಳವನ್ನೂ ಬಿಟ್ಟಿಲ್ಲವಂತೆ'' ಎಂದಳು.

ನೀಲಾಂಬರ ವ್ಯಗ್ರನಾಗಿ— "ಮೋತಿಯ ಯಾವ ಹುಡುಗನಿಗೆ ಸಿಡುಬು ಎದ್ದಿದೆ?'' ಎಂದು ಕೇಳಿದ.

"ಹಿರಿಯ ಹುಡುಗನಿಗೆ. ತಾಯಿ ದುರ್ಗಮ್ಮ! ನಮ್ಮ ಈ ಗ್ರಾಮವನ್ನು ಶಾಂತವಾಗಿರಿಸಮ್ಮ ತಾಯಿ! – ಅಯ್ಯೊ, ಅದೇ ಮಗು ಆ ಬಡ ಕುಟುಂಬದ ವೆಚ್ಚ ನೋಡಿಕೊಳ್ಳುತಿದ್ದ. ಕಳೆದ ಶನಿವಾರ, ರಾತ್ರಿ ಇನ್ನೂ ಸ್ವಲ್ಪ ಉಳಿದಾಗ ನಿದ್ದೆಯಿಂದೆಚ್ಚತ್ತೆ. ಒಮ್ಮೆಲೆ ನನ್ನ ಕೈಯು ನಿಮ್ಮ ಶರೀರದ ಮೇಲೆ ಬಿದ್ದಿತು. ಆಗ ನಿಮ್ಮ ದೇಹವೆಲ್ಲವೂ ಬೆಂಕಿಯಂತೆ ಸುಡುತ್ತಿತ್ತು. ಭಯ ಕಾತರಳಾಗಿ ನನ್ನ ಹೃದಯದ ರಕ್ತವೆ ಹೆಪ್ಪುಗಟ್ಟಿದಂತಾಯಿತು. ಎದ್ದುಕುಳಿತು ಎಷ್ಟೋ ಹೊತ್ತಿನವರೆಗೆ ಅತ್ತೆ. ಕೊನೆಗೆ– "ತಾಯಿ ದುರ್ಗಮ್ಮ, ಇವರನ್ನು ಗುಣಪಡಿಸಮ್ಮ. ಅನಂತರವೆ ನಿನ್ನ ಪೂಜೆಮಾಡಿ ಊಟ ಉಡಿಗೆ ಮಾಡುವೆ. ಇಲ್ಲದಿದ್ದರೆ ಉಪವಾಸವಿದ್ದು ಪ್ರಾಣಬಿಡುವೆ" ಎಂದು ಹರಕೆ ಹೊತ್ತೆ.

ಈ ಮಾತು ಬಾಯಿಯಿಂದ ಹೊರಬೀಳುತ್ತಿರುವಾಗ ಅವಳ ಕಣ್ಣುಗಳು ತೊಯ್ದು ಕಂಬನಿಗಳೆರಡು ಉದುರಿದವು.

ಆಶ್ಚರ್ಯಚಕಿತನಾಗಿ ನೀಲಾಂಬರನೆಂದ – "ಹಾಗಾದರೆ ಇಷ್ಟು ದಿನಗಳಿಂದ ನೀನು ಉಪವಾಸ ಮಾಡುತಿದ್ದೆಯಾ?"

ಪುಟ್ಟ ಹೇಳಿದಳು – "ಹೌದಣ್ಣಾ, ಅತ್ತಿಗೆ ಏನೂ ತಿನ್ನುತ್ತಿಲ್ಲ. ಅಂದು ಸಂಜೆಗೆ ಒಂದು ಮುಷ್ಟಿ ಅವಲಕ್ಕಿ ಮುಕ್ಕಿ ಒಂದು ಲೋಟ ನೀರು ಮಾತ್ರ ಕುಡಿದಿದ್ದಾಳೆ. ಅಂದಿನಿಂದ ಹಾಗೆಯೆ ಇದ್ದಾಳೆ. ಯಾರ ಮಾತೂ ಕಿವಿಗೆ ಹಾಕಿಕೊಳ್ಳುತ್ತಿಲ್ಲ."

ಪುಟ್ಟಿಯು ಈ ಮಾತು ಕೇಳಿ ನೀಲಾಂಬರ ಅತ್ಯಂತ ಖೇದಗೊಂಡು "ಇದೆಲ್ಲವೂ ನಿನ್ನ ಹುಚ್ಚುತನವಲ್ಲವೆ?" ಎಂದ.

ಸೆರಗಿನಿಂದ ಕಂಣುಗಳನ್ನು ಒರೆಸಿಕೊಂಡು ವಿರಾಜಳೆಂದಳು— "ಹುಚ್ಚುತನವಲ್ಲನೇಕೆ? ನಿಜವಾಗಿಯೂ ಹುಚ್ಚುತನ. ಆದರೆ ಹೆಂಣಾಗಿ ಹುಟ್ಟಿದ್ದರೆ ಗಂಡನೆಂದರೆ ಎಂತಹ ವಸ್ತುವೆಂದು ನೀವು ಅರಿಯುತಿದ್ದಿರಿ. ಇತ್ತೀಚೆ ಸುತ್ತಲೂ ಎಂಥ ಹವೆ ಬಿಟ್ಟಿದೆಯೊ ಅಂಥ ಸಮಯದಲ್ಲಿ ಗಂಡನಿಗೆ ಜ್ವರ ಬಂದರೆ ಹೆಂಡತಿಯ ಎದೆಯಲ್ಲಿ ಎಂಥ ವೇದನೆ ಉತ್ಪನ್ನವಾಗುವುದೆಂದು ನೀವು ಆಗ ಅರಿತುಕೊಳ್ಳುತಿದ್ದಿರಿ."

ಹೀಗೆಂದು ವಿರಾಜ ಎದ್ದು ಹೋಗುತ್ತಲಿದ್ದಳು. ಅಷ್ಟರಲ್ಲಿ ಒಮ್ಮೆಲೆ ನಿಂತು ಹೇಳಿದಳು– "ಪುಟ್ಟೀ, ದಾಸಿ ಪೂಜಾಪಾತ್ರೆಯಲ್ಲ ತೆಗೆದುಕೊಂಡು ಹೋಗಲಿದ್ದಾಳೆ. ಬೇಗ ಮೈತೊಳೆದುಕೊಂಡು ನೀನೂ ಅವಳೊಂದಿಗೆ ಹೋಗು."

ಪುಟ್ಟಿಯು ಅತ್ಯಂತ ಹರುಷದಿಂದ ಎದ್ದುನಿಂತು— "ಆಗಲಿ ಅತ್ತಿಗೆ!" ಎಂದಳು.

"ಹಾಗಾದರೆ ಬೇಗ ಹೊರಡು. ತಡಮಾಡಬೇಡ. ನಿನ್ನ ಅಂಣ ಬೇಗನೆ ಗುಣಮುಖವಾಗುವಂತೆ ಬಾಬಾ ಪಂಚಾನಂದರಿಂದ ಒಳ್ಳೆಯ ವರ ಪಡೆದುಕೊಂಡು ಬಾ."

ಪುಟ್ಟಿ ಮೀಯಲು ಓಡುತ್ತ ಹೋದಳು. ನೀಲಾಂಬರನೆಂದ:— ಈ ಕೆಲಸವನ್ನಂತೂ ಅವಳು ಅತ್ಯಂತ ಹೆಮ್ಮೆಯಿಂದ ಮಾಡುವಳು. ಬಹುಶಃ ಅವಳಷ್ಟು ಹೆಮ್ಮೆ ನಿನಗೂ ಸಹ ಬಾರದು."

ವಿರಾಜ ಮುಗುಳು ನಗೆ ಬೀರುತ್ತ ಕೊರಳು ಕೊಂಕಿಸುತ್ತ ನುಡಿದಳು– "ನೀವು ಹಾಗೇನು ಭಾವಿಸಬೇಡಿ. ಸಹೋದರರೆ ಆಗಲಿ, ತಾಯಿತಂದೆಗಳೆ ಆಗಲಿ, ಪ್ರೀತಿಯವರೇನೊ ನಿಜ; ಆದರೆ ಹೆಂಗುಸಿಗೆ ಗಂಡನಿಗಿಂತ ಹೆಚ್ಚಿನವರಾರೂ ಅಲ್ಲ! ಸೋದರರ ಅಥವಾ ತಾಯಿತಂದೆಗಳ ವಿಯೋಗವಾದಾಗ ಅವರಿಗೆ ದುಃಖವಾಗುವುದರಲ್ಲಿ ಸಂದೇಹವಿಲ್ಲ. ಆದರೆ ಗಂಡನ ವಿಯೋಗದಿಂದ ಸರ್ವಸ್ವವೂ ಹೋಗುವುದು. ನನ್ನನ್ನೆ ನೋಡಿ. ಐದೈದು ದಿನಗಳಿಂದ ಏನೂ ತಿನ್ನದೆ ಹಾಗೆಯೆ ಇದ್ದೇನೆ! ನನ್ನೆದೆಯಲ್ಲಿ ಮನೆಮಾಡಿದ

ದುರ್ಭಾವನೆಯ ಅಡಿಯಲ್ಲಿ ಹಸಿವೆ ನೀರಡಿಕೆಗಳೆಲ್ಲವೂ ಅದುಮಿ ಹಿಡಿಯಲ್ಪಟ್ಟಿವೆ. ಉಪವಾಸದಿಂದಿದ್ದೇನೆಂದು ನನಗೆ ಸ್ವಲ್ಪವೂ ಎನಿಸುತ್ತಿಲ್ಲ. ಆದರೆ ಅಂಥ ತಂಗಿಯರಾರಿದ್ದಾರೆ ನಿಮಗೆ, ಸ್ವಲ್ಪ ತೋರಿಸಿ ನೋಡೋಣ! ನಾನಾದರೂ ಸ್ವಲ್ಪ ಕಂಣಿಂದ........"

ನೀಲಾಂಬರನು ಅವಳನ್ನು ಅರ್ಧಕ್ಕೆ ತಡೆದು ಚಂಚಲಚಿತ್ತನಾಗಿ "ಮುಂದೆ?" ಎಂದ.

ವಿರಾಜ ಮುಂದುವರೆದಳು— "ಹಾಗಾದರೆ ಅದೇಕೆ ಹಾಗೆ ಹೇಳುವಿರಿ? ನಾನು ಹುಚ್ಚುಚ್ಚಾದರೂ ಮಾಡಿದೆನೊ ಹೇಗೆ ಎಂದು ನಾನು ಬಲ್ಲೆ; ಅಲ್ಲದೆ ಈ ಲೋಕದಲ್ಲಿ ಮುಖತೋರಿಸಲು ಯೋಗ್ಯಳನ್ನಾಗಿ ಮಾಡಿದ ಆ ಭಗವಂತ ಬಲ್ಲ. ನಾನಂತೂ ಆ ಅವಸ್ಥೆಯಲ್ಲಿ ಒಂದು ಕ್ಷಣ ಸಹ ಬದುಕಲಾರೆ. ಸೌಭಾಗ್ಯತಿಲಕ ಪೂಸಿಬಿಡುವ ಮುನ್ನವೆ ಹಣೆಯುನ್ನು ಕಲ್ಲಿಗೆ ಕಟೆದು ಕಟೆದು ಹೋಳುಮಾಡುವೆ. ಶುಭಕಾರ್ಯದಲ್ಲಿ, ಯಾತ್ರೆಮಾಡುವಾಗ ಯಾರೂ ಮುಖನೋಡದಂತಹ, ಪುಣ್ಯಕಾರ್ಯಕ್ಕಾಗಿ ಯಾರಿಂದಲೂ ಆಮಂತ್ರಣ ಪಡೆಯದಂತಹ ಜೀವನ ಎಂದಾದರೂ ಜೀವನವೆ? ವಿಧವೆಯ ವೇಷಧರಿಸಿ ಜನರಮುಂದೆ ಅಲೆದಾಡುವಂತೆ ದೇವರು ಮಾಡದಿರಲಿ. ಪೂರ್ವಕಾಲದಲ್ಲಿ ವಿಧವೆಯರನ್ನು ಚಿತೆಯಲ್ಲಿರಿಸಿ ಸುಟ್ಟುಬಿಡುವ ಪದ್ಧತಿ ಒಳ್ಳೆಯದಿತ್ತು. ಆಗಿನ ಪುರುಷರಲ್ಲಿ ಸ್ತ್ರೀಯರ ದುಃಖತಾಪಗಳಬಗ್ಗೆ ಅರಿವಿತ್ತು. ಆದರೆ ಈಗಿನ ಪುರುಷರ ಜಾತಿಯಲ್ಲಿ ಅದೆಲ್ಲವೂ ನಿಃಶೇಷ.".

ನೀಲಾಂಬರನೆಂದ:- "ಹಾಗೇನಿಲ್ಲ. ಈಗ ನೀನೆ ದೇಶದಲ್ಲಿಯ ಪುರುಷರಿಗೆ ತಿಳಿಸಿಕೊಡಬಹುದಲ್ಲ?"

ವಿರಾಜ ನುಡಿದಳು:- "ಓಹೊ, ತಿಳಿಸಿಕೊಡಬಲ್ಲೆ. ಕೇವಲ ನಾನೊಬ್ಬಳೆ ಅಲ್ಲ. ನಿಮ್ಮನ್ನು ಪಡೆದು, ಬಳಿಕ ನಿಮ್ಮನ್ನು ಕಳೆದುಕೊಂಡ ಯಾವ ಹೆಂಗುಸಿಗೂ ಈ ವಿಷಯದ ಬಗ್ಗೆ ಅಧಿಕಾರವಾಣಿಯಲ್ಲಿ ಮಾತನಾಡಲು ಶಕ್ತಿಯುಂಟಾಗುವುದು. ಹೋಗಲಿ ಬಿಡಿ. ನಾನಿದೇನು ಬಡಬಡಿಸಲು ಆರಂಭಿಸಿಬಿಟ್ಟೆ?" ಎಂದು ನಕ್ಕುಬಿಟ್ಟಳು. ತರುವಾಯ ನಸುಬಾಗಿ ಪುನಃ ಗಂಡನ ದೇಹತಾಪವನ್ನು ನೋಡಿದಳು. ಗಂಡನ ಹಣೆ-ಎದೆಗಳ ಮೇಲೆ

ಕೈಯಿಟ್ಟು ಜ್ವರವಿಲ್ಲವೆಂದು ಖಚಿತವಾಗಿ ನಂಬಿಕೆಯುಂಟಾದಮೇಲೆ– "ನಿಮಗೆ ದೇಹದಲ್ಲಿ ಎಲ್ಲಿಯೂ ನೋವು ಎನಿಸುತ್ತಿಲ್ಲವೆ?" ಎಂದು ವಿಚಾರಿಸಿದಳು.

ನೀಲಾಂಬರ ತಲೆಯಲ್ಲಾಡಿಸುತ್ತ – "ಇಲ್ಲ" ಎಂದ.

"ಹಾಗಾದರೆ ಚಿಂತೆಗೆ ಕಾರಣವಿಲ್ಲ. ಇಂದು ನನಗೆ ಹಸಿವೆನಿಸುತ್ತದೆ. ಹೋಗಿ, ಸ್ವಲ್ಪ ಅಡುಗೆಯ ವ್ಯವಸ್ಥೆ ಮಾಡುವೆ. ನಾನು ನಿಜ ಹೇಳುವೆ— ಇಂದು ಯಾರಾದರೂ ನನ್ನ ಕೈಯನ್ನು ಕಡಿದರೂ ಬಹುಶಃ ನನಗೆ ಕೋಪ ಸಹ ಬರಲಿಕ್ಕಿಲ್ಲ."

ಯದುನೌಕರನು ಹೊರಗಿನಿಂದಲೆ ಕೂಗಿದ: "ತಾಯಿ, ವೈದ್ಯರನ್ನು ಕರೆತರಬೇಕೆ?"

"ಬೇಡ ಬೇಡ. ಇಂದು ಅವರನ್ನು ಕರೆಸುವ ಅಗತ್ಯವಿಲ್ಲ" ಎಂದ ನೀಲಾಂಬರ.

ನೀಲಾಂಬರನ ಈ ಮಾತಿನಿಂದ ಯದುವಿಗೆ ಸಮಾಧಾನವಾಗಲಿಲ್ಲ. ಗೃಹಿಣಿಯ ಅನುಮತಿಗಾಗಿ ಅಲ್ಲಿಯೆ ನಿಂತುಕೊಂಡ. ಅದನ್ನರಿತು ವಿರಾಜ ಅಪ್ಪಣೆ ಮಾಡಿದಳು – "ಇಲ್ಲ, ನೀನು ಹೋಗಿ ಅವರನ್ನು ಕರೆತಾ, ಒಮ್ಮೆ ಬಂದು ಚೆನ್ನಾಗಿ ನೋಡಿ ಹೋಗಲಿ."

ಮೂರು ದಿನಗಳ ತರುವಾಯ ನೀಲಾಂಬರನ ಪ್ರಕೃತಿ ಪೂರ್ಣ ಸುಧಾರಿಸಿತು. ಅಂದು ಅವನು ದೇವೀ ಮಂದಿರದಲ್ಲಿ ಕುಳಿತಿದ್ದ. ಅವನು ಕುಳಿತುಕೊಂಡದ್ದನ್ನು ನೋಡಿ ಮೋತಿ ಮೆಹತರನು ಅವನೆಡೆ ಬಂದ. ಬಂದವನೆ ಅಳುತ್ತಲೆ ಹೇಳಿದ: – "ಅಣ್ಣಾ, ಒಂದುಸಲ ನೀವು ಬಂದು ನೋಡದೆ ಹೋದರೆ ನನ್ನ ಮಗ ಉಳಿಯಲಾರ. ಒಮ್ಮೆಯಾದರೂ ನಿಮ್ಮ ಚರಣಧೂಳಿ ಕೊಡಹುವ ಕೃಪೆಮಾಡು ದೊರೆಯೆ! ಹಾಗಾದರೆ ಮಾತ್ರ ಅವನು ಬದುಕುವ ಸಂಭವವಿದೆ."

ಮೋತಿ ಇನ್ನೂ ಏನೇನೊ ಹೇಳುವುದರಲ್ಲಿದ್ದ. ಆದರೆ ಅವನಿಗೆ ಹೆಚ್ಚಿಗೆ ಹೇಳಲು ಬಾಯಿಯೆ ಬರಲಿಲ್ಲ. ಕಂಬನಿಗಳ ಆವೇಗದಿಂದ ಅವನ ಗಂಟಲು ಕಟ್ಟಿಕೊಂಡಿತು.

"ಏನು ಮೋತಿ, ದುರ್ಗಮ್ಮ ಹುಡುಗನ ಮೈದುಂಬ ಎದ್ದಿದ್ದಾಳೆಯೆ?"

ಕಣ್ಣುಗಳನ್ನೊರಿಸುತ್ತಲಿ ಮೋತಿ ಹೇಳಿದ: " ಅದನ್ನು ಕೇಳಬೇಡಿ ಅಣ್ಣಾ! ದೇವಿ ಎಳ್ಳುಕಾಳಿನಷ್ಟು ಸ್ಥಳವನ್ನೂ ಬಿಟ್ಟಿಲ್ಲ. ಕೀಳುಜಾತಿಯವ ನಾನು. ಅಜ್ಞಾನಿ. ಇಂಥ ಪರಿಸ್ಥಿತಿಯಲ್ಲಿ, ಏನುಮಾಡಬೇಕೊ ನನಗೇನೂ ತೋಚಲೊಲ್ಲದು. ಒಂದು ಸಲ ಕೃಪೆದೋರು ದೊರೆಯೆ!" ಎಂದು ಅಂಗಲಾಚಿಕೊಂಡು ಮೋತಿಯು ನೀಲಾಂಬರನ ಕಾಲುಗಳೆರಡನ್ನೂ ಗಟ್ಟಿಯಾಗಿ ಹಿಡಿದುಕೊಂಡ.

ನೀಲಾಂಬರನು ಮೆಲ್ಲನೆ ಕಾಲುಗಳನ್ನು ಬಿಡಿಸಿಕೊಂಡು ಕೋಮಲ ದನಿಯಲ್ಲಿ – " ಮನೆಗೆ ಹೋಗು ಮೋತಿ, ಹೆದರುವ ಕಾರಣವೇನೂ ಇಲ್ಲ. ನಾನು ಆಮೇಲೆ ಬರುವೆ." ಮೋತಿಯು ಕರುಣಾರ್ದ್ರಭಾವದಿಂದ ಅಳುತಿದ್ದುದನ್ನು ನೋಡಿ ತನ್ನ ಜಾಡ್ಯದ ವಿಷಯವೆತ್ತಲು ನೀಲಾಂಬರನಿಂದಾಗಲಿಲ್ಲ.

ಹುಡುಗನನ್ನು ಒಂದುಬಾರಿ ನೋಡುವಂತೆ ಮೋತಿಯು ನೀಲಾಂಬರನನ್ನು ಅಷ್ಟು ಆಗ್ರಹಪಡಿಸಲು ಒಂದು ವಿಶೇಷ ಕಾರಣವಿತ್ತು. ನೀಲಾಂಬರನು ನಾನಾ ತರದ ರೋಗಿಗಳ ಸೇವೆಮಾಡಿ ಅನೇಕ ರೋಗಗಳ ವಿಷಯವಾಗಿ ಒಳ್ಳೆಯ ಅನುಭವ ಹಾಗೂ ಜ್ಞಾನ ಪಡೆದಿದ್ದ. ಆದುದರಿಂದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಯಾರಿಗಾದರೂ ತುಂಬ ಜ್ವರವುಂಟಾದಾಗ ರೋಗಿಯ ಮನೆಯವರು ಆ ರೋಗಿಯನ್ನು ನೀಲಾಂಬರನಿಂದ ಒಂದುಬಾರಿಯಾದರೂ ಪರೀಕ್ಷಿಸದಿರುತ್ತಿರಲಿಲ್ಲ. ನೀಲಾಂಬರನು ಆಶ್ವಾಸನವೀಯುವ ವರೆಗೆ ಸ್ವತಃ ರೋಗಿಗಾಗಲಿ ಅವನ ಮನೆಯವರಿಗಾಗಲಿ ಮನಶ್ಶಾಂತಿಯೆ ಉಂಟಾಗುತ್ತಿದ್ದಿಲ್ಲ. ಈ ಮಾತು ನೀಲಾಂಬರನಿಗೂ ಗೊತ್ತಿಲ್ಲದಿರಲಿಲ್ಲ. ತನ್ನ ಹಳ್ಳಿಯ ಅಶಿಕ್ಷಿತ ಜನರಿಗೆ ತನ್ನ ಪಾದಧೂಳಿಯ ಮೇಲೆ, ತನ್ನ ಕೈಯಿಂದಿತ್ತ ತೀರ್ಥದ ಮೇಲೆ ಇದ್ದಷ್ಟು ವಿಶ್ವಾಸ ವೈದ್ಯ - ಡಾಕ್ಟರುಗಳ ಔಷಧಿಯ ಮೇಲಿಲ್ಲವೆಂದು ಆತನೂ ಬಲ್ಲ. ತನ್ನಲ್ಲಿ ಆಂತರಿಕ ಶ್ರದ್ಧೆಯಿಟ್ಟ ಜನರು ತನ್ನ ಅನುಭವದ ಲಾಭ ಪಡೆದುಕೊಳ್ಳಲು ನೀಲಾಂಬರನು ಯಾರನ್ನೂ ಯಾವ ಕಾಲಕ್ಕೂ ನಿರಾಶೆಪಡಿಸಿದವನಲ್ಲ. ಯಾರು ಕರೆದರೂ ಅವರಲ್ಲಿ ಹಸನ್ಮುಖದಿಂದ ಓಡಿಹೋಗುತ್ತಿದ್ದ.

ಹೋಗುವ ಮುನ್ನ ಮೋತಿಯು ಪುನಃ ಅತ್ತ. ಪಾದಧೂಳಿ ಕೊಡಹಬೇಕೆಂದು ನೀಲಾಂಬರನಲ್ಲಿ ಪ್ರಾರ್ಥಿಸಿಕೊಂಡು ಕಣ್ಣುಗಳನ್ನೊರೆಸುತ್ತ

ಅಲ್ಲಿಂದ ಹೊರಟುಹೋದ. ಅವನು ಹೊರಟುಹೋದ ಬಳಿಕ ನೀಲಾಂಬರ ಉದ್ವಿಗ್ನನಾಗಿ ಯೋಚಿಸತೊಡಗಿದ. ಮನದಲ್ಲಿಯೆ - "ನನ್ನ ಮೈಯಲ್ಲಿ ಇನ್ನೂ ಬಹಳ ಅಶಕ್ತತೆ ಇದೆ. ಆದರೂ ಪರವಿಲ್ಲ. ನಾನು ಮೋತಿಯ ಮನೆಗೆ ಅವಶ್ಯವಾಗಿ ಹೋಗುವೆ.'' ನೀಲಾಂಬರನಿಗೆ ಚಿಂತೆ ಏನಾದರೂ ಇದ್ದರೆ, ಮನೆಬಿಟ್ಟು ಹೊರಗೆ ಹೇಗೆ ಹೋಗುವುದು ಎಂಬುದೇ ಚಿಂತೆ. ಅವನು ವಿರಾಜಳಿಗೆ ಬಹಳ ಹೆದರುತ್ತಿದ್ದ. ಮೋತಿಯ ಮನೆಗೆ ಹೋಗ ಬೇಕಾಗಿದೆಯೆಂದು ಅವಳೆದುರು ಹೇಳುವ ಸಾಹಸವುಂಟಾಗಲಿಲ್ಲ ಅವನಿಗೆ.

ನೀಲಾಂಬರ ಈ ಚಿಂತೆಯಲ್ಲಿ ಮುಳುಗಿರುವಾಗ ಅಂಗಳದಿಂದ ಹರಿ ಮತಿಯ ಕಂಠಸ್ವರ ಅವನ ಕಿವಿಗೆ ಬಿತ್ತು. ಅವಳು ಕೂಗಿ ಹೇಳಿದಳು: "ಅಣ್ಣಾ, ನೀನು ಒಳಗೆ ಬಂದು ಒರಗಬೇಕೆಂದು ಅತ್ತಿಗೆ ಹೇಳುತಿದ್ದಾಳೆ."

ನೀಲಾಂಬರನು ಉತ್ತರವೀಯಲೇ ಇಲ್ಲ. ಒಂದು ನಿಮಿಷದ ತರು ವಾಯ ಸ್ವತಃ ಹರಿಮತಿಯು ಅಲ್ಲಿಗೆ ಬಂದು: "ಏನಣ್ಣಾ, ನಾನು ಕೂಗಿದ್ದು ಕೇಳಲಿಲ್ಲವೆ? " ಎಂದಳು.

"ಇಲ್ಲ'' ಎಂದ ನೀಲಾಂಬರ ತಲೆಯಲ್ಲಾಡಿಸುತ್ತ.

ಹರಿಮತಿಯೆಂದಳು: "ಊಟಮಾಡಿದ ಬಳಿಕ ಈವರೆಗೂ ಅಡ್ಡಾಗ ಲಿಲ್ಲ ನೀನು. ಹಾಗೆಯೆ ಕುಳಿತಿರುವೆ. 'ಕುಳಿತುಕೊಳ್ಳುವುದು ಬೇಡ. ಒಳಗೆ ಮಲಗಿಕೊಳ್ಳಲಿ' ಎಂದು ಅತ್ತಿಗೆ ಹೇಳುತಿದ್ದಾಳೆ.''

ನೀಲಾಂಬರ ಮೆತ್ತಗೆ ಕೇಳಿದ: "ಅವಳೇನು ಮಾಡುತಿದ್ದಾಳೆ ಪುಟ್ಟೀ?''

"ಊಟಕ್ಕೆ ಕುಳಿತಿದ್ದಾಳೆ."

ತಂಗಿಯನ್ನು ಪ್ರೇಮದಿಂದ ನೇವರಿಸುತ್ತ - "ನೀನು ಒಳ್ಳೆಯ ಹುಡುಗಿ. ಸಾಕ್ಷಾತ್ ಲಕ್ಷ್ಮಿಯ ಅವತಾರ ನೋಡು. ನನ್ನ ಮಾತು ನೀನೊಮ್ಮೆಯೂ ಅಸಡ್ಡೆಮಾಡಿಲ್ಲ. ತಂಗೀ, ನೀನೊಂದು ನನ್ನ ಕೆಲಸ ಮಾಡುವೆಯಾ?''

"ಹೂಂ, ಮಾಡುವೆ" ಎಂದಳು ಹರಿಮತಿ ತಲೆಯಲ್ಲಾಡಿಸುತ್ತ.

ನೀಲಾಂಬರ ತನ್ನ ದನಿಯನ್ನು ಮತ್ತಿಷ್ಟು ಕೋಮಲವಾಗಿಸಿ, "ಹೋಗು ತಂಗೀ, ಮೆಲ್ಲಗೆ ನನ್ನ ಶಾಲು, ಕೊಡೆ ತೆಗೆದುಕೊಂಡು ಬಾ.''

"ಶಾಲು ಮತ್ತು ಕೊಡೆಯೆ?"

"ಹಾಂ" ಎಂದ ನೀಲಾಂಬರ.

ಹುಬ್ಬುಗಳನ್ನು ಹಣೆಗೇರಿಸುತ್ತ ಹರಿಮತಿಯೆಂದಳು: "ಅಮ್ಮಯ್ಯಾ! ಅತ್ತಿಗೆಯಂತೂ ಈಕಡೆಗೆ ಮುಖಮಾಡಿಕೊಂಡೆ ಊಟಕ್ಕೆ ಕುಳಿತಿದ್ದಾಳೆ!"

ಕೊನೆಯ ಪ್ರಯತ್ನ ಮಾಡುತ್ತ ನೀಲಾಂಬರನೆಂದ – "ಹೇಗೆ, ನೀನು ತರಬಹುದೆ?"

ಹರಿಮತಿಯು ತುಟಿ ಬಿಚ್ಚಿ, ತಲೆಯಲ್ಲಾಡಿಸಿ ನುಡಿದಳು: "ಬೇಡ ವಣ್ಣಾ, ಅತ್ತಿಗೆ ಖಂಡಿತ ನೋಡಿಬಿಡುವಳು. ನೀನು ಸುಮ್ಮನೆ ಹೋಗಿ ಮಲಗು."

ಆಗ ಬಹುಶಃ ಎರಡು ಹೊಡೆದಿರಬಹುದು. ಹೊರಗೆ ಸೂರ್ಯನ ಕಿರಣಗಳು ಪ್ರಚಂಡವಾದ ಬೆಂಕಿಮಳೆ ಸುರಿಸುತಿದ್ದವು. ಅವುಗಳನ್ನು ನೋಡಿ ಬರಿತಲೆಯಿಂದ ಹೊರಬೀಳುವ ಕಲ್ಪನೆಯನ್ನೂ ನೀಲಾಂಬರ ಊಹಿಸದಾದ. ಹತಾಶನಾಗಿ ತಂಗಿಯ ಜೊತೆಗೆ ಒಳಗೆ ಹೋಗಿ ಒರಗಿದ. ಹರಿಮತಿಯು ಸ್ವಲ್ಪ ಸಮಯ ಯದ್ವಾತದ್ವಾ ಬಡಬಡಿಸಿ ನಿದ್ದೆಹೋದಳು. ಇತ್ತ ನೀಲಾಂಬರ ಒರಗಿರುತ್ತಲೆ ಗಂಭೀರನಾಗಿ ಆಲೋಚಿಸುತಿದ್ದ: 'ಮೋತಿಯ ಹುಡುಗನ ಬೇನೆಯ ಪ್ರಸ್ತಾಪ ಯಾವ ರೀತಿ ವಿರಾಜಳೆದುರು ಎತ್ತಿದರೆ ಅವಳ ಎದೆಯಲ್ಲಿ ಕರುಣೆಯ ಉದ್ರೇಕವುಂಟಾದೀತು?'

ಹಗಲು ಬಹುಶಃ ಮುಗಿಯುಬಂದಿತ್ತು. ವಿರಾಜ ಸಿಮೆಂಟಿನ ಕೋಣೆಯಲ್ಲಿ ನುಣುಪು ಕಲ್ಲಿನಮೇಲೆ ವಕ್ಷಸ್ಥಲಕ್ಕೆ ದಿಂಬನ್ನಾನಿಸಿ ಬೋರಲಾಗಿ ಸೋದರ– ಅತ್ತೆಮಾವಂದಿರಿಗೆ ಪತ್ರ ಬರೆಯುತಿದ್ದಳು. ಅದರಲ್ಲಿಯೆ ತನ್ಮಯಳಾಗಿದ್ದ ರಿಂದ ಆಗ ಅವಳಿಗೆ ಸುತ್ತಲಿನ ಅರಿವೇ ಇರಲಿಲ್ಲ. ಅವಳು ಬಲು ಉದ್ದನ್ನ ಪತ್ರ ಬರೆಯುತಿದ್ದಳು. ಪೂರ್ಣ ನಾಲ್ಕು ಪುಟಗಳು ಆಗಲೆ ಬರೆದಾಗಿದ್ದವು; ಆದರೂ ಪತ್ರದ ಉಪಸಂಹಾರವಾಗಿರಲಿಲ್ಲ. ಹಳ್ಳಿಯಲ್ಲಿ ದುರ್ಗಮ್ಮನ ಪ್ರಕೋಪವೆಷ್ಟು ಪ್ರಚಂಡವಿದೆ! ಯಾವರೀತಿ ಇಡಿಯ ಗ್ರಾಮದಲ್ಲಿ ತನ್ನೊಬ್ಬಳ ಮನೆಯೊಂದನ್ನೆ ಅವಳು ಇನ್ನೂ ಸೋಂಕಿಲ್ಲ! ತನ್ನ ಸೌಭಾಗ್ಯತಿಲಕ ಹಾಗೂ ಕೈಬಳೆಗಳ ರಕ್ಷಣೆ ಹೇಗೆ ಆಗಿದೆ, ಎಂಬುದರ ವಿಷಯವಾಗಿ ಸವಿಸ್ತಾರವಾಗಿ ಬರೆಯುತಿದ್ದಳು. ವಿಷಯ ಬರೆದಂತೆ ಬೆಳೆಯತೊಡಗಿದ್ದರಿಂದ

ಪತ್ರ ಮುಕ್ತಾಯಗೊಳಿಸಲು ಅವಳಿಗೆ ಸ್ವಲ್ಪ ಕಠಿಣವೆನಿಸತೊಡಗಿತು. ಅಷ್ಟರಲ್ಲಿ ಚಾಪೆಯ ಮೇಲಿಂದಲೆ ನೀಲಾಂಬರನೆಂದ — "ಹೌದು ವಿರಾಜ, ನನ್ನ ಮಾತೊಂದು ನಡೆಸಿಕೊಡುವೆಯಾ ?"

ವಿರಾಜ ಮಸಿಕುಡಿಕೆಯಲ್ಲಿ ಲೆಕ್ಕಣಿಕೆಯೆದ್ದಿದವಳು ಹಾಗೆಯೆ ಬಿಟ್ಟು ಮೊಗವೆತ್ತಿ "ಯಾವ ಮಾತು ?" ಎಂದಳು.

"ನೀನು ನಡೆಸಿಕೊಡಲು ಒಪ್ಪಿದರೆ ಹೇಳುವೆ."

ವಿರಾಜಳೆಂದಳು : "ಒಪ್ಪುವಂತಹದಿದ್ದರೆ ಒಪ್ಪೇ ಒಪ್ಪುವೆ. ಹೇಳಿ, ಯಾವ ಮಾತದು ?"

ಕ್ಷಣಹೊತ್ತು ಯೋಚಿಸಿದ ಬಳಿಕ ನೀಲಾಂಬರನೆಂದ — "ಹೇಳುವುದರಲ್ಲಿ ಏನೂ ಲಾಭವಿಲ್ಲ ವಿರಾಜ. ನೀನು ನನ್ನ ಮಾತು ನಡೆಸುವುದಿಲ್ಲ."

ವಿರಾಜ ಹೆಚ್ಚಿನ ಗೋಜಿಗೆ ಹೋಗಲೆ ಇಲ್ಲ. ಲೆಕ್ಕಣಿಕೆ ಎತ್ತಿ ಪತ್ರ ಮುಗಿಸುವ ಉದ್ದೇಶದಿಂದ ಪುನಃ ಬಾಗಿದಳು. ಆದರೆ ಬರೆಯಲು ಮನಸ್ಸು ಒಗ್ಗಲಿಲ್ಲ. ಒಳಗೊಳಗೆ ಅವಳ ಕುತೂಹಲ ಹೆಚ್ಚುತ್ತಲೆ ಹೋಯಿತು. ಎದ್ದು ನೀಟಾಗಿ ಕುಳಿತು "ಒಳ್ಳೇದು, ಹೇಳಿ, ನಾನು ನಿಮ್ಮ ಮಾತು ನಡೆಸಿಕೊಡುವೆ."

ನೀಲಾಂಬರ ನಸುನಕ್ಕ ; ಸ್ವಲ್ಪ ಅನುಮಾನಗೊಂಡು ಅತ್ತಿತ್ತ ನೋಡಿ ಹೇಳಿದ: — "ಮಧ್ಯಾಹ್ನ ಮೋತಿ ಮೆಹತರನು ಬಂದಿದ್ದ. ಬಂದವನೆ ನನ್ನ ಕಾಲುಗಳೆರಡನ್ನೂ ಗಟ್ಟಿಯಾಗಿ ಹಿಡಿದ. ಕಾಲುಗಳನ್ನು ಬಿಡಲು ಒಪ್ಪಲೆ ಇಲ್ಲ. ಒಂದುಬಾರಿ ನನ್ನ ಪಾದಧೂಳಿ ಬೀಳದೆ ತನ್ನ ಮಗ ಬದುಕುವುದಿಲ್ಲವೆಂದು ಅವನ ಹಾಗು ಅವನ ಮನೆಯವರೆಲ್ಲರ ವಿಶ್ವಾಸ. ಆದುದರಿಂದ ಸ್ವಲ್ಪ ಸಮಯದ ಮಟ್ಟಿಗಾಗಿ ನಾನು ಅಲ್ಲಿ ಹೋಗಬೇಕಾಗಿದೆ."

ವಿರಾಜ ಪತಿಯ ಮುಖವನ್ನು ದಿಟ್ಟಿಸುತ್ತ ಸ್ತಬ್ಧಳಾಗಿ ಕುಳಿತಳು. ಸ್ವಲ್ಪ ಸಮಯದ ಬಳಿಕ "ಈ ದುರ್ಬಲ ದೇಹ ಹೊತ್ತುಕೊಂಡು ಹೋಗುವಿರಾ ನೀವು ?" ಎಂದಳು.

"ಏನು ಮಾಡಲಿ ವಿರಾಜ ? ನಾನು ಅವನಿಗೆ ವಚನ ಕೊಟ್ಟಿದ್ದೇನೆ. ಆದಕ್ಕಾಗಿ ನಾನು ಸ್ವಲ್ಪವೇಳೆ ಮಾತ್ರ ಅಲ್ಲಿ ಹೋಗಲೆಬೇಕು."

"ವಚನವೇಕೆ ಕೊಟ್ಟಿರಿ ?"

ನೀಲಾಂಬರ ಸುಮ್ಮನೆ ಕುಳಿತ. ವಿರಾಜ ಸಿಡುಮೊಗದಿಂದ -" ನಿಮ್ಮ ಪ್ರಾಣ ಕೇವಲ ನಿಮ್ಮದೆಂದೆ ನಿಮ್ಮ ಭಾವನೆಯೆ ಹೇಗೆ? ಅದರ ಸಂಬಂಧ ವಿಚಾರಿಸಲು ಮತ್ತಾರಿಗೂ ಯಾವ ಅಧಿಕಾರವೂ ಇಲ್ಲವೆ? ನಿಮ್ಮ ಮನಸ್ಸಿಗೆ ಬಂದಂತೆ ನೀವು ಮಾಡುವುದೆ ?''

ಈ ವಿಷಯವನ್ನೆ ಹಾರಿಸುವ ವಿಚಾರದಿಂದ ನೀಲಾಂಬರನು ನಗಲು ಯತ್ನಿಸಿದ. ಆದರೆ ಹೆಂಡತಿಯ ಮುಖ ನೋಡಿದ ಕೂಡಲೆ ನಗೆಯೆ ಬತ್ತಿ ಹೋಯಿತು. ಅತಿಪ್ರಯಾಸದಿಂದ ಇಷ್ಟೆ ಹೇಳಿದ: — " ಆತನ ಅಳು ನೋಡಿ...........''

ವಿರಾಜ ನಡುವೆಯೆ ಅವನ ಮಾತನ್ನು ಹಾರಿಸಿ ಗರ್ಜಿಸಿದಳು — " ಒಳಿತಾಯಿತು! ಅವನ ಅಳುವನ್ನು ನೀವು ನೋಡಿದಿರಿ! ಆದರೆ ಈ ಜಗತ್ತಿನಲ್ಲಿ ನನ್ನ ಅಳುವನ್ನು ನೋಡುವವರು ಯಾರಾದರೂ ಇದ್ದಾರೆಯೆ?" ಎಂದು ಅದೆ ಬರೆದಿಟ್ಟ ನಾಲ್ಕು ಪುಟದ ಓಲೆಯನ್ನೆತ್ತಿ ನೂರು ಚೂರುಮಾಡಿ ಮತ್ತಿಂತೆಂದಳು: " ಅಬ್ಬಾ! ಗಂಡಸರದೂ ಎಂತಹ ಮನೋವೃತ್ತಿಯಮ್ಮಾ! ನಾಲ್ಕು ಹಗಲು ನಾಲ್ಕು ರಾತ್ರಿ ಏನೂ ತಿನ್ನದೆ ತುಸು ನಿದ್ದೆ ಹೋಗದೆ ನೂಕಿದೆ. ಅದರ ಫಲ ಈಗ ಕೈಯಲ್ಲಿಯೆ ಕೊಡುತ್ತಲಿದ್ದಾರೆ ಇವರು! ನೋಡಿದಲ್ಲಿ ರೋಗ-ರುಜಿನ, ನೋಡಿದಲ್ಲಿ ಸಿಡುಬು. . ಮತ್ತೆ ಹೊರಟಿದ್ದಾರೆ ಇವರು, ದುರ್ಬಲದೇಹ ಹೊತ್ತುಕೊಂಡು ರೋಗಿಯನ್ನು ಕಾಣಲು! ಹೋಗಿ-ನನಗೂ ದೇವರಿದ್ದೆ ಇದ್ದಾನೆ'' ಎಂದು ವಿರಾಜ ಪುನಃ ಎದೆಯ ಅಡಿಯಲ್ಲಿ ದಿಂಬನ್ನಿಟ್ಟುಕೊಂಡು ಬೋರಲು ಒರಗಿದಳು.

ನೀಲಾಂಬರನ ತುಟಿಯಮೇಲೆ ಅತಿ ಸೂಕ್ಷ್ಮ, ಅತ್ಯಂತಕ್ಷೀಣ ಹಾಸ್ಯ ರೇಖೆ ಮೂಡಿತು. ಮೆಲ್ಲಗೆ ನುಡಿದ: " ವಿರಾಜ, ನೀನು ಮಾತುಮಾತಿಗೆ ದೇವರ ಹೆಸರು ಉಚ್ಚರಿಸುತ್ತಿರುವೆಯಲ್ಲ, ಅವನಲ್ಲಿ ನಿಮಗೂ ವಿಶ್ವಾಸವಿದೆಯೆ?''

ವಿರಾಜ ಚಟ್ಟನೆದ್ದು ಕುಳಿತು ಕೋಪದಿಂದ " ಇಲ್ಲ, ಭಗವಂತನ ಮೇಲೆ ಕೇವಲ ನಿಮಗಷ್ಟೆ ವಿಶ್ವಾಸ ನಮಗೇನೂ ಇಲ್ಲ. ನಾವು ಭಜನೆ ಮಾಡುವುದಿಲ್ಲ, ತುಳಸಿಮಾಲೆ ಹೊರುವುದಿಲ್ಲ, ಹೆಣಸುಡುತ್ತ ಅಲೆಯುವುದಿಲ್ಲ. ಆದುದರಿಂದಲೆ ನಮಗೆ ಭಗವಂತನ ಮೇಲೆ ವಿಶ್ವಾಸವಿಲ್ಲ. ಅವನಲ್ಲಿ ನಿಮಗಷ್ಟೆ ವಿಶ್ವಾಸ" ಎಂದು ಮೂದಲಿಸಿದಳು.

ಹೆಂಡತಿ ಹೀಗೆ ಅಸಂತುಷ್ಟಳಾದುದನ್ನು ಕಂಡು ನೀಲಾಂಬರ ನಕ್ಕು ಬಿಟ್ಟ. ಆತನೆಂದ– "ಕೋಪಗೊಳ್ಳಬೇಡ ವಿರಾಜ. ನಿಜವಾಗಿಯೂ ವಸ್ತು-ಸ್ಥಿತಿ ಹಾಗೆಯೆ ಇದೆ. ಈ ಮಾತು ನಿನಗೆ ಮಾತ್ರವಲ್ಲ — ಸ್ತ್ರೀಜಾತಿಯವರಿಗೆಲ್ಲ ಅನ್ವಯಿಸುತ್ತದೆ. ಭಗವಂತನ ಮೇಲೆ ಪೂರ್ಣವಿಶ್ವಾಸವಿಟ್ಟು ತಂಣಗೆ ಕುಳಿತುಕೊಳ್ಳುವಷ್ಟು ಶಾರೀರಕ ಬಲ ಸ್ತ್ರೀಯರಲ್ಲಿಲ್ಲ. ಎಂದಮೇಲೆ ನಿನ್ನದಾದರೂ ಏನು ದೋಷ ?"

ನೀಲಾಂಬರನ ಈ ಮಾತುಕೇಳಿ ವಿರಾಜಳ ಕೋಪ ಮತ್ತಿಷ್ಟು ಹೆಚ್ಚಿತು. ಆವೇಶದಿಂದ ಸಿಡಿದಳು :- "ಇಲ್ಲ. ದೋಷವೆಲ್ಲಿಯದು ? ನಿಜವಾಗಿ ಆ ದೋಷವೆ ಸ್ತ್ರೀಯರ ಸದ್ಗುಣ. ಆದರೆ ಭಗವಂತನಲ್ಲಿ ವಿಶ್ವಾಸವಿಡುವುದಕ್ಕೆ ಶಾರೀರಿಕ ಬಲದ ಆವಶ್ಯಕತೆಯೆ ಇದ್ದರೆ ಹುಲಿ ಚಿರತೆಗಳ ದೇಹದಲ್ಲಿ ಇನ್ನೂ ಹೆಚ್ಚಿನ ಶಾರೀರಿಕ ಬಲವಿರುತ್ತದೆ. ಇದಲ್ಲದೆ ಸ್ತ್ರೀಯರಲ್ಲಿ ಬಲವಿರಲಿ, ಇರದಿರಲಿ—ಈ ದುರ್ಬಲದೇಹ ಹೊತ್ತುಕೊಂಡು ಹೋಗಲು ನಿಮ್ಮನ್ನು ನಾನು ಖಂಡಿತ ಬಿಡುವುದಿಲ್ಲ. ನೀವು ಎಷ್ಟೆ ವಾದವಿವಾದಮಾಡಿ, ಎಷ್ಟೆ ಯುಕ್ತಿಗಳನ್ನು ಹೂಡಿರಿ, ಅದಕ್ಕೆ ನಾನು ಸೊಪ್ಪುಹಾಕೆನು."

ನೀಲಾಂಬರ ಹೆಚ್ಚಿಗೆ ಮಾತನಾಡದೆ ಸುಮ್ಮನೆ ಒರಗಿದನು. ವಿರಾಜ ಗಳಿಗೆಹೊತ್ತು ಮೌನವಾಗಿದ್ದು "ಸಾಯಂಕಾಲವಾಗುತ್ತ ಬಂತು. ಹೋಗೋಣ, ಏನಾದರಷ್ಟು ಕೆಲಸವನ್ನಾದರೂ ಮಾಡೋಣ" ಎಂದೆನ್ನುತ್ತ ಎದ್ದು ಹೋದಳು. ಒಂದು ಗಂಟೆಯ ನಂತರ ದೀಪ ಹತ್ತಿಸಿ ಕೋಣೆಯಲ್ಲಿ ಇಡಲು ಬಂದಾಗ ತನ್ನ ಸ್ವಾಮಿಯು ಹಾಸಿಗೆಯಮೇಲೆ ಇಲ್ಲದುದನ್ನು ಕಂಡಳು. ತ್ವರೆಯಾಗಿ ಹೆಜ್ಜೆಹಾಕುತ್ತ ಹೊರಬಂದು, "ಪುಟ್ಟೀ, ನಿನ್ನಂಣ ಎಲ್ಲಿ ಹೋದರೆ ? ಹೋಗು, ಹೊರಗೆ ನೋಡಿಕೊಂಡು ಬಾ" ಎಂದು ಕೂಗಿ ಹೇಳಿದಳು.

ಪುಟ್ಟಿ ಓಡುತ್ತ ಹೋದಳು. ಐದು ನಿಮಿಷಗಳ ನಂತರ ತೇಕುತ್ತ ತೇಕುತ್ತ "ಎಲ್ಲಿಯೂ ಕಾಣಸಿಗಲಿಲ್ಲ. ನದಿಯ ಕಡೆಯವರೆಗೂ ಹೋಗಿ ಬಂದೆ" ಎಂದು ಹೇಳಿದಳು.

ತಲೆಯಲ್ಲಾಡಿಸುತ್ತ 'ಹೂಂ' ಎಂದು ವಿರಾಜ ಅಡಿಗೆ ಮನೆಯ ಬಾಗಿಲುಬಳಿ ತೆಪ್ಪಗೆ ಕುಳಿತಳು.

೩

ಮೂರು ವರುಷಗಳ ನಂತರದ ಮಾತಿದು. ಎರಡು ತಿಂಗಳು ಮೊದಲೆ ಹರಿಮತಿಯು ಮಾವನ ಮನೆಗೆ ಹೋಗಿದ್ದಳು. ತಮ್ಮ ಪೀತಾಂಬರ ಬೇರೆ ಯಾಗಿದ್ದ. ಆತ ಮನೆಯನ್ನು ವಿಭಾಗಿಸಿ ತನ್ನ ಮನೆಗೊಂದು ಬೇರೆ ಬಾಗಿಲು ಹಾಕಿಸಿದ್ದ. ಹೊರಗೆ ದೇವೀಮಂದಿರದ ಅಂಗಳದಲ್ಲಿ ಸಂಜೆಯ ನೆಳಲು ಸ್ಪಷ್ಟವಾಗಿ ಕಾಣುತಿತ್ತು. ಅದೆ ನೀಲಾಂಬರ ಒಂದು ಹರಕು ಚಾಪೆಯ ಮೇಲೆ ಕುಳಿತಿದ್ದ. ವಿರಾಜ ಮೆಲ್ಲನೆ ಅವನ ಹತ್ತಿರ ಬಂದು ನಿಂತಳು. ನೀಲಾಂಬರನು ದೃಷ್ಟಿ ಮೇಲಕ್ಕೆತ್ತಿ ಅವಳನ್ನು ನೋಡುತ್ತ "ಒಮ್ಮೆಲೆ ಹೊರಗೇಕೆ ಬಂದು ನಿಂತೆ?" ಎಂದ.

ವಿರಾಜ ಒಂದು ಮಗ್ಗಲು ಕುಳಿತು "ನಾನು ಒಂದು ವಿಷಯ ಕೇಳ ಬಂದಿರುವೆ" ಎಂದಳು.

"ಯಾವ ವಿಷಯ?"

ವಿರಾಜ ಕೇಳಿದಳು:–"ಯಾವ ವಸ್ತು ತಿನ್ನುವುದರಿಂದ ಸಾವು ಬರುವುದೊ ಅದನ್ನಿಷ್ಟು ನನಗೆ ತಿಳಿಸುವಿರಾ?"

ನೀಲಾಂಬರ ಸುಮ್ಮನಿದ್ದ.

ವಿರಾಜ ಮತ್ತಿಂತೆಂದಳು:–"ಒಂದೆ ನನಗೆ ಸಾಯುವ ಉಪಾಯ ವನ್ನಾದರೂ ಹೇಳಿಕೊಡಿ, ಇಲ್ಲವೆ ನೀವು ದಿನದಿನಕ್ಕೆ ಈ ರೀತಿ ಬಾಡುತಿದ್ದ ಕಾರಣವನ್ನಾದರೂ ಸ್ಪಷ್ಟವಾಗಿ ತಿಳಿಸಿರಿ."

"ನಾನು ದಿನದಿನಕ್ಕೆ ಬಾಡುತಿದ್ದೇನೆಂದು ನಿನಗಾರು ಹೇಳಿದರು?"

ವಿರಾಜ ದೃಷ್ಟಿ ಮೇಲೆತ್ತಿ ಕ್ಷಣಹೊತ್ತು ಪತಿಯನ್ನು ನೋಡುತ್ತ ಹೇಳಿದಳು—"ನೀವೂ ಚೆನ್ನಾಗಿ ನುಡಿದಿರಿ. ಯಾರಾದರೂ ತಿಳಿಹೇಳಿ ದಾಗಲೆ ನನಗೆ ಗೊತ್ತಾಗುತ್ತದೆಂದು ನೀವು ನಿಜವಾಗಿಯು ಭಾವಿಸಿದ್ದೀರಾ?"

ನೀಲಾಂಬರನು ನಸುನಕ್ಕ. ತನ್ನ ಮಾತನ್ನು ಸಂಬಾಳಿಸುತ್ತ "ಹಾಗಲ್ಲೆ; ನನ್ನ ಮಾತಿನ ಅರ್ಥ ಹಾಗಲ್ಲ. ನೀನು ಬಂದಿದ್ದದ್ದನ್ನು ಮತ್ತೊಂದು ಅರ್ಥ ಮಾಡಿಕೊಳ್ಳುವೆಯಲ್ಲೆ? ನನ್ನ ಪ್ರಶ್ನೆ ಇಷ್ಟೆ: ಈ ವಿಷಯವಾಗಿ ಯಾರಾದರೂ ನಿನಗೆ ತಿಳಿಹೇಳಿದರೆ ಅಥವಾ ನೀನೆ ಹಾಗೆ ಭಾವಿಸಿದೆ?"

ವಿರಾಜಳಿಗೆ ಈ ಪ್ರಶ್ನೆಗೆ ಉತ್ತರವೀಯುವ ಅಗತ್ಯ ಕಾಣಲಿಲ್ಲ. ಅವಳೆಂದಳು : — "ಪುಟ್ಟಿಯನ್ನು ಅಲ್ಲಿ ಕೊಡುವ ಅಗತ್ಯವಿಲ್ಲವೆಂದು ಎಷ್ಟು ಬಡಕೊಂಡೆ. ಆದರೆ ನೀವು ನನ್ನ ಮಾತನ್ನು ಕಿವಿಗೆ ಹಾಕಿಕೊಳ್ಳಲೆ ಇಲ್ಲ. ಕೈಯಲ್ಲಿದ್ದ ನಗದು ಹಣವೂ ಹೋಯಿತು, ಮೈಮೇಲಿನ ಆಭರಣಗಳೂ ಹೋದವು. ಇದ್ದ ಸಣ್ಣ ಜವುಗುಭೂಮಿ ಆ ಯದುವಿಗಾಗಿ ಲಿಲಾವಾಯಿತು. ಸಾಲದ್ದಕ್ಕೆ ಎರಡು ವರ್ಷಗಳಿಂದ ಬರ ಬೇರೆ. ಸ್ವಲ್ಪ ಹೇಳಿ ನೋಡೋಣ - ಪುಟ್ಟಿಯ ಗಂಡನ ಓದಿನ ವೆಚ್ಚದ ವ್ಯವಸ್ಥೆ ತಿಂಗಳು ತಿಂಗಳು ನೀವು ಹೇಗೆ ಮಾಡುವಿರಿ? ಹಣ ಕಳುಹಿಸುವಲ್ಲಿ ಏನಾದರೂ ಹೆಚ್ಚುಕಡಿಮೆಯಾದರೆ ಪುಟ್ಟಿ ಅಂತಿಂಥ ಮಾತುಗಳನ್ನು ಅನಿಸಿಕೊಳ್ಳಬೇಕಾಗುವುದು. ಅಲ್ಲದೆ ಆ ಹುಡುಗಿಯ ಸ್ವಭಾವವೂ ವಿಚಿತ್ರವೆ. ಸಂಣಮಾತಿಗೂ ಅವಳ ಮನಸ್ಸು ದುಃಖಗೊಳ್ಳುವುದು. ಸೈರಣೆ ಅವಳಿಗಿಲ್ಲವೆ ಇಲ್ಲ. ಯಾರಾದರು ನಿಮ್ಮನ್ನು ಸ್ವಲ್ಪ ನಿಂದಿಸಿದರೂ ಸಾಕು, ಅವಳು ಅದನ್ನೆಂದಿಗೂ ಸಹಿಸಳು. ಇಂಥ ಪರಿಸ್ಥಿತಿಯಲ್ಲಿ ಏನು ಬಿಕ್ಕಟ್ಟು ಉಂಟಾಗುವುದೋ ದೇವರೆ ಬಲ್ಲ! ಅವನೆ ನಮ್ಮನ್ನು ಈ ವಿಪತ್ತಿನಿಂದ ಪಾರುಮಾಡಬೇಕು. ಆದರೆ ನೀವೇಕೆ ಇಂಥ ಕೆಲಸ ಮಾಡಿದಿರಿ?"

ನೀಲಾಂಬರ ಏನೂ ಉತ್ತರ ಕೊಡಲಿಲ್ಲ.

ವಿರಾಜ ತಾನೆ ಮಾತನಾಡಿದಳು: — "ಅಲ್ಲದೆ ಪುಟ್ಟಿಯ ಕಲ್ಯಾಣಕ್ಕಾಗಿ ನೀವು ಹೊತ್ತ ಈ ರಗಳೆಯಿಂದ ದಿನರಾತ್ರಿಯೆನ್ನದೆ ಚಿಂತೆಯಲ್ಲಿ ಮುಳುಗಿರುತ್ತೀರಿ. ಈರೀತಿ ನನ್ನ ಸರ್ವನಾಶಮಾಡುತಿದ್ದೀರಿ. ಆಗದು, ಅದೆಂದಿಗೂ ಆಗದು. ಹೀಗೆ ಚಿಂತೆ ಹಚ್ಚಿಕೊಂಡು ಕುಳಿತುಕೊಳ್ಳುವ ಬದಲು ನೀವು ನಾಲ್ಕೈದು ಕೂರಿಗೆ ಜಮಿನುಮಾರಿ ಐದುನೂರು ರೂಪಾಯಿಗಳನ್ನು ಕೂಡಿಸಿ ಪುಟ್ಟಿಯ ಮಾವನ ಮನೆಗೆ ಹೋಗಿರಿ. ಆ ರೂಪಾಯಿ ಅವರ ಕೈಯಲ್ಲಿತ್ತು ಅವರಿಗೆ ದಂಡವತ್ ಪ್ರಣಾಮ ಸಲ್ಲಿಸಿ 'ಸ್ವಾಮಿ, ಈ ಹಣ ಪಡೆದು ನನ್ನನ್ನು ಮುಕ್ತನನ್ನಾಗಿ ಮಾಡಿ. ನಾನು ಬಡವ. ನನಗೆ ಹೆಚ್ಚು ಕೊಡುವ ಶಕ್ತಿ ಇಲ್ಲ' ಎಂದು ಸ್ಪಷ್ಟವಾಗಿ ಹೇಳಿಬಿಡಿ. ಈ ರೀತಿ ಒಮ್ಮೆ ಈ ನಿಮ್ಮ ಋಣದಿಂದ ಮುಕ್ತರಾಗಿರಿ. ಮುಂದೆ ಪುಟ್ಟಿಯ ದೈವದಲ್ಲಿದ್ದಂತೆ ಆಗುವುದು."

ನೀಲಾಂಬರ ವಿರಾಜಳ ಈ ಮಾತಿಗೂ ಉತ್ತರಗೊಡಲಿಲ್ಲ. ವಿರಾಜ ನೀಲಾಂಬರನ ಮುಖವನ್ನು ನಿಟ್ಟಿಸುತ್ತ ನಿಂತಳು. ಸ್ವಲ್ಪ ಸಮಯದ ನಂತರ "ನೀವು ಹಾಗೆ ಮಾಡಬಲ್ಲಿರಾ?" ಎಂದಳು.

ನಿಡು ಉಸಿರ್ಗರೆದು ನೀಲಾಂಬರನೆಂದ – "ಏಕೆ ಮಾಡಲಾರೆ? ಆದರೆ ಇದ್ದುದನ್ನು ಮಾರಿಬಿಟ್ಟರೆ ಮುಂದೆ ನಮ್ಮ ಜೀವನ ನಿರ್ವಾಹ ಹೇಗೆ?"

ವಿರಾಜಳೆಂದಳು — "ಜೀವನ ನಿರ್ವಾಹ ಹೇಗಾದರೂ ಆದೀತು. ಆಸ್ತಿ ಒತ್ತಿಹಾಕಿ ಸಾಲ ತೆಗೆಯುವುದರಿಂದ ಇಬ್ಬಗೆಯ ಹಾನಿ. ಬಡ್ಡಿ ಬೆಳೆಯುತ್ತ ಹೋಗುವುದಲ್ಲದೆ ಮೇಲೆ ಸಾಹುಕಾರರ ಕಿಟಕಿಟ ಸಹಿಸಬೇಕಾಗುವುದು. ಆದುದರಿಂದ ಆಸ್ತಿಯನ್ನು ಒತ್ತಿಹಾಕುವ ಬದಲು, ಅದನ್ನು ಮಾರಿ ಕೊನೆಯುವರೆಗೂ ಈ ತೊಂದರೆಗಳಿಂದ ಮುಕ್ತರಾಗುವುದು ಲೇಸು. ಚಿಂತೆ ಕಟ್ಟಿಕೊಂಡು ಕೊರಗಲು ನಮಗೇನು ಮಕ್ಕಳು-ಮರಿಗಳಿಲ್ಲ. ಇರುವುದು ನಾವಿಬ್ಬರೆ. ಸಿಕ್ಕಿದುದನ್ನು ತಿಂದು ಹೇಗಾದರೂ ದಿನಕಳೆಯೋಣ. ಉದರ ಪೂರ್ತಿಗೂ ಯಾವ ಆಸರೆಯೂ ಉಳಿಯದೆ ಹೋದರೆ ನೀವು ಹೇಗೂ ಸಾಧುಗಳಾಗಿದ್ದೀರಿ, ನಾನೂ ಸನ್ಯಾಸಿನಿಯಾಗುವೆ. ಆಮೇಲೆ ಕೆಲದಿನ ಕಾಶಿ, ಹಲವು ದಿನ ವೃಂದಾವನ, ಉಳಿದ ದಿನ ಅನ್ಯ ತೀರ್ಥಕ್ಷೇತ್ರಗಳಲ್ಲಿ ಅಲೆದು ಜೀವಿಸೋಣ."

ನೀಲಾಂಬರ ಮುಗುಳುನಗುತ: — "ನೀನು ತಾಳ ಬಾರಿಸುವೆಯಾ ಹೇಗೆ?" ಎಂದು ಗೇಲಿಯಾಡಿದ.

"ಹಾಂ, ಬಾರಿಸುವೆ. ಒಂದುವೇಳೆ ಅದಾಗದಿದ್ದರೆ ಹೆಗಲಮೇಲೆ ನಿಮ್ಮ ಜೋಳಿಗೆ ಹೊತ್ತುಕೊಂಡಾದರೂ ತಿರುಗುವೆ. ನೀವು ಭಾವವಶರಾಗಿ ಭಜನೆಮಾಡುವಾಗ ಪಶುಪಕ್ಷಿಗಳೂ ಮುಗ್ಧವಾಗಿ ನಿಲ್ಲುವುವು. ಎಂದಮೇಲೆ ನಮ್ಮಿಬ್ಬರ ಜೀವನ ನಿರ್ವಾಹದ ಚಿಂತೆಯೇಕೆ? ನಡೆಯಿರಿ. ಮನೆಗೆ ಹೋಗುವಾ. ಕತ್ತಲಲ್ಲಿ ನಿಮ್ಮ ಮುಖ ಸಹ ಚೆನ್ನಾಗಿ ಕಾಣಿಸದು."

ಮನೆಗೆ ಬಂದಕೂಡಲೆ ವಿರಾಜಳು ಗಂಡನ ಮುಖದ ಸನಿಹದಲ್ಲಿ ದೀಪವೆತ್ತಿ ಹಿಡಿದು ಕ್ಷಣಹೊತ್ತು ಸುಮ್ಮನೆ ನೋಡುತ್ತ ನಿಂತಳು. ಬಳಿಕ ತನ್ನ ನಗುವನ್ನು ಅಡಗಿಸಿ — "ಇಲ್ಲ, ನನಗೆ ಸಾಹಸವಾಗುತ್ತಿಲ್ಲ. ಇಂಥ ಸಾಧುಗಳನ್ನು ಹತ್ತೆಂಟು ಸನ್ಯಾಸಿನಿಗಳೆದುರು ಬಿಡಲು ಜೀವವಿರುವವರೆಗೆ

ನಾನೆಂದಿಗೂ ಒಪ್ಪಲಾರೆ. ಅದಕ್ಕಿಂತ ನಾನು ಒಣಗಿ ಒಣಗಿ ಇಲ್ಲಿ ಸಾಯುವುದೆ ಎಷ್ಟೋ ಪಾಲು ಚೆನ್ನು."

ನೀಲಾಂಬರ ನಕ್ಕು ನುಡಿದ—"ಏನೆ, ಅಲ್ಲಿ ಸನ್ಯಾಸಿನಿಯರಷ್ಟೆ ಇರುವುದಿಲ್ಲ. ಸಾಧುಗಳೂ ಇರುತ್ತಾರೆ.''

"ಸಾಧುಗಳೂ ಇರಬಹುದು. ಒಬ್ಬಿಬ್ಬರಲ್ಲ, ನೂರಾರು ಸಾವಿರಾರು ಇರಬಹುದು. ಅದರಿಂದ ನನಗೇನು?'' ಎಂದು ವಿರಾಜ ಮತ್ತೆ ದೀಪವನ್ನು ಯಥಾಸ್ಥಾನದಲ್ಲಿರಿಸಿದಳು. ಬಳಿಕ ಗಂಡನ ಚರಣಗಳ ಬಳಿ ಕುಳಿತು ಗಂಭೀರ ವಾಣಿಯಲ್ಲಿ—"ಅದಿರಲಿ, ಸತಿ ಹಾಗೂ ಕುಲಟೆಯರಲ್ಲಿ ಏನು ಭೇದ? ಈ ಲೋಕದಲ್ಲಿಯೆ ಸತಿಸಾಧ್ವಿಯರೂ ಇದ್ದಾರೆ. ಕುಲಟೆಕಲಂಕಿನಿಯರೂ ಇದ್ದಾರೆ. ಆದರೆ ನಾನೀವರೆಗೂ ಕುಲಟೆಯನ್ನಾಗಲಿ ಕಲಂಕಿನಿಯನ್ನಾಗಲಿ ಕಂಡುದಿಲ್ಲ. ಕುಲಟೆಯನ್ನು ನೋಡುವ ಇಚ್ಛೆ ನನಗೆ ಬಹಳ ಇದೆ. ಅವರು ಹೇಗಿರುತ್ತಾರೆ? ನಮ್ಮಂತೆಯೆ ಇರುವರೊ, ಅಥವಾ ಏನಾದರೂ ವ್ಯತ್ಯಾಸ ವಿದೆಯೊ ಹೇಗೆ? ಆ ಜನ ಏನು ಮಾಡುತ್ತಾರೆ—ಇವೆಲ್ಲವುಗಳನ್ನು ಕಂಣಾರೆ ನೋಡಲು ನನಗೆ ಬಹು ಆಸೆ. ನೀವು ಎಂದಾದರೂ ಇಂತಹ ಸ್ತ್ರೀಯರನ್ನು ನೋಡಿದ್ದೀರಾ?"

"ಹಾಂ, ನೋಡಿದ್ದೇನೆ" ಎಂದ ನೀಲಾಂಬರ.

"ನೋಡಿದ್ದೀರಾ? ನಾನು ನಿಮ್ಮಬಳಿ ಕುಳಿತು ಹರಟೆಹೊಡೆಯುವಂತೆ ಅವರೂ ಯಾವುದೆ ಗಂಡಸಿನ ಬಳಿ ಕುಳಿತು ಸ್ವಚ್ಛಂದವಾಗಿ ಹರಟೆ ಕೊಚ್ಚುವರೊ?"

ನೀಲಾಂಬರ ನಗುತ್ತ ನುಡಿದ:—"ಅದನ್ನು ನಾನು ಹೇಳಲಾರೆ. ಅಷ್ಟು ಸನಿಹದಿಂದ ಅವರನ್ನು ನಾನು ನೋಡಿಲ್ಲ.''

ವಿರಾಜ ಕ್ಷಣಹೊತ್ತು ಅನಿಮೇಷ ದೃಷ್ಟಿಯಿಂದ ಗಂಡನ ಮುಖವನ್ನು ನಿಟ್ಟಿಸಿದಳು. ಆಮೇಲೆ ಅವಳ ಮನದಲ್ಲಿ ಯಾವ ವಿಚಾರ ಮೂಡಿತೊ ಒಮ್ಮೆಲೆ ಅವಳ ದೇಹವು ಗದಗದ ನಡುಗತೊಡಗಿತು. ದೇಹದ ಪ್ರತಿಯೊಂದು ಭಾಗದಲ್ಲೂ ಮುಳ್ಳು ಚುಚ್ಚುತಿರುವಂತೆ ಭಾಸವಾಯಿತು ಅವಳಿಗೆ.

ಹೆಂಡತಿಯ ಅವಸ್ಥೆ ನೋಡಿ—"ನಿನಗೇನಾಯಿತೆ?'' ಎಂದ ನೀಲಾಂಬರ.

ವಿರಾಜಳೆಂದಳು — “ಅಬ್ಬಾ, ಅವರೆಂಥ ಜನಗಳಪ್ಪಾ? ರಾಮ ರಾಮ! ಸಂಜೆಯ ಸಮಯದಲ್ಲಿ ಇದೆಂಥ ವಿಚಾರ ಮೂಡಿತು? — ಏನು, ಇನ್ನೂ ನಿಮ್ಮ ಸಂಧ್ಯಾವಂದನೆ ಆಗಿಲ್ಲವೆ?”

“ಇಲ್ಲ. ಈಗ ಹೊರಡುವೆ” ಎಂದ ನೀಲಾಂಬರ.

“ಆಗಲಿ, ಬೇಗ ಕೈಕಾಲು ತೊಳೆದುಕೊಂಡು ಬನ್ನಿ. ಅವರೆಗೆ ಇದೆ ಕೋಣೆಯಲ್ಲಿ ಮಣೆಹಾಕಿ ನಿಮ್ಮ ಸಂಧ್ಯಾವಂದನೆಯ ವ್ಯವಸ್ಥೆ ಮಾಡುವೆ.”

ಇದಾದ ೫-೬ ದಿನಗಳ ನಂತರ ಒಂದು ಸಂಗತಿ ನಡೆಯಿತು. ರಾತ್ರಿ ಬಹುಶಃ ಹತ್ತು ಹೊಡೆದಿರಬಹುದು. ನೀಲಾಂಬರ ಹಾಸಿಗೆಯಮೇಲೆ ಒರಗಿ ಕಣ್ಣುಮುಚ್ಚಿ ಗುಡುಗುಡಿ ಸೇದುತಿದ್ದ. ವಿರಾಜ ಮನೆಗೆಲಸಗಳೆಲ್ಲವನ್ನೂ ಮುಗಿಸಿ ಮಲಗುವ ಸಿದ್ಧತೆಯಲ್ಲಿದ್ದಳು. ಮಲಗುವ ಮುನ್ನ ತಾಂಬೂಲ ಆಗಿಯೋಣವೆನಿಸಿತು ಅವಳಿಗೆ. ನೆಲದಮೇಲೆ ಕುಳಿತು ವೀಳ್ಯ ಕಟ್ಟತೊಡಗಿದಳು. ಅಷ್ಟರಲ್ಲಿ — “ಹೌದೆ, ಶಾಸ್ತ್ರದೊಳಗಿನ ಸಂಗತಿಯೆಲ್ಲವೂ ನಿಜ ಸಂಗತಿಗಳೆ!” ಎಂದು ಒಮ್ಮೆಲೆ ಕೇಳಿದಳು.

ನೀಲಾಂಬರ ಬಾಯಿಯಲ್ಲಿಯ ಗುಡುಗುಡಿಯ ನಳಿಕೆ ಹೊರದೆಗೆದು ಮುಖ ಹೊರಳಿಸಿ “ಶಾಸ್ತ್ರದೊಳಗಿನ ಸಂಗತಿಗಳು ನಿಜವಲ್ಲದೆ ಸುಳ್ಳುಸಂಗತಿಗಳಿರುವವೆ?” ಎಂದ.

“ಹಾಗಲ್ಲ. ಅವು ಸುಳ್ಳುಸಂಗತಿಗಳೆಂದು ನನ್ನ ಅಭಿಪ್ರಾಯವಲ್ಲ. ಆದರೆ ಪ್ರಾಚೀನಕಾಲದಲ್ಲಿ ಫಲವಿತ್ತಂತೆ ಈಗಲೂ ಫಲವೀಯುವವೆ?” ಎಂದು ವಿಚಾರಿಸಿದಳು ವಿರಾಜ.

ಕ್ಷಣಹೊತ್ತು ಯೋಚಿಸಿ ನೀಲಾಂಬರನೆಂದ :- “ವಿರಾಜ ನಾನೇನು ಪಂಡಿತನಲ್ಲ. ಎಲ್ಲ ವಿಷಯ ನನಗೂ ಗೊತ್ತಿಲ್ಲ. ಆದರೆ ನನ್ನ ಬುದ್ಧಿಗೆ ತಿಳಿದಂತೆ, ಯಾವುದು ಸತ್ಯವೊ ಅದು ಪ್ರಾಚೀನಕಾಲದಲ್ಲಿಯೂ ಸತ್ಯವಿತ್ತು. ಈ ಘೋರ ಕಲಿಯುಗದಲ್ಲಿಯೂ ಸಹ ಸತ್ಯವಾಗಿಯೆ ಇದೆ.”

ವಿರಾಜಳೆಂದಳು — “ಸಾವಿತ್ರಿ ಸತ್ಯವಾನರ ವಿಷಯವನ್ನೆ ತೆಗೆದುಕೊಳ್ಳಿ. ಸಾವಿತ್ರಿ ಮೃತಪತಿಯನ್ನು ಯಮಪಾಶದಿಂದ ಬಿಡಿಸಿತಂದಳು. ಈ ಯುಗದಲ್ಲಿಯೂ ಇಂಥ ಕೆಲಸ ಹೆಂಗುಸರಿಂದ ಸಾಧ್ಯವೆ?”

" ಅದೇಕೆ ಸಾಧ್ಯವಿಲ್ಲ. ಸಾವಿತ್ರಿಯಷ್ಟು ಸತಿಸಾಧ್ವಿಯಾದ ಸ್ತ್ರೀಯು ಅಗತ್ಯವಾಗಿ ಅಂಥಕಾರ್ಯ ಮಾಡಬಹುದು. "

" ಹಾಗಾದರೆ ನಾನೂ ಹಾಗೆ ಮಾಡಬಲ್ಲೆನೆ ? "

ನೀಲಾಂಬರ ನಗುತ್ತ " ಏನು, ನೀನು ಸಾವಿತ್ರಿಯಷ್ಟು ಸತಿ ಸಾಧ್ವಿಯೆ ? ಅವಳು ದೇವತಾಸ್ವರೂಪಳು " ಎಂದ.

ಎಲೆಯ ಡಬ್ಬಿಯನ್ನು ಮುಚ್ಚಿ ಒಂದು ಮೂಲೆಗೆ ಸರಿಸಿ ವಿರಾಜ ಳೆಂದಳು :– " ಅವಳು ದೇವತಾಸ್ವರೂಪಳಿರಬಹುದು. ಸತೀತ್ವದಲ್ಲಿ ನಾನೂ ಅವಳಿಗಿಂತ ಯಾವ ವಿಧದಲ್ಲಿಯೂ ಕಡಿಮೆಯಿಲ್ಲ. ನನ್ನಂತೆ ಸತೀತ್ವದ ನಿಯಮ ಪಾಲಿಸುವಂತಹ ಸ್ತ್ರೀಯರು ಈ ಜಗತ್ತಿನಲ್ಲಿ ಕಡಿಮೆ ಇರಲಿಕ್ಕಿಲ್ಲ. ಆದರೆ ಸತೀತ್ವದ ಮಹಿಮೆಯ ವಿಷಯವಾಗಿ ನನಗಿಂತ ಹೆಚ್ಚು ಅರಿತ ಸ್ತ್ರೀ ಯರು ಈ ಲೋಕದಲ್ಲಿದ್ದಾರೆಂಬ ಮಾತಿಗೆ ನಾನೆಂದಿಗೂ ಒಪ್ಪಲಾರೆ. ಸಾವಿ ತ್ರಿಯೆ ಇರಲಿ, ಯಾರೆ ಇರಲಿ, ಈ ವಿಷಯದಲ್ಲಿ ನಾನು ಯಾರಿಗೂ ಕಡಿಮೆ ಯವಳಲ್ಲ. "

ನೀಲಾಂಬರನು ಈ ಮಾತಿಗೇನೂ ಉತ್ತರವೀಯಲಿಲ್ಲ. ಮೌನದಿಂದ ಹೆಂಡತಿಯ ಮುಖವನ್ನೆ ನೋಡುತಿದ್ದ. ವಿರಾಜ ವೀಳ್ಯದೆಲೆ ಕಟ್ಟಲು ಕುಳಿ ತಾಗಲೆ ಅವಳೆದುರು ದೀಪ ತಂದಿಟ್ಟಿದ್ದ. ಅದರ ಬೆಳಕೆಲ್ಲವೂ ವಿರಾಜಳ ಮುಖದಮೇಲೆಯೆ ಬೀಳುತಿತ್ತು. ವಿರಾಜಳ ಎರಡೂ ಕಂಣುಗಳಿಂದ ಅದ್ಭುತ ಜ್ಯೋತಿಯೊಂದು ಚಿಮ್ಮಿ ಬರುತ್ತಿರುವಂತೆ ಆ ಬೆಳಕಿನಲ್ಲಿ ಸ್ಪಷ್ಟವಾಗಿ ನೀಲಾಂಬರನಿಗೆ ಕಾಣಿಸಿತು.

" ಹಾಗಾದರೆ ನೀನೂ ಹಾಗೆ ಮಾಡಬಲ್ಲೆ " ಎಂದು ಅಳುಕುತ್ತ ಬಳುಕುತ್ತ ನೀಲಾಂಬರನೆಂದ.

ವಿರಾಜ ಎದ್ದುಬಂದು ಬಾಗಿ ಗಂಡನ ಎರಡೂ ಪಾದಗಳಿಗೆ ಹಣೆಹಚ್ಚಿ ನಮಸ್ಕರಿಸಿ ಬಳಿಯಲ್ಲಿಯೆ ಕುಳಿತಳು. ಬಳಿಕ :– " ನನಗೆ ತಿಳಿವಳಿಕೆ ಬಂದಂದಿನಿಂದ ಈ ವರೆಗೆ ನಿಮ್ಮ ಈ ಚರಣಗಳ ಸೇವೆಯಲ್ಲದೆ ಅನ್ಯಚರಣ ಗಳ ಕಡೆಗೆ ನೋಡಿಲ್ಲ. ಅದು ನಿಜವಿದ್ದುದಾದರೆ ಹಾಗೂ ಅಕ್ಷರಶಃ ನಾನು ಪತಿವ್ರತೆಯಾಗಿದ್ದರೆ, ವಿಷಗಳಿಗೆಯಲ್ಲಿ ಸಾವಿತ್ರಿಯ ಹಾಗೆ ನಾನೂ ನಿಮ್ಮನ್ನು

ಮರಳಿ ಪಡೆಯುವಂತೆಯೂ ಹಾಗೂ ಸುಮಂಗಲಿಯಾಗಿಯೆ ಚಿತೆಯನೇರು ವಂತೆಯೂ ಅಂತ್ಯಕಾಲದಲ್ಲಿ ಈ ನಿಮ್ಮ ಚರಣಗಳಲ್ಲಿಯೆ ತಲೆಯಿಟ್ಟು ಪ್ರಾಣ ಬಿಡುವಂತೆಯೂ ನನ್ನನ್ನು ಹರಿಸಿ" ಎಂದು ವಿರಾಜ ಪ್ರಾರ್ಥಿಸಿಕೊಂಡಳು.

ನೀಲಾಂಬರ ವ್ಯಸ್ತನಾಗಿ ಎದ್ದುಕುಳಿತ. "ಇದೇನು ವಿರಾಜ, ಇಂದು ನಿನಗೇನಾಗಿದೆ?" ವಿರಾಜಳ ನೇತ್ರಗಳೆರಡೂ ಸಜಲವಾಗಿದ್ದವು. ಆದರೂ ಅವಳ ತುಟಿಗಳಲ್ಲಿ ಅತ್ಯಂತ ಮೃದುಮಧುರವಾದ ನಗುಮಲ್ಲಿಗೆ ಅರಳಿತ್ತು. ಅವಳೆಂದಳು: "ಮತ್ತೆಂದಾದರೂ ಹೇಳುವೆ. ಈಗ ಬೇಡ. ನನ್ನನ್ನಿಷ್ಟೆ ಹರಿಸಿ. ಸಾಯುವಾಗ ನಿಮ್ಮ ಈ ಚರಣಗಳ ಧೂಳಿಹೊಂದಲು ಸಮರ್ಥಳಾಗಲಿ ಎಂದು; ಹಾಗೂ ನಿಮ್ಮ ತೊಡೆಯಮೇಲೆಯೆ ತಲೆಯಿಟ್ಟು ನಿಮ್ಮ ಮುಖವನ್ನೆ ನೋಡುತ್ತ ಪ್ರಾಣಬಿಡುವಂತಾಗಲಿ ಎಂದು."

ವಿರಾಜಳಿಗೆ ಹೆಚ್ಚು ಮಾತನಾಡಲಾಗಲಿಲ್ಲ. ಇಷ್ಟು ಹೇಳುವುದ ರಲ್ಲಿಯೆ ಗಂಟಲು ಕಟ್ಟಿಕೊಂಡಿತು.

ಹೆಂಡತಿಯ ಅವಸ್ಥೆನೋಡಿ ನೀಲಾಂಬರ ಗಾಬರಿಯಾದ. ಅವಳನ್ನು ತನ್ನಕಡೆಗೆ ಸೆಳೆದುಕೊಂಡು, "ಇಂದು ನಿನಗೇನಾಗಿದೆ ವಿರಾಜ? ಯಾರಾ ದರೂ ನಿನಗೇನಾದರೂ ಹೇಳಿದ್ದಾರೆಯೆ?" ಗಂಡನ ಮಡಿಲಲ್ಲಿ ಮುಖ ವಡಗಿಸಿ ವಿರಾಜ ಸುಮ್ಮನೆ ಅಳತೊಡಗಿದಳು. ಅವಳಾವ ಉತ್ತರವನ್ನೂ ಕೊಡಲಿಲ್ಲ.

ನೀಲಾಂಬರನು ಪುನಃ "ನೀನು ಹಿಂದೆ ಹೀಗೆ ಮಾಡುತ್ತಿರಲಿಲ್ಲ ವಿರಾಜ! ನಿನಗೇನಾಗಿದೆಯೆಂದು ತಿಳಿಸುವುದಿಲ್ಲವೆ?" ಎಂದು ಕೇಳಿದ.

ಗಂಡನ ತೊಡೆಯಲ್ಲಿಯೆ ಮುಖವಡಗಿಸಿ ವಿರಾಜ ಕಂಣೊರಸಿಕೊಂಡ ಳಲ್ಲದೆ ಮುಖವನ್ನು ಮೇಲೆತ್ತಲಿಲ್ಲ. ಮೃದುತರಲಕಂಠದಲ್ಲಿ: "ಮತ್ತೆಂ ದಾದರೂ ತಿಳಿಸುವೆ" ಎಂದಳು.

ನೀಲಾಂಬರನು ಮತ್ತೆ ಆಗ್ರಹಪಡಿಸಲಿಲ್ಲ. ಕುಳಿತಂತೆಯೆ ಕುಳಿತು ವಿರಾಜಳ ತಲೆಗೂದಲುಗಳ ಮಧ್ಯೆ ಬೆರಳನ್ನಾಡಿಸುತ್ತ ಮೌನವಾಗಿ ಹೆಂಡ ತಿಗೆ ಸಾಂತ್ವನವೀಯುತೊಡಗಿದ. ತಂಗಿಯ ಮದುವೆಯಲ್ಲಿ ತನ್ನ ಶಕ್ತಿಮೀರಿ ವೆಚ್ಚಮಾಡಿದ್ದರಿಂದ ಅವನು ಸಾಲಗಾರನಾಗಿದ್ದ. ಇತ್ತೀಚೆ ಮನೆಯ ವೆಚ್ಚ ಮೊದಲಿನಷ್ಟು ಸರಾಗವಾಗಿ ಸಾಗುತಿದ್ದಿಲ್ಲ. ಇತ್ತ ಒಂದೆಸವನೆ ಎರಡು

ವರ್ಷಗಳ ಬರದಿಂದ ಗದ್ದೆಗಳೂ ಹಾಳಾದವಲ್ಲದೆ ಬೆಳೆಯೇನೂ ಬರಲಿಲ್ಲ. ಈ ವರ್ಷ ಹೊತ್ತಿಗೆ ಸರಿಯಾಗಿ ಮಳೆ ಬಾರದ್ದರಿಂದ ಬಹ್ವಂಶ ಬೆಳೆಯೂ ಒಣಗಿಹೋಗಿತ್ತು. ಕಣಜದಲ್ಲಿಯ ಧಾನ್ಯವೂ ಬರಿದಾಯಿತು. ಕೆರೆಯ ನೀರೂ ಒಣಗಿತು. ಮೀನೂ ಉಳಿಯಲಿಲ್ಲ. ಬಾಳೆಯ ತೋಟ ಒಣಗ ತೊಡಗಿತು. ಲಿಂಬೆತೋಟದಲ್ಲಿ ಕಾಯಿಗಳು ಮಿಡಿಯಾಗಿರುವಾಗಲೆ ಉದುರಿ ಬೀಳತೊಡಗಿದ್ದವು. ಇತ್ತ ಸಾಹುಕಾರರ ತಗಾದೆ ಹೆಚ್ಚುತ್ತಲೆಹೋಯಿತು. ಸಾಲದ್ದಕ್ಕೆ ಪುಟ್ಟಿಯ ಮಾವ ಬೇರೆ ತೊಂದರೆ ಕೊಡತೊಡಗಿದ. ತನ್ನ ಮಗನ ಓದಿನವೆಚ್ಚಕ್ಕಾಗಿ ಮೇಲಿಂದಮೇಲೆ ಹಲವುಸಲ ಸಿಹಿಯಾಗಿ ಬಹಳ ಸಲ ಕಹಿಯಾಗಿ ಪತ್ರ ಬರೆಯುತ್ತಲಿದ್ದ. ಇವೆಲ್ಲವೂ ವಿರಾಜಳಿಗೆ ಗೊತ್ತಿರಲಿಲ್ಲ. ಅದೆಷ್ಟೊ ಅಪ್ರೀತಿಕರ ಸಂಗತಿಗಳನ್ನು ನೀಲಾಂಬರನು ವಿರಾಜಳಿಂದ ಅತಿಯತ್ನಪೂರ್ವಕ ಗೌಪ್ಯವಾಗಿಟ್ಟಿದ್ದ. ಈಗ ಅವನು ಉದ್ವಿಗ್ನನಾಗಿ ವಿಚಾರಿಸತೊಡಗಿದ: "ಬಹುಶಃ ಈ ಎಲ್ಲ ವಿಷಯಗಳನ್ನು ಯಾರಾದರೂ ವಿರಾಜಳಿಗೆ ತಿಳಿಸಿರಬಹುದು." ವಿರಾಜ ಒಮ್ಮಿಂದೊಮ್ಮೆಲೆ ಮುಖವನ್ನು ಮೇಲಕ್ಕೆತ್ತಿ ನಸುನಕ್ಕು, "ನಾನೊಂದು ಮಾತು ಕೇಳಬೇಕೆಂದಿದ್ದೇನೆ. ನೀವು ಸತ್ಯಸಂಗತಿ ಹೇಳುವಿರಾ?" ಎಂದಳು.

ನೀಲಾಂಬರ ಮನದಲ್ಲಿಯೆ ಮತ್ತಿಷ್ಟು ಸಂಶಯಪೀಡಿತನಾದ. "ಯಾವ ವಿಷಯ?" ಎಂದ ನೀಲಾಂಬರ.

ವಿರಾಜ ಸುಂದರಿಯಾದ ಸ್ತ್ರೀ. ಆದರೆ ಅವಳ ಮುಗುಳುನಗೆ ಅವಳ ಸೌಂದರ್ಯಕ್ಕಿಂತಲೂ ಹೆಚ್ಚು ರಮಣೀಯವಾದುದು. ಆ ಸೌಂದರ್ಯವನ್ನು ತನ್ನ ತುಟಿಗಳಮೇಲೆ ಅರಳಿಸಿ ಗಂಡನ ಮುಖವನ್ನೆ ದಿಟ್ಟಿಸುತ್ತ "ನಾನು ಕುರೂಪಿಯಂತೂ ಅಲ್ಲ ತಾನೆ?" ಎಂದು ಕೇಳಿದಳು.

ನೀಲಾಂಬರ ತಲೆಯಲ್ಲಾಡಿಸುತ್ತ 'ಅಲ್ಲ'ವೆಂದ.

"ಅಕಸ್ಮಾತ್ತಾಗಿ ನಾನು ಕುರೂಪಿಯಾದರೆ ನನ್ನನ್ನು ನೀವು ಇಷ್ಟೆ ಪ್ರೀತಿಯಿಂದ ಕಾಣುವಿರಾ?"

ಈ ವಿಚಿತ್ರಪ್ರಶ್ನೆ ಕೇಳಿ ನೀಲಾಂಬರನಿಗೆ ಆಶ್ಚರ್ಯವಾಯಿತೇನೊ ನಿಜ. ಆದರೆ ಅವನ ಎದೆಯಮೇಲಿನ ಬಹುದೊಡ್ಡ ಭಾರವೊಂದು ಮಾತ್ರ ಜರ್‍ರನೆ ಜರಿದಂತಾಯಿತು. ಪ್ರಸನ್ನತೆಯಿಂದ ನಕ್ಕು ನುಡಿದ: "ಚಿಕ್ಕಂದಿ

ನಿಂದಲೆ ನಾನು ಒಬ್ಬ ಅನುಪಮ ದಿವ್ಯ ಸುಂದರಿಯನ್ನು ಪ್ರೀತಿಸುತ್ತ ಬಂದಿದೇನೆ. ನಾನು ಪ್ರೀತಿಸುವ ಆ ಸುಂದರಿ ಕುರೂಪಿಯಾದರೆ ಏನು ಮಾಡುವೆನೆಂದು ಈಗತಾನೆ ಹೇಗೆ ಹೇಳಲಿ ? ''

ಬಾಹುದ್ವಯಗಳಿಂದ ಗಂಡನ ಕತ್ತನ್ನು ಸುತ್ತಿ ಮತ್ತಿಷ್ಟು ಸನಿಹಕ್ಕೆ ಎಳೆದುಕೊಂಡು ವಿರಾಜಳೆಂದಳು— " ಹೇಗೆ ಹೇಳಲಿ ಎಂದರೆ? ಆದರೂ ನೀವು ನನ್ನನ್ನು ಇಷ್ಟೆ ಪ್ರೇಮದಿಂದ ಕಾಣುವಿರಲ್ಲವೆ ? ''

ಇದಕ್ಕೂ ನೀಲಾಂಬರ ಮೌನವಾಗಿ ದಿಟ್ಟಿಸುತ್ತ ಕುಳಿತ.

ವಿರಾಜಳೆಂದಳು : — " ನೀವು ಬಹುಶಃ ಆಲೋಚಿಸುತ್ತಿರಬಹುದು- ನಾನು ಅದನ್ನು ಹೇಗೆ ಹೇಳಲಿ ಎಂದು. ಅಲ್ಲವೆ ? ''

ನೀಲಾಂಬರ ಸ್ವಲ್ಪ ತಡೆದು ಮೆಲ್ಲಮೆಲ್ಲನೆ ಹೇಳಿದ — " ಹಾಂ, ಅದನ್ನೆ ವಿಚಾರಿಸುತಿದ್ದೆ. ಅದನ್ನು ನೀನು ಹೇಗೆ ಅರಿತುಕೊಂಡೆ ? "

ವಿರಾಜ ಗಂಡನ ಕತ್ತನ್ನು ಬಿಟ್ಟು ಅವನ ತೊಡೆಯ ಒಂದು ಮಗ್ಗುಲಿಗೆ ತಲೆಯಾನಿಸಿ ಒರಗಿದಳು. ಬಳಿಕ ಅವನ ಮುಖವನ್ನೆ ನಿಟ್ಟಿಸುತ್ತ ಮೆಲುದನಿಯಲ್ಲಿ " ನನ್ನ ಮನಸ್ಸೆ ಹಾಗೆ ಹೇಳುತ್ತಿದೆ. ನಾನು ನಿಮ್ಮನ್ನೆಷ್ಟು ಅರಿತಿರುವೆನೊ ಅಷ್ಟು ಸ್ವತಃ ನೀವೆ ನಿಮ್ಮನ್ನು ಅರಿತಿಲ್ಲ. ಆದುದರಿಂದಲೆ ಬಲ್ಲೆ, ನಾನು ಒಂದುವೇಳೆ ಕುರೂಪಿಯಾದರೂ ನೀವು ನನ್ನನ್ನು ಇದೆ ರೀತಿ ಪ್ರೀತಿಸುವಿರೆಂದು. ಅನ್ಯಾಯವಾದ, ಪಾಪಕ್ಕೆ ಮೂಲವಾದ ಯಾವ ಕೆಲಸವನ್ನೂ ನೀವು ಮಾಡಲಾರಿರಿ. ಹೆಂಡತಿಯನ್ನು ಪ್ರೀತಿಸದಿರುವುದು ಅನ್ಯಾಯವೆ ಸರಿ. ಆದುದರಿಂದಲೆ ನಾನು ಕುರುಡಿ, ಇಲ್ಲವೆ ಕುಂಟಿಯಾದರೂ ನಿಮ್ಮಿಂದ ಇದೆ ತೆರನ ಆದರ ಪಡೆಯುವೆನೆಂಬ ನಂಬಿಕೆಯಿದೆ ನನಗೆ.''

ನೀಲಾಂಬರನು ಈ ಮಾತಿಗೂ ಉತ್ತರವೀಯಲಿಲ್ಲ. ವಿರಾಜ ಗಂಡನ ಮಡಿಲಲ್ಲಿ ಮುಖಹುದುಗಿಸಿ ಅರಗಳಿಗೆ ಸ್ಥಿರಭಾವದಿಂದ ಬಿದ್ದಿದ್ದಳು. ಬಳಿಕ ಒಮ್ಮಿಗೆ ಅಂದಾಜಿನಿಂದ ಕೈಯನ್ನು ಮೇಲೆ ಚಾಚಿದಳು. ಅವಳ ಬೆರಳುಗಳು ನೀಲಾಂಬರನ ಕಂಣುಗಳ ಮೇಲೆಯೆ ಬಿದ್ದವು. ಚಕಿತಳಾಗಿ " ನಿಮ್ಮ ಕಂಣಲ್ಲಿ ನೀರೇಕೆ ? " ಎಂದು ಕೇಳಿದಳು.

ನೀಲಾಂಬರನು ಬುದ್ಧಿಪೂರ್ವಕವಾಗಿಯೆ ಅವಳ ಕೈಯನ್ನು ದೂರ ಸರಿಸಿ ಅಳುದನಿಯಲ್ಲಿ " ನೀನು ಹೇಗೆ ಅರಿತೆ ? " ಎಂದ.

ವಿರಾಜಳೆಂದಳು : – “ ಒಂಬತ್ತು ವರುಷದವಳಾಗಿದ್ದಾಗಲೆ ನಿಮ್ಮೊಂದಿಗೆ ನನ್ನ ಮದುವೆಯಾಗಿದೆಯೆಂಬುವದನ್ನು ಮರೆತುಬಿಟ್ಟಿರಾ ? ಆಗಲೆ ನಾನು ನಿಮ್ಮೊಂದಿಗೆ ಆತ್ಮೀಯಳಾಗಿದ್ದೇನೆಂದು ನೀವೇಕೆ ಮರೆಯುವಿರಿ ? ನಾನೂ ನಿಮ್ಮಲ್ಲಿಯೆ ತಾದಾತ್ಮ್ಯಹೊಂದಿದೇನೆಂದು ನಿಮ್ಮ ದೇಹ ಮುಟ್ಟಿಕೊಂಡು ಅರಿತುಕೊಳ್ಳಲಾರಿರಾ ? ”

ನೀಲಾಂಬರ ಏನೂ ಉತ್ತರಿಸಲಿಲ್ಲ. ಕಂಣು ಮುಚ್ಚಿಕೊಂಡು ಹಾಗೆಯೆ ಕುಳಿತಿದ್ದ. ಆತನ ಕಂಣುಗಳೆರಡರಿಂದಲೂ ಕಂಬನಿ ಹನಿಹನಿಯಾಗಿ ಉದುರ ತೊಡಗಿತು.

ವಿರಾಜ ಎದ್ದು ಕುಳಿತಳು. ಸಾವಧಾನದಿಂದ ಗಂಡನ ಕಂಬನಿಗಳನ್ನು ತನ್ನ ಸೆರಗಿನಿಂದ ಒರಸಿ ಗಂಭೀರಸ್ವರದಲ್ಲಿ ಹೇಳಿದಳು — “ ನೀವೇನೂ ಚಿಂತಿಸಬೇಡಿ. ಅತ್ತೆಯವರು ಸಾಯುವಾಗ ಪುಟ್ಟಿಯನ್ನು ನಿಮಗೆ ಒಪ್ಪಿಸಿ ಅವಳ ರಕ್ಷಣೆಯ ಭಾರವನ್ನು ನಿಮ್ಮಮೇಲೆ ಹೇರಿಹೋಗಿದ್ದಾರೆ. ಅದೆ ಪುಟ್ಟಿಯ ಸುಖಕಲ್ಯಾಣಕ್ಕಾಗಿ ಹಿತವೆಂಬುದನ್ನೆ ನೀವು ಮಾಡಿದಿರಿ. ಇದರಿಂದ ಸಂತೋಷಗೊಂಡು ಅವರು ಸ್ವರ್ಗದಿಂದಲೆ ನಮ್ಮನ್ನು ಹರಸುವರು. ಈಗ ನೀವು ಶಾಂತಚಿತ್ತರಾಗಿರಿ. ನಿಮ್ಮೆಲ್ಲ ಸಾಲದಿಂದ ಒಮ್ಮೆ ಮುಕ್ತರಾಗಿರಿ. ಅದಕ್ಕಾಗಿ ಸರ್ವಸ್ವವೂ ಹೋದರೂ ಹೋಗಲಿ. ಸುಮ್ಮನೆ ಚಿಂತೆ ಕಟ್ಟಿಕೊಳ್ಳಬೇಡಿ. ”

ಕಂಣುಗಳನ್ನೊರಸುತ್ತ ನೀಲಾಂಬರ ಅಳುದನಿಯಲ್ಲಿ ನುಡಿದ — “ ವಿರಾಜ, ನಾನೇನೇನು ಮಾಡಿದ್ದೇನೆಂದು ನೀನು ಅರಿಯೆ. ನಾನು ನಿನ್ನ ...... ”

ವಿರಾಜ ನೀಲಾಂಬರನಿಗೆ ಹೆಚ್ಚಿಗೆ ಹೇಳಗೊಡಲಿಲ್ಲ. ಗಂಡನ ಬಾಯಿಯ ಮೇಲೆ ಕೈಯಿಟ್ಟು “ ಅದೆಲ್ಲ ನಾನು ಬಲ್ಲೆ. ಅಲ್ಲದೆ ನನಗೆ ಗೊತ್ತಿರಲಿ, ಇರದಿರಲಿ, ಆದರೆ ನೀವು ಚಿಂತಿಸಿ ಚಿಂತಿಸಿ ನಿಮ್ಮ ಶರೀರ ಒಣಗಿಹೋಗುವಂತೆ ಮಾಡಗೊಡಲಾರೆ. ಆಗದು, ಅದಾಗದು. ಯಾರ ಋಣ ಎಷ್ಟೆಷ್ಟು ಇದೆಯೊ ಅದನ್ನೆಲ್ಲ ಪೈಗೆ - ಪೈಸಹಿತ ಮುಟ್ಟಿಸಿ ನಿಶ್ಚಿಂತರಾಗಿರಿ. ಮುಂದೆ ದೇವರಿದ್ದಾನೆ, ತಾಯಿ ಭೂದೇವಿಯಿದ್ದಾಳೆ. ”

ನಿಡು ಉಸಿರೊಂದನ್ನೆಳೆದು ನೀಲಾಂಬರ ಸುಮ್ಮನೆ ಕುಳಿತ.

೪

ಮತ್ತಾರು ತಿಂಗಳುಗಳೂ ಉರುಳಿದವು. ನೀಲಾಂಬರನ ತಮ್ಮನು ಹರಿಮತಿಯ ಮದುವೆಯ ಮೊದಲೆ ಆಸ್ತಿ ಪಾಲುಮಾಡಿಕೊಂಡ. ತಂಗಿಯ ಮದುವೆಯ ವೆಚ್ಚದಿಂದ ತಾನು ಪೂರ್ಣ ಮುಕ್ತನಾಗಿರಬೇಕೆಂಬುದೆ ಅವನ ಒಳ ಉದ್ದೇಶ. ಪಾಲಾದ ನಂತರ ನೀಲಾಂಬರ ತನಗೆ ದೊರೆತ ಪಿತ್ರಾರ್ಜಿತ ಆಸ್ತಿಯಲ್ಲಿ ಸ್ವಲ್ಪ ಅಂಶವನ್ನು ಒತ್ತಿಹಾಕಿ ಹರಿಮತಿಯ ಮದುವೆಗಾಗಿ ಸಾಲ ತಂದಿದ್ದ. ಪೀತಾಂಬರನು ಒಂದು ಕಾಸಿನ ಸಹಾಯವನ್ನೂ ಮಾಡಲಿಲ್ಲ. ಅಳಿಯನ ಓದು - ವೆಚ್ಚ ನೀಲಾಂಬರನೆ ತೆರಬೇಕೆಂದು ವಿವಾಹ ನಿಶ್ಚಯಕಾಲ ದಲ್ಲಿ ಕರಾರಾಗಿತ್ತು. ಆದುದರಿಂದ ಹರಿಮತಿಯ ಮಾವನಿಗೆ ಪ್ರತಿ ತಿಂಗಳು ಹಣದ ಥೈಲಿಯೊಂದನ್ನು ಇಲ್ಲಿಂದ ಕಳಿಸಬೇಕಾಗುತಿತ್ತು. ಇತ್ತ ಮನೆಯ ವೆಚ್ಚವನ್ನೂ ನೋಡಿಕೊಳ್ಳಬೇಕಿತ್ತು. ಇದರಿಂದ ಅನೇಕ ಅಡಚಣೆ – ತೊಂದರೆಗಳುಂಟಾಗಿ ನೀಲಾಂಬರ ತನ್ನ ಹೊಲ ಮನೆಗಳನ್ನು ಸಾಹುಕಾರ ರಲ್ಲಿ ಒತ್ತಿ ಇಡುವ ಪ್ರಸಂಗ ಬರುತಿತ್ತು. ಈ ರೀತಿ ನೀಲಾಂಬರನ ಋಣ ಭಾರ ಹೆಚ್ಚುತ್ತಲೆ ಹೋಯಿತು. ಆದರೆ ಪಿತ್ರಾರ್ಜಿತ ಆಸ್ತಿಯ ಮಮತೆ ಯಿಂದ ಅದನ್ನು ಒಮ್ಮೆಲೆ ಮಾರಲು ಆತ ಎಂದಿಗೂ ಒಡಂಬಡಲಿಲ್ಲ.

ಅಂದು ಸಂಜೆಯ ಸಮಯ. ಸಾಹುಕಾರ ಭೋಲಾನಾಥ ಮುಖ ರ್ಜಿಯು ನೀಲಾಂಬರನ ಮನೆಗೆ ಬಂದು ಸಾಲವನ್ನೆಲ್ಲ ಬಗೆಹರಿಸಲೆಬೇಕೆಂದು ನೀಲಾಂಬರನಿಗೆ ಸ್ವಲ್ಪ ಕಟುವಾಗಿಯೆ ತಗಾದೆ ಮಾಡಿದ. ಮರೆಯಲ್ಲಿ ನಿಂತು ವಿರಾಜ ಅವನ ಕಟುಮಾತುಗಳನ್ನೆಲ್ಲ ಆಲಿಸಿದಳು. ನೀಲಾಂಬರನು ಮನೆಯಲ್ಲಿ ಕಾಲಿಡುವುದೆ ತಡ, ವಿರಾಜ ಅಡುಗೆ ಮನೆಯಿಂದ ಬಂದವಳೆ ಗಂಡನೆದುರು ಸುಮ್ಮನೆ ನಿಂತಳು. ಅವಳ ಆಕೃತಿಯಿಂದ, ಅವಳ ಹೃದಯಕ್ಕೆ ನೋವಾಗುವಂತಹ ಯಾವುದಾದರೊಂದು ಘಟನೆ ಸಂಭವಿಸಿರಲೆಬೇಕೆಂದು ನೀಲಾಂಬರನಿಗೆ ಖಚಿತವಾಯಿತು. ಕ್ಷೋಭೆ ಅಪಮಾನಗಳಿಂದ ವಿರಾಜಳ ಎದೆಯು ಭಗಭಗ ಉರಿಯುತಿತ್ತು. ಆದರೆ ಅವಳು ತನ್ನ ಭಾವವನ್ನು ಹೊರಗೆ ತೋರಗೊಡಲಿಲ್ಲ. ಬೆರಳಿನಿಂದ ಮಂಚವನ್ನು ಗಂಡನಿಗೆ ತೋರಿಸಿ ವಿರಾಜ ಪ್ರಶಾಂತ ಗಂಭೀರಸ್ವರದಲ್ಲಿ: “ಇಲ್ಲಿ ಕುಳಿತುಕೊಳ್ಳಿ” ಎಂದಳು.

ಹೆಂಡತಿಯ ಸಂಕೇತದಂತೆ ನೀಲಾಂಬರ ಮಂಚದಮೇಲೆ ಕುಳಿತ. ಬಳಿಕ ಒಮ್ಮಿಗೆ ಅವನ ಚರಣಗಳ ಸನಿಹದಲ್ಲಿ ವಿರಾಜ ಕುಳಿತುಕೊಂಡು, "ಒಂದೆ ನೀವೇ ನನ್ನನ್ನಾದರೂ ಋಣಮುಕ್ತಳನ್ನಾಗಿಮಾಡಿರಿ, ಇಲ್ಲದಿದ್ದರೆ ಆಣೆಮಾಡಿ ಹೇಳುವೆ – ನಾನೇ........"

ನೀಲಾಂಬರನಿಗೆ ತಿಳಿದುಹೋಯಿತು — ವಿರಾಜ ಎಲ್ಲವನ್ನೂ ಕೇಳಿದ್ದಾಳೆಂದು. ಅದರಿಂದ ಅವನು ಭಯಭೀತನಾದ. ಒಮ್ಮೆಲೆ ಬಾಗಿ ಅವಳ ಬಾಯಿಯನ್ನು ಮುಚ್ಚಿದ. ಬಳಿಕ ಅವಳನ್ನು ಜೋರಿನಿಂದ ತನ್ನೆಡೆಗೆ ಸೆಳೆದುಕೊಂಡು ಮಗ್ಗುಲಲ್ಲಿ ಕುಳ್ಳಿರಿಸುತ್ತ ಇನಿದನಿಯಲ್ಲಿ – "ಛೀ ವಿರಾಜ, ಇಂಥ ಸಂಣ ಮಾತಿನಿಂದ ಇಷ್ಟೊಂದು ಧೃತಿಗೆಡಬೇಕೆ?" ಎಂದು ಸಂತೈಸತೊಡಗಿದ.

ಬಾಯಮೇಲಿನ ಗಂಡನ ಕೈಯನ್ನು ಬದಿಗೆ ಸರಿಸಿ ವಿರಾಜಳೆಂದಳು:- "ಇದರಿಂದ ಮನುಷ್ಯ ಧೃತಿಗೆಡದೆ ಏತರಿಂದ ಧೃತಿಗೆಡಬೇಕೆಂಬುದನ್ನಾದರೂ ತುಸು ತಿಳಿಸಿ ನೋಡೋಣ!"

ಇದಕ್ಕೇನು ಉತ್ತರವೀಯಬೇಕೆಂದು ಒಮ್ಮೆಲೆ ನೀಲಾಂಬರನಿಗೂ ಹೊಳೆಯಲಿಲ್ಲ. ಆದುದರಿಂದ ಅವನು ತುಟಿಬಿಚ್ಚುವ ಸಾಹಸ ಮಾಡಲಿಲ್ಲ.

"ಸುಮ್ಮನೇಕೆ ಕುಳಿತಿರಿ? ಉತ್ತರಕೊಡಿ."

"ಉತ್ತರಕೊಡುವಷ್ಟು ಯೋಗ್ಯವಾದ ಯಾವ ಮಾತೂ ಇಲ್ಲ ವಿರಾಜ. ಆದರೆ ....?" ಎಂದ ನೀಲಾಂಬರ.

ಗಂಡನ ಮಾತನ್ನು ಅರ್ಧಕ್ಕೆ ಹೊಡೆದುಹಾಕಿ ವಿರಾಜ ಏರುದನಿಯಲ್ಲಿ ಹೇಳಿದಳು:–"ನಿಮ್ಮ ಆದರೆಗೀದರೆಯಿಂದ ಯಾವ ಕೆಲಸವೂ ಆಗದು. ನನ್ನ ಮನೆಬಾಗಿಲು ಬಳಿಯಲ್ಲಿ ಜನ ನಿಮ್ಮನ್ನು ಅಪಮಾನ ಮಾಡಬೇಕು. ಹಾಗೂ ನಾನು ನಿಂತುನಿಂತು ನಿಮಗಾಡಿದ ಕಟುಮಾತುಗಳನ್ನು ತೆಪ್ಪಗೆ ಸಹಿಸಬೇಕು. ಇದೆ ಅಲ್ಲವೆ ನೀವು ಹೇಳುವುದು? ಅಂಥ ವಿಚಾರಕ್ಕೆ ನಿಮ್ಮ ತಲೆಯಲ್ಲಿ ಎಡೆಕೊಡಬೇಡಿ. ಒಂದೆ ಇದಕ್ಕೇನಾದರೂ ಉಪಾಯ ಹುಡುಕಿ, ಇಲ್ಲದಿದ್ದರೆ ನಾನು ಆತ್ಮಹತ್ಯೆ ಮಾಡಿಕೊಳ್ಳುವೆ."

ನೀಲಾಂಬರ ಬೆದರುಗಣ್ಣುಗಳಿಂದ "ಒಂದೆ ದಿನದಲ್ಲಿ ಏನು ಉಪಾಯ ಹೂಡಲಿ ವಿರಾಜ?" ಎಂದ.

" ಒಳ್ಳೆಯಮಾತು ನಿಮ್ಮದು. ಒಂದು ದಿನದಲ್ಲಿ ಆಗದಿದ್ದವರು ಎರಡು ದಿನಗಳಲ್ಲಿ ಏನು ಉಪಾಯ ಹೂಡುವಿರಿ - ಅದನ್ನಾದರೂ ಅಷ್ಟು ಹೇಳಿ? "

ನೀಲಾಂಬರ ಮತ್ತೆ ಮೌನವನ್ನೆ ಸಾಧಿಸಿದ.

" ಎಂದೆಂದಿಗೂ ಪೂರ್ಣವಾಗದಂತಹ ಆಸೆಯನ್ನು ತಳೆದು ನೀವೂ ಮೋಸಹೋಗಬೇಡಿರಿ; ನನ್ನ ಸರ್ವನಾಶವನ್ನೂ ಮಾಡಬೇಡಿರಿ. ದಿನಗಳೆದಂತೆ ನಿಮ್ಮ ಸಾಲ ಹೆಚ್ಚುತ್ತಲೆ ಹೋಗುವುದು. ನಿಮಗೆ ಹುಚ್ಚು! ಸೆರಗೊಡ್ಡಿಬೇಡುವೆ, ನಿಮ್ಮ ಕಾಲಿಗೆ ಬೀಳುವೆ. ಈಗಲೆ ಏನಾದರೊಂದು ಉಪಾಯ ಹುಡುಕಿರಿ. "

ಈ ಮಾತು ಹೊರಬೀಳುತ್ತಿರುವಾಗಲೆ ಅಶ್ರುಭಾರದಿಂದ ಆವಳ ಕಂಠ ಕಟ್ಟಿಕೊಂಡಿತು. ತನ್ನ ಪತಿಗೆ ಭೋಲಾನಾಥ ಮುಖರ್ಜಿಯಾಡಿದ ಮಾತುಗಳು ಆವಳ ಎದೆಯನ್ನು ಬಾಣದಂತೆ ಇರಿಯತೊಡಗಿದವು. ನೀಲಾಂಬರ ತನ್ನ ಕೈಯಿಂದಲೆ ಹೆಂಡತಿಯ ಕಂಣುಗಳನ್ನೊರಸಿ ಮೆಲ್ಲಮೆಲ್ಲನೆ ಸಂತೈಸತೊಡಗಿದ: " ಕೈಕಾಲು ಬಿಡುವುದರಿಂದೇನು ಲಾಭ ವಿರಾಜ? ಒಂದೆ ವರ್ಷ ಬೆಳೆ ಚೆನ್ನಾಗಿ ಬಂದರೆ ಸಾಕು. ಹನ್ನೆರಡಾಣೆ ಭೂಮಿಯನ್ನು ಬಿಡಿಸಿಕೊಂಡು ಬರುವೆ. ಆದರೆ ಗಾಬರಿಗೊಂಡು ನಿನ್ನ ಮಾತಿನಂತೆ ಭೂಮಿಯೆಲ್ಲವನ್ನು ಈಗ ಮಾರಿಬಿಟ್ಟರೆ ಮುಂದೆ ಅದನ್ನು ಮರಳಿ ಪಡೆಯಲು ಸಾಧ್ಯವೆ? ಸ್ವಲ್ಪ ಈ ಮಾತನ್ನಾದರೂ ಯೋಚಿಸು. "

ವಿರಾಜ ತರಲಕಂಠದಲ್ಲಿ ಹೇಳಿದಳು: – " ನಾನೂ ಚೆನ್ನಾಗಿಯೆ ಯೋಚಿಸಿದ್ದೇನೆ. ಮುಂದಿನ ವರ್ಷ ಹದಿನಾರಾಣೆ ಬೆಳೆ ಬಂದೆಬರುವುದೆಂಬುದಕ್ಕೆ ಏನು ಆಧಾರ? ಆದರೆ ಸಾಲದ ಬಡ್ಡಿಮಾತ್ರ ದಿನದಿನಕ್ಕೂ ಬೆಳೆವುದು ಖಂಡಿತ. ಜೊತೆಗೆ ಸಾಹುಕಾರರ ಕಟುಮಾತುಗಳನ್ನೂ ಸಹಿಸಬೇಕಾಗುವುದು. ನಾನೆಲ್ಲವನ್ನೂ ಸಹಿಸಬಲ್ಲೆ, ಆದರೆ ನಿಮ್ಮ ಅಪಮಾನವನ್ನು ಸಹಿಸಲಾರೆ. "

ನೀಲಾಂಬರನು ಇದನ್ನು ಅರಿಯದವನೇನೂ ಅಲ್ಲ. ಆದುದರಿಂದ ಮರುತ್ತರವೀಯಲು ಅವನಿಂದಾಗಲಿಲ್ಲ.

ವಿರಾಜ ಪುನಃ ಹೇಳಿದಳು: " ನನಗಿಷ್ಟೆ ದುಃಖವೆಂದು ಬಗೆದಿರಾ? ಹಗಲುರಾತ್ರಿಯೆನ್ನದೆ ಚಿಂತೆಕಟ್ಟಿಕೊಂಡು ನೀವು ಬಡವಾಗುತಿದ್ದೀರಿ; ನಿಮ್ಮ ಶರೀರ ಒಂದೆಸಮನೆ ಬಾಡುತ್ತಿದೆ. ಇದನ್ನು ನಾನು ಕಂಣಾರೆ

ನೋಡುತಿದ್ದೇನೆ. ನಿಮ್ಮ ಬಂಗ್ಾರದಂತಹ ಈ ದೇಹ ನನ್ನ ಕಂಣೆದುರಿನಲ್ಲಿಯೆ ಕಪ್ಪಿಟ್ಟುಹೋಗುತ್ತಲಿದೆ. ಈ ಬೇಗೆ ಸಹಿಸುವಷ್ಟು ಶಕ್ತಿ ನನ್ನ ಶರೀರಕ್ಕಿದೆಯೆಂದು ನೀವು ನನ್ನ ಮೈಮುಟ್ಟಿ ಪಣಮಾಡಿ ಹೇಳುವಿರಾ? ಇನ್ನೆಷ್ಟು ದಿನ ಯೋಗೀಂದ್ರನ ಓದು - ವೆಚ್ಚ ನೋಡಿಕೊಳ್ಳಬೇಕು?''

'' ಇನ್ನೊಂದು ವರ್ಷ ಪೂರ್ತಿ. ಒಂದು ವರ್ಷದ ಓದು ಮುಗಿಯಿತೆಂದರೆ ಅವನು ಡಾಕ್ಟರನಾಗುವನು.''

ಕ್ಷಣಹೊತ್ತು ಸ್ಥಿರಳಾಗಿ ಕುಳಿತು ವಿರಾಜಳೆಂದಳು: '' ಪುಟ್ಟಿಯ ಪಾಲನೆ ಪೋಷಣೆಮಾಡಿ ನೀವು ಅವಳನ್ನು ಇಷ್ಟು ದೊಡ್ಡವಳನ್ನಾಗಿ ಮಾಡಿದೀರಿ. ಅವಳು 'ರಾಣಿ'ಯಾದರೆ ಅದು ನಮಗೆ ಆನಂದವೆ. ಆದರೆ ಆ ಪುಟ್ಟಿಯ ಕಾರಣದಿಂದಲೆ ನಾವಿಷ್ಟು ಸಂಕಟಗಳನ್ನೆದುರಿಸಬೇಕಾದೀತೆಂದು ನನಗೆ ಮೊದಲೆ ತಿಳಿದಿದ್ದರೆ ನಾನು ಅವಳನ್ನೆತ್ತಿ ನದಿಯಲ್ಲಿ ಬೀಸಾಡುತ್ತಿದ್ದೆ. ನಮ್ಮ ಮೇಲೆ ಇಂತಹ ವಜ್ರದೇಟು ನಾನೆಂದಿಗೂ ಬೀಳಗೊಡುತ್ತಿದ್ದಿಲ್ಲ. ಹಾಯ್ ದೇವಾ! ಆ ಜನ ಶ್ರೀಮಂತರಿದ್ದಾರೆ. ಅವರಿಗೆ ತಾಪತ್ರಯ, ಕೊರತೆ ಯಾವುದೂ ಇಲ್ಲ. ಆದರೂ ಜಿಗಳೆಯಂತೆ ನನ್ನ ಎದೆಯ ರಕ್ತವನ್ನು ಹೀರುತ್ತಿದ್ದಾರೆ. ಆದರೂ ಅವರಿಗೆ ಸ್ವಲ್ಪವೂ ದಯೆ ಬರುವುದಿಲ್ಲವಲ್ಲ! ಅವರ ಕರುಣೆಯ ಸೆಲೆಯೆ ಬತ್ತಿರಬೇಕು" ಎಂದು ವಿರಾಜ ಉದ್ವಿನ್ನ ಉಸಿರೆಳೆದು ಸ್ತಬ್ಧಳಾಗಿ ಕುಳಿತಳು. ಹೀಗೆ ನೀರವತೆಯಿಂದ ಬಹಳ ಹೊತ್ತು ಕುಳಿತು ಬಳಿಕ ಮುಖವೆತ್ತಿ ಮೆಲ್ಲಮೆಲ್ಲನೆ "ನೋಡಿದಲ್ಲಿ ದಾರಿದ್ರ್ಯವೆ ದಾರಿದ್ರ್ಯ; ದುರ್ಭಿಕ್ಷೆಯೆ ದುರ್ಭಿಕ್ಷೆ, ಬಡವರಿಗೆ ಹೊಟ್ಟೆ ಹೊರೆಯಲು ಈಗಾಗಲೆ ದುಸ್ತರವೆನಿಸತೊಡಗಿದೆ. ಕೆಲವರು ಉಪವಾಸ ಮಾಡುತ್ತಿದ್ದರೆ ಹಲವರು ಸಿಕ್ಕಿದುದನ್ನೆ ತಿಂದು ಅರೆಹೊಟ್ಟೆಯಿಂದ ಹೇಗೊ ಜೀವ ಹಿಡಿದುಕೊಂಡಿದ್ದಾರೆ. ಇಂತಹ ಪ್ರತಿಕೂಲ ಸಮಯದಲ್ಲಿ ಪರ ಹುಡುಗನ ಭವಿಷ್ಯತ್ತಿನ ನಿರ್ಮಾಣದ ಭಾರ ನಾವೇಕೆ ಹೊರಬೇಕು? ಪುಟ್ಟಿಯ ಮಾವನಿಗೇನು ಕಡಿಮೆ ಇದೆ? ಅವನು ಸಿರಿವಂತನಿದ್ದಾನೆ. ಮಗನ ಓದು - ವೆಚ್ಚ ನೋಡಲು ಅವನಿಗೆ ಬೇಡಾದರೆ ನಾವೇಕೆ ನೋಡಬೇಕು? ಆದದ್ದು ಆಗಿಹೋಯಿತು. ಇನ್ನು ನೀವು ನಿಮ್ಮ ಸಾಲ ಹೆಚ್ಚಿಸಿಕೊಳ್ಳಬೇಡಿ.''

ಅತಿ ಪ್ರಯಾಸದಿಂದ ತುಟಿಗಳ ಮೇಲೆ ಒಣನಗೆ ತಂದುಕೊಂಡು ನೀಲಾಂಬರನೆಂದ: "ಅದೆಲ್ಲ ನಾನು ಬಲ್ಲೆ ವಿರಾಜ. ಆದರೆ ಸಾಲಿಗ್ರಾಮ ಮೂರ್ತಿಯೆದುರು ನಾನು ಮಾಡಿದ ಪ್ರತಿಜ್ಞೆ ಇದೆಯಲ್ಲ ಅದರ ಗತಿ ಯೇನು?"

ವಿರಾಜ ಸಿಡಿದು ನುಡಿದಳು: "ಏನೂ ಆಗುವುದಿಲ್ಲ. ಸಾಲಿಗ್ರಾಮ ನಿಜವಾಗಿಯೂ ದೇವತೆಯಾಗಿದ್ದರೆ ಅದು ಖಂಡಿತವಾಗಿ ನಮ್ಮ ಕಷ್ಟವನ್ನರಿಯುವುದು. ಅಲ್ಲದೆ ನಾನೂ ನಿಮ್ಮ ಅರ್ಧಾಂಗಿನಿಯಷ್ಟೆ. ಇದರಿಂದ ಪಾಪವೇನಾದರೂ ಉಂಟಾದರೆ ಅದನ್ನು ತಲೆಯ ಮೇಲೆ ಹೊತ್ತು ಜನ್ಮ ಜನ್ಮಾಂತರದವರೆಗೆ ನರಕದಲ್ಲಿಯೇ ಉರುಳಾಡುವೆ. ಅದಕ್ಕಾಗಿ ನೀವು ಸ್ವಲ್ಪವೂ ಅಂಜಬೇಡಿ. ಇನ್ನು ಮುಂದೆ ಯಾರಿಂದಲೂ ಸಾಲಪಡೆಯಬೇಡಿ."

ಧರ್ಮಜೀವಿಯಾದ ತನ್ನ ಗಂಡನ ದುಃಖಬವಣೆಗಳ ಲವಲೇಶವೂ ವಿರಾಜಳಿಂದ ಗೋಪ್ಯವಾಗಿರಲಿಲ್ಲ. ಆದರೆ ಈಗ ಅವಳಿಗೆ ಸಹಿಸಲಾಗಲಿಲ್ಲ. ನಿಜವಾಗಿಯೂ ಗಂಡನೆ ಅವಳ ಸರ್ವಸ್ವ. ತನ್ನ ಪತಿರಾಯನ ಮುಖ ದಿನ ರಾತ್ರಿ ಚಿಂತಾಗ್ರಸ್ತವಾದ ಮೂಲಕ ಕಳೆಗುಂದಿರುತ್ತಿತ್ತು. ಅವನ ಬಾಡಿ ಮುದುಡಿದ ಮುಖವನ್ನು ನೋಡಿದೊಡನೆಯೆ ಅವಳ ಹೃದಯವು ಚೂರು ಚೂರಾಗುತ್ತಿತ್ತು. ಇಷ್ಟು ದಿನ ಬಹು ಪ್ರಯತ್ನದಿಂದ ತನ್ನನ್ನು ಸಾವರಿಸಿಕೊಂಡು ಮಾತನಾಡುತಿದ್ದಳು. ಆದರೆ ಈಗ ಅವಳ ಬಾಯಿ ಬಂದಾಯಿತು. ತ್ವರೆಯಿಂದ ವಿರಾಜ ಗಂಡನ ತೊಡೆಯಲ್ಲಿ ಮುಖ ಮುಚ್ಚಿ ಒಂದೆಸವನೆ ಅಳತೊಡಗಿದಳು.

ತನ್ನ ಎಡಗೈಯನ್ನು ವಿರಾಜಳ ತಲೆಯ ಮೇಲಿಟ್ಟು ನೀಲಾಂಬರ ನಿಶ್ಚಲನಾಗಿ ಕುಳಿತ. ಎಷ್ಟೋ ಹೊತ್ತಿನವರೆಗೆ ಅತ್ತು ಬಳಿಕ ವಿರಾಜಳ ದುಸ್ಸಹ ದುಃಖದ ಆವೇಗ ಸ್ವಲ್ಪ ಕಡಿಮೆಯಾದಾಗ ಅದೇರೀತಿ ಮುಖ ಮುಚ್ಚಿಕೊಂಡು ಅಳುತ್ತಲೆ ಹೇಳಿದಳು: "ನನಗೆ ನೆನಪು ಇದ್ದಂತೆ, ಚಿಕ್ಕಂದಿನಿಂದ ಈವರೆಗೆ ನಿಮ್ಮ ಮುಖ ಇಷ್ಟು ಕಳೆಗುಂದಿದುದನ್ನಾಗಲಿ, ನಿಮ್ಮ ಮುಖದ ಮೇಲೆ ಇಂತಹ ವಿಷಾದದ ಚಿಹ್ನ ಮೂಡಿದುದಾಗಲಿ ನಾನೊಮ್ಮೆಯೂ ಕಂಡಿರಲಿಲ್ಲ. ಆದರೆ ಇತ್ತೀಚೆ ನಿಮ್ಮ ಮುಖ ನೋಡಿದಾಗಲೆಲ್ಲ ನನ್ನೆದೆಯಲ್ಲಿ ಪರ್ವತ ಸಮಾನವಾದ ಬೆಂಕಿ ಉರಿದಂತಾಗುತ್ತದೆ.

ನಿಮ್ಮ ಭವಿಷ್ಯತ್ತಿನ ವಿಷಯವಾಗಿ ನೀವು ಚಿಂತಿಸದಿದ್ದರೆ ಬೇಡ. ಆದರೆ ನನ್ನ ಮುಂದಿನ ಜೀವನದ ವಿಷಯವಾಗಿ ಕೊನೆಗೆ ಒಂದಾವರ್ತಿಯಾದರೂ ಯೋಚಿಸಿ. ನೀವು ನನ್ನನ್ನು ಬೀದಿಯ ಭಿಕಾರಿಯನ್ನಾಗಿ ಮಾಡಬೇಕೆನ್ನುವಿರಾ? ಆಗಿನ ನನ್ನ ಅಸಹಾಯಸ್ಥಿತಿ ನಿಮ್ಮಿಂದ ಸಹಿಸಲು ಸಾಧ್ಯವೆ?"

ವಿರಾಜಳ ಈ ಮಾತಿಗೂ ನಿಲಾಂಬರ ಮೌನವನ್ನೆ ತಳೆದ. ಹೆಂಡತಿಯ ಮಾತಿನ ಕಡೆಗೆ ಲಕ್ಷ್ಯವಿಲ್ಲವೆನ್ನುವಂತೆ ಆವಳ ಜಡೆಯನ್ನು ಅತ್ತಿತ್ತ ಅಲುಗಾಡಿಸುತ್ತಿದ್ದ. ಅಷ್ಟರಲ್ಲಿ ಕೋಣೆಯ ಹೊರಗಿನಿಂದಲೆ ಹಳೆಯ ಒಕ್ಕಲುಗಿತ್ತಿ ಸುಂದರಿಯು "ತಾಯಿಾ, ಒಲೆಗೆ ಬೆಂಕಿ ಮಾಡಲೆ?" ಎಂದು ಕೂಗಿ ಕೇಳಿದಳು.

ವಿರಾಜ ಅಸ್ತವ್ಯಸ್ತಳಾಗಿ ತಟ್ಟನೆದ್ದು ಸೆರಗಿನಿಂದ ಮುಖ ಒರಸಿಕೊಂಡು ಕೋಣೆಯಿಂದ ಹೊರಬಂದಳು.

"ಒಲೆಗೆ ಉರಿಹಾಕಲೆ?" ಎಂದು ಸುಂದರಿ ಪುನಃ ಕೇಳಿದಳು.

ವಿರಾಜ ಅಸ್ಪಷ್ಟ ಧ್ವನಿಯಲ್ಲಿ "ಹೂಂ, ಹಾಕು. ನಿಮ್ಮ ಸಲುವಾಗಿ ಏನಾದರೂ ಅಷ್ಟು ಕುದಿಸುವೆ. ನಾನಿಂದು ಏನೂ ತೆಗೆದುಕೊಳ್ಳುವುದಿಲ್ಲ."

ಈ ಮಾತು ನೀಲಾಂಬರನ ಕಿವಿ ಸೇರಲೆಂಬ ಉದ್ದೇಶದಿಂದಲೆ ಒಕ್ಕಲುಗಿತ್ತಿ ಏರುದನಿಯಲ್ಲಿ: "ಅಮ್ಮಯ್ಯ ಇದೇನು, ನೀವೂ ರಾತ್ರಿ ಊಟ ಒಮ್ಮಿಗೆ ನಿಲ್ಲಿಸಿಬಿಟ್ಟಿರಾ? ಉಪವಾಸ ಮಾಡಿಮಾಡಿ ಒಣಗಿ ಈಗಾಗಲೆ ಅರ್ಧ ಸೊರಗಿದ್ದೀರಿ?" ಎಂದಳು.

ಒಕ್ಕಲುಗಿತ್ತಿಯ ಕೈಹಿಡಿದು ದರದರನೆ ಎಳೆಯುತ್ತ ವಿರಾಜ ಅಡುಗೆ ಮನೆಗೆ ಒಯ್ದಳು.

ಒಲೆಯ ಬೆಳಕು ವಿರಾಜಳ ಮುಖದ ಮೇಲೆ ಬೀಳುತ್ತಲಿತ್ತು. ಸನಿಹದಲ್ಲಿ ಕುಳಿತ ಸುಂದರಿಯು ಅವಳ ಮುಖವನ್ನೆ ಟಕಮಕನೆ ನೋಡುತಿದ್ದಳು. ಒಮ್ಮಿಗೆ – "ನಿಜ ಹೇಳುವೆ ತಾಯಿಾ, ನಿಮ್ಮಷ್ಟು ಸುಂದರಿಯಾದ ಸ್ತ್ರೀಯನ್ನು ನಾನೀವರೆಗೂ ಕಂಡುದಿಲ್ಲ. ನಿಮ್ಮಂತಹ ರೂಪ-ಲಾವಣ್ಯಗಳುಳ್ಳ ಸ್ತ್ರೀಯರು ರಾಜ-ಮಹಾರಾಜರ ಅರಮನೆಗಳಲ್ಲಿಯೂ ಕಾಣಸಿಗಲಿಕ್ಕಿಲ್ಲ."

ಒಕ್ಕಲುಗಿತ್ತಿಯೆಡೆಗೆ ಮುಖಹೊರಳಿಸಿ ವಿರಾಜ ನಸು ಅಪ್ರಸನ್ನತೆಯಿಂದ ಕೇಳಿದಳು. "ನೀನು ರಾಜ–ಮಹಾರಾಜರ ಅರಮನೆಗಳ ಸ್ಥಿತಿ–ಗತಿಗಳೆಲ್ಲವನ್ನೂ ಬಲ್ಲೆಯಾ?"

ಸುಂದರಿಯ ವಯಸ್ಸು ೩೫ - ೩೬ ಇರಬಹುದು. ತನ್ನ ಸೌಂದರ್ಯದ ವಿಷಯವಾಗಿ ಒಂದು ಕಾಲದಲ್ಲಿ ಅವಳೂ ಸಾಕಷ್ಟು ಪ್ರಖ್ಯಾತಿ ಪಡೆದಿದ್ದಳು. ಅವಳ ಆ ಖ್ಯಾತಿ ಇಂದಿಗೂ ಪೂರ್ಣವಾಗಿ ಲುಪ್ತವಾಗಿರಲಿಲ್ಲ.

ತನ್ನ ಮದುವೆ ಯಾವಾಗ ಆಯಿತು. ತಾನಾವಾಗ ವಿಧವೆಯಾದೆ ಇವಾವೂ ತನಗೆ ತಿಳಿಯದೆಂದು ಸುಂದರಿ ಯಾವಾಗಲೂ ಹೇಳುತಿದ್ದಳು. ಆದರೆ ಸಧವೆಯ ಸೌಭಾಗ್ಯಗಳಿಂದ ಅವಳು ಪೂರ್ಣವಾಗಿ ವಂಚಿತಳಾಗಿರ ಲಿಲ್ಲ. ಅವಳ ಊರಾದ ಕೃಷ್ಣಾಪುರದಲ್ಲಿ ಈ ವಿಷಯ ಎಲ್ಲರ ಬಾಯಿಮಾತಾ ಗಿತ್ತು. ನಗುತ್ತಲೆ – "ರಾಜ - ಮಹಾರಾಜರ ಅರಮನೆಗಳ ಸ್ಥಿತಿ – ಗತಿ ಅಲ್ಪ ಸ್ವಲ್ಪ ಅವಶ್ಯವಾಗಿ ಬಲ್ಲೆ ತಾಯಿ, ಇಲ್ಲದಿದ್ದರೆ ಅಂದು ನಾನು ಅವ ನನ್ನು ಪೂರ್ಣ ತಳ್ಳುತಿದ್ದೆ."

ಸುಂದರಿಯ ಈ ಮಾತಿನಿಂದ ವಿರಾಜ ಅನವಶ್ಯಕವಾಗಿ ಮುನಿದುಕೊಂ ಡಳು. "ಮನಸ್ಸಿಗೆ ಬಂದಾಗ ಇದೊಂದೆ ಮಾತನ್ನು ಹಗಲೆಲ್ಲ ಏಕೆ ಆಡುವೆ ಸುಂದರೀ? ಅವರ ಮನಸ್ಸಿಗೆ ಬಂದುದನ್ನು ಅವರು ಹೇಳಿದ್ದಾರಾ ದೀತು. ಅದರ ಗೊಡವೆ ನಮಗೇಕೆ? ಅಲ್ಲದೆ ವ್ಯರ್ಥವಾಗಿ ಈ ಪ್ರಸಂಗ ವನ್ನು ಬಾರಿಬಾರಿಗೂ ನನ್ನೆದುರು ಬಿಚ್ಚುವ ಆವಶ್ಯಕತೆಯೇನಿದೆ ನಿನಗೆ? ನೀನು ಬಲ್ಲೆ ಇವರ ಸ್ವಭಾವ. ಹೇಳಿ ಕೇಳಿ ಸಿಡುಕಿನ ಸ್ವಭಾವದವರು! ಈ ವಿಷಯ ಇವರ ಕಿವಿಗೆ ಹೋಗಿ ಇವರೇನಾದರೂ ಅಂದುಬಿಟ್ಟರೆ?"

ಸುಂದರಿ ಭಯಪುಲಕಿತಳಾಗಿ "ಯಜಮಾನರ ಕಿವಿಗೆ ಏಕೆ ಬೀಳ ಬೇಕು ತಾಯಿ? ಇದೆಂತಹ ವಿಷಯಾಂತರ?" ಎಂದಳು.

"ಇದು ವಿಷಯಾಂತರವೆಂದು ನನಗೆ ತಿಳಿಸಲು ಬಂದೆಯಾ? ನನ್ನ ಮಾತಿಷ್ಟೆ – ಯಾವ ವಿಷಯ ಮುಗಿದುಹೋಗಿದೆಯೊ, ಯಾವುದರಲ್ಲಿ ಹುರುಳು ಉಳಿದಿಲ್ಲವೊ ಅದನ್ನು ಚರ್ಚಿಸುವ ಅಗತ್ಯವೇನು?"

ಸುಂದರಿ ಸೆಡವಿನಿಂದ "ಆ ವಿಷಯವೆಲ್ಲಿ ಮುಗಿದಿದೆ ತಾಯಿ? ಅದೆಲ್ಲ ಹುರುಳಿಲ್ಲದ ಮಾತೆಂದು ಭಾವಿಸಿದ್ದೀರಾ? ಆದರೆ ಅವರು ನಿನ್ನೆ ಸಹ ನನ್ನನ್ನು ಕರೆದುಕೊಂಡು ಹೋಗಿದ್ದರು. ಮತ್ತು...."

ವಿರಾಜಳ ಕೋಪ ಎಲ್ಲೆ ಮೀರಿತು. ಗರ್ಜಿಸಿದಳು. "ನೀನು ಅಲ್ಲಿ ಹೋದ್ದುದಾದರೂ ಏಕೆ? ನನ್ನ ಅನ್ನ ಉಂಡು ನೀನು ಮತ್ತೊಬ್ಬರಲ್ಲಿ

ಓಡಿ ಹೋಗುವೆಯಾ? ಅಂದು ಅವರು ಕಲಿಕತ್ತೆಗೆ ಹೋದರೆಂದು ನೀನೆ ಹೇಳಿರಲಿಲ್ಲವೆ?''

ಸುಂದರಿಯೆಂದಳು: ನಾನೇನು ಸುಳ್ಳಾಡಿರಲಿಲ್ಲ ತಾಯಿ! ಎರಡು ತಿಂಗಳ ಹಿಂದೆ ಹೋದವರು ಇದೀಗ ಮರಳಿ ಬಂದಿದ್ದಾರೆ. ನಾನು ಅವರಲ್ಲಿ ಹೋಗಿ ಬರುವ ವಿಷಯ ಕೇಳುವಿರಾ? ಅವರ ಆಳೆ ಇಲ್ಲಿಯವರೆಗೆ ಬಂದು ಕರೆದರೆ ನಾನು ಅದನ್ನು ಹೇಗೆ ಅಸಡ್ಡೆಮಾಡಲಿ? ಹೇಳಿ ಕೇಳಿ ಇಲ್ಲಿಯ ದೊಡ್ಡ ಜಮೀನುದಾರರು! ನಾನೊ ಶತದರಿದ್ರಳು. ನಾನು ಯಾವ ಧೈರ್ಯದಿಂದ ಅವರ ಆಜ್ಞೆ ಮೀರಲಿ — ನೀವೆ ಹೇಳಿ?''

ವಿರಾಜ ಕ್ಷಣಹೊತ್ತು ಸುಂದರಿಯನ್ನು ದಿಟ್ಟಿಸುತ್ತ ನಿಂತು "ಅವರು ಇಲ್ಲಿಯ ಜಮೀನುದಾರರೇನು?'' ಎಂದಳು.

ಸುಂದರಿ ಮುಗುಳು ನಗುತ ನುಡಿದಳು. ''ಹೌದು ತಾಯಿ, ಈ ಗ್ರಾಮವನ್ನು ಅವರೆ ಕೊಂಡಿದ್ದಾರೆ. ಈಗ ಇಲ್ಲಿಯೆ ಬಿಡಾರಗೈಯ್ದಿದ್ದಾರೆ. ನಿಜ ಹೇಳುವೆ ತಾಯಿ, ಅವರು ಅಂತಿಂತಹ ಸಾಮಾನ್ಯ ಜನಗಳಲ್ಲ. ರಾಜನ ಮಕ್ಕಳು — ಅವರು! ಅವರ ಮುಖ ಕಣ್ಣುಗಳಲ್ಲಿ . . .''

ಸುಂದರಿಯ ಮಾತನ್ನು ಅರ್ಧಕ್ಕೆ ತಡೆದು ವಿರಾಜ ಒಮ್ಮೆಗೆ ಹೇಳಿದಳು. ''ಇರಲಿ ಬಿಡು ಸುಂದರೀ, ಇರಲಿ. ನೀನು ಸುಮ್ಮನಿರು. ಈ ಎಲ್ಲ ಮಾತುಗಳನ್ನು ನಾನು ಕೇಳಬಯಸಿಲ್ಲ. ಇರಲಿ — ಅವರು ನಿನಗೇನು ಹೇಳಿದರು?''

ವಿರಾಜಳ ಈ ಮಾತಿನಿಂದ ಸುಂದರಿ ಮನದಲ್ಲಿಯೆ ಅಸಂತುಷ್ಟಳಾದಳು. ಆದರೆ ತನ್ನ ಭಾವ ಹತ್ತಿಕ್ಕಿ ಕೋಪದ ಸ್ವರದಲ್ಲಿ ''ಅವರೇನು ಹೇಳುವುದು ಸುಡುಗಾಡು? ಅವರು ಕೇವಲ ನಿಮ್ಮ ವಿಷಯವನ್ನೆ ಕುರಿತು ಚರ್ಚಿಸುತ್ತಿದ್ದರು.''

ವಿರಾಜ ಹೂಂಕರಿಸಿ ಸುಮ್ಮನಾದಳು.

ಈ ವಿಷಯವನ್ನು ಇಲ್ಲಿ ಸ್ವಲ್ಪ ಸ್ಪಷ್ಟವಾಗಿ ವಿವರಿಸುವುದು ಅತ್ಯವಶ್ಯ. ಎರಡು ವರ್ಷಗಳ ಹಿಂದೆ ಈ ಗ್ರಾಮ ಕಲಿಕತ್ತೆಯ ಒಬ್ಬ ಭಾರೀ ಜಮೀನುದಾರನ ವಶಕ್ಕೆ ಬಂದಿತು. ಆ ಜಮೀನುದಾರನ ಚಿಕ್ಕಮಗನು ಅತಿ ಉದ್ಧಟನೂ ಲಂಪಟನೂ ಆಗಿದ್ದ. ಅವನನ್ನು ಸುಧಾರಿಸುವ ಯೋಚನೆ

ಯಿಂದ ಆತನ ತಂದೆಯು ಆತನನ್ನು ಕಲಿಕತ್ತೆಯ ವಾತಾವರಣದಿಂದ ತಪ್ಪಿಸಿ ಸನಿಹದ ತನ್ನ ಯಾವುದಾದರೊಂದು ಗ್ರಾಮದಲ್ಲಿರಿಸಿ ಅಲ್ಲಿಯ ಜಮೀನುದಾರಿಕೆಯ ಹೊಣೆಯನ್ನು ಹೇರಿದರೆ ಅವನು ಆಡಳಿತೆಯ ವಿಷಯವನ್ನು ಅರಿತುಕೊಳ್ಳಬಹುದೆಂದೂ ಜೊತೆಗೆ ಸ್ವಲ್ಪ ಸಂಯಮವೂ ಉಂಟಾಗಬಹುದೆಂದು ಭಾವಿಸಿದ. ತನ್ನ ಈ ಯೋಚನೆಯನ್ನು ಕಾರ್ಯ ರೂಪದಲ್ಲಿ ತರುವ ಉದ್ದೇಶದಿಂದಲೆ ಆ ಜಮೀನುದಾರ ತನ್ನ ಕಿರಿಯ ಮಗ ರಾಜೇಂದ್ರಕುಮಾರನನ್ನು ಕಳೆದ ವರುಷ ಇಲ್ಲಿಗೆ ಕಳುಹಿಸಿದ್ದ. ಸಪ್ತಗ್ರಾಮದಲ್ಲಿ ಜಮೀನುದಾರನಿಗೆ ವಾಸಿಸಲು ಯೋಗ್ಯವಾದ ಬಂಗಲೆ ಯಾಗಲಿ, ಮನೆಯಾಗಲಿ ಇರಲಿಲ್ಲ. ಆದುದರಿಂದ ಊರ ಹೊರಗೆ ಗ್ರಾಂಡ್ ಟ್ರಂಕ್ ರೋಡಿನ ಬಳಿಯಲ್ಲಿರುವ ಮಾವಿನ ತೋಪಿನಲ್ಲಿ ಗುಡಾರ ಕಟ್ಟಿಸಿ ರಾಜೇಂದ್ರ ಅಲ್ಲಿ ವಾಸಿಸತೊಡಗಿದ.

ಸಪ್ತಗ್ರಾಮಕ್ಕೆ ಬಂದಬಳಿಕ ರಾಜೇಂದ್ರಕುಮಾರನಿಗೆ ಜಮೀನು ದಾರಿಕೆಯ ಆಡಳಿತೆಯನ್ನು ಅರಿತುಕೊಳ್ಳುವ ಪ್ರವೃತ್ತಿ ಉಂಟಾಗಲೆ ಇಲ್ಲ. ಹಕ್ಕಿ ಬೇಟೆಯಾಡಲು ಅವನಿಗೆ ಬಲುಹುರುಪು. ವಿಸ್ಕಿಯ ಫ್ಲ್ಯಾಂಕಿಸಲಿ ಬೆನ್ನಿಗೆ ಇಳಿಬಿಟ್ಟು ಸಂಗಡ ಕೋವಿ, ನಾಲ್ಕಾರು ನಾಯಿಗಳನ್ನು ಕರೆದು ಕೊಂಡು ದಿನವೆಲ್ಲವೂ ನದಿಯ ತಟದಲ್ಲಿಯ ಕಾಡು-ವನಗಳನ್ನೆಲ್ಲ ಸುತ್ತಿ ಸುತ್ತಿ ಬೇಟೆಯಾಡುತಿದ್ದ. ಆರು ತಿಂಗಳ ಹಿಂದೆ ಬೇಟೆಯ ಗುಂಗಿನಲ್ಲಿ ಅಲೆಯುತ್ತ ಅಲೆಯುತ್ತ ರಾಜೇಂದ್ರಕುಮಾರ ಒಂದಿನ ವಿರಾಜಳನ್ನು ನೋಡಿದ. ನೋಡಿದೊಡನೆಯೆ ಅವಳ ಮೇಲೆ ಮೋಹಗೊಂಡ.

ವಿರಾಜ ಘಟ್ಟದಲ್ಲಿ ಮೀಯುತ್ತಿದ್ದ ಸ್ಥಾನ ನಾಲ್ಕು ದಿಕ್ಕಿನಿಂದಲೂ ಹೆಮ್ಮರಗಳಿಂದ ಮುಚ್ಚಿದಂತಿತ್ತು. ಆದುದರಿಂದ ಅಲ್ಲಿ ಮೈದೊಳೆವಾಗ ದೂರದಲ್ಲಿರುವ ಜನರ ದೃಷ್ಟಿಗೆ ಬೀಳುವ ಸಂಶಯವೆ ಇರಲಿಲ್ಲ. ಆ ಕಾರಣ ದಿಂದಲೆ ವಿರಾಜ ನಿರ್ಭಯದಿಂದಲೂ ನಿಸ್ಸಂಕೋಚ ಚಿತ್ತದಿಂದಲೂ ಅಲ್ಲಿ ಮೀಯುತ್ತಿದ್ದಳು. ಮೈದೊಳೆದ ಬಳಿಕ ಕೊಡವನ್ನು ತುಂಬಿಕೊಂಡು ಒದ್ದೆ ಬಟ್ಟೆಯನ್ನೆ ಸುತ್ತಿಕೊಂಡು ಮನೆಗೆ ತೆರಳಿದಳು. ಸಂಜೆಯಾಗಲು ಇನ್ನೂ ಸ್ವಲ್ಪ ಸಮಯವಿತ್ತು. ಅಸ್ತಾಚಲ ಶಿಖರದಲ್ಲಿ ವಿರಾಜಮಾನನಾದ ಸೂರ್ಯನ ಹೊಂಬಿಸಿಲು ವಿರಾಜಳ ಸೌಂದರ್ಯವನ್ನು ದ್ವಿಗುಣಿಸಿತ್ತು.

ಸರಿಯಾಗಿ ಅದೇ ಸಮಯದಲ್ಲಿ ಬೇಟೆ ಅರಸುತ್ತ ರಾಜೇಂದ್ರ ಕುಮಾರನು ಅಲ್ಲಿಗೆ ಬಂದ. ನದಿತಟದ ಮೇಲೆ ಬಿದ್ದಿದ್ದ ಸಮಾಧಿಸ್ತೂಪದ ಮೇಲೆ ನಿಂತು ವಿರಾಜಳನ್ನು ಒಂದೇ ಸವನೆ ನೋಡತೊಡಗಿದ. ಮಾನವನಲ್ಲಿ ಇಷ್ಟೊಂದು ಸೌಂದರ್ಯವಿದ್ದೀತೆಂದು, ಆತನಿಗೆ ನಂಬುಗೆಯೆ ಇರಲಿಲ್ಲ. ಕಲ್ಲುಮೂರ್ತಿಯಂತೆ ನಿರ್ನಿಮೇಷ ದೃಷ್ಟಿಯಿಂದ ಅವಳನ್ನೆ ನೋಡ ತೊಡಗಿದ. ಒಮ್ಮೆಲೆ ದೃಷ್ಟಿ ಮೇಲೆತ್ತಿದಾಗ ಅಪರಿಚಿತನೊಬ್ಬ ತನ್ನನ್ನೆ ದಿಟ್ಟಿಸಿ ನೋಡುತ್ತಿದ್ದುದನ್ನು ಕಂಡು ವಿರಾಜ ಒದ್ದೆ ಬಟ್ಟೆಯನ್ನೆ ಸಾವರಿಸಿ ಮೈಮುಚ್ಚಿಕೊಂಡು ತ್ವರೆಯಾಗಿ ಹೆಜ್ಜೆಯಿಡುತ್ತ ಹೋದಳು. ರಾಜೇಂದ್ರ ಕುಮಾರನು ಶಿಲಾಮೂರ್ತಿಯಂತೆ ನಿಂತು ದೃಷ್ಟಿಯೋಪುವ ಉದ್ದಕ್ಕೂ ವಿರಾಜಳ ಅಪಾರ ರೂಪರಾಶಿ ನೋಡಿ ಸುಖಾನುಭವ ಹೊಂದುತ್ತಿದ್ದ. ಕೊನೆಗೆ ಅವಳು ಮರೆಯಾದಾಗ ಸ್ವಲ್ಪ ಹೊತ್ತು ಅಸ್ತವ್ಯಸ್ತನಾಗಿ ನಿಂತು ಧೀರಗತಿಯಿಂದ ಹೊರಟು ಹೋದ. ದಾರಿಯಲ್ಲೆಲ್ಲ ಅವನಿಗೊಂದೆ ಯೋಚನೆ – ಇಷ್ಟು ಸುಂದರಿಯಾದ ಸ್ತ್ರೀಯು ಇಲ್ಲಿ ಹೇಗೆ ಬಂದಳು? ಇಲ್ಲಿ ಸುತ್ತಲೂ ಕಾಡೆಂದರೆ ಕಾಡು. ಇದ್ದ ಹಳ್ಳಿಯೂ ತೀರ ಸಣ್ಣದು. ಪ್ರತಿಷ್ಠಿತ ಮನೆತನದವರಾರೂ ಇಲ್ಲಿ ವಾಸಿಸುವುದಿಲ್ಲ. ಇಷ್ಟು ಸುಂದರಿ ಯಾದ ಸ್ತ್ರೀಯನ್ನು ನನ್ನ ಜೀವನದಲ್ಲಿ ಒಮ್ಮೆಯೂ ಕಂಡಿಲ್ಲ. ಕೊನೆಗೆ ಬಹು ಸಂಶೋಧನೆ ಮಾಡಿ ರಾತ್ರಿಯಲ್ಲಿಯೆ ಅವಳಾರೆಂಬುದನ್ನು ಅರಿತು ಕೊಂಡ. ಅಂದಿನಿಂದ ಅವಳ ವಿಷಯವೆ ಅವನಿಗೆ ಜಪವಾಯಿತು. ಅವನ ತಲೆಯಲ್ಲಿ ಅನ್ಯ ವಿಷಯಗಳ ಚಿಂತನೆಗೆ ಸ್ಥಾನವೆ ಉಳಿಯಲಿಲ್ಲ.

ಮನೆ ಸೇರಿದ ಕೂಡಲೆ ಸುಂದರಿಯನ್ನು ಕರೆದು "ಸುಂದರೀ, ಹೆಂಗುಸರ ಸ್ನಾನಘಟ್ಟದ ಮೇಲೆ ಯಾವನೊ ಒಬ್ಬ ಗಂಡಸು ನಿಂತಿದ್ದಾನೆ! ಅಲ್ಲಿಂದ ಹೊರಟು ಹೋಗಲೂ ಹಾಗೂ ಪುನಃ ನನ್ನ ತೋಟದಲ್ಲಿ ಕಾಲಿಕ್ಕಕೂಡದೆಂತಲೂ ಅವನಿಗೆ ಹೇಳು" ಎಂದು ಆಜ್ಞಾಪಿಸಿದಳು.

ಸುಂದರಿಯು ವಿರಾಜಳ ಅಪ್ಪಣೆಯಂತೆ ಘಟ್ಟದೆಡೆ ತೆರಳಿದಳು. ಅಲ್ಲಿ ನಿಂತುಕೊಂಡಿದ್ದ ವ್ಯಕ್ತಿಗೆ ಹೊರಟುಹೋಗಲೂ ಹಾಗೂ ಪುನಃ ಅಲ್ಲಿ ಕಾಲಿಕ್ಕಕೂಡದೆಂದೂ ಎಚ್ಚರಿಕೆ ಕೊಡಬಂದಿದ್ದಳು. ಆದರೆ ಅಲ್ಲಿಗೆ ಬಂದು ಆ ವ್ಯಕ್ತಿಯನ್ನು ನೋಡಿದೊಡನೆಯೆ ಅವಾಕ್ಕಾಗಿ - "ಯಾರು, ಬಾಬೂ ಸಾಹೇಬರೇನು?" ಎಂದಳು.

ಸುಂದರಿಯ ಕಡೆಗೆ ನೋಡಿ, "ಏನು, ನೀನು ನನ್ನನ್ನು ಗುರುತಿಸ ಬಲ್ಲೆಯಾ ?" ಸುಂದರಿ ಉತ್ತರವಿತ್ತಳು. "ಹಾಂ ದೊರೆಯೆ, ತಮ್ಮನ್ನು ಗುರುತಿಸದವರಾರು ?"

"ನಾನೆಲ್ಲಿ ಬಿಡಾರ ಮಾಡಿದ್ದೇನೆಂದು ಬಲ್ಲೆಯಾ ?"

"ಬಲ್ಲೆ" ಎಂದಳು ಸುಂದರಿ.

"ಹಾಗಾದರೆ ಸ್ವಲ್ಪ ಹೊತ್ತಿಗಾಗಿ ನೀನಲ್ಲಿ ಬರುವೆಯಾ ?" ಎಂದು ಕೇಳಿದ ರಾಜೇಂದ್ರ.

ಸುಂದರಿಯು ಲಜ್ಜಾಯುಕ್ತನಗೆ ನಕ್ಕು ಮುಖ ಕೆಳಗೆ ಮಾಡಿ ಮೆಲ್ಲ ಮೆಲ್ಲನೆ "ಏನು ವಿಷಯ ದೊರೆಯೆ ?" ಎಂದು ಕೇಳಿದಳು.

"ನಿನ್ನ ಬಳಿ ಕೆಲಸವುಂಟು. ಸ್ವಲ್ಪ ಬಂದು ಹೋಗು" ಎಂದು ಹೆಗಲ ಮೇಲೆ ಕೋವಿಯನ್ನಿಟ್ಟು ರಾಜೇಂದ್ರಕುಮಾರ ಅಲ್ಲಿಂದ ಹೊರಟುಹೋದ.

ಅಂದಿನಿಂದ ಸುಂದರಿಯು ಜನರ ಕಣ್ಣು ತಪ್ಪಿಸಿ ಏಕಾಂತ ಸಮಯ ದಲ್ಲಿ ಎಷ್ಟೋ ಸಲ ರಾಜೇಂದ್ರಕುಮಾರನ ಶಿಬಿರಕ್ಕೆ ಹೋಗಿದ್ದಳು. ಅವಳ ಮತ್ತು ರಾಜೇಂದ್ರಕುಮಾರರಲ್ಲಿ ಎಷ್ಟೊ ಮಾತುಕತೆಗಳೂ ಆಗಿದ್ದವು. ಆದರೆ ಅಲ್ಲಿ ಹೋಗಿ ಬಂದ ಬಳಿಕ ವಿರಾಜಳೊಂದಿಗೆ ಒಂದೆರಡು ಬಾರಿ ಸಾಂಕೇತಿಕವಾಗಿಯಲ್ಲದೆ ತುಟಿಬಿಚ್ಚಿ ಮಾತನಾಡುವ ಸಾಹಸ ಸುಂದರಿಗೆ ಉಂಟಾಗಲೆ ಇಲ್ಲ. ಸುಂದರಿ ತಿಳಿವಳಿಕೆಯಿಲ್ಲದ ಹೆಂಗುಸಂತೂ ಅಲ್ಲವೆ ಅಲ್ಲ. ಅವಳು ವಿರಾಜಳ ಗುಣ-ಸ್ವಭಾವ ಪೂರ್ಣವಾಗಿ ಬಲ್ಲಳು. ಹೊರನೋಟ ದಿಂದ ವಿರಾಜ ಅದೆಷ್ಟು ಕೋಮಲವಾಗಿ, ಅದೆಷ್ಟು ಮಧುರವಾಗಿ ತೋರಿದರೂ ಅವಳ ಪ್ರಕೃತಿ ಅತಿ ಉಗ್ರವಾದುದೂ, ಕಲ್ಲಿನಷ್ಟು ಕಠೋರ ವಾದುದೂ ಎಂದು ಸುಂದರಿ ಬಲ್ಲಳು. ಅಲ್ಲದೆ ವಿರಾಜಳೊಂದಿಗೆ ಬಾಯಿ ಬಿಚ್ಚಿ ಮಾತನಾಡುವ ಇಚ್ಛೆಯುಂಟಾದರೂ, ಸುಂದರಿ ಅಷ್ಟು ಹೆದರು ತಿದ್ದುದಕ್ಕೆ ಇನ್ನೊಂದು ಕಾರಣವಿತ್ತು. ವಿರಾಜ ಅತ್ಯಂತ ಸಾಹಸಿ. ಮನುಷ್ಯನೆ ಆಗಲಿ, ಹಾವು ಚೇಳುಗಳೆ ಆಗಲಿ, ಅದೇಕೆ ಭೂತಪ್ರೇತಗಳೆ ಆಗಲಿ, ಯಾರಿಗೂ ಆಕೆ ಅಂಜಳು. ಅವಳಿಗೆ ಭೀತಿಯೆಂಬುದೇ ತಿಳಿಯದು.

ಒಲೆಯಲ್ಲಿದ್ದ ಕಟ್ಟಿಗೆಯನ್ನು ಚಾಚುತ್ತ ವಿರಾಜ ಮುಖ ಹೊರಳಿ ಸುಂದರಿಯ ಮುಖವನ್ನು ನಿಟ್ಟಿಸುತ್ತಲೆ ಹೇಳಿದಳು: "ಹೌದು ಸುಂದರೀ,

ನೀನು ಅದೆಷ್ಟೋ ಬಾರಿ ಅಲ್ಲಿ ಹೋಗಿ ಬಂದೆ. ಆ ಮನೆಯವರೊಂದಿಗೆ ಅದೆಷ್ಟೊ ಮಾತುಕತೆಯಾಡಿರಬಹುದು. ಆದರೆ ಆ ವಿಷಯವಾಗಿ ನೀನು ನನಗೆ ಏನೂ ಹೇಳಲಿಲ್ಲವಲ್ಲ!''

ವಿರಾಜಳ ಈ ಮಾತು ಕೇಳಿ ಸುಂದರಿ ಅತ್ಯಂತ ಸೋಜಿಗಗೊಂಡಳು. ಯಜಮಾನಿಯ ಈ ಮಾತಿಗೇನು ಉತ್ತರವೀಯಬೇಕೆಂದು ಅವಳಿಗೆ ಹೊಳೆಯಲೆ ಇಲ್ಲ. ಕ್ಷಣ ಹೊತ್ತು ಬಿಟ್ಟು ತನ್ನನ್ನು ಸಾವರಿಸಿಕೊಂಡು "ಏನು ತಾಯಿ, ನಾನಲ್ಲಿ ಹೋಗಿ ಬಹಳಷ್ಟು ಮಾತನಾಡಿಕೊಂಡು ಬಂದಿದ್ದೇನೆಂದು ನಿಮಗಾರು ಹೇಳಿದರು?'' ಎಂದು ಕೇಳಿದಳು.

"ನನಗಾರೂ ಹೇಳಿಲ್ಲ. ನಾನೆ ಬಲ್ಲೆ. ನನ್ನ ತಲೆಯ ಹಿಂಭಾಗಕ್ಕೆ ಮತ್ತೆರಡು ಕಣ್ಣು ಕಿವಿಗಳಿವೆ ಸುಂದರಿ! ನಿನ್ನೆ ನಿನಗೆಷ್ಟು ಬಹುಮಾನ ದೊರೆಯಿತು? ಹತ್ತು ರೂಪಾಯಿಗಳಲ್ಲವೆ?"

ವಿಸ್ಮಯದಿಂದ ಸುಂದರಿಯು ತಬ್ಬಿಬ್ಬಾದಳು. ಒಮ್ಮೆಲೆ ಅವಳ ಮುಖ ಮಲಿನವಾಯಿತು. ಒಲೆಯ ಆ ಮಸಕು ಬೆಳಕಿನಲ್ಲಿಯೂ ಅದು ವಿರಾಜಳಿಗೆ ಕಾಣದೆ ಹೋಗಲಿಲ್ಲ. ಅಲ್ಲದೆ ತನ್ನ ಪ್ರಶ್ನೆಗೆ ಉತ್ತರವೀಯಲು ಸುಂದರಿಗೆ ಏನೂ ಹೊಳೆಯಲೊಲ್ಲದೆಂದೂ ತಿಳಿಯದೆ ಇರಲಿಲ್ಲ.

ಸಸು ಮುಗುಳುನಗೆ ಬೀರಿ ವಿರಾಜಳೆ ನುಡಿದಳು: "ಸುಂದರಿ, ನನ್ನೆದುರು ಬಾಯಿ ಬಿಚ್ಚುವ ಎದೆಗಾರಿಕೆ ನಿನಗಿಲ್ಲ. ಆದರೂ ನೀನು ಏಕೆ ಹಗಲೆಲ್ಲ ಅಲ್ಲಿ ಹೋಗಿ ಬರುತ್ತಲಿರುವೆ? ಈಗೇನೊ ನಿನಗೆ ಹಣ ಸಿಗುತ್ತಿದೆ. ಅದರಿಂದ ನಿನಗೆ ಸಂತೋಷವೂ ಉಂಟಾಗುತ್ತಿದೆ. ಆದರೆ ಮುಂದೆ ಹಣ ಪಡೆದ ಬಗ್ಗೆ ನೀನು ಆ ಸಿರಿವಂತನ ಕೋಪಕ್ಕೆ ಗುರಿಯಾಗುವುದು ಖಂಡಿತ. ಇರಲಿ, ನಾಳೆಯಿಂದ ನೀನು ಈ ಮನೆಯಲ್ಲಿ ಕಾಲಿಡತಕ್ಕದ್ದಲ್ಲ. ನೀನು ಮುಟ್ಟಿದ ನೀರಿನಿಂದ ಕೈಕಾಲು ತೊಳೆಯಲೂ ಜುಗುಪ್ಸೆಯಾಗುತ್ತಿದೆ. ಈ ಮೊದಲಿನ ನಿನ್ನ ಇತಿಹಾಸವೆಲ್ಲ ನನಗೆ ಗೊತ್ತಿರಲಿಲ್ಲ. ಈಗೆರಡ ದಿನಗಳ ಮೊದಲು ಎಲ್ಲವನ್ನೂ ಕೇಳಿ ತಿಳಿದಿರುವೆ. ಇರಲಿ, ಈಗ ನೀನು ಹೋಗಿ ನಿನ್ನ ಸೀರೆಯಂಚಿನಲ್ಲಿ ಕಟ್ಟಿದ ಆ ಹತ್ತು ರೂಪಾಯಿಯ ನೋಟನ್ನು ಅವನಿಗೆ ಹಿಂದಿರುಗಿ ಕೊಟ್ಟು ಬಾ. ಬಳಿಕ ಬಡವೆಯ ಮನೆಯಲ್ಲಿ ನೀನು ಹುಟ್ಟಿ ಬಳೆದಂತೆ ದುಡಿದು ನಿನ್ನ ಶೇಷಜೀವನವನ್ನು ಕಳೆ. ವಯಸ್ಸು

ನ್ನಿನಗೆ ಅನುಕೂಲವಿದ್ದಾಗ ಮನದಣಿ ಅದರ ಉಪಭೋಗ ನೀನು ಮಾಡಿ ಕೊಂಡೆ. ಈಗ ಆ ವಯಸ್ಸು ಮರಳಿ ಬಾರದು. ಆದರೆ ನಿನ್ನ ಜನ್ಮ ಹಾಳುಗೆಡಿಸಿಕೊಂಡಂತೆ ಪರರ ಜನ್ಮವನ್ನು ಹಾಳುಗೆಡಿಸುವ ಉದ್ಯೋಗಕ್ಕೆ ಮಾತ್ರ ತೊಡಗಬೇಡ.''

ಸುಂದರಿಯೇನೊ ಹೇಳಬೇಕೆಂದಿದ್ದಳು. ಆದರೆ ಅವಳ ನಾಲಗೆಯೆ ಏಳಲಿಲ್ಲ.

ಅದನ್ನು ನೋಡಿ ವಿರಾಜಳೆಂದಳು: ''ಸುಳ್ಳು ಮಾತು ಆಡುವುದ ರಿಂದೇನು ಲಾಭ ಸುಂದರಿ? ಈ ಎಲ್ಲ ಸಂಗತಿಗಳನ್ನು ನಾನಾರಿಗೂ ಹೇಳು ವುದಿಲ್ಲ. ನಿನ್ನ ಸೆರಗಿನಲ್ಲಿಯ ನೋಟು ನಿನಗೆಲ್ಲಿ ದೊರೆಯಿತೆಂಬುದರ ವಿಷಯ ನನಗೆ ಗೊತ್ತಿರಲಿಲ್ಲ. ಆದರೆ ಈಗ ಅದೆಲ್ಲ ಸ್ಪಷ್ಟವಾಗಿ ತಿಳಿಯಿತು. ನಾಳೆಯಿಂದ ನಮ್ಮ ಮನೆಯಲ್ಲಿ ಕಾಲಿಡಬೇಡ. ಇಂದೆ ನಾನು ನಿನ್ನ ನಿರೋಪ ತೆಗೆದುಕೊಳ್ಳಬಯಸುವೆನು.''

ಇದೆಂಥ ಅಸಂಭವನೀಯವಾದ ಮಾತು! ಅತಿ ಕೌತುಕದಿಂದ ವಿಮೂಢಳಾಗಿ ಸುಂದರಿಯು ನಿಂತಲ್ಲಿಯೇ ಕುಕ್ಕುರಿಸಿದಳು. ಈ ಮನೆಯ ಚಾಕರಿಯಿಂದ ಒಮ್ಮೆಲೆ ತಾನು ಬಿಡುಗಡೆಯಾಗಬಹುದೆಂಬ ವಿಷಯ ಅವಳಿಗೆ ಅಸಂಭವವಾಗಿ ತೋರಿತು. ಅದರ ನಿಜಾಂಶವನ್ನು ಸ್ವಾಭಾವಿಕ ವಾಗಿ ಒಪ್ಪಿಕೊಳ್ಳಲು ಅವಳ ಬುದ್ಧಿಯು ಸಿದ್ಧವಾಗಲಿಲ್ಲ. ಸುಂದರಿಯು ಬಹಳ ಹಳೆಯ ಒಕ್ಕಲುಗಿತ್ತಿ. ವಿರಾಜಳ ಮದುವೆಯಾದುದೂ ಅವಳೆದುರಿ ನಲ್ಲಿಯೆ, ಪುಟ್ಟಿ ಹುಟ್ಟಿದ್ದೂ ಅವಳೆದುರಿನಲ್ಲಿಯೆ, ನೀಲಾಂಬರನ ತಾಯಿ ಅವಳನ್ನು ತುಂಬಾ ಪ್ರೀತಿಸುತಿದ್ದಳು. ತೀರ್ಥಯಾತ್ರೆಗೆ ಹೋಗುವಾಗಲೂ ಅವಳನ್ನು ಸಂಗಡ ಕರೆದೊಯ್ದಿದ್ದಳು. ಈ ರೀತಿ ಅನೇಕ ದಿನಗಳಿಂದ ಘನಿಷ್ಠತೆಯಿಂದಿದ್ದು ಒಂದು ರೀತಿಯಲ್ಲಿ ಆ ಕುಟುಂಬದಲ್ಲಿ ಒಂದಾಗಿದ್ದಳು. ಇಂದು ಅದೆ ಸುಂದರಿಯು ಮನೆಯಲ್ಲಿ ಕಾಲಿಡಲೂ ವಿರಾಜಳಿಂದ ಪ್ರತಿ ಬಂಧಿಸಲ್ಪಟ್ಟಿದ್ದಾಳೆ. ಕ್ಷೋಭೆ ಅಭಿಮಾನಗಳು, ಉಕ್ಕಿ ಕಂಠನಾಳದ ವರೆಗೂ ಬಂದವು. ಅವಳ ಎದೆಯ ಆಳದಿಂದ ಎಷ್ಟೋಮಾತು ನೂಕು ನುಗ್ಗುತ್ತ ಕಂಠದವರೆಗೆ ಬಂದವು. ಅವುಗಳಿಂದ ತನ್ನ ನಿಷ್ಕಲಂಕತೆಯನ್ನು ಸ್ಥಾಪಿಸುವ ಯತ್ನ ಮಾಡಬೇಕೆಂದಳು. ಅಲ್ಲದೆ ತನ್ನನ್ನು ಹೀಗೆ ಹೊರಗ

ಟ್ಟುವುದು ಯಾವರೀತಿಗೂ ಯೋಗ್ಯವಲ್ಲವೆಂದು ಹೇಳಬೇಕೆಂದಳು. ಆದರೆ ಹೃದಯಗಹ್ವರದಿಂದ ಹೊರಹೊಮ್ಮಿದ ಈ ಎಲ್ಲ ಆವೇಗ, ಆತ್ಮಸಮರ್ಥನೆಗಾಗಿ ಅಂತರಾಳದಿಂದ ಹೊರಚಿಮ್ಮಿದ ಆ ಮಾತು ಸುಂದರಿಯ ನಾಲಿಗೆಯ ವರೆಗೆ ಮಾತ್ರ ಬಂದವು. ಆದರೆ ಬಾಯಿಯಿಂದ ಒಂದು ಶಬ್ದವೂ ಹೊರಬೀಳಲಿಲ್ಲ. ವಿಹ್ವಲಳಾಗಿ ಯಜಮಾನಿಯ ಮುಖವನ್ನೇ ನಿಟ್ಟಿಸುತ್ತ ನಿಂತಳು.

ವಿರಾಜ ಈ ಎಲ್ಲ ಸಂಗತಿಗಳನ್ನು ಮನದಲ್ಲಿಯೆ ಅನುಭವಿಸಿದಳು. ಆದರೆ ಅವಳೂ ಮುಂದೆ ಮಾತನಾಡಲಿಲ್ಲ. ಮುಖ ಹೊರಳಿಸಿ ನೋಡಿದಾಗ ಚಿಕ್ಕ ತಪ್ಪೇಲಿಯಲ್ಲಿಯ ನೀರು ಅಟ್ಟಿಸಿತ್ತು. ಸನಿಹದಲ್ಲಿಯೆ ಹಿತ್ತಾಳೆಯ ಕೊಡ ತುಂಬಿದ್ದಿತು. ಪಾತ್ರೆಯಲ್ಲಿ ಅದರಿಂದ ನೀರು ಸುರುವಿಕೊಳ್ಳುವುದರಲ್ಲಿದ್ದಳು. ಆದರೆ ಏನು ವಿಚಾರ ಮಾಡಿತೊ ಒಮ್ಮೆಲೆ ಪಾತ್ರೆಯನ್ನು ನೆಲದ ಮೇಲೆ ಇಟ್ಟುಬಿಟ್ಟು—"ಬೇಡ, ನಿನ್ನ ಕೈಯಿಂದ ತಂದ ನೀರು ಮುಟ್ಟಿದರೂ ಅಮಂಗಲವಾಗುವುದು. ನೀನು ಅದೆ ಕೈಯಿಂದ ಹಣ ಪಡೆದಿರುವೆ" ಎಂದು ಜುಗುಪ್ಸೆ ತೋರಿದಳು.

ತಿರಸ್ಕಾರ ಬೆರೆತ ಈ ಮಾತುಗಳಿಗೆ ಸುಂದರಿ ಏನೂ ಉತ್ತರವೀಯಲಿಲ್ಲ.

ವಿರಾಜ ಮತ್ತೊಂದು ದೀಪ ಹೊತ್ತಿಸಿ ಒಂದು ಕೈಯಲ್ಲಿ ದೀಪವನ್ನೂ ಮತ್ತೊಂದರಲ್ಲಿ ಕೊಡವನ್ನೂ ತೆಗೆದುಕೊಂಡಳು. ಬಳಿಕ ಆ ಗಾಢ ಕತ್ತಲಲ್ಲಿಯೆ ಮಾವಿನ ತೋಟದ ಮಧ್ಯೆ ಸಾಗಿದ ದಾರಿಯಿಂದ ನದಿಯೆಡೆಗೆ ಸಾಗಿದಳು. ವಿರಾಜ ಹೊರಟು ಹೋದ ಬಳಿಕ ತಾನೂ ಅವಳ ಹಿಂದಿನಿಂದ ಹೋಗಲೇ ಎಂದುಕೊಂಡಳು ಸುಂದರಿ ಮನದಲ್ಲಿ. ಆದರೆ ನದಿಯ ಸುತ್ತಲಿದ್ದ ಭಯಾನಕ ದೃಶ್ಯ ನೆನಸಿದೊಡನೆಯೆ ಅವಳ ಸಾಹಸ ಕರಗ ತೊಡಗಿತು. ಆಗ ಅತ್ಯಂತ ಗಾಢಕತ್ತಲೆ. ಕೈಯನ್ನು ಅತ್ತಿತ್ತ ಸರಿಸುತ್ತ ತಡವರಿಸುತ್ತ ಹೋದರೂ ಏನೂ ಸೂಚಿಸುವಂತಿದ್ದಿಲ್ಲ. ಅಲ್ಲದೆ ಆ ಇಕ್ಕಟ್ಟಾದ ಮಾರ್ಗದಲ್ಲಿ ಪೊದೆ ಬಳ್ಳಿಗಳು ದಟ್ಟವಾಗಿ ಹಬ್ಬಿವೆ. ಸುತ್ತಲೂ ಭವ್ಯ ಪ್ರಾಕಾರ. ಅಲ್ಲದೆ ಸಪ್ತಗ್ರಾಮದ ಎಷ್ಟೋ ಪರಿಚಿತ ಅಪರಿಚಿತರ ಸಮಾಧಿ ಸ್ತೂಪಗಳೂ ಪ್ರಾಚೀನ ಕಾಲದ ಅರಳೆಯ ಮರಗಳೂ ಇವೆ. ಈ ಎಲ್ಲ ಚಿತ್ರ ಸುಂದರಿಯ ಮಾನಸಪಟಲದಲ್ಲಿ ಮಿಂಚಿನ ವೇಗದಲ್ಲಿ ಮೂಡತೊಡಗಿದವು. ಅದರಿಂದ ಅವಳ ಶರೀರವೆಲ್ಲ ನವಿರೆದ್ದಿತು. ಭಯವಿಹ್ವಲಳಾಗಿ ಅಡಿಯಿಂದ ಮುಡಿಯ

ವರೆಗೆ ಥರಥರನೆ ನಡುಗಿದವಳೆ - ಅಮ್ಮಯ್ಯಾ! ಎಂದು ಚೀರಿ ಕುಸಿದು ಅಲ್ಲಿಯೇ ಕುಳಿತಳು.

೫

ಎರಡು ದಿನಗಳಾದ ಬಳಿಕ "ವಿರಾಜ, ಇತ್ತೀಚೆ ಸುಂದರಿ ಕಾಣಿಸುತ್ತಿಲ್ಲವಲ್ಲ?" ಎಂದ ನೀಲಾಂಬರ.

"ಅವಳನ್ನು ಕೆಲಸದಿಂದ ತೆಗೆದೆ" ಎಂದು ಉತ್ತರವಿತ್ತಳು ವಿರಾಜ. ನೀಲಾಂಬರನಿಗೆ ಹೆಂಡತಿಯ ಮಾತಿನ ಮೇಲೆ ನಂಬಿಕೆಯಾಗಲಿಲ್ಲ. ಅವಳು ಹಾಸ್ಯ ಮಾಡುತ್ತಿದ್ದಾಳೆಂದು ಭಾವಿಸಿದ. "ಒಳ್ಳೆಯದನ್ನೆ ಮಾಡಿದೆ! ಸರಿ, ಅವಳಿಗೇನು ಆಗಿದೆ?" ಎಂದು ವಿಚಾರಿಸಿದ ನೀಲಾಂಬರ.

ವಿರಾಜಳೆಂದಳು: "ಅವಳಿಗೇನಾಗಬೇಕು? ನಾನು ನಿಜವಾಗಿಯೂ ಅವಳನ್ನು ಕೆಲಸದಿಂದ ಬಿಡುಗಡೆ ಮಾಡಿದೆ."

ನೀಲಾಂಬರನಿಗೆ ಈಗಲೂ ನಂಬುಗೆಯಾಗಲಿಲ್ಲ. ಅತ್ಯಂತ ಸೋಜಿಗಗೊಂಡು ಹೆಂಡತಿಯ ಮುಖವನ್ನೆ ನೋಡುತ್ತ, ನೀನೇಕೆ ಅವಳನ್ನು ಕೆಲಸದಿಂದ ಬಿಡುಗಡೆ ಮಾಡಿದೆ? ಅವಳು ಮಹಾಪರಾಧ ಮಾಡಿದರೂ ಅವಳನ್ನು ಕೆಲಸದಿಂದ ತೆಗೆಯಕೂಡದು. ಅವಳೆಷ್ಟು ಹಳೆಯ ಒಕ್ಕಲುಗಿತ್ತಿಯೆಂದು ನಿನಗೆ ಗೊತ್ತಿಲ್ಲವೆ? ಹೊರಗಟ್ಟಲು ಅವಳೇನು ಅಂಥ ಅಪರಾಧ ಮಾಡಿದ್ದಾಳೆ?"

"ಎಲ್ಲವನ್ನೂ ಪೂರ್ಣವಾಗಿ ವಿಚಾರ ಮಾಡಿಯೇ ಅವಳನ್ನು ಹೊರಗಟ್ಟುವುದೇ ವಿಹಿತವೆಂದೆಣಿಸಿತು ನನಗೆ."

ನೀಲಾಂಬರ ಒಗರು ದನಿಯಲ್ಲಿ ಹೇಳಿದ - "ನಿನ್ನ ಆ ಕಾರಣವನ್ನೆ ನಾನೀಗ ಕೇಳಲಿಚ್ಛಿಸಿದುದು."

ವಿರಾಜಳಿಗೆ ಗಂಡನ ಮನೋಭಾವ ತಿಳಿಯಿತು. ಕ್ಷಣಹೊತ್ತು ಅವನ ಮುಖವನ್ನೆ ನಿಟ್ಟಿಸಿ "ಅವಳನ್ನು ಹೊರಗಟ್ಟುವುದೆ ವಿಹಿತವೆಂದು ನನಗೆನಿಸಿದ್ದರಿಂದ ಅವಳನ್ನು ಹೊರಗಟ್ಟಿದೆ. ಇಟ್ಟುಕೊಳ್ಳುವುದು ವಿಹಿತವೆಂದು ನಿಮಗೆನಿಸಿದರೆ ನೀವು ಅವಳನ್ನು ಕರೆತರಬಹುದು" ಎಂದು ಉತ್ತರದ ದಾರಿಕಾಯದೆ ಅವಳು ಅಡುಗೆ ಮನೆಗೆ ಹೋದಳು.

ವಿರಾಜ ಕೋಪಗೊಂಡಿದ್ದಾಳೆಂದು ನೀಲಾಂಬರನಿಗೆ ತಿಳಿಯಿತು. ಆದುದರಿಂದ ಆತನೂ ಹೆಚ್ಚಿನ ಗೋಜಿಗೆ ಹೋಗಲಿಲ್ಲ.

ಒಂದು ಗಂಟೆಯ ತರುವಾಯ ಹೊರಗಿನಿಂದ ಬಂದು ಅಡುಗೆ ಮನೆಯ ಹೊಸ್ತಿಲ ಬಳಿ ನಿಂತು ಮಿದುದನಿಯಲ್ಲಿ ನೀಲಾಂಬರನೆಂದ: "ಸುಂದರಿ ಯನ್ನಂತೂ ಹೊರದೂಡಿದಂತಾಯಿತು. ಇನ್ನು ಮನೆಗೆಲಸಗಳನ್ನೆಲ್ಲ ಯಾರು ಮಾಡುವವರು ?"

ಗಂಡನ ಈ ಮಾತು ಕೇಳಿ ವಿರಾಜ ಮುಖ ತಿರುವಿ ನಕ್ಕು "ನೀವು !" ಎಂದು ನುಡಿದಳು.

ನೀಲಾಂಬರನೂ ನಕ್ಕು, "ಹಾಗಾದರೆ ಕೊಡು, ಈ ಮುಸುರೆ ಪಾತ್ರೆ ಗಳನ್ನು ತಿಕ್ಕಿ ತರುವೆ" ಎಂದ.

ವಿರಾಜ ಕೈಯಲ್ಲಿದ್ದ ಚಿಮುಟಿಕೆಯನ್ನು ಝಣ್ ಎಂದು ಸದ್ದಾಗುವಂತೆ ಎಸೆದು ಕೈತೊಳೆದುಕೊಂಡು ಗಂಡನ ಸನಿಹಕ್ಕೆ ಬಂದಳು. ಬಳಿಕ ಆತನ ಪಾದಧೂಳಿಯನ್ನು ಮಸ್ತಕದಲ್ಲಿಟ್ಟುಕೊಂಡು "ನೀವು ಇಲ್ಲಿಂದ ಹೋಗಿ. ನಿಮ್ಮೊಂದಿಗೆ ನಸುಚೇಷ್ಟೆಯೂ ಕಠಿಣವೆ. ಎಂತಹ ಅಸಹ್ಯ ಮಾತುಗಳನ್ನು ಆಡುವಿರಲ್ಲ ? ಅವುಗಳನ್ನು ಕೇಳುವುದರಿಂದಲೆ ಪಾಪ ತಟ್ಟುವುದು" ಎಂದಳು.

ನೀಲಾಂಬರ ಕುಂಠಿತನಾದ. "ಈ ಮಾತು ಕೇಳಿದ ಮಾತ್ರಕ್ಕೆ ಪಾಪ ತಟ್ಟುವುದೆ ? ನಿನಗೆ ಏತರಿಂದ ಪಾಪ ತಟ್ಟುವುದಿಲ್ಲವೆಂಬುದೆ ನನಗೆ ತಿಳಿಯಲೊಲ್ಲದಲ್ಲ ವಿರಾಜ !"

ವಿರಾಜಳೆಂದಳು : "ನಿಮಗೆ ತಿಳಿಯದೆ ಏನು ? ಹಾಗಿದ್ದರೆ, ಇಷ್ಟೊಂದು ಕೆಲಸ - ಬೊಗಸೆಗಳು ಬಿದ್ದಿರುವಾಗಲೂ ಮುಸುರೆ ತಿಕ್ಕುವ ಮಾತನ್ನೆ ಆಡಿ ತೋರಿಸುತಿದ್ದಿಲ್ಲ. ತಡಮಾಡಬೇಡಿ. ಹೋಗಿ, ಬೇಗ ಸ್ನಾನಮಾಡಿಕೊಂಡು ಬನ್ನಿ. ನನ್ನ ಅಡುಗೆ ಸಿದ್ಧವಾಗಿದೆ."

ನೀಲಾಂಬರ ಹೊಸ್ತಿಲ ಬಳಿಯೆ ಕುಳಿತು, "ನಿಜವಾಗಿ ಹೇಳು ವಿರಾಜ, ಮನೆಗೆಲಸಗಳನ್ನು ಇನ್ನು ಯಾರು ಮಾಡುವರು ?"

ದೃಷ್ಟಿ ಮೇಲಕ್ಕೆತ್ತಿ ವಿರಾಜಳೆಂದಳು : "ಈಗ ಕೆಲಸವಾದರೂ ಏನು ಇದೆ ? ಪುಟ್ಟಿಯೂ ಇಲ್ಲ, ಅವಳ ಚಿಕ್ಕಣ್ಣನವರೂ ಬೇರೆಯಾಗಿದ್ದಾರೆ. ಈಗ ಮನೆಯಲ್ಲಿಯಾದರೂ ಜನವೆಲ್ಲಿ, ಕೆಲಸ - ಬೊಗಸೆ ಹೆಚ್ಚಲು ? ಕೆಲಸ

ವಿಲ್ಲವೆಂದೆ ನಾನು ಇಡಿಯ ದಿನ ವ್ಯರ್ಥವಾಗಿ ಕಳೆಯುತಿದ್ದೇನೆ. ನೀವೇನೂ ಚಿಂತಿಸಬೇಡಿ. ನನ್ನ ಕೆಲಸಗಳೇನಾದರೂ ನಿಂತುಹೋದರೆ ನಿಮ್ಮನ್ನು ಕರೆಕಳಿಸುವೆ.''

ನೀಲಾಂಬರನೆಂದ: "ಆಗದು ವಿರಾಜ, ಅದಾಗದು. ಆಳು ಹೋಳುಗಳು ಮಾಡುವಂತಹ ಕೆಲಸಗಳನ್ನು ನೀನು ಮಾಡುವುದಕ್ಕೆ ನಾನೆಂದಿಗೂ ಬಿಡೆನು. ಸುಂದರಿ ಯಾವ ಅಪರಾಧವನ್ನೂ ಮಾಡಿಲ್ಲ. ಕೇವಲ ಮನೆಯ ವೆಚ್ಚ ಉಳಿಸುವುದಕ್ಕಾಗಿ ನೀನು ಅವಳನ್ನು ಕೆಲಸದಿಂದ ತೆಗೆದೆ. ಹೌದೊ ಅಲ್ಲವೊ ಹೇಳು."

''ಅಲ್ಲ. ಅದು ನಿಜವಲ್ಲ. ಅವಳು ನಿಜವಾಗಿಯೂ ಅಪರಾಧ ಮಾಡಿದ್ದಾಳೆ'' ಎಂದಳು ವಿರಾಜ.

"ಅದೇನು ಅಂಥ ಅಪರಾಧ ಮಾಡಿದ್ದು?"

"ಆದನ್ನು ನಾ ಹೇಳಲಾರೆ. ಸುಮ್ಮನೆ ಕುಳಿತುಕೊಳ್ಳಬೇಡಿ.. ಹೋಗಿ, ಸ್ನಾನ ಮಾಡಿಕೊಂಡು ಬನ್ನಿ'' ಎಂದು ವಿರಾಜ ಅಡುಗೆ ಮನೆಯಿಂದ ಹೊರಗೆ ಹೋದಳು. ಸ್ವಲ್ಪ ಹೊತ್ತಿನ ಬಳಿಕ ಮರಳಿ ಬಂದಾಗ ನೀಲಾಂಬರ ಹಾಗೆಯೆ ಕುಳಿತುದನ್ನು ಕಂಡು "ನೀವಿನ್ನೂ ಹೋಗಲೆ ಇಲ್ಲವೆ? ಹೀಗೆಯೆ ಕುಳಿತುಬಿಟ್ಟಿರಾ?" ಎಂದಳು.

ಅತ್ಯಂತ ಕೋಮಲ ದನಿಯಲ್ಲಿ ನೀಲಾಂಬರನೆಂದ: "ಹೋಗುವೆ ವಿರಾಜ, ಆದರೆ ಇದು ನನ್ನಿಂದ ಸಹಿಸಲಾಗದು. ನೀನು ಇಂಥ ಕೀಳು ಗೆಲಸ ಮಾಡಲು ನಾನು ಹೇಗೆ ಒಪ್ಪಲಿ?"

ಗಂಡನ ಈ ಮಾತಿನಿಂದ ವಿರಾಜಳಿಗೆ ಸಂತೋಷ ಉಂಟಾಗಲಿಲ್ಲ. ಕ್ಷಣ ಹೊತ್ತು ಅವನನ್ನು ಸಿಟ್ಟಿಸಿ, "ಹಾಗಾದರೆ ನೀವೇನು ಮಾಡಬೇಕೆನ್ನುವಿರಿ?'' ಎಂದು ವಿಚಾರಿಸಿದಳು.

''ಸುಂದರಿ ಬೇಡವಾಗಿದ್ದರೆ ಬಿಟ್ಟುಬಿಡು. ಬೇರೆ ಯಾರನ್ನಾದರೂ ನೋಡು. ಅಲ್ಲದೆ ನೀನೊಬ್ಬಳೆ ಹೇಗೆ ಇರಬಲ್ಲೆ?''

"ನಾನು ಹೇಗಾದರೂ ಇರಲೊಲ್ಲೆನೇಕೆ? ಆದರೆ ನಾನಿನ್ನು ಯಾರನ್ನೂ ನೋಡಲಿಕ್ಕೆ ಹೋಗುವುದಿಲ್ಲ."

ನೀಲಾಂಬರ ಸ್ವಲ್ಪ ಗಡಚಾಗಿ, "ಆಗದು ಅದಾಗದು. ನಾನು ಸಂಸಾರಿಯಾಗಿರುವವರೆಗೆ ನನ್ನ ಮಾನಾಪಮಾನವನ್ನು ಲಕ್ಷಿಸಬೇಕು. ಈ ವಿಷಯ ಜನರಿಗೆ ತಿಳಿಯಿತೆಂದರೆ ಅವರೇನೆಂದಾರು?"

ವಿರಾಜ ಸನಿಹದಲ್ಲಿ ಬಂದು ಕುಳಿತಳು. "ನೀನೊಬ್ಬಳೆ ಹೇಗೆ ಇರುವೆ? ಮನೆಗೆಲಸಗಳನ್ನೆಲ್ಲ ನೀನೊಬ್ಬಳೆ ಹೇಗೆ ನೀಗಿಸುವೆ ಎಂಬ ನಿಮ್ಮ ಮಾತು ಕೇವಲ ನೆವನಮಾತ್ರ. ಜನವೇನೆಂದಾರೊ ಎಂಬುದೆ ನಿಮ್ಮ ನಿಜ ಭೀತಿ" ಎಂದಳು.

ಹೆಂಡತಿಯ ಮಾತು ಕೇಳಿ ನೀಲಾಂಬರ ರೇಗಿದ. ಅದರೊಂದಿಗೆ ಅಷ್ಟೆ ಕೌತುಕಗೊಂಡ. ದೃಷ್ಟಿ ಮೇಲಕ್ಕೆತ್ತಿ "ಇದು ನನ್ನ ನೆವನವೆ?" ಎಂದ.

ವಿರಾಜಳೆಂದಳು: "ಹಾಂ, ನೆವನವೆ ಸೈ. ಇತ್ತೀಚೆ ನನಗೆಲ್ಲ ವಿಷಯ ತಿಳಿದಿದೆ. ನೀವು ನನ್ನ ಮುಖ ನೋಡುತ್ತಿದ್ದರೆ, ನನ್ನ ಸುಖ ದುಃಖದ ವಿಷಯವಾಗಿ ಸ್ವಲ್ಪವಾದರೂ ಯೋಚಿಸುತಿದ್ದರೆ, ನನ್ನ ಒಂದು ಮಾತನ್ನಾದರೂ ಕೇಳುತ್ತಿದ್ದರೆ ಇಂದು ನನಗೀ ಅವಸ್ಥೆ ಬರುತ್ತಿರಲಿಲ್ಲ."

ನೀಲಾಂಬರನೆಂದ: "ನಾನು ನಿನ್ನ ಒಂದು ಮಾತನ್ನೂ ಕೇಳುತ್ತಿಲ್ಲವೆ?"

"ಇಲ್ಲ, ಒಂದು ಮಾತನ್ನೂ ಕೇಳುತ್ತಿಲ್ಲ" ಎಂದು ಸ್ವಲ್ಪ ಭಾರವಾಗಿಯೆ ನುಡಿದು ಮತ್ತಿಂತೆಂದಳು: "ನಾನೇನಾದರೂ ಹೇಳಿದರೆ ಅದನ್ನು ಒಂದಿಲ್ಲೊಂದು ನೆವದಿಂದ ನೀವು ತಳ್ಳಿಹಾಕಿದ್ದೀರಿ. ನಿಮಗಾವಾಗಲೂ ಒಂದೆ ವಿಚಾರ – 'ಈ ಕೆಲಸ ಮಾಡುವುದರಿಂದ ನನಗೆ ಪಾಪ ಬರುವುದು. ಹೀಗೆ ಮಾಡುವುದರಿಂದ ಅಪಯಶಸ್ಸು ಉಂಟಾಗುವುದು. ಸಮಾಜದಲ್ಲಿ ನಾನು ಅಪಮಾನಕ್ಕೆ ಗುರಿಯಾಗಬೇಕಾಗುವುದು,' – ಎಂದು. ಆದರೆ ನೀವು ಯಾವುದೆ ಕೆಲಸ ಕೈಗೊಳ್ಳುವ ಮೊದಲು ಇದರಿಂದ ನನ್ನ ಹೆಂಡತಿಯ ಮೇಲೆ ಯಾವ ಪರಿಣಾಮವುಂಟಾದೀತೆಂದು ನೀವು ಒಂದು ಸಲವಾದರೂ ಯೋಚಿಸಿದ್ದೀರಾ?"

"ಹಾಗಾದರೆ ನನ್ನ ನಿನ್ನ ಪಾಪ ಒಂದೇ ಅಲ್ಲವೆ? ನನ್ನ ಕೀರ್ತಿಗೆ ಕಲಂಕ ಉಂಟಾದರೆ ಅದು ನಿನಗೂ ತಟ್ಟುವುದಿಲ್ಲವೆ?"

ಈಗ ವಿರಾಜಳಿಂದ ತನ್ನ ಕೋಪವನ್ನು ಹತ್ತಿಕ್ಕುವುದಾಗಲಿಲ್ಲ. ಎಂದಳು: "ನೋಡಿ, ಇವೆಲ್ಲ ಮಕ್ಕಳಿಗೆ ಹೇಳುವ ಮಾತುಗಳಿವು. ನಾನೇನು ಮಗುವಲ್ಲ, ಇಂಥ ಮಾತು ಕೇಳಿ ಮೋಸಹೋಗಲು."

ಹೀಗೆಂದು ವಿರಾಜ ಕ್ಷಣಹೊತ್ತು ಮೌನವಾಗಿ ಉಳಿದು ಪುನಃ ಹೇಳ ತೊಡಗಿದಳು: "ನಿಮ್ಮ ಮಿದುಳಿನಲ್ಲಿ ಕೇವಲ ನಿಮ್ಮ ಸುಖ ದುಃಖಗಳ ವಿಚಾರಗಳಷ್ಟೆ ಮೂಡುತ್ತವಲ್ಲದೆ ಅನ್ಯರ ಸುಖದುಃಖಗಳ ಬಗ್ಗೆ ಯಾವ ವಿಚಾರವೂ ಮೂಡುವುದಿಲ್ಲ. ಅತಿ ದುಃಖದಿಂದ ಈ ಮಾತನ್ನು ನಿಮ್ಮೆದುರು ಇಂದು ಆಡಿ ತೋರಿಸಬೇಕಾಗಿ ಬಂದಿದೆ. ಆಳು - ಹೋಳು ಗಳು ಮಾಡುವ ಕೆಲಸವನ್ನು ನಾನು ಮಾಡುತಿದ್ದೇನೆಂಬ ಕ್ಷುದ್ರಕಾರಣ ದಿಂದ ನೀವು ಲಜ್ಜಾಪೀಡಿತರಾಗಿದ್ದೀರಿ. ಆದರೆ ನಾಳೆ ಅಕಸ್ಮಾತ್ತಾಗಿ ನಿಮಗೇನಾದರೂ ಆದರೆ - ಹಾಗಾಗದಿರಲಿ - ಮುಂದೆ ಒಂದು ತುತ್ತು ಅನ್ನಕ್ಕಾಗಿ ನಾನು ಪರರ ಮನೆಯಲ್ಲಿ ಆಳಾಗಿ ದುಡಿಯಬೇಕಾಗುವುದು. ಅಂತಹ ಕೀಳು ಕೆಲಸವನ್ನು ಮಾಡುವ ನನ್ನನ್ನು ನೀವು ನೋಡಲಿಕ್ಕೂ ಇರುವುದಿಲ್ಲ; ನನ್ನ ಗೋಳನ್ನು ಕಿವಿಯಿಂದ ಕೇಳಲಿಕ್ಕೂ ಇರುವುದಿಲ್ಲ. ಆದುದರಿಂದ ನೀವು ನಾಚಿಕೊಳ್ಳುವ ಅಗತ್ಯವಿಲ್ಲವೆಂಬುದು ನಿಜ. ಆದರೆ ಆ ಬಗ್ಗೆ ನೀವು ಮೊದಲೆ ಸ್ವಲ್ಪವೂ ಚಿಂತಿಸುವ ಅಗತ್ಯವಿಲ್ಲ - ಅಲ್ಲವೆ?"

ಒಮ್ಮೆಲೆ ಈ ದೋಷಾರೋಪಣೆಗೆ ಉತ್ತರವೀಯಲು ನೀಲಾಂಬರ ನಿಂದಾಗಲಿಲ್ಲ. ಸ್ವಲ್ಪಹೊತ್ತು ಮೌನದಿಂದ ನತಮುಖನಾಗಿದ್ದು ಕೋಮಲ ಸ್ವರದಲ್ಲಿ ಹೇಳಿದ: "ನೀನು ನಿಜವಾಗಿಯೂ ಈ ರೀತಿಯ ವಿಚಾರ ತಳೆದಿರುವೆ ಯೆಂದು ನಾನು ನಂಬಲಾರೆ. ದುಃಖಬವಣೆಗಳಿಂದ ನಿನಗೆ ಕೋಪ ವುಂಟಾಗಿದೆ. ಆದುದರಿಂದಲೆ ನೀನು ಹೀಗೆ ಒಟಗುಟ್ಟುತ್ತಿರುವೆ."

ವಿರಾಜಳೆಂದಳು: "ನಿಸ್ಸಂಕೋಚವಾಗಿ ನಾನೂ ಮೊದಲು ಹಾಗೆಯೆ ಭಾವಿಸಿದ್ದೆ. ಆದರೆ ಕಷ್ಟದಲ್ಲಿ ಸಿಲುಕದೆ ಮನುಷ್ಯನಿಗೆ ಕಷ್ಟದ ಪರಿಚಯ ವಾಗದು. ಹಾಗೆಯೆ ಕಾಲ ಒದಗದೆ ಮನುಷ್ಯನ ಮೋಹ ಮಮತೆಗಳ ಪರಿಚಯವಾಗದು. ಇರಲಿ, ಈ ನಡುಮಧ್ಯಾಹ್ನ ಊಟದ ಸಮಯದಲ್ಲಿ ನಿಮ್ಮೊಂದಿಗೆ ವಿವಾದಹೂಡುತ್ತ ಕುಳಿತುಕೊಳ್ಳಲಾರೆ. ಹೋಗಿ, ಬೇಗ ಸ್ನಾನ ಮುಗಿಸಿಕೊಂಡು ಬನ್ನಿ."

"ಆಗಲಿ" ಎಂದು ನೀಲಾಂಬರ ಅಲ್ಲಿಯೆ ಸುಮ್ಮನೆ ಕುಳಿತ.

ವಿರಾಜ ಮತ್ತೆ ಹೇಳತೊಡಗಿದಳು: "ನಮ್ಮ ಪುಟ್ಟಿಯ ಮದುವೆಯಾಗಿ ಎರಡು ವರ್ಷ ಸಂದವು. ಅದಕ್ಕೂ ಮೊದಲಿನಿಂದ ಪ್ರಾರಂಭಿಸಿ, ಈವರೆಗೆ ನಡೆದ ಎಲ್ಲ ಸಂಗತಿಗಳ ಬಗ್ಗೆ ವಿಚಾರ ಮಾಡಿ ಒಂದು ನಿರ್ಧಾರಕ್ಕೆ ಬಂದಿದೇನೆ — ಅಂದಿನಿಂದ ನೀವು ನನ್ನ ಒಂದು ಮಾತನ್ನೂ ಕೇಳಲಿಲ್ಲ. ನಾನೇನಾದರೂ ಹೇಳಲು ಹೋದಾಗ ನಡುವೆಯೆ ನನ್ನ ಮಾತನ್ನು ಹಾರಿಸಿ ನಿಮ್ಮ ಮನಬಂದಂತೆ ನೀವು ನಡೆದಿದ್ದೀರಿ. ಮನುಷ್ಯನೆಂದಮೇಲೆ ಆಳು-ಹೋಳುಗಳ ಒಂದೆರಡು ಮಾತುಗಳನ್ನೂ ಲಕ್ಷಿಸಬೇಕಾಗುವುದು. ಆದರೆ ನೀವು ಮಾತ್ರ ಎಂದಿಗೂ ನನ್ನ ಒಂದು ಮಾತನ್ನೂ ಲೆಕ್ಕಿಸಿಲ್ಲ."

ನೀಲಾಂಬರ ಮಾತನಾಡಲು ಬಾಯಿತೆರೆದಿದ್ದ. ಅಷ್ಟರಲ್ಲಿ ವಿರಾಜ ಆತನನ್ನು ಅಡ್ಡಯಿಸಿ ಪುನಃ ಹೇಳತೊಡಗಿದಳು: "ಇಲ್ಲಿಲ್ಲ, ನಾನೆಂದಿಗೂ ನಿಮ್ಮೊಂದಿಗೆ ವಾದಹೂಡುವುದಿಲ್ಲ. ನಿಮ್ಮೊಂದಿಗೆ ವಾದವಿವಾದ ಮಾಡುವುದು ನನಗೆ ನಿಜವಾಗಿ ಭೂಷಣವೂ ಅಲ್ಲ. ನಿಮ್ಮ ವಿರುದ್ಧ ಇನ್ನುಮುಂದೆ ಚಕ್ಕಾರವನ್ನು ಎತ್ತುವುದಿಲ್ಲವೆಂದು ಎದೆಯಾಣೆ ಮಾಡಿ ಪಣತೊಟ್ಟಿದ್ದೇನೆ. ವಿಷಯವೆದ್ದಿತೆಂದೆ ಇಷ್ಟು ಮಾತನಾಡುವ ಪ್ರಸಂಗ ಬಂದಿತು. ಇಲ್ಲದಿದ್ದರೆ ನಿಮಗಿಂಥ ಮಾತುಗಳನ್ನು ಕೇಳುವ ಪ್ರಸಂಗ ಬರುತ್ತಿರಲಿಲ್ಲ. ಚಿಕ್ಕಂದಿನ ಆ ಘಟನೆ ನಿಮಗೆ ನೆನಪಿರಲಿಕ್ಕಿಲ್ಲ. ಒಂದು ದಿನ ನಾನು ತಲೆಶೂಲೆಯಾದದ್ದರಿಂದ ಕದ ಮುಚ್ಚಿಕೊಂಡು ಮಲಗಿದ್ದೆ. ಕದ ತೆರೆಯೆಂದು ನೀವು ತುಂಬ ಕೂಗಿದಿರಿ. ಬಹಳ ಹೊತ್ತಾದ ಬಳಿಕ ನಾನು ಬಾಗಿಲು ತೆರೆದಾಗ ನೀವು ನನ್ನನ್ನು ಬಡೆಯಲು ಏರಿಬಂದಿರಿ. ನನಗೆ ತಲೆಶೂಲೆಯಾಗಿದೆಂಬ ಮಾತನ್ನು ನೀವು ನಂಬಲೆ ಇಲ್ಲ. ಅಂದಿನಿಂದ ನನಗೆ ಬೇನೆ ಬೇಸರಿಕೆಯಾದರೆ ನಿಮಗೆ ಹೇಳಲೆಕೂಡದೆಂದು ಪಣತೊಟ್ಟೆ. ನನ್ನ ಅಸ್ವಸ್ಥತೆಯ ವಿಷಯದಲ್ಲಿ ನಿಮಗೆಂದಿಗೂ ಹೇಳಲಾರೆ. ನನ್ನ ಅಂದಿನ ಪ್ರತಿಜ್ಞೆ ಇಂದಿಗೂ ಭಂಗವಾಗಿಲ್ಲ."

ನೀಲಾಂಬರ ಮೊಗವೆತ್ತಿದಾಗ ದಂಪತಿಗಳ ಕಣ್ಮಿಲನವಾಯಿತು. ಒಮ್ಮೆಲೆ ನೀಲಾಂಬರ ಎದ್ದು ವಿರಾಜಳ ಬಳಿಸಾರಿ ಅವಳ ಎರಡೂ ಕೈಗಳನ್ನು ಹಿಡಿದು ಉದ್ವಿಗ್ನಸ್ವರದಲ್ಲಿ "ಅದು ಕೂಡದು ವಿರಾಜ, ನಿನ್ನ ದೇಹಸ್ವಾಸ್ಥ್ಯ

ವೆಂದಿಗೂ ಚೆನ್ನಾಗಿಲ್ಲ - ನಿನ್ನ ದುಃಖ ಬವಣೆಗಳನ್ನು ನನಗೆ ತಿಳಿಸು. ಹೀಗೆ ಸಂಕೋಚಪಟ್ಟುಕೊಳ್ಳಬೇಡ. ನಿನ್ನ ಬೇನೆಯ ವಿಷಯವಾಗಿ ನನಗೆ ತಿಳಿಸಲೆಬೇಕು."

ಮೆಲ್ಲಮೆಲ್ಲನೆ ಕೈಕೊಸರಿಕೊಳ್ಳುತ್ತ ವಿರಾಜಳೆಂದಳು: "ಕೈಬಿಡಿ - ನೋವಾಗುತ್ತಿದೆ."

"ನೋವಾಗುತ್ತಿರಬಹುದು ಪಾಪ! ಮೊದಲು ಹೇಳು ನಿನಗೇನಾಗಿದೆ?"

ಒಣ ನಗೆ ನಕ್ಕು ವಿರಾಜಳೆಂದಳು: "ನನಗೇನಾಗಬೇಕು? ನನಗೇನೂ ಆಗಿಲ್ಲ, ಚೆನ್ನಾಗಿದ್ದೇನೆ."

ನೀಲಾಂಬರ ಅವಿಶ್ವಾಸವನ್ನು ತೋರುತ್ತ ಹೇಳಿದ: "ಅಲ್ಲ, ಆ ಮಾತು ನಿಜವಲ್ಲ. ನಿನ್ನ ಪ್ರಕೃತಿ ಸರಿಯಾಗಿಲ್ಲ. ನಿನ್ನ ಮನಸ್ಸಿಗೆ ಅತ್ಯಂತ ತಾಪವೆನಿಸದಿದ್ದಿದ್ದರೆ, ನೀನು ಅನೇಕ ದಿನಗಳ ಹಿಂದಿನ ಕಂತೆ ಬಿಚ್ಚಿ ನನ್ನ ಹೃದಯಕ್ಕೆ ನೋವನ್ನುಂಟುಮಾಡುತ್ತಿರಲಿಲ್ಲ. ಅಲ್ಲದೆ ಈ ಬಗ್ಗೆ ಅನೇಕ ಸಲ, ಹೆಚ್ಚಾಗಿ ಇಂಥ ಪ್ರಸಂಗಗಳಲ್ಲಿ ನಾನು ನಿನ್ನ ಕ್ಷಮೆ ಬೇಡಿದ್ದೇನೆ."

"ಇರಲಿ, ಇನ್ನೆಂದಿಗೂ ನಾನು ನಿಮ್ಮೆದುರು ಈ ಮಾತು ಎತ್ತುವುದಿಲ್ಲ" ಎಂದು ತನ್ನನ್ನು ಬಿಡಿಸಿಕೊಂಡು ಸ್ವಲ್ಪದೂರ ಸರಿದು ಕುಳಿತಳು.

ನೀಲಾಂಬರನಿಗೆ ವಿರಾಜಳ ಮಾತಿನ ಅರ್ಥವಾಯಿತು. ಅವನು ಏನೂ ಮಾತನಾಡಲಿಲ್ಲ. ೨-೩ ನಿಮಿಷ ಸುಮ್ಮನೆ ಕುಳಿತು ಎದ್ದು ಹೋದ.

ರಾತ್ರಿ ದೀಪದ ಬೆಳಕಿನಲ್ಲಿ ಕುಳಿತು ವಿರಾಜ ಪತ್ರ ಬರೆಯುತ್ತಿದ್ದಳು. ನೀಲಾಂಬರನು ಮಂಚದ ಮೇಲೆ ಮೌನವಾಗಿ ಒರಗಿದ್ದ. ಹೆಂಡತಿಯ ಕಡೆಗೆ ನೋಡುತ್ತ ಒಮ್ಮಿಗೆ ಹೇಳಿದ: "ಈ ಜನ್ಮದಲ್ಲಿ ನೀನು ಅಪರಾಧ ಮಾಡಿರುವೆ ಎಂಬುದಾಗಿ ನಿನ್ನ ಕಡುವೈರಿಗಳೂ ಹೇಳಲಾರರು. ಏಕೆಂದರೆ ನಿನ್ನ ಬಾಲ್ಯದಿಂದ ಈವರೆಗೆ ನಾನು ನಿನ್ನಲ್ಲಿ ಯಾವ ದೋಷವನ್ನೂ ಕಂಡಿಲ್ಲ. ಆದರೆ ನೀನು ಪೂರ್ವ ಜನ್ಮದಲ್ಲಿ ಪಾಪ ಮಾಡಿರಲೇಬೇಕೆಂದು ಎನಿಸುತ್ತಿದೆ. ಇಲ್ಲದಿದ್ದರೆ ಹೀಗೆಂದೂ ಆಗುತ್ತಿರಲಿಲ್ಲ."

ಮೊಗವೆತ್ತಿ ವಿರಾಜ ಕೇಳಿದಳು: "ಹೇಗೆ ಆಗುತ್ತಿರಲಿಲ್ಲ?"

ನೀಲಾಂಬರನೆಂದ: "ಭಗವಂತ ನಿನ್ನ ಶರೀರವನ್ನು ಅತ್ಯಂತ ಸುಂದರವಾಗಿ ರಚಿಸಿದ್ದಾನೆ. ನಿನಗೆ ಅಪೂರ್ವರೂಪರಾಶಿಯಿತ್ತು ಈ ಲೋಕದಲ್ಲಿ ಹುಟ್ಟಿಸಿದಾನೆ. ಎಲ್ಲ ತೆರನ ಸುಖಸಾಮಗ್ರಿಗಳಿಂದ ಪರಿಪೂರ್ಣವಾದ ಅರಮನೆಯೆ ನಿನ್ನಂತಹರಿಗೆ ವಾಸಿಸಲು ಯೋಗ್ಯಸ್ಥಾನ. ಮೇಲಾಗಿ ದೇವರು ನಿನಗೆ ರಾಜನಂತಹ ವಿಶಾಲ ಹೃದಯವನ್ನೂ ಕೊಟ್ಟಿದ್ದಾನೆ. ಆದರೆ........"

"ಆದರೆ ಏನು?"

ನೀಲಾಂಬರ ಮಾತನಾಡದೆ ಸುಮ್ಮನೆ ಉಳಿದ.

ನಿಮಿಷಾರ್ಧ ಉತ್ತರವನ್ನು ಪ್ರತೀಕ್ಷಿಸಿದ ಬಳಿಕ – "ಭಗವಂತ ನಿಮಗೆ ಈ ಸುದ್ದಿಯನ್ನು ಯಾವಾಗ ಕಳುಹಿದ?" ಎಂದು ಕಟೋಕ್ತಿಯನ್ನಾಡಿದಳು.

"ಕಣ್ಣು ಕಿವಿಗಳಿದ್ದರೂ ಎಲ್ಲರಿಗೂ ದೇವರು ಎಲ್ಲ ರೀತಿಯ ಸುದ್ದಿಗಳನ್ನು ನಿತ್ಯವೂ ಕಳಿಸುತ್ತಿರುತ್ತಾನೆ."

ವಿರಾಜ 'ಹೂಃ' ಎಂದು ಪತ್ರ ಬರೆಯುತೊಡಗಿದಳು. ಕೆಲಕ್ಷಣ ಸುಮ್ಮನುಳಿದು ನೀಲಾಂಬರನೆಂದ: "ನಿನ್ನೊಂದು ಮಾತಿಗೂ ನಾನು ಕಿವಿಗೊಡುತ್ತಿಲ್ಲವೆಂದು ನೀನೀಗ ಹೇಳುತಿದ್ದೆ. ಬಹುಶಃ ಆ ಮಾತು ನಿಜವಿರಬಹುದು. ಆದರೆ ಅದಕ್ಕೆಲ್ಲ ನಾನೇ ದೋಷಿಯೆ?"

ಮುಖವೆತ್ತಿ ವಿರಾಜ ಪತಿಯನ್ನು ನೋಡುತ್ತ: "ಹಾಗಾದರೆ ನನ್ನ ದೋಷಗಳನ್ನಾದರೂ ತೋರಿಸಿಕೊಡಿ."

ನೀಲಾಂಬರನೆಂದ: "ನಾನು ನಿನ್ನ ದೋಷಗಳನ್ನು ತೋರಿಸಲಾರೆ. ಆದರೆ ಇಂದು ನಿಜ ಸಂಗತಿಯನ್ನು ಹೇಳದೆ ಇರಲಾರೆ– ನೀನು ಯಾವಾಗಲೂ ಇತರರನ್ನು ನಿನ್ನೊಂದಿಗೆ ತುಲನೆ ಮಾಡಿ ನೋಡುವೆ. ನಿನ್ನಂತಹ ಎಷ್ಟು ಜನ ಸ್ತ್ರೀಯರು ನನ್ನಂತಹ ನಿರುಪಯೋಗಿ ಮೂರ್ಖ ಗಂಡಂದಿರ ಕೈಯಲ್ಲಿ ಸಿಕ್ಕಿಬಿದ್ದಿದ್ದಾರೆಂದು ನೀನು ಒಂದು ಸಲವಾದರೂ ಯೋಚಿಸಿ ನೋಡಿದೆಯಾ? ನೀನು ನನ್ನಂತಹನ ಕೊರಳಿಗೆ ಬಿದ್ದುದು ನಿನ್ನ ಪೂರ್ವಜನ್ಮದ ಪಾಪವೇ ಸರಿ. ಇಲ್ಲದಿದ್ದರೆ ದುಃಖಬವಣೆಯನ್ನು ಅನುಭೋಗಿಸುವ ಸಂದರ್ಭ ನಿನಗೆ ಒದಗುವ ಕಾರಣವೆ ಇರಲಿಲ್ಲ."

ವಿರಾಜ ಸುಮ್ಮನೆ ಪತ್ರ ಬರೆಯುವುದರಲ್ಲಿ ಮಗ್ನಳಾದಳು. ಈ ಎಲ್ಲ ಮಾತುಗಳಿಗೆ ಉತ್ತರವೀಯಕೂಡದೆಂದು ಬಹುಶಃ ಅವಳು ಮನದಲ್ಲಿಯೆ ನಿಶ್ಚಯಿಸಿರಬೇಕು. ಆದರೆ ಅವಳಿಗೂ ಮೌನ ಸಾಧಿಸಲಿಲ್ಲ. ಮುಖ ಹೊರಳಿಸಿ ವಿರಾಜ ಪತಿಯನ್ನು ವಿಚಾರಿಸಿದಳು: "ನಿಮ್ಮ ಈ ಮಾತಿನಿಂದ ನಾನು ಸಂತುಷ್ಟಳಾಗುವೆಯೆಂದು ನೀವು ಬಗೆದಿರಾ?"

"ಯಾವ ಮಾತಿನಿಂದ?"

ವಿರಾಜಳೆಂದಳು: "'ನೀನು ಮಹಾರಾಣಿಯಾಗುತಿದ್ದೆ; ಕೇವಲ ನನ್ನ ಕೈಯಲ್ಲಿ ಬಿದ್ದು ಹೀಗಾದೆ' ಎಂಬ ನಿಮ್ಮ ಮಾತು ಕೇಳಿ ನಾನು ಸಂತುಷ್ಟಗೊಳ್ಳುವೆನೆ? ಹೀಗೆ ಮಾತನಾಡುವವರ ಮುಖದರ್ಶನ ಮಾಡಿಕೊಳ್ಳುವ ಇಚ್ಛೆಯಾದರೂ ನನಗೆ ಉಂಟಾದೀತೆ?"

ವಿರಾಜ ಕಡುಕೋಪಗೊಂಡಿದ್ದಾಳೆಂದು ನೀಲಾಂಬರನಿಗೆ ಖಚಿತವಾಯಿತು. ತನ್ನ ಆ ಮಾತಿನಿಂದ ವಿರಾಜ ಇಷ್ಟು ನೊಂದುಕೊಳ್ಳಬಹುದೆಂದು ಆತನೆಂದೂ ಶಂಕಿಸಿರಲಿಲ್ಲ. ಆದುದರಿಂದ ಮನದಲ್ಲಿಯೆ ಅತ್ಯಂತ ಸಂಕುಚಿತನಾದ; ಕುಂಠಿತನಾದ. ಆದರೆ ಹೆಂಡತಿಯನ್ನು ಹೇಗೆ ಸಂತೈಸುವುದೆಂಬುದು ಅವನಿಗೆ ಹೊಳೆಯಲೆ ಇಲ್ಲ.

ವಿರಾಜಳೆಂದಳು: "ರೂಪವಂತೆ! ರೂಪ! ಕೇಳಿ ಕೇಳಿ ನನ್ನ ಕಿವಿ ಪಟಲ ಹರಿದು ಹೋಯಿತು. ಕೇವಲ ರೂಪದ ಮೇಲೆ ದೃಷ್ಟಿಯಿದ್ದವರು ನನ್ನ ರೂಪದ ಸಂಬಂಧವಾಗಿ ಚರ್ಚಿಸುತ್ತಿರಬಹುದು. ಆದರೆ ನೀವು ನನ್ನ ಪತಿ ದೇವರು. ನೀವೆ ನನ್ನನ್ನು ಇಷ್ಟು ದೊಡ್ಡವಳನ್ನಾಗಿ ಮಾಡಿದಿರಿ. ಹೀಗಿದ್ದೂ ನೀವೂ ಕೇವಲ ನನ್ನ ರೂಪ ಮಾತ್ರ ನೋಡುತ್ತ ಇದ್ದೀರಾ? ನನ್ನಲ್ಲಿ ರೂಪ ಮಾತ್ರವೇ ಎಲ್ಲಕ್ಕೂ ಮಹತ್ವವಾದ ವಸ್ತುವೆ? ನೀವೇಕೆ ಇಂಥ ಮಾತುಗಳನ್ನಾಡುವಿರಿ? ನಾನು ನನ್ನ ರೂಪದ ವ್ಯಾಪಾರ ನಡೆಸಿದ್ದೇನೆಯೆ? ಅಥವಾ ಈ ರೂಪದಿಂದಲೆ ನಿಮ್ಮನ್ನು ಮರೆಯಲೆತ್ನಿಸಿದೆನೆ?"

ಹೆಂಡತಿಯ ಭಾವಭಂಗಿ ನೋಡಿ ನೀಲಾಂಬರ ಗಾಬರಿಯಾದ. ಅತ್ಯಂತ ಜಡಿತ ಕಂಠದಲ್ಲಿ – "ಅಲ್ಲ – ಹಾಗಲ್ಲ ನನ್ನ ಮಾತಿನ ಅರ್ಥ" ಎಂದ.

ಗಂಡನಿಗೆ ಮುಂದೆ ಮಾತನಾಡಗೊಡದೆ ವಿರಾಜ ತನ್ನ ಮಾತನ್ನೆ ಮುಂದುವರಿಸಿದಳು: "ಆ ಅರ್ಥವಿಟ್ಟುಕೊಂಡು ಮಾತನಾಡಿದ್ದೀರಿ ನೀವು.

ಆ ಬಗ್ಗೆಯೆ ನಾನು ನಿಮ್ಮನ್ನು ಅಂದು ಕೇಳಿದ್ದು - 'ಒಂದು ವೇಳೆ ನಾನು ಕುರೂಪಿಯಾದರೂ ನನ್ನನ್ನು ಇದೇ ರೀತಿ ಪ್ರೀತಿಸುವಿರಾ' ಎಂದು. ಆ ಮಾತು ನೆನಪಿದೆಯೆ ನಿಮಗೆ?''

ತಲೆದೂಗುತ್ತ ನೀಲಾಂಬರನು: ''ನೆನಪಿದೆ. ಆದರೆ ಅಂದು ನೀನೆ ಹೇಳಿದ್ದೆ........'' ಎನ್ನುವಷ್ಟರಲ್ಲಿ ವಿರಾಜ ಗಂಡನಿಗೆ ಹೆಚ್ಚು ಮಾತನಾಡ ಬಿಡದೆ ಹೇಳಿದಳು: "ಹೌದು, ನಿಮ್ಮೊಂದಿಗೆ ನನ್ನ ಮದುವೆಯಾಗಿದೆ ಯೆಂದೇ, ನಾನು ಕುರೂಪಿಯಾದರೂ ನೀವು ಖಂಡಿತವಾಗಿ ನನ್ನನ್ನು ಪ್ರೀತಿಸುವಿರೆಂದು ಹೇಳಿದ್ದು ಹೌದು. ನಾನು ಹುಟ್ಟಿದ್ದೂ ಒಳ್ಳೆಯ ಮನೆ ತನದಲ್ಲಿ; ನನ್ನನ್ನು ಮದುವೆ ಮಾಡಿ ಕೊಟ್ಟದ್ದೂ ಒಳ್ಳೆಯ ಮನೆತನಕ್ಕೆ. ಆದರೂ ನನ್ನೆದುರಿನಲ್ಲಿ ಇಂಥ ಮಾತನಾಡಲು ನಿಮ್ಮಂತಹರಿಗೆ ನಾಚಿಕೆ ಗೇಡಲ್ಲವೆ? ಇಂಥ ಹೇಸಿ ಮಾತುಗಳನ್ನು ನನ್ನೆದುರಿನಲ್ಲಿ ನೀವು ಈ ಮೊದಲು ಎಂದೂ ಆಡಿರಲಿಲ್ಲ."

ಮಾತು ಆಡ ಆಡುತ್ತಲೆ ಕ್ರೋಧ ಅಭಿಮಾನಗಳಿಂದ ವಿರಾಜಳ ಕಣ್ಣುಗಳಲ್ಲಿ ನೀರು ತುಂಬಿದವು. ದೀಪದ ಬೆಳಕಿನಲ್ಲಿ ಅವು ಮಿಂಚಿದವು.

ಇದನ್ನು ನೋಡಿ ನೀಲಾಂಬರ ವಿಚಲಿತನಾಗಿ ಎದ್ದು ಹೆಂಡತಿಯ ಬಳಿಸಾರಿ ಅವಳ ಕೈಯನ್ನು ಹಿಡಿದ.

ತನ್ನ ಪತಿಯು ತನ್ನ ಕೈಹಿಡಿದಾಗ ತನ್ನ ಕೋಪವೆಲ್ಲವೂ ಮಾಯ ವಾಗುವುದೆಂದು ಒಮ್ಮೆ ವಿರಾಜಳೆ ಅಂದಿದ್ದಳು. ಅಕಸ್ಮಾತ್ತಾಗಿ ಆ ಮಾತು ನೆನಪಿಗೆ ಬಂದು ನೀಲಾಂಬರನು ತಟ್ಟನೆ ಹೆಂಡತಿಯ ಹತ್ತಿರ ಸರಿದು ಅವಳ ಬಲ ಕೈಯನ್ನು ಹಿಡಿದುಕೊಂಡು ಸುಮ್ಮನೆ ಕುಳಿತ.

ವಿರಾಜ ತನ್ನ ಎಡಗೈಯಿಂದ ಕಂಬನಿ ಒರಸಿಕೊಂಡಳು. ಅಂದು ರಾತ್ರಿ ಅವರಿಬ್ಬರೂ ಬಹಳ ಹೊತ್ತಿನವರೆಗೆ ನಿದ್ದೆ ಮಾಡಲೆ ಇಲ್ಲ. ದಂಪತಿ ಗಳಿಬ್ಬರೂ ಮೌನವಾಗಿಯೆ ಇದ್ದರು. ಅವರಲ್ಲಿ ಯಾರ ಬಾಯಿಯಿಂದಲೂ ಒಂದಕ್ಷರವೂ ಹೊರಬೀಳಲಿಲ್ಲ. ಒಂದು ಸಲ ನೀಲಾಂಬರನು ಒಮ್ಮೆಲೆ ಹೆಂಡತಿಯ ಕಡೆಗೆ ನೋಡಿ ಮೃದುವಾಗಿ – "ಇಂದು ನೀನೇಕೆ ಇಷ್ಟು ರೇಗಿರುವೆ?" ಎಂದು ಕೇಳಿದ.

''ನೀವೇಕೆ ಇಂಥ ಮಾತುಗಳನ್ನಾಡುವಿರಿ?''

“ ನಾನೇನು ನಿನಗೆ ಅಂಥ ಕೆಟ್ಟ ಮಾತುಗಳನ್ನಾಡಿಲ್ಲವಲ್ಲ ? ” ಎಂದ ನೀಲಾಂಬರ.

ವಿರಾಜ ಮತ್ತೆ ಗೊಂದಲಗೆಟ್ಟಳು. ಧೃತಿಗೆಟ್ಟು : “ ಕೆಟ್ಟ ಮಾತನ್ನಿ ಆಡಿಲ್ಲವೆಂದು ನೀವು ಸಮರ್ಥಿಸಿಕೊಳ್ಳುವಿರಲ್ಲ. ನೀವಾಡಿದ ಮಾತು ಅತಿ ಹೀನವಾದ ಮಾತು. ಆದುದರಿಂದಲೆ ಆ ನೀಚ ದಾಸಿಯನ್ನು........ ” ವಿರಾಜ ಆಡ ಆಡುತ್ತಲೆ ನಿಂತುಬಿಟ್ಟಳು.

ಕ್ಷಣ ಹೊತ್ತು ಮೌನವಾಗಿ ಉಳಿದು ನೀಲಾಂಬರನೆಂದ : “ ಕೇವಲ ಈ ಅಪರಾಧಕ್ಕಾಗಿಯೆ ನೀನು ಸುಂದರಿಯನ್ನು ಹೊರಗಟ್ಟಿದೆಯಾ ? ”

‘ ಹೂಂ.’ ಎಂದು ವಿರಾಜ ಸುಮ್ಮನುಳಿದಳು.

ಬಳಿಕ ಅವಳೆ ಮಾತಿಗೆ ಮೊದಲಿಸಿದಳು : “ ನೋಡಿ, ನೀವು ನನ್ನೊಂದಿಗೆ ವಾದ ವಿವಾದ ಬೆಳಸಬೇಡಿ. ನಾನೇನು ಮಗುವಲ್ಲ ; ಒಳಿತು ಕೆಡಕನ್ನು ಅರಿತುಕೊಳ್ಳುವಷ್ಟು ಬುದ್ಧಿ ನನಗೂ ಇದೆ. ಅಂಥ ಮಹಾಪರಾಧ ಮಾಡಿದಳೆಂದೆ ಹೊರಗಟ್ಟಿದೆ. ಏಕೆ ಹೊರಗಟ್ಟಿದೆಯೆಂಬ ಸರ್ವ ವೃತ್ತಾಂತವನ್ನು ಗಂಡಸರಾದ ನೀವು ಕೇಳದೆ ಹೋದರೆ ನಿಮಗದ ರಿಂದ ಯಾವ ಹಾನಿಯೂ ಇಲ್ಲ. ”

“ ಇಲ್ಲ, ಆ ವೃತ್ತಾಂತ ಕೇಳುವ ಇಚ್ಛೆ ನನಗಿಲ್ಲ ” ಎಂದಂದು ನೀಲಾಂಬರ ನೀಳ್ ಉಸಿರೊಂದೆಳೆದ. ಬಳಿಕ ಮೆಲ್ಲನೆ ಪಕಕ್ಕೆ ಹೊರಳಿ ನಿದ್ದೆ ಹೋದ.

ತಮ್ಮ ಪೀತಾಂಬರನು ಪಾಲಾದ ನಾಲ್ಕಾರು ದಿವಸಗಳಲ್ಲಿಯೆ ಮನೆಯ ನಡುವೆ ಚಿಕ್ಕ ಕಂಬಗಳನ್ನು ನೆಟ್ಟು, ಬಿದಿರು ಮೆಳೆಯ ತಟ್ಟೆ ಹಾಕಿಸಿ ತನ್ನ ಮನೆ ಬೇರೆ ಮಾಡಿಕೊಂಡ ; ಅಲ್ಲದೆ ತೆಂಕಣದಲ್ಲಿ ಹೊಸ ಬಾಗಿಲೊಂದು ಹಾಕಿಸಿ ಮೊಗಸಾಲೆಯೊಂದನ್ನು ಮಾಡಿಸಿದ. ಅನಂತರ ಮನೆ ಗುಡಿಸಿ ಸಾರಿಸಿ ಸಜ್ಜುಮಾಡಿದ.

ಈ ರೀತಿ ತನ್ನ ದಿನಗಳನ್ನು ಸುಖದಿಂದ ಕಳೆಯತೊಡಗಿದ. ಪೀತಾಂಬರ ಮೊದಲಿನಿಂದಲೂ ಅಣ್ಣನೊಂದಿಗೆ ಹೆಚ್ಚು ಮಾತನಾಡು ತ್ತಿರಲಿಲ್ಲ. ಇತ್ತೀಚೆ ಅಣ್ಣನೊಂದಿಗಿದ್ದ ಎಲ್ಲ ಸಂಬಂಧವನ್ನು ಕಳೆದು ಕೊಂಡುಬಿಟ್ಟಿದ್ದ. ಮನೆಯಲ್ಲಿ ವಿರಾಜ ದಿನವೆಲ್ಲ ಏಕಾಂಗಿನಿಯಾಗಿಯೆ

ಕಳೆಯಬೇಕಾಗುತಿತ್ತು. ಸುಂದರಿಯನ್ನು ಹೊರಗಟ್ಟಿದ ಬಳಿಕ ಮನೆಗೆಲಸಗಳೆಲ್ಲವನ್ನು ಅವಳೊಬ್ಬಳೆ ನಿರ್ವಹಿಸಬೇಕಾಯಿತು. ಜನರ ಅಪಹಾಸ್ಯಕ್ಕಂಜಿ, ಆಳು - ಹೋಳುಗಳು ಮಾಡುವಂತಹ ಕೆಲಸವನ್ನು, ಮುಚ್ಚುಮರೆಯಿಂದ ಮಾಡುತ್ತಿದ್ದಳು. ಆದುದರಿಂದ ರಾತ್ರಿ ಬಹಳ ಹೊತ್ತಿನವರೆಗೆ ಅವಳು ಜಾಗರಣೆ ಮಾಡಬೇಕಾಗುತಿತ್ತು.

ಒಂದಿನದ ಮಾತು. ಅಂದು ವಿರಾಜ ತನ್ನ ನಿತ್ಯ ಕೆಲಸದಲ್ಲಿ ತೊಡಗಿಕೊಂಡಿದ್ದಳು. ಅಕಸ್ಮಾತ್ತಾಗಿ ಮನೆಯ ಆ ಭಾಗದಿಂದ ತಟ್ಟಿಯ ಸಂದಿಯೊಳಗಿಂದ ಕೋಮಲ ದನಿಯೊಂದು ಕೇಳಿಬಂತು – "ಅಕ್ಕಾ, ರಾತ್ರಿ ಬಹಳಾಯಿತು!"

ಚಕಿತಳಾಗಿ ವಿರಾಜ ಮುಖ ಮೇಲೆತ್ತಿದಳು. ಮತ್ತೆ ಅದೆ ಕಂಠ ಮತ್ತಿಷ್ಟು ಕೋಮಲವಾಗಿ – "ಅಕ್ಕಾ, ನಾನು ಮೋಹಿನಿ" ಎಂದಿತು.

ಅಚ್ಚರಿಗೊಂಡು – "ಯಾರು? ತಂಗಿಯೇನು? ಇಷ್ಟು ರಾತ್ರಿಯಲ್ಲಿ ಇದೇನೆ?" ಎಂದಳು ವಿರಾಜ.

"ಹೌದಕ್ಕ - ನಾನೇ, ಸ್ವಲ್ಪ ಸಮೀಪ ಬನ್ನಿ." ವಿರಾಜ ತಟ್ಟಿಯ ಬಳಿ ಸರಿದಳು. ಆಗ ನೆಗೆಣ್ಣಿ ಮೆತ್ತಗೆ ಕೇಳಿದಳು: "ಏನಕ್ಕ, ಭಾವಯ್ಯನವರು ಮಲಗಿದ್ದಾರೆಯೆ?"

"ಹಾಂ," ಎಂದಳು ವಿರಾಜ.

"ಅಕ್ಕಾ, ನಿನ್ನೊಂದಿಗೆ ಒಂದು ವಿಷಯ ಹೇಳುವುದಿದೆ. ಆದರೆ ಹೇಳುವ ಸಾಹಸವಾಗಲೊಲ್ಲದು" ಎಂದು ಮೋಹಿನಿ ಸುಮ್ಮನಾದಳು.

ಮೋಹಿನಿಯ ಕಂಠ ದನಿಯಾಲಿಸಿ ನೆಗೆಣ್ಣಿ ಅಳುತಿದ್ದಾಳೆಂದು ವಿರಾಜಳು ಅರಿತುಕೊಂಡಳು. ಚಿಂತಿತಳಾಗಿ "ಏನಾಯಿತು ತಂಗಿ?" ಎಂದು ವಿಚಾರಿಸಿದಳು.

ನೆಗೆಣ್ಣಿಗೆ ಆಗಲೆ ಉತ್ತರವೀಯಲಾಗಲಿಲ್ಲ. ಅವಳು ಸೆರಗಿನಿಂದ ಕಣ್ಣೊರಸಿಕೊಂಡು ತನ್ನನ್ನು ಸಾವರಿಸಿಕೊಳ್ಳತೊಡಗಿದಳು.

ಉದ್ವಿಗ್ನಳಾಗಿ ವಿರಾಜ "ಏನಾಯಿತು ತಂಗೀ?" ಎಂದು ಪುನಃ ಕೇಳಿದಳು.

ಆಗ ಮೋಹಿನಿ ಅಳು ದನಿಯಲ್ಲಿ ಹೇಳತೊಡಗಿದಳು: "ಭಾವಯ್ಯ ನವರ ಮೇಲೆ ದಾವೆ ಹೂಡಿದ್ದಾರಂತೆ. ನಾಳೆಯೆ ಸಮನ್ಸು ಹೊರಡುವು ದೆಂದೂ ಕೇಳಿದ್ದೇನೆ. ಇನ್ನೇನು ಗತಿ ಅಕ್ಕಾ?"

ವಿರಾಜ ಹೆದರಿದಳೇನೊ ನಿಜ. ಆದರೆ ತನ್ನ ಭಾವವನ್ನು ಹತ್ತಿಕ್ಕಿ "ಸಮನ್ಸ್ ಹೊರಟರೆ ಏಕೆ ಹೆದರಬೇಕು ತಂಗೀ?"

"ಹೆದರುವ ಆವಶ್ಯಕತೆಯಿಲ್ಲವೆ?"

"ಊಹೂಂ – ಆದರೆ ದಾವೆ ಹೂಡಿದವರಾರು?" ಎಂದು ವಿಚಾರಿ ಸಿದಳು ವಿರಾಜ.

"ಭೋಲಾನಾಥ ಮುಖರ್ಜಿಯುವರು" ಎಂದಳು ಮೋಹಿನಿ. ವಿರಾಜ ಕ್ಷಣ ಹೊತ್ತು ಸ್ತಂಭಿತಳಾಗಿ ನಿಂತು "ಸರಿ, ಈಗ ಅರ್ಥವಾಯಿತು. ಅದೇನಿಲ್ಲ. ಇವರಿಗೆ ಮುಖರ್ಜಿ ಮಹಾಶಯರು ಸಾಲ ಕೊಟ್ಟಿದ್ದರು. ಬಹುಶಃ ಅದಕ್ಕಾಗಿ ದಾವೆ ಹೂಡಿರಬಹುದು. ಈ ಬಗ್ಗೆ ಅಂಜುವ ಕಾರಣವೇನೂ ಇಲ್ಲ ತಂಗೀ," ಎಂದು ಸಮಾಧಾನಪಡಿಸಿದಳು.

ತರುವಾಯ ನೆಗೆಣ್ಣಿಯರು ಮೌನವಾಗಿ ಉಳಿದರು. ಸ್ವಲ್ಪಹೊತ್ತು ತಡೆದು ಮೋಹಿನಿ ಹೇಳಿದಳು: "ಅಕ್ಕ ನಾನೆಂದಿಗೂ ನಿನ್ನೊಡನೆ ಹೆಚ್ಚು ಮಾತನಾಡಿದವಳಲ್ಲ. ಅಲ್ಲದೆ ಆ ಯೋಗ್ಯತೆಯೂ ನನಗಿಲ್ಲ. ಆದರೆ ಇಂದು ಈ ತಂಗಿಯ ಮಾತೊಂದು ಕೇಳುವೆಯಾ?"

ಮೋಹಿನಿಯ ಕಂಠ ದನಿಯಿಂದ ವಿರಾಜಳ ಹೃದಯ ಕರಗಿತು. ಆವಳು ಮತ್ತಿಷ್ಟು ಕೋಮಲವಾಗಿ–"ಏಕೆ ಕೇಳಲಾರೆ ತಂಗಿ?" ಎಂದಳು.

"ಹಾಗಾದರೆ ತುಸು ನಿನ್ನ ಕೈಯೊಡ್ಡು."

ವಿರಾಜ ಕೈಮುಂದೆ ಮಾಡಿದೊಡನೆಯೆ ಸುಕೋಮಲ ಚಿಕ್ಕ ಕೈ ಯೊಂದು ತಟ್ಟಿಯ ಸಂದಿನಿಂದ ಕಾಣಿಸಿತು. ಮೋಹಿನಿಯು ವಿರಾಜಳ ಕೈಯಲ್ಲಿ ಚಿನ್ನದ ಆಭರಣವೊಂದನ್ನು ಇಟ್ಟಳು.

ಕೌತುಕಗೊಂಡು "ಇದನ್ನು ಕೊಂಡು ನಾನೇನು ಮಾಡುವುದು ತಂಗೀ?" ಎಂದಳು ವಿರಾಜ.

ಮೋಹಿನಿ ತನ್ನ ದನಿಯನ್ನು ಮತ್ತಿಷ್ಟು ಮೃದುಗೊಳಿಸಿ "ಇದನ್ನು ಅಡವಿಟ್ಟು, ಇಲ್ಲವೆ ಮಾರಿ ಭಾವನವರ ಸಾಲ ಬಗೆಹರಿಸಲು ಅಕ್ಕ" ಎಂದಳು.

ನೆಗೆಣ್ಣಿಯಿಂದ ಈ ತೆರೆನ ಸಹಾನುಭೂತಿಯ ಆಸೆಯನ್ನು ವಿರಾಜ ಳೆಂದಿಗೂ ತಳೆದಿರಲಿಲ್ಲ. ಆದುದರಿಂದ ನೆಗೆಣ್ಣಿಯು ತಾನಾಗಿಯೆ ಇಷ್ಟೊಂದು ಸಹಾನುಭೂತಿ ತೋರಿದಾಗ ವಿರಾಜ ಕ್ಷಣಹೊತ್ತು ದಂಗುಬಡಿದಂತಾದಳು. ಅವಳ ಬಾಯಿಯಿಂದ ಮಾತೆ ಹೊರಡಲಿಲ್ಲ. "ಅಕ್ಕ, ನಾನಿನ್ನು ಹೋಗುವೆ" ಎಂದವಳೆ ಅವಳು ಮರಳಿ ಹೋಗುತ್ತಿರುವಾಗಲೆ ವಿರಾಜ ಕೂಗಿ ಕರೆದು "ಈಗಲೆ ಹೋಗಬೇಡ ತಂಗಿ, ನನ್ನ ಮಾತೊಂದಿಷ್ಟು ಕೇಳಿ ಹೋಗು" ಎಂದಳು.

ಮೋಹಿನಿ ಮರಳಿ ಬಂದು "ಏನಕ್ಕಾ?" ಎಂದಳು.

ವಿರಾಜ ತಟ್ಟೆಯ ಸಂದಿನಿಂದ ತಟ್ಟನೆ ಆ ಆಭರಣವನ್ನು ಹಿಂದಕ್ಕೆಸೆದು "ಛೀ ಛೀ, ಹೀಗೆಲ್ಲ ಮಾಡಕೂಡದು ತಂಗೀ," ಎಂದಳು.

ಮೋಹಿನಿ ಅದನ್ನೆತ್ತಿಕೊಳ್ಳುತ್ತ ಕೋಪದ ದನಿಯಲ್ಲಿ "ಅದೇಕೆ ಕೂಡದು?" ಎಂದಳು.

ವಿರಾಜಳೆಂದಳು: "ಈ ವಿಷಯ ನಿನ್ನ ಯಜಮಾನರಿಗೆ ತಿಳಿಯಿತೆಂದರೆ ಅವರೇನೆಂದಾರು?"

"ಆದರೆ ಅವರಿಗೆ ಇದು ಗೊತ್ತಾದರೆ ತಾನೆ?"

"ಇಂದೆ ಗೊತ್ತಾಗಲಿಕ್ಕಿಲ್ಲ. ಆದರೆ ನಾಳೆಯಾದರೂ ಗೊತ್ತಾಗದೆ ಹೋಗದು. ಆಗ ಏನು ಗತಿ?"

ಮೋಹಿನಿ ಎಂದಳು: "ಈ ವಿಷಯ ಅವರಿಗೆಂದಿಗೂ ಗೊತ್ತಾಗದಕ್ಕ! ಕಳೆದ ವರುಷ ನನ್ನ ಅಮ್ಮ ಮೃತ್ಯುಶಯ್ಯೆಯಲ್ಲಿ ಮಲಗಿದಾಗ ಇದನ್ನು ಮುಚ್ಚಿ ನನಗೆ ಕೊಟ್ಟುಹೋದರು. ಈವರೆಗೂ ಅದನ್ನು ನಾನು ತೊಟ್ಟುಕೊಂಡೂ ಇಲ್ಲ, ಹೊರಗೂ ತೆಗೆದಿಲ್ಲ. ನಾ ನಿನ್ನ ಕಾಲಿಗೆ ಬೀಳುವೆ ಅಕ್ಕ, ದಯವಿಟ್ಟು ಇದನ್ನು ತೆಗೆದುಕೊಳ್ಳು."

ನೆಗೆಣ್ಣಿಯ ಕಳಕಳಿಯ ಬಿನ್ನಹವನ್ನು ಕೇಳಿದ ಕೂಡಲೆ ವಿರಾಜಳ ಕಣ್ಣುಗಳಿಂದ ಕಂಬನಿ ಧಾರೆಗಟ್ಟಿ ಹರಿಯತೊಡಗಿತು. ನಿಸ್ತಬ್ಧಳಾಗಿ ಅವಳು ಮನದಲ್ಲಿಯೆ ವಿಚಾರಿಸತೊಡಗಿದಳು. "ನಮ್ಮಿಬ್ಬರನ್ನೂ ಒಂದೆ ಕುಟುಂಬಕ್ಕೆ ಮದುವೆ ಮಾಡಿ ಕೊಟ್ಟಿದೆ. ಆದುದರಿಂದಲೆ ನಮ್ಮಲ್ಲಿ ಈ

ಆತ್ಮೀಯತೆ ಉಂಟಾಗಿದೆ. ಇಲ್ಲದಿದ್ದರೆ ನಮ್ಮಿಬ್ಬರಲ್ಲಿ ಯಾವ ಸಂಪರ್ಕವೂ ಇಲ್ಲ, ಸಂಬಂಧವೂ ಇಲ್ಲ. ಆದರೂ ನಾವು ಪರಸ್ಪರ ವಿಷಯವಾಗಿ ಸಹಾನುಭೂತಿ ತೋರುತ್ತೇವೆ, ಸ್ವಾರ್ಥತ್ಯಾಗ ಮಾಡುತ್ತೇವೆ. ಆದರೆ ಇದೆ ಕುಟುಂಬದಲ್ಲಿ ವಿರುದ್ಧಭಾವದ ಇಬ್ಬರು ಪುರುಷರಿದ್ದಾರೆ. ಅವರಿಬ್ಬರೂ ಒಡಹುಟ್ಟಿದವರು. ಆದರೆ ಅವರಲ್ಲಿ ಪರಸ್ಪರರ ವಿಷಯದಲ್ಲಿ ಎಂಥ ಸಹಾನುಭೂತಿಯಿದೆ?" ಬಳಿಕ ಕೈಯಿಂದ ತೊಡೆದು ವಿರಾಜಳೆಂದಳು: "ತಂಗಿ, ಈ ನಿನ್ನ ಉಪಕಾರವನ್ನು ಸಾಯುವವರೆಗೂ ನಾನು ಮರೆಯಲಾರೆ! ಆದರೂ ನಾನು ಇದನ್ನು ಸ್ವೀಕರಿಸಲಾರೆ. ಅಲ್ಲದೆ ಗಂಡನ ಮರೆಯಲ್ಲಿ ಯಾವ ಕೆಲಸ ಮಾಡುವುದೂ ಎಂಥ ಸ್ತ್ರೀಯಳಿಗೂ ಭೂಷಣವಲ್ಲ. ಆದುದರಿಂದ ತಂಗೀ ಈ ರೀತಿ ನಿನ್ನ ಆಭರಣ ತೆಗೆದುಕೊಳ್ಳುವುದರಿಂದ ನಾವಿಬ್ಬರೂ ಪಾಪಕ್ಕೆ ಗುರಿಯಾಗುವೆವು."

ಮೋಹಿನಿಯೆಂದಳು: "ಅಕ್ಕ, ನಿನಗೆ ಎಲ್ಲ ವಿಷಯ ತಿಳಿದಿಲ್ಲ. ಆದುದರಿಂದಲೆ ನೀನು ಹೀಗೆ ಆಡುತ್ತಿರುವೆ. ಆದರೆ ನನಗೂ ಧರ್ಮಾಧರ್ಮ ವಿದೆಯೊ ಇಲ್ಲವೊ? ಯಮರಾಜನೆದುರು ನನ್ನ ಪಾಪ-ಪುಣ್ಯಗಳ ಲೆಕ್ಕ ಒಪ್ಪಿಸುವಾಗ ನಾನೇನೆಂತು ಉತ್ತರವೀಯಲಿ?"

ಮತ್ತೊಂದು ಬಾರಿ ಕಣ್ಣೊರಸಿ ವಿರಾಜ ತನ್ನನ್ನು ಸಾವರಿಸಿಕೊಂಡು ನುಡಿದಳು: "ತಂಗೀ, ನಾನೆಲ್ಲರನ್ನೂ ಚೆನ್ನಾಗಿ ಅರಿತಿರುವೆ. ನಿನ್ನನ್ನು ಮಾತ್ರ ಈವರೆಗೂ ಅರಿತಿರಲಿಲ್ಲ. ಯಮರಾಜನೆದುರು ನೀನೇನು ಕೈಫಿಯತ್ತು ಕೊಡುವ ಅಗತ್ಯ ಬೀಳುವುದಿಲ್ಲ! ನೀನಾಡಿದ ಮಾತುಗಳನ್ನೆಲ್ಲ ಸ್ವತಃ ಅಂತರ್ಯಾಮಿಯೆ ಬರೆದಿಟ್ಟುಕೊಂಡಿದ್ದಾನೆ. ಈಗ ರಾತ್ರಿ ಬಹಳವಾಯಿತು. ತಂಗೀ, ಹೋಗಿ ಮಲಗು!"

ಹೀಗೆಂದು ಈ ಮಾತಿಗೆ ನೆಗೆಣ್ಣಿ ಉತ್ತರ ಹೇಳುವುದಕ್ಕೆ ಅವಕಾಶ ವೀಯದೆ ದ್ರುತಗತಿಯಿಂದ ಹೊರಟು ಹೋದಳು. ಆದರೆ ಅವಳು ಕೋಣೆಯನ್ನು ಹೋಗದೆ ಕಗ್ಗತ್ತಲಲ್ಲಿ, ಅಂಗಳದ ಒಂದು ಮೂಲೆಯಲ್ಲಿ ತನ್ನ ಸೆರಗನ್ನು ಹಾಸಿ ಅಲ್ಲಿಯೆ ಒರಗಿಕೊಂಡಳು. ದಾವೆ-ಫಿರ್ಯಾದಿನ ವಿಷಯವಾಗಿ ಅವಳಿಗಾವ ಚಿಂತೆಯೂ ಉಂಟಾಗಿರಲಿಲ್ಲ. ಆದರೆ ಮಿತ ಭಾಷಿಣಿಯೂ ಬಡಕಲು ಶರೀರದವಳೂ ಆದ ನೆಗೆಣ್ಣಿಯ ಮಾತನ್ನು ಯೋಚಿಸಿದಂತೆಲ್ಲ

ಅವಳ ಕಣ್ಣುಗಳಿಂದ ನೀರಿನ ಕೋಡಿಯೆ ಹರಿಯಿತು. ಇಂದು ಅವಳ ಹೃದಯಕ್ಕೆ ಒಂದೆ ವ್ಯಥೆ—'ಇಷ್ಟುದಿನ ಇಷ್ಟೊಂದು ಸನಿಹದಲ್ಲಿಟ್ಟು ಕೊಂಡೂ ನಾನು ಅವಳನ್ನು ಗುರುತಿಸದೆ ಹೋದೆನಲ್ಲ—ಅವಳನ್ನು ಗುರುತಿಸಲು ನಾನೆಂದಿಗೂ ಯಾವ ಯತ್ನವನ್ನೂ ಮಾಡಲಿಲ್ಲವಲ್ಲ! ಅಪರೋಕ್ಷದಲ್ಲಿ ಅವಳ ನಿಂದೆಯನ್ನಾಗಲಿ, ಪರೋಕ್ಷದಲ್ಲಿ ಅವಳ ಸ್ತುತಿಯನ್ನಾಗಲಿ ನಾನೆಂದಿಗೂ ಮಾಡಿಲ್ಲವೆಂಬುದು ನಿಜ.' ಅತ್ಯಂತ ಪ್ರಖರವಾದ ವಿದ್ಯುತ್ತಿನ ಬೆಳಕು ಕ್ಷಣಕಾಲ ಕತ್ತಲನ್ನು ಭೇದಿಸುವಂತೆ ಇಂದು ನೆಗೆಣ್ಣಿಯು ಅಕ್ಕನ ಅಂತರಾಳವನ್ನು ಭೇದಿಸಿ ಬೆಳಗುವಂತೆ ಮಾಡಿದಳು. ಯೋಚನೆಯಲ್ಲಿಯೆ ಯಾವಾಗ ನಿದ್ದೆಹೋದಳೊ ವಿರಾಜಳಿಗೆ ಗೊತ್ತಾಗಲೆ ಇಲ್ಲ. ಒಮ್ಮೆ ಕರ ಸ್ಪರ್ಶನೆಯಿಂದ ಚಕಿತಳಾಗಿ ಎದ್ದು ಕುಳಿತಳು. ತಲೆಯ ಬಳಿ ನೀಲಾಂಬರ ಕುಳಿತುದನ್ನು ಕಂಡಳು.

ನೀಲಾಂಬರ ಸಂಕ್ಷೇಪವಾಗಿ ನುಡಿದ; "ಒಳಗೆ ನಡೆ ವಿರಾಜ, ರಾತ್ರಿ ಬಹುಶಃ ಮುಗಿದಿರಬಹುದು."

ವಿರಾಜ ಅವಾಕ್ಕಾದಳು. ಗಂಡನ ದೇಹಕ್ಕೆ ಆನಿಕೊಂಡು ಒಳಗೆ ಬಂದು ನಿರ್ಜೀವಳಂತೆ ಬಿದ್ದುಕೊಂಡಳು.

## ೬

ಒಂದು ವರ್ಷ ಉರುಳಿಹೋಯಿತು. ಆ ವರುಷ ರೂಪಾಯಿಯಲ್ಲಿ ಎರಡಾಣೆ ಬೆಳೆಯೂ ಬರಲಿಲ್ಲ. ನೀಲಾಂಬರನ ಮನೆಯ ವೆಚ್ಚವೆಲ್ಲವೂ ಹೊಲದ ಬೆಳೆಯಿಂದಲೆ ಸಾಗಬೇಕು. ಆದರೆ ಅವನ ಹೊಲಗಳಲ್ಲಿ ಬಹು ಭಾಗ ಸನಿಹದ ಹಳ್ಳಿಯ ಮುಖರ್ಜಿಮಹಾಶಯ ಕೊಂಡುಬಿಟ್ಟಿದ್ದ. ಇರುವ ಮನೆಯೂ ಸಹ ಅಡವು ಹೋಗಿತ್ತು. ಪೀತಾಂಬರ ಕಾಗದ ಪತ್ರವನ್ನು ಗುಪ್ತವಾಗಿ ತನ್ನ ಹೆಸರಿಗೆ ಬದಲಿಸಿದ ವರ್ತಮಾನವೂ ಪ್ರಕಟವಾಗಿತ್ತು. ನೀಲಾಂಬರನ ಹೂಡುವ ಎತ್ತೊಂದು ಸತ್ತುಹೋಯಿತು. ಇತ್ತ ಕೆರೆಯೂ ಒಣಗಿ ಹೋಯಿತು. ವಿರಾಜ ಯಾವ ದಿಕ್ಕಿನೆಡೆ ನೋಡಿದರೂ ಅವಳಿಗೆ ನಿರಾಸೆಯೆ ಎದುರುಗೊಳ್ಳುತಿತ್ತು. ದೇಹದ ಯಾವುದೆ ಭಾಗ ಬಹಳ

ಹೊತ್ತಿನವರೆಗೆ ಬಂಧಿಸಲ್ಪಟ್ಟರೆ ಆ ಭಾಗದಲ್ಲಿ ಅವ್ಯಕ್ತವಾದ ಅಸಹನೀಯ ಪೀಡೆಯೊಂದು ಉತ್ಪನ್ನವಾಗಿ ಇಡಿಯ ದೇಹವೆ ಶಕ್ತಿಗುಂದಿ ಶಿಥಿಲವಾಗುವುದು. ಹಾಗೆಯೆ ವಿರಾಜಳ ಸಾಂಸಾರಿಕ ವಿಷಯದಲ್ಲೂ ಕ್ರಮಶಃ ಶಿಥಿಲತೆ ಉಂಟಾಗ ತೊಡಗಿತು. ಮೊದಮೊದಲು ಅವಳು ನಗುತ್ತ ಕೆಲೆಯುತ್ತ ಇರುತ್ತಿದ್ದಳು. ಮಾತುಮಾತಿಗೆ ಬುದ್ಧಿ ಕೌಶಲ್ಯದೊಂದಿಗೆ ವಿನೋದವನ್ನು ಬೆರೆಸಿ ಎಲ್ಲರನ್ನೂ ನಗಿಸುತಿದ್ದಳು. ಆದರೆ ಇತ್ತೀಚೆ ಮನೆಯೆ ನಿರ್ಜನವಾದುದರಿಂದ ಅವಳ ಅಲ್ಪಸ್ವಲ್ಪ ಮಾತೂ ನಿಂತು ಹೋಯಿತು. ಅಲ್ಲದೆ ನೆರೆಹೊರೆಯವರು ಬಂದು ಕ್ಷೇಮ ಸಮಾಚಾರ ಕೇಳಿದಾಗ ಅವಳು ಮನದಲ್ಲಿಯೆ ಅಸಂತುಷ್ಟಳಾಗುತಿದ್ದಳು.

ವಿರಾಜ ಅತ್ಯಂತ ಅಭಿಮಾನಿ. ನೆರೆಹೊರೆಯರಾರೆ ಆಗಲಿ ತನ್ನ ಮನಸ್ಸಿಗೆ ಪ್ರತಿಕೂಲವಾಗಿ ಮಾತನಾಡಿದರೆ ಅವಳು ಅವರ ವಿರೋಧ ಕಟ್ಟಿಕೊಳ್ಳದಿರುತಿದ್ದಿಲ್ಲ. ಮನೆಯ ಯಾವ ಕೆಲಸದಲ್ಲಿಯೂ ಅವಳಿಗೆ ಕೊಂಚವೂ ಉತ್ಸಾಹವಿಲ್ಲವೆಂದು ಅವಳ ಕೆಲಸದ ಕಡೆಗೆ ನೋಡುವುದರಿಂದಲೆ ಕಂಡುಕೊಳ್ಳಬಹುದಿತ್ತು. ಇತ್ತೀಚೆ ಅವಳು ಮಲಗುವ ಕೋಣೆಯನ್ನೂ ಸಹ ಅಷ್ಟೊಂದು ಚೊಕ್ಕಾಗಿಡುತ್ತಿರಲಿಲ್ಲ. ಮಂಚದ ಮೇಲಿನ ಹಾಸಿಗೆ ಮಾಸಿರುತಿತ್ತು, ಹಾಗೂ ಅಸ್ತವ್ಯಸ್ತವಾಗಿ ಬಿದ್ದಿರುತಿತ್ತು. ತಂತಿಯ ಮೇಲಿರುವ ಕೊಳಕು ಬಟ್ಟೆಗಳನ್ನೆಲ್ಲ ಬೇರ್ಪಡಿಸಿ ಒಗೆದ ಬಟ್ಟೆಗಳನ್ನು ವ್ಯವಸ್ಥಿತವಾಗಿಯೂ ಇಡುತಿರಲಿಲ್ಲ. ಕೋಣೆಯಲ್ಲಿಯ ವಸ್ತುಗಳೆಲ್ಲವೂ ಧೂಳಿನಲ್ಲಿ ಮಲಿನವಾಗಿ ಚೆಲ್ಲಾಪಿಲ್ಲಿಯಾಗಿ ಬಿದ್ದಿರುತಿದ್ದವು. ಕೋಣೆ ಉಡುಸಿದರೂ ಸಹ ಕಸ-ಕಡ್ಡಿಯನ್ನು ಬಹುಶಃ ಮೂಲೆಯಲ್ಲಿಯೆ ಒಟ್ಟಿರುತಿದ್ದಳು. ಅದನ್ನು ಹೊರಚೆಲ್ಲಲೂ ಅವಳಿಗೆ ಶಕ್ತಿಯಿರಲಿಲ್ಲವೊ ಏನೊ! ಹೀಗೆಯೆ ದಿನಗಳು ಉರುಳುತಿದ್ದವು. ಈ ನಡುವೆ ನೀಲಾಂಬರನು ಹರಿಮತಿಯನ್ನು ಕರೆದುಕೊಂಡು ಬರಲು ಎರಡಾವರ್ತಿ ಪ್ರಯತ್ನಿಸಿದ್ದ. ಆದರೆ ಅವಳ ಮನೆಯವರು ಕಳುಹಿಸಿರಲಿಲ್ಲ. ಹದಿನೈದು ದಿನಗಳ ಹಿಂದೆ ಒಂದು ಪತ್ರವನ್ನೂ ಬರೆದಿದ್ದ. ಆದರೆ ಹರಿಮತಿಯ ಮಾವ ಅದಕ್ಕೆ ಉತ್ತರ ನೀಯುವಷ್ಟೂ ವಿನೀತವಾಗಲಿಲ್ಲ. ಮೇಲಾಗಿ ಈ ವಿಷಯವಾಗಿ ವಿರಾಜಳೊಂದಿಗೆ ಚಕಾರವೆತ್ತಲೂ ನೀಲಾಂಬರನಿಂದ ಸಾಧ್ಯವಿಲ್ಲ. ಹರಿಮತಿಯ

ಹೆಸರೆತ್ತಿದರೂ ಸಾಕು, ಅವಳು ಉರಿದೇಳುತಿದ್ದಳು. ಅವಳೆ ಪುಟ್ಟಿಯ ಪಾಲನೆ-ಪೋಷಣೆ ಮಾಡಿದ್ದಾಳೆ; ತಾಯಿಯಂತೆ ಪ್ರೀತಿಸಿದ್ದಾಳೆ. ಆದರೂ ಇತ್ತೀಚೆ ಅವಳ ಸಂಪರ್ಕವೂ ವಿರಾಜಳಿಗೆ ವಿಷರೂಪವಾಗಿತ್ತು!

ಅಂದು ನಸುಕಿನಲ್ಲಿಯೆ ನೀಲಾಂಬರನು ಅಂಚೆಕಟ್ಟೆಗೆ ಹೋಗಿದ್ದ. ಮರಳಿ ಬಂದು ಖಿನ್ನವದನದಿಂದ ಮನೆಯನ್ನು ಪ್ರವೇಶಿಸಿ: "ಪುಟ್ಟಿಯು ಪಾವ ನನ್ನ ಪತ್ರಕ್ಕೆ ಉತ್ತರವನ್ನೂ ಬರೆಯಲಿಲ್ಲ. ಬಹುಶಃ ಈ ಸಲವೂ ಪೂಜಾ ದಿನಗಳಲ್ಲಿ ತಂಗಿಯ ಮುಖ ಕಾಣುವ ಸುಯೋಗವಿದ್ದಂತಿಲ್ಲ" ಎಂದ.

ಆಗ ವಿರಾಜ ಯಾವುದೊ ಕೆಲಸದಲ್ಲಿ ನಿರತಳಾಗಿದ್ದಳು ಕೆಲಸ ಮಾಡಮಾಡುತ್ತಲೆ ಒಂದಾವರ್ತಿ ಮುಖ ಮೇಲೆತ್ತಿದಳು. ಏನೊ ಹೇಳಬೇಕೆಂದಿತ್ತು ಅವಳ ಮನಸ್ಸು. ಆದರೆ ಏನೂ ಹೇಳದೆ ಅಲ್ಲಿಂದ ಎದ್ದು ಹೋದಳು.

ಅಂದು ಮಧ್ಯಾಹ್ನ ಊಟ ಮಾಡುವಾಗ ನೀಲಾಂಬರ ಮೆಲ್ಲಗೆ ಹೇಳಿದ: "ಅವಳ ಹೆಸರೆತ್ತಿದರೂ ನೀನು ಕೆರಳುವೆ! ನಿಜವಾಗಿ ಅದಕ್ಕೆ ಯಾವ ಕಾರಣವೂ ಇಲ್ಲ. ಅವಳೇನಾದರೂ ಅಪರಾಧ ಮಾಡಿದ್ದಾಳೆಯೆ?"

ವಿರಾಜ ಬಳಿಯಲ್ಲಿಯೇ ಕುಳಿತಿದ್ದಳು. ದೃಷ್ಟಿ ಮೇಲಕ್ಕೆತ್ತಿ ಕೇಳಿದಳು: "ನಾನು ಕೆರಳುವೆನೆಂದು ನಿಮಗಾರು ಹೇಳಿದರು?"

"ಯಾರೇಕೆ ಹೇಳಬೇಕು? ನಾನೇ ಬಲ್ಲೆ."

ವಿರಾಜ ಕ್ಷಣಹೊತ್ತು ಗಂಡನ ಮುಖವನ್ನೆ ನಿಟ್ಟಿಸಿ: "ಗೊತ್ತಿದ್ದರೆ ಚೆನ್ನಾಯಿತು" ಎಂದು ಹೋಗತೊಡಗಿದಳು. ನೀಲಾಂಬರ ಅವಳನ್ನು ಕೂಗಿ ಹೇಳಿದ: "ಏನೆ, ನೀನು ಇತ್ತೀಚೆ ಹೀಗೇಕೆ ಆಗುತ್ತಿರುವೆ? ನೀನಂತೂ ಒಮ್ಮೆಲೆ ಬದಲಾವಣೆ ಹೊಂದಿರುವೆ."

ವಿರಾಜ ಹೊರಳಿ ನಿಂತು ಗಂಡನ ಮಾತನ್ನು ಲಕ್ಷ್ಯವಿತ್ತು ಕೇಳಿದ ಬಳಿಕ: "ಕಾರಣವಿರುವುದರಿಂದಲೆ ಹೀಗೆ ಬದಲಾವಣೆ ಹೊಂದಬೇಕಾಗುವುದು" ಎಂದು ಅಡುಗೆಮನೆಯಿಂದ ಹೊರಬಿದ್ದಳು. ಎರಡು ದಿನಗಳಾದ ಬಳಿಕ ಮಧ್ಯಾಹ್ನ ಮೂರು ಗಂಟೆಯ ಸುಮಾರು ಹೊರಗೆ ದೇವೀ ಮಂದಿರದಲ್ಲಿ ನೀಲಾಂಬರನೊಬ್ಬನೆ ಕುಳಿತು ಗುಣು ಗುಣು ಎಂದು ಹಾಡು

ತ್ತಲಿದ್ದ. ವಿರಾಜ ಬಂದು ಕೆಲಕ್ಷಣ ಅವನ ಹಿಂದೆ ನೀರವಳಾಗಿ ನಿಂದು ಬಳಿಕ ಮುಂದೆ ಬಂದು ನಿಂತಳು.

"ಏನೇ?" ಎಂದು ನೀಲಾಂಬರ ಮೊಗವೆತ್ತಿ ಕೇಳಿದ.

ವಿರಾಜ ತೀಕ್ಷ್ಣದೃಷ್ಟಿಯಿಂದಲೆ ನೋಡುತ್ತ ನಿಂತಳು. ಉತ್ತರವನ್ನೆ ಕೊಡಲಿಲ್ಲ.

ನೀಲಾಂಬರ ನತಮುಖನಾಗುತ್ತಲೆ ವಿರಾಜ ಒಗರು ದನಿಯಲ್ಲಿ: "ಒಂದು ಬಾರಿ ನಿಮ್ಮ ಮುಖ ಮೇಲೆತ್ತಿ- ನೋಡೋಣ" ಎಂದಳು.

ನೀಲಾಂಬರ ಮುಖವನ್ನೂ ಎತ್ತಲಿಲ್ಲ; ಹೆಂಡತಿಯ ಪ್ರಶ್ನೆಗೂ ಉತ್ತರವೀಯಲಿಲ್ಲ. ಮೌನವಾಗಿ ಕುಳಿತುಬಿಟ್ಟ.

ವಿರಾಜ ಮೊದಲಿನಂತೆಯೆ ಕಠೋರವಾಣಿಯಲ್ಲಿ ಹೇಳಿದಳು: "ನೋಡಿ, ನಿಮ್ಮ ಕಣ್ಣುಗಳು ಎಷ್ಟು ಕೆಂಪಾಗಿವೆ! ಮತ್ತೆ ಮಾದಕ ಸೇವನೆಗೆ ಪ್ರಾರಂಭಿಸಿದಿರಾ?"

ನೀಲಾಂಬರ ಮೌನ! ಭಯವಿಹ್ವಲನಾಗಿ ಕೆಳಗೆ ಮುಖ ಮಾಡಿ, ಕಟ್ಟಿಗೆಯ ಗೊಂಬೆಯಂತೆ ಕುಳಿತಿದ್ದ. ನೀಲಾಂಬರ ಮೊದಲಿನಿಂದಲೂ ವಿರಾಜಳಿಗೆ ಹೆದರುತ್ತಿದ್ದ. ಅಲ್ಲದೆ ಇತ್ತೀಚೆ ಅವಳು ಸಿಡಿಮದ್ದಿನ ಕುಡಿಕೆ ಯಂತಿದ್ದಳು. ಯಾವಾಗ, ಹೇಗೆ ಸಿಡಿದೇಳುವಳು ಅದನ್ನೂಹಿಸುವುದೂ ಕಷ್ಟವಾಗಿತ್ತು.

ಕೆಲಕ್ಷಣ ಸ್ಥಿರವಾಗಿ ಕುಳಿತು ವಿರಾಜ: "ಒಳ್ಳೆಯ ಕೆಲಸ ನಡೆಸಿದ್ದೀರಿ. ಬಂಗಿ ತಿಕ್ಕಿ ಚೆನ್ನಾಗಿ ಸೇದಿ ಬಂ-ಭೋಲಾ ಬಾವಾಜಿಯಂತೆ ಕುಳಿತುಕೊಳ್ಳಲು ಇದು ತಕ್ಕ ಸಮಯ," ಎಂದು ಮೂದಲಿಸಿ ಮನೆಯೊಳಗೆ ಹೋದಳು. ಆ ದಿನವೂ ಕಳೆಯಿತು. ಆದರೆ ಮಾರನೆಯ ದಿನ ಕಳೆಯಲು ನೀಲಾಂಬರ ನಿಂದಾಗಲಿಲ್ಲ. ನಾಚಿಕೆ ಸಂಕೋಚಗಳನ್ನೆಲ್ಲ ತೊರೆದು ಪೀತಾಂಬರನನ್ನು ಕರೆಯಿಸಿ ಹೇಳಿದ: "ಪುಟ್ಟಿಯ ಮಾವನಂತೂ ನನ್ನ ಪತ್ರಕ್ಕೆ ಉತ್ತರ ವನ್ನೂ ಕೊಡಲಿಲ್ಲ. ನೀನಾದರೂ ಸ್ವಲ್ಪ ಯತ್ನಿಸಿನೋಡು. ಹೇಗಾದರೂ ಮಾಡಿ ಪೂಜಾ ದಿನಗಳಲ್ಲಿ ಎರಡು ದಿನಗಳ ಮಟ್ಟಿಗಾಗಿ ನೀನು ತಂಗಿಯನ್ನು ಕರೆತಂದರೆ ನಾನು ತುಂಬ ಉಪಕೃತನಾಗುವೆ."

ಅಣ್ಣನ ಮುಖವನ್ನೆ ನೋಡುತ್ತ ಪೀತಾಂಬರನೆಂದ: "ನೀನಿರುವ ವರೆಗೆ ನಾನು ಹೇಗೆ ಪ್ರಯತ್ನಮಾಡಲಿ?"

ಪೀತಾಂಬರನ ಈ ವ್ಯಂಗ್ಯಮಾತು ಕೇಳಿ ನೀಲಾಂಬರ ಒಳಗೊಳಗೆ ಮುನಿದುಕೊಂಡ. ಆದರೆ ಕೋಪವನ್ನು ಪ್ರಯತ್ನಪೂರ್ವಕ ಹತ್ತಿಕ್ಕಿ ಹೇಳಿದ: "ಇದೇನು? ನೀನು ಹೀಗೆ ಮಾತಾಡುವುದು ತರವಲ್ಲ! ಪುಟ್ಟಿ ನನಗೆ ತಂಗಿಯಾದಂತೆ ನಿನಗೂ ತಂಗಿಯೆ. ನಾನು ಈ ಲೋಕದಲ್ಲಿಲ್ಲ ವೆಂದೂ ನೀನೊಬ್ಬನೆ ಇರುವೆಯೆಂದೂ ಭಾವಿಸಿಕೊ."

ಪೀತಾಂಬರನೆಂದ: "ಸುಳ್ಳು ಸಂಗತಿಗಳನ್ನು ನಾನು ಮನದಲ್ಲಿಯೂ ತರಲಾರೆ. ಮೇಲಾಗಿ ನಿನಗೇ ಮಾರೋಲೆ ಬರೆಯದಿದ್ದವರು ನನಗೇನೆಂದು ಬರೆದಾರು?"

ನೀಲಾಂಬರ ತಮ್ಮನ ಈ ಮಾತನ್ನು ಸಹಿಸಿಕೊಂಡು ಹೇಳಿದ: "ಹಾಗಾದರೆ ನಾನು ಸುಳ್ಳು ಸಂಗತಿಗಳಿಗೆ ಆಸ್ಪದ ಕೊಡುವೆನೆಂದು ನೀನು ಭಾವಿಸಿರುವೆಯಾ? ಆಗಲಿ, ಹಾಗೆಯೆ ಭಾವಿಸು. ಆ ವಿಷಯವಾಗಿ ನಿನ್ನೊಡನೆ ನನಗೆ ಚರ್ಚೆ ಬೇಡ. ಆದರೆ ನನ್ನ ಪತ್ರಕ್ಕೆ ಉತ್ತರ ಬಾರದಿರು ವುದಕ್ಕೆ ಕಾರಣವಿಷ್ಟೆ- ಮದುವೆಯ ಕಾಲದಲ್ಲಿ ನಾನೊಪ್ಪಿದ ಕರಾರುಗಳನ್ನು ಪೂರ್ಣಗೊಳಿಸಲಿಲ್ಲ. ಆ ಬಗ್ಗೆ ಸಂಧಾನಕ್ಕಾಗಲಿ, ಇಲ್ಲವೆ ಆ ಕರಾರುಗಳನ್ನು ಪೂರ್ತಿಗೊಳಿಸಲು ನಿನ್ನಿಂದ ನೆರವು ಪಡೆವುದಕ್ಕಾಗಲಿ ನಿನ್ನನ್ನು ಕರೆಸಿ ದುದಲ್ಲ. ನನ್ನ ಆದೇಶದಂತೆ ಮಾಡಲು ಸಿದ್ಧನಿರುವೆಯೊ ಇಲ್ಲವೊ ನನಗೆ ಸ್ಪಷ್ಟವಾಗಿ ಹೇಳು."

ತಲೆಯಲ್ಲಾಡಿಸುತ್ತ ಪೀತಾಂಬರನೆಂದ: "ಇಲ್ಲ- ಸಾಧ್ಯವಿಲ್ಲ. ಲಗ್ನ ನಿಶ್ಚಯದ ಮುನ್ನ ಈ ವಿಷಯವಾಗಿ ನನ್ನ ಪರಾಮರ್ಶೆ ಕೇಳಲು ಬಂದಿದ್ದೆಯಾ?"

"ನಾನು ಪರಾಮರ್ಶೆ ಕೇಳಲು ಬಂದಿದ್ದರೆ ಏನುಮಾಡಲಿದ್ದೆ?"

"ಒಳ್ಳೆಯ ಪರಾಮರ್ಶೆ ನೀಡುತಿದ್ದೆ."

ನೀಲಾಂಬರನ ತಲೆಗೆ ಬೆಂಕಿಯಿಟ್ಟಂತಾಯಿತು. ಅವನ ತುಟಿಗಳು ನಡುಗತೊಡಗಿದವು. ಆದರೂ ತನ್ನನ್ನು ಸಾವರಿಸಿಕೊಂಡು "ಹಾಗಾದರೆ ಈ ವಿಷಯವಾಗಿ ನೀನು ಯಾವುದೂ ಸಹಾಯನೀಡಲಾರೆಯಾ?"

ಪೀತಾಂಬರನೆಂದ: “ಇಲ್ಲ. ಅಲ್ಲದೆ ಅವರು ಪುಟ್ಟಿಗೆ ಮಾವನವ ರಾದಂತೆ ನನಗೂ ಮಾವನವರೆ; ನನಗೂ ಹಿರಿಯರೆ. ಪುಟ್ಟಿಯನ್ನು ಕಳುಹುವ ಇಚ್ಛೆಯಿಲ್ಲವೆಂದಮೇಲೆ ನಾನು ಅವರ ಇಚ್ಛೆಗೆ ವಿರೋಧವಾಗಿ ನಡೆದುಕೊಳ್ಳಲಾರೆ. ಅಲ್ಲದೆ ಗುರುಹಿರಿಯರಿಗೆ ಒಲ್ಲದ ವಿಷಯವನ್ನು ಅವರಿಚ್ಛೆಗೆ ವಿರೋಧವಾಗಿ ಮಾಡುವುದು ನನ್ನ ಸ್ವಭಾವವೂ ಅಲ್ಲ.”

ಪೀತಾಂಬರನ ಮಾತು ಕೇಳಿ ಚಟ್ಟನೆದ್ದು ನುಚ್ಚುನುಗ್ಗಾಗುವಂತೆ ಮುಖತಿವಿಯಲೆ ಎಂದೆನಿಸಿತು ನೀಲಾಂಬರನಿಗೆ. ಆದರೆ ತನ್ನನ್ನು ಹೇಗೊ ಸಾವರಿಸಿಕೊಂಡ. ಕೊನೆಗೆ ಎದ್ದು ನಿಂತು “ನಡೆ, ನನ್ನೆದುರಿನಿಂದ ದೂರ ಸರಿ, ಕೆಲಸಕ್ಕೆ ಬಾರದ ಹೆಬಗ” ಎಂದು ಸಿಡುಕಿದ.

ಪೀತಾಂಬರನೂ ಕೋಪಗೊಂಡ: “ಸುಮ್ಮಸುಮ್ಮನೆ ಇಷ್ಟೇಕೆ ರೇಗುವೆ ಅಣ್ಣಾ? ನಾನು ಇಲ್ಲಿಂದ ಹೋಗದಿದ್ದರೆ ಬಲಾತ್ಕಾರದಿಂದ ತಳ್ಳುವೆಯಾ?”

ಬಾಗಿಲ ಕಡೆಗೆ ಬೆರಳುಮಾಡಿ ನೀಲಾಂಬರನೆಂದ: “ಈ ಇಳಿ ವಯಸ್ಸಿನಲ್ಲಿ ಪೆಟ್ಟುತಿಂದು ಸಾಯಬಾರದೆಂದಿದ್ದರೆ ನನ್ನೆದುರಿನಿಂದ ಕಣ್ಮರೆ ಯಾಗು.”

ಈ ಮಾತಿಗೆ ಪೀತಾಂಬರನೇನೊ ಹೇಳಬೇಕೆಂದಿದ್ದ – ಆದರೆ ನಡು ವೆಯೆ ಬಾಯಿಹಾಕಿ ನೀಲಾಂಬರನೆಂದ: “ಎಚ್ಚರಿಕೆ, ಇನ್ನು ನಿನ್ನ ಬಾಯಿ ಯಿಂದ ಒಂದಕ್ಕರವೂ ಹೊರಬಂದರೆ ಜೋಕೆ! ಸುಮ್ಮನೆ ಇಲ್ಲಿಂದ ಹೊರಟು ಹೋಗು.”

ದೇಹದಾರ್ಢ್ಯದ ವಿಷಯವಾಗಿ ನೀಲಾಂಬರ ಹಳ್ಳಿಯಲ್ಲೆಲ್ಲ ಪ್ರಸಿದ್ಧಿ ಪಡೆದಿದ್ದ. ಹೆದರಿಕೆಯಿಂದ ಪೀತಾಂಬರ ಒಂದು ಮಾತೂ ಆಡದಾದ. ಮೆಲ್ಲಮೆಲ್ಲನೆ ಕೋಣೆಯಿಂದ ಹೊರಬಿದ್ದು ಹೋದ.

ಸೋದರರಲ್ಲಿ ಬಿರುಸು ಮಾತುಗಳಾಗುವುದನ್ನು ನೋಡಿ ಮುಂದೆ ಜಗಳಕ್ಕೆ ಮೂಲವಾದೀತೆಂಬ ಶಂಕೆಯಿಂದ ವಿರಾಜ ಒಳಗಣಿಂದ ಬಂದವಳೆ ಗಂಡನ ಕೈಹಿಡಿದು ಒಳಗೆ ಎಳೆದುಕೊಂಡು ಹೋದಳು: “ಛೀ ಛೀ, ಎಲ್ಲವನ್ನು ತಿಳಿದೂ ತಿಳಿದು ತಮ್ಮನೊಂದಿಗೆ ಈರೀತಿ ಏಕೆ ಜಗಳವಾಡು ವಿರಿ?” ಎಂದು ಛೀಹಾಕಿದಳು.

ನೀಲಾಂಬರನೂ ಒಗರು ದನಿಯಲ್ಲಿ ಹೇಳಿದ: "ನಾನೆಲ್ಲ ಬಲ್ಲೆ ವಿರಾಜ; ಆದರೆ ಅದಕ್ಕಾಗಿಯೆ ಕೈಕಟ್ಟಿಕೊಂಡು ಸುಮ್ಮನೆ ಕುಳಿತು ಕೊಳ್ಳಲೆ? ನಾನೆಲ್ಲವನ್ನೂ ಸಹಿಸಬಲ್ಲೆ, ಆದರೆ ಈ ಷಂಢತನ ಮಾತ್ರ ನನ್ನ ಮನಸ್ಸಿಗೆಂದಿಗೂ ಬಾರದು."

ವಿರಾಜಳೆಂದಳು: "ಆದರೆ ನೀವೊಬ್ಬರೆ ಇಲ್ಲ. ನಾಳೆ ಕತ್ತುಹಿಡಿದು ಈ ಮನೆಯಿಂದ ಹೊರದೂಡಿದರೆ ನೀವೆಲ್ಲಿ ನಿಲ್ಲುವಿರಿ? ತುಸು ಹೇಳಿ ನೋಡೋಣ! ನೀವು ಈ ಬಗ್ಗೆ ಒಮ್ಮೆಯಾದರೂ ವಿಚಾರಿಸಿದ್ದೀರಾ?"

ನೀಲಾಂಬರನೆಂದ: "ಇಲ್ಲ; ಯಾರಿಗೆ ಬೇಕೊ ಅವರು ವಿಚಾರಿಸಲಿ. ವ್ಯರ್ಥ ಈ ವಿಷಯವಾಗಿ ವಿಚಾರಿಸಿ ನಾನೇಕೆ ತಲೆ ಕೆಡಿಸಿಕೊಳ್ಳಲಿ?"

"ನಿಮ್ಮ ಮಾತೂ ಸರಿಯೆ. ಈ ಸಂಸಾರದ ಎಲ್ಲ ಕೆಲಸ-ಬೊಗಸೆ ಬಿಟ್ಟು ಕೇವಲ ಮೃದಂಗ ಬಾರಿಸುವ, ಮಹಾಭಾರತ ಓದುವ ಕೆಲಸವಿಟ್ಟು ಕೊಂಡವರಿಗೆ ಸಂಸಾರದ ವಿಷಯವಾಗಿ ಯೋಚಿಸುವುದೂ ನಿರರ್ಥಕವೆ ಸೈ" ಎಂದಳು ವಿರಾಜ.

ವಿರಾಜಳ ಈ ಮಾತಿನಲ್ಲಿ ಮಾಧುರ್ಯವೂ ಇರಲಿಲ್ಲ; ನೀಲಾಂಬರನ ಕಿವಿಗಳಲ್ಲಿ ಅದು ಸವಿಜೇನನ್ನೂ ಕರೆಯಲಿಲ್ಲ. ಆದರೂ ನೀಲಾಂಬರನು ಸ್ವಾಭಾವಿಕ ದನಿಯಲ್ಲಿಯೆ ನುಡಿದ: "ಉಳಿದೆಲ್ಲವುಗಳಿಗಿಂತ ಈ ಕೆಲಸ ಗಳಿಗೆ ನಾನು ಹೆಚ್ಚು ಮಹತ್ವವೀಯುವೆನೆಂಬುದರಲ್ಲಿ ಸಂದೇಹವಿಲ್ಲ; ಅಲ್ಲದೆ ನಿರಂತರವೂ ಚಿಂತಿಸುವುದರಿಂದ ಹಣೆಬರಹ ಅಳಿಸಿಹೋಗುವುದೆ?" ಎಂದು ಒಂದಾವರ್ತಿ ಹಣೆಯನ್ನು ಮುಟ್ಟಿಕೊಳ್ಳುತ್ತ ಹೇಳಿದ: "ಸ್ವಲ್ಪ ವಿಚಾರಿಸಿ ನೋಡು ವಿರಾಜ, ಭಗವಂತ ಮೊದಲೆ ಇಲ್ಲಿ ಬರೆದಿಟ್ಟಿದ್ದಾನೆ. ಆದುದರಿಂದಲೆ ಎಷ್ಟೊ ರಾಜ-ಮಹಾರಾಜರಿಗೂ ಕೂಡ ಗಿಡದಡಿಯಲ್ಲಿ ಒರಗಿ ದಿನಗಳೆಯುವ ಪ್ರಸಂಗ ಬಂದುಹೋಗಿವೆ. ನಾನಂತೂ ಹೇಳಿಕೇಳಿ ಕ್ಷುದ್ರವ್ಯಕ್ತಿ."

ವಿರಾಜ ಕೋಪದಿಂದ ಒಳಗೊಳಗೆ ಕುದಿಯತೊಡಗಿದ್ದಳು. "ಈ ಎಲ್ಲ ಮಾತುಗಳನ್ನು ಆಡುವುದು ಸುಲಭ. ಆದರೆ ಪ್ರಸಂಗ ಬಂದಾಗ ಅದರಂತೆ ನಡೆವುದು ಅಷ್ಟು ಸುಲಭವಲ್ಲ. ಮೇಲಾಗಿ ನೀವೊ ಗಿಡದಡಿ ಯಲ್ಲಿಯೆ ವಾಸಿಸಿ ದಿನಗಳೆಯಬಹುದು. ಆದರೆ ನನ್ನಿಂದ ಅದು ಸಾಧ್ಯವಿಲ್ಲ!

ನಾನು ಎಷ್ಟೆಂದರೂ ಹೆಣ್ಣು. ಮಾನ-ಮರ್ಯಾದೆಯ ವಿಷಯವಾಗಿ ನಾನು ಯೋಚಿಸಲೆಬೇಕು. ಗುಣಗಾನ ಮಾಡಿಯೆ ಆಗಲಿ, ಸೇವೆ ಮಾಡಿಯೆ ಆಗಲಿ ನುಡಗಲು ನನಗೊಂದು ಆಸರೆ ಬೇಕೆಬೇಕು. ನಿಮ್ಮ ತಮ್ಮನ ಗುಣಗಾನ ನಿಮ್ಮಿಂದ ಆಗದಿದ್ದರೆ ಬಿಟ್ಟುಬಿಡಿ. ಆದರೆ ಅವರ ಕೈಕಾಲು ಹಿಡಿದುಕೊಳ್ಳುವ ಪ್ರಸಂಗತಾರದಂತೆ ನೀವು ಸಂಬಾಳಿಸಿಕೊಂಡರೆ ಸಾಕು. ಅಂಥ ಅಪರಾಧಮಾಡಿ ಎಲ್ಲವನ್ನೂ ಮಣ್ಣುಗೂಡಿಸಬೇಡಿ" ಎಂದು ವಿರಾಜ ಕಂಬನಿಗಳನ್ನು ಹತ್ತಿಕ್ಕಿ ದ್ರುತಗತಿಯಲ್ಲಿ ಕೋಣೆಯಿಂದ ಹೊರಬಿದ್ದಳು.

ಈ ಮೊದಲೂ ಅನೇಕ ಸಲ ವಿರಾಜ ನೀಲಾಂಬರರ ನಡುವೆ ತೀಕ್ಷ್ಣ ವಾಗ್ಯುದ್ಧಗಳಾಗಿದ್ದವು, ವಾದ ವಿವಾದಗಳೂ ಆಗಿದ್ದವು. ನೀಲಾಂಬರ ಆ ಘಟನೆಗಳನ್ನು ಮರೆತಿರಲಿಲ್ಲ. ಆದರೆ ಇಂದು ಜಗಳ ಚರ್ಚೆ ಯಾವುದೂ ಆಗಲಿಲ್ಲ. ವಿರಾಜಳ ಇಂದಿನ ಮೂರ್ತಿ ನೀಲಾಂಬರನಿಗೆ ಅತ್ಯಂತ ಹೊಸ ತೆರನಾಗಿ ತೋರಿತು. ಹೆಂಡತಿಯ ಈ ರೀತಿಯ ಮುಖವನ್ನು ಈ ವರೆಗೆ ಒಮ್ಮೆಯೂ ಕಂಡಿರಲಿಲ್ಲ. ಆದರಿಂದ ಪೆಚ್ಚನಂತಾಗಿ ಸುಮ್ಮನೆ ನಿಂತು ಕೊಂಡ.

ಕೆಲಕ್ಷಣ ಸಂದಬಳಿಕ ಪುನಃ ಕೋಣೆಯನ್ನು ಪ್ರವೇಶಿಸಿ ವಿರಾಜ ಕೆಂದಳು: "ಹೀಗೇಕೆ ಪೆಚ್ಚರಂತೆ ನಿಂತುಕೊಂಡಿರುವಿರಿ? ಮಧ್ಯಾಹ್ನವಾಗಿ ಹೋಯಿತು. ಸ್ನಾನ ಸಂಧ್ಯಾವಂದನೆ ಮುಗಿಸಿಕೊಂಡು ಬೇಗ ಊಟಕ್ಕೇಳಿ. ಎಷ್ಟು ದಿನ ಆಹಾರ ಸಿಕ್ಕುವುದೊ ಅಷ್ಟು ದಿನವಾದರೂ ತಿನ್ನೋಣ."

ತನ್ನ ಈ ನುಡಿಗಳಿಂದ ಗಂಡನ ಎದೆಯಲ್ಲಿ ಮತ್ತೊಂದು ಬಾಣ ನಾಟಿಸಿ ವಿರಾಜ ಹೊರಟುಹೋದಳು. ಕೋಣೆಯ ಗೋಡೆಯ ಮೇಲೆ ರಾಧಾಕೃಷ್ಣರ ತೈಲಚಿತ್ರವೊಂದಿತ್ತು. ಅದನ್ನು ನೋಡುತ್ತಲೆ ನೀಲಾಂಬರ ನಿಗೆ ಒಮ್ಮೆಲೆ ಅಳು ಉಕ್ಕಿಬಂತು. ತಾನು ಈ ರೀತಿ ಅಳುವುದನ್ನು ಯಾರಾದರೂ ಫಕ್ಕನೆ ಕಂಡಾರೆಂಬ ಭಯದಿಂದ ಕಣ್ಣುಗಳನ್ನೊರಸಿ ತಟ್ಟನೆ ಹೊರಟುಹೋದ.

ಮತ್ತೆ ವಿರಾಜ? – ವಿರಾಜಳಿಗೆ ಆ ದಿನ ಬಹುಶಃ ಅಳುವುದರಲ್ಲಿಯೆ ಕಳೆಯಿತು. ಅವಳ ಕಣ್ಣುಗಳಿಂದ ಕಂಬನಿ ಒಂದೆಸವನೆ ಇಳಿಯುತ್ತಿತ್ತು. ತನ್ನ ಗಂಡನಿಗೆ ಸ್ವಲ್ಪ ದುಃಖ ಉಂಟಾದಾಗಲೂ ಅವಳು ನೊಂದುಕೊಳ್ಳು

ತಿದ್ದಳು. ಆದರೆ ಅದೇ ಗಂಡನಿಗೆ ತನ್ನ ಬಾಯಿಯಿಂದಲೆ ಅತ್ಯಂತ ಕಟು ಮಾತುಗಳನ್ನು ಆಡಿದಾಗಿನಿಂದ ಅವಳ ದುಃಖ ಆತ್ಮಗ್ಲಾನಿಗಳಿಗೆ ಸೀಮೆಯೆ ಉಳಿಯಲಿಲ್ಲ. ಇಡಿಯ ದಿನ ಅವಳು ತುಟಿಗೆ ನೀರು ಸಹ ಹಚ್ಚಲಿಲ್ಲ. ಅಳುತ್ತಳುತ್ತಲೆ ಕೊಠಡಿಯಿಂದ ಕೊಠಡಿಗೆ ಸುಮ್ಮನೆ ಅಲೆಯುತ್ತಿದ್ದಳು. ಸಾಯಂಕಾಲವಾದ ಬಳಿಕ ತುಳಸಿಕಟ್ಟೆಯ ಮೇಲೆ ದೀಪವಿರಿಸಿ ಕೊರಳಿಗೆ ಸೆರಗು ಸುತ್ತಿ ಪ್ರಣಾಮ ಮಾಡಲು ಬಾಗಿದಾಗ ಅಳು ಉಕ್ಕಿಬಂದು ಕಂಬನಿ ಕೋಡಿಯಾಗಿ ಹರಿಯಿತು. ಮನೆಯಲ್ಲಿ ಆಗ ಯಾರೂ ಇರಲಿಲ್ಲ. ಮನೆಯೆಲ್ಲವನ್ನೂ ನೀರವತೆ ಮುತ್ತಿತ್ತು. ನೀಲಾಂಬರನೂ ಮನೆಯಲ್ಲಿರಲಿಲ್ಲ. ಮಧ್ಯಾಹ್ನ ಊಟದ ತಟ್ಟೆಯ ಮುಂದೆ ಕುಳಿತುಕೊಳ್ಳುವ ಶಾಸ್ತ್ರಮಾಡಿ ಮನೆಯಿಂದ ಹೊರಬಿದ್ದು ಹೋದವನು ಈ ವರೆಗೂ ಮರಳಿ ಬಂದಿರಲಿಲ್ಲ.

ಇಂದು ವಿರಾಜಳ ಬುದ್ಧಿ ಸ್ವಲ್ಪವೂ ಕೆಲಸ ಮಾಡುತ್ತಿಲ್ಲ. ತಾನೇನು ಮಾಡಬೇಕು, ಎಲ್ಲಿಗೆ ಹೋಗಬೇಕು, ಯಾರಿಗೆ . ಏನು ಹೇಳಬೇಕು— ಇದಾವುದೂ ಅವಳಿಗೆ ಹೊಳೆಯಲಿಲ್ಲ. ಬಳಿಕ ಉಪಾಯಗಾಣದೆ ಕಗ್ಗತ್ತಲೆಯ ಅದೇ ಅಂಗಳದ ಒಂದು ಬದಿ ಬೋರಲು ಬಿದ್ದು ಬಿಟ್ಟೂಬಿಡದೆ ಅಳತೊಡಗಿದಳು. ಅಳುತ್ತಲೆ ಅವಳು ಬೇಡಿಕೊಳ್ಳತೊಡಗಿದಳು: "ಹೇ ಅಂತರ್ಯಾಮಿಯೆ, ಒಂದು ಬಾರಿ ಮುಖವೆತ್ತಿ ನಮ್ಮನ್ನು ನೋಡು! ಹೇ ಭಗವಂತನೆ ದೋಷವನ್ನಾಗಲಿ ಪಾಪವನ್ನಾಗಲಿ ಮಾಡಲರಿಯದ ನನ್ನ ಪತಿಗೆ ದುಃಖ ಕೊಡಬೇಡ. ಇನ್ನು ನಾನು ಸಹಿಸಲಾರೆ."

ಆಗ ರಾತ್ರಿ ಒಂಬತ್ತು ಗಂಟೆಯಾಗಿರಬೇಕು. ನೀಲಾಂಬರ ಮರಳಿ ಬಂದವ ಸುಮ್ಮನೆ ಚಾಪೆಯ ಮೇಲೆ ಮಲಗಿದ. ಗಂಡ ಬಂದನಂತರವೆ ವಿರಾಜ ಕೋಣೆಯನ್ನು ಪ್ರವೇಶಿಸಿ ಗಂಡನ ಅಡಿಯ ಬಳಿ ಕುಳಿತಳು. ನೀಲಾಂಬರನು ಮಾತನಾಡಲೂ ಇಲ್ಲ, ಅವಳನ್ನು ಕಣ್ಣೆತ್ತಿ ಸಹ ನೋಡಲಿಲ್ಲ.

ಸ್ವಲ್ಪ ಹೊತ್ತಿನ ಮೇಲೆ ವಿರಾಜ ಗಂಡನ ಪಾದಗಳ ಮೇಲೆ ಕೈಯಿಟ್ಟಳು. ನೀಲಾಂಬರ ತಟ್ಟನೆ ತನ್ನ ಕಾಲುಗಳನ್ನೆಳೆದುಕೊಂಡ. ಮತ್ತೆ ಐದು ನಿಮಿಷ ನೀರವತೆಯಿಂದ ಕಳೆಯಿತು. ಲುಪ್ತವಾಗಿ ಹೋಗಿದ್ದ ವಿರಾಜಳ ಅಭಿಮಾನ ಮತ್ತೆ ಮೆಲ್ಲಗೆ ಜಾಗ್ರತವಾಗತೊಡಗಿತು. ಆದರೂ ಅವಳು ಮೃದು ದನಿಯಲ್ಲಿ: "ಏಳಿ, ಸ್ವಲ್ಪ ಊಟ ಮಾಡಿ" ಎಂದಳು.

ನೀಲಾಂಬರ ಸುಮ್ಮನೆ ಇದ್ದ. "ಇಡಿಯ ದಿನ ನೀವೇನೂ ತಿಂದಿಲ್ಲ. ಯಾರ ಮೇಲೆ ಕೋಪಗೊಂಡು ಹೀಗೆ ಮಾಡುತ್ತಿದ್ದೀರಿ?" ಎಂದಳು.

ಇದಕ್ಕೂ ನೀಲಾಂಬರ ಉತ್ತರವೀಯಲಿಲ್ಲ.

ವಿರಾಜಳೆಂದಳು: "ಮಾತನ್ನೇಕೆ ಆಡುವುದಿಲ್ಲ? ಸ್ವಲ್ಪ ಹೇಳ ಬಾರದೆ?"

ನೀಲಾಂಬರ ಉದಾಸೀನನಾಗಿ: "ಹೇಳುವುದರಿಂದೇನು ಲಾಭ?" ಎಂದು ಕೇಳಿದ.

"ಆದರೂ ನಾನು ಅರಿತುಕೊಳ್ಳಬೇಕಾಗಿದೆ."

ನೀಲಾಂಬರ ಆಗ ಒಮ್ಮೆಲೆ ಎದ್ದು ಕುಳಿತ. ತನ್ನ ಕಣ್ಣುಗಳೆರಡನ್ನೂ ವಿರಾಜಳ ಮುಖದ ಕಡೆಗೆ ತೀಕ್ಷ್ಣಶಲ್ಯದಂತೆ ನಾಟಿಸಿ: "ನಾನು ನಿನ್ನ ಯಜಮಾನ ವಿರಾಜ, ನಿನ್ನ ಆಟದ ಗೊಂಬೆಯಲ್ಲ" ಎಂದ.

ಗಂಡನ ಕಣ್ಣು ನೋಡಿ, ದನಿಯಾಲಿಸಿ ವಿರಾಜ ಕಕ್ಕಾವಿಕ್ಕಿಯಾದಳು. ಚಕಿತಳಾಗಿ ಗಂಡನನ್ನು ಮೂಕಳಂತೆ ದಿಟ್ಟಿಸುತ್ತ ನಿಂತಳು.

ಗಂಡನ ಈ ರೀತಿಯ ಆರ್ತವಾಣಿ, ಈ ರೀತಿಯ ಗಂಭೀರ ದನಿ ಅವಳು ಈ ಪೂರ್ವದಲ್ಲಿ ಒಮ್ಮೆಯೂ ಕೇಳಿರಲಿಲ್ಲ.

## ೭

ಮಗರಾರ್‌ಗಂಜಿನಲ್ಲಿ ಹಿತ್ತಾಳೆ ಪಾತ್ರೆ ಮಾಡುವ ಅನೇಕ ಕಾರಖಾನೆಗಳಿದ್ದವು. ಸಪ್ತಗ್ರಾಮದಲ್ಲಿಯ ಮಾದಿಗರ ಹೆಣ್ಣುಮಕ್ಕಳೆಲ್ಲರೂ ಪಾತ್ರೆಯ ಮಣ್ಣಿನ ಪಡಿಯಚ್ಚುಗಳನ್ನು ಮಾಡಿ ಆ ಕಾರಖಾನೆಯವರಿಗೆ ಮಾರುತ್ತಿದ್ದರು. ಇತ್ತ ವಿರಾಜಳಿಗೆ ಮನೆಯ ವೆಚ್ಚ ನಡೆಸಲು ಯಾವ ಉಪಾಯವೂ ತೋರಲಿಲ್ಲ. ಮೇಲಾಗಿ ಹಣದ ಅಭಾವದಿಂದ ಅನೇಕ ತೊಂದರೆ ಎದುರಿಸಬೇಕಾಯಿತು. ಆಗ ಅವಳು ಒಬ್ಬ ಮಾದಿಗರ ಹೆಣ್ಣನ್ನು ಕರೆಸಿ ಅವಳಿಂದ ಮಣ್ಣಿನ ಪಡಿಯಚ್ಚು ಮಾಡಲು ಕಲಿತಳು. ವಿರಾಜ ಬಹು ಚುರುಕುಬುದ್ಧಿಯವಳು. ಅಲ್ಲದೆ ಅವಳಲ್ಲಿ ಅಗಾಧ ಕಾರ್ಯಕುಶಲತೆಯೂ ಇದ್ದಿತು.

ಆದುದರಿಂದ ಅವಳು ಎರಡೇ ದಿವಸಗಳಲ್ಲಿ ಪಡಿಯಚ್ಚು ಮಾಡಲರಿತಳಲ್ಲದೆ ಅತಿ ಉತ್ತಮ ದರ್ಜೆಯ ಮಾಲನ್ನು ಸಿದ್ಧಪಡಿಸತೊಡಗಿದಳು. ಅನೇಕ ಜನ ವ್ಯಾಪಾರಸ್ಥರು ಅವಳಲ್ಲಿಗೆ ಬಂದು ತಕ್ಕ ಬೆಲೆಕೊಟ್ಟು ಕೊಂಡುಕೊಳ್ಳುತಿದ್ದರು. ಹೀಗೆ ಅವಳು ದಿನಂಪ್ರತಿ ೮-೧೦ ಆಣೆ ಗಳಿಸುತ್ತಿದ್ದಳು. ಆದರೆ ನಾಚಿಕೆಯಿಂದ ಈ ವಿಷಯವನ್ನು ಗಂಡನಿಗೆ ತಿಳಿಸಲಿಲ್ಲ. ರಾತ್ರಿಯ ಬಹುಭಾಗ ಸಂದಬಳಿಕ, ಗಂಡ ನಿದ್ದೆಹೋದಾಗ ಅವಳು ಚಾಪೆಯಿಂದ ಸದ್ದಿಲ್ಲದೆ ಎದ್ದು ಪಡಿಯಚ್ಚುಮಾಡುತಿದ್ದಳು. ಅಂದು ರಾತ್ರಿ ಸಹ ಅವಳು ನಿತ್ಯದಂತೆ ಎದ್ದು ಪಡಿಯಚ್ಚು ಮಾಡತೊಡಗಿದಳು. ಆದರೆ ಅವಳು ಮೊದಲೆ ಬಹಳ ಆಯಾಸಗೊಂಡಿದ್ದರಿಂದ ಅಚ್ಚು ಮಾಡ ಮಾಡುತ್ತಲೆ ನಿದ್ದೆಹೋದಳು. ಅಕಸ್ಮಾತ್ತಾಗಿ ನೀಲಾಂಬರ ನಿದ್ದೆಯಿಂದ ತಿಳಿದೆದ್ದ. ಹಾಸಿಗೆಯ ಮೇಲೆ ಯಾರೂ ಇಲ್ಲದಿದ್ದುದನ್ನು ಕಂಡು ಅವನು ಎದ್ದು ಹೊರಗೆ ಬಂದ.

ವಿರಾಜ ನೆಲದಮೇಲೆಯೆ ನಿದ್ದೆಹೋಗಿದ್ದಳು. ಅವಳ ಎರಡೂ ಕೈಗಳಿಗೆ ಅರಿಲು ಮೆತ್ತಿಕೊಂಡಿತ್ತು. ಬಳಿಯಲ್ಲಿಯೇ ಅವಳು ಮಾಡಿಟ್ಟಿದ್ದ ಪಡಿಯಚ್ಚುಗಳೂ ಬಿದ್ದಿದ್ದವು. ವಿರಾಜಳ ದೇಹ ಇಬ್ಬನಿಯಿಂದ ತೊಯ್ದಿತ್ತು.

ಮೂರು ದಿನಗಳಿಂದ ಗಂಡಹೆಂಡಿರಲ್ಲಿ ಮಾತುಕತೆಯೆ ಇರಲಿಲ್ಲ. ಹೆಂಡತಿಯ ಅವಸ್ಥೆ ನೋಡಿ ನೀಲಾಂಬರ ಸಂತಾಪಪಟ್ಟ. ಅವನ ಕಣ್ಣುಗಳಲ್ಲಿ ಬಿಸಿಗಂಬನಿಗಳು ತುಂಬಿದವು. ತಟ್ಟನೆ ಕುಳಿತು ನೆಲದ ಮೇಲೆ ನಿದ್ದೆಹೋಗಿದ್ದ ಹೆಂಡತಿಯ ತಲೆಯನ್ನು ಸಾವಧಾನಪೂರ್ವಕ ತನ್ನ ತೊಡೆಯಲ್ಲಿಟ್ಟುಕೊಂಡ. ವಿರಾಜಳಿಗಿದಾವುದರ ಅರಿವೂ ಇರಲಿಲ್ಲ. ಒಂದು ಬಾರಿ ಅತ್ತಿತ್ತ ಹೊಯ್ದಾಡಿ ಮತ್ತೆ ಕಾಲುಗಳನ್ನು ನೀಡಿ ಸುಖವಾಗಿ ಒರಗಿದಳು. ನೀಲಾಂಬರನು ಎಡಗೈಯಿಂದ ಕಂಬನಿಗಳನ್ನು ಒರಸಿಕೊಂಡ. ಸನಿಪದಲ್ಲಿ ಮಿಣಿಮಿಣಿಯಾಗಿ ಉರಿಯುತ್ತಿದ್ದ ದೀವಿಗೆಯನ್ನು ದೊಡ್ಡದು ಮಾಡಿ ಹೆಂಡತಿಯನ್ನು ನೆಟ್ಟನೋಟದಿಂದ ನೋಡತೊಡಗಿದ. ಒಮ್ಮೆಲೆ ಮನಸದಲ್ಲಿ "ಇದೇನಿದು? ಇಷ್ಟು ದಿನಗಳವರೆಗೆ ಇದು ನನ್ನ ದೃಷ್ಟಿಗೆ ಬಿದ್ದಿರಲಿಲ್ಲವಲ್ಲ. ವಿರಾಜಳ ಕಣ್ಣುಗಳ ಸುತ್ತಲೂ ಇದೆಂತಹ ಕಪ್ಪು! ಹುಬ್ಬುಗಳ ಮೇಲೆ ಸುಂದರವಾದ ಮಾಟವಾದ ಹಣೆಯಮೇಲೆ ದುಶ್ಚಿಂತೆಯ ಗೆರೆಗಳು ಎಷ್ಟು ಸ್ಪಷ್ಟವಾಗಿ ಎದ್ದು ಕಾಣುತ್ತಿವೆಯಲ್ಲ!" ಹೆಂಡತಿಯ ಈ ಅವಸ್ಥೆ

ನೋಡಿ ನೀಲಾಂಬರನ ಅಂತರಾಳವು ಅವ್ಯಕ್ತವಾದ ಅಸೀಮ ವೇದನೆ ಯಿಂದ ಮಥಿಸಿದಂತಾಯಿತು. ಸ್ವತಃ ತನ್ನನ್ನು ಸಾವರಿಸಿಕೊಳ್ಳುವಷ್ಟು ಶಕ್ತಿಯೂ ಅವನಲ್ಲಿ ಉಳಿಯಲಿಲ್ಲ. ಕಣ್ಣಿನಿಂದ ದೊಡ್ಡ ಕಂಬನಿಯೊಂದು ಜಾರಿ ವಿರಾಜಳ ಮುಚ್ಚಿದ ಕಣ್ಣುರೆಪ್ಪೆಯ ಮೇಲೆಯೆ ಬಿದ್ದಿತು. ವಿರಾಜ ಚಟ್ಟನೆ ಎಚ್ಚತ್ತು ಕಣ್ತೆರೆದಳು. ಕೆಲಕ್ಷಣ ಗಂಡನ ಮುಖವನ್ನೇ ಮೌನ ವಾಗಿ ನೋಡಿ ಕೈಕೊಡಹಿ, ಮೈಮುರಿದು ಪುನಃ ಗಂಡನ ತೊಡೆಯಲ್ಲಿ ಮುಖಮುಚ್ಚಿ ನಿದ್ದೆಹೋದಳು. ನೀಲಾಂಬರ ಹಾಗೆಯೇ ಕುಳಿತು ಅಳ ತೊಡಗಿದ.

ಹೀಗೆ ಬಹಳ ಹೊತ್ತು ಸಂದುಹೋಯಿತು. ದಂಪತಿಗಳಲ್ಲಿ ಯಾರ ಬಾಯಿಯಿಂದಲೂ ಮಾತು ಹೊರಬೀಳಲಿಲ್ಲ. ರಾತ್ರಿಯೆಲ್ಲವೂ ಕಳೆದು ಪೂರ್ವ ದಿಗಂತವು ಶುಭ್ರವಾದಾಗ ನೀಲಾಂಬರ ತನ್ನನ್ನು ಸಾವರಿಸಿ ಕೊಂಡ. ಹೆಂಡತಿಯ ತಲೆಯಮೇಲೆ ಕೈಯಿಟ್ಟು ನೇಹದಿಂದ "ಈ ಚಳಿ ಯಲ್ಲಿ ಬಿದ್ದಿರಬೇಡ ವಿರಾಜ, ಒಳಗೆ ನಡೆ" ಎಂದ.

"ನಡೆಯಿರಿ."

ವಿರಾಜ ಎದ್ದುನಿಂತು ಗಂಡನ ಕೈಹಿಡಿದು ಒಳಗೆ ಬಂದು ಮಲಗಿದಳು.

ಬೆಳಗಾದ ಮೇಲೆ ನೀಲಾಂಬರನೆಂದ: "ವಿರಾಜ, ನೀನು ಕೆಲ ದಿನಗಳ ಮಟ್ಟಿಗೆ ಸೋದರಮಾವನ ಮನೆಗೆ ಹೋಗಿ ಬಾ. ನಾನು ಕೆಲ ದಿನಗಳ ಮಟ್ಟಿಗೆ ಕಲಕತ್ತೆಗೆ ಹೋಗುವ ವಿಚಾರವಿಟ್ಟುಕೊಂಡಿದ್ದೇನೆ."

"ಕಲಕತ್ತೆಗೆ ಹೋಗಿ ಏನು ಮಾಡುವಿರಿ?"

ನೀಲಾಂಬರನೆಂದ: "ಕಲಕತ್ತೆಯಲ್ಲಿ ವ್ಯಾಪಾರ ಉದ್ಯೋಗಗಳಿಗೆ ಕೊರತೆಯಿಲ್ಲ. ಯಾವುದಾದರೊಂದು ಉದ್ಯೋಗದಲ್ಲಿ ತೊಡಗುವೆ. ಆದುದರಿಂದ ವಿರಾಜ, ನನ್ನ ಮಾತನ್ನಿಷ್ಟು ಕೇಳು. ಕೆಲ ದಿನಗಳ ಮಟ್ಟಿಗೆ ನಿನ್ನ ಮಾವನ ಬಳಿ ಹೋಗಿರು."

"ಹಾಗಾದರೆ ನನ್ನನ್ನೆಷ್ಟು ದಿನಗಳಲ್ಲಿ ಕರೆದುಕೊಂಡು ಹೋಗಲು ಬರುವಿರಿ?"

"ನಿನಗೆ ಭಾಷೆ ಕೊಡುವೆ. ಆರು ತಿಂಗಳಲ್ಲಿಯೇ ನಿನ್ನನ್ನು ಖಂಡಿತ ವಾಗಿ ಕರೆದೊಯ್ಯುವೆ" ಎಂದ ನೀಲಾಂಬರ.

"ಹಾಗೆಯೆ ಆಗಲಿ" ಎಂದು ವಿರಾಜ ಸಮ್ಮತಿಸಿದಳು.

ನಾಲ್ಕೈದು ದಿನಗಳಾದ ಮೇಲೆ ಎತ್ತಿನ ಬಂಡಿಯೂ ಸಿದ್ಧವಾಗಿ ಬಂತು. ವಿರಾಜಳ ಸೋದರಮಾವನ ಮನೆ ಸಪ್ತಗ್ರಾಮದಿಂದ ೫-೬ ಹರದಾರಿ ದೂರವಿತ್ತು. ಅಲ್ಲಿಗೆ ಹೋಗಲು ಎತ್ತಿನ ಬಂಡಿಯೆ ಗತಿ. ಬಂಡಿಯಂತೂ ಸಿದ್ಧವಾಗಿತ್ತು. ವಿರಾಜಳ ಮಾತುಕತೆಯಿಂದ ಆವಳು ಈ ಪಯಣಕ್ಕೆ ಸಿದ್ಧಳಿದ್ದಂತೆ ತೋರಲಿಲ್ಲ.

ನೀಲಾಂಬರ ಕಳವಳ ತೋರತೊಡಗಿದ: "ಹೊತ್ತುಗಳೆಯುವುದರಲ್ಲಿ ಹುರುಳಿಲ್ಲ. ಬೇಗನೆ ಗಂಟುಗದಡಿಗಳನ್ನು ಕಟ್ಟಿ ಸಿದ್ಧಳಾಗು" ಎಂದು ನೀಲಾಂಬರ ವಿರಾಜಳಿಗೆ ಆಗ್ರಹಪಡಿಸಿದ.

ವಿರಾಜ ತನ್ನ ನಿತ್ಯ ಕೆಲಸಗಳಲ್ಲಿಯೆ ತೊಡಗಿದ್ದಳು. ಅವಳು "ನಾನಿಂದು ಹೋಗಲಾರೆ. ಇಂದು ನನ್ನ ಮೈಯಲ್ಲಿ ಚೆನ್ನಾಗಿಲ್ಲ" ಎಂದು ಬಿಟ್ಟಳು.

ನೀಲಾಂಬರ ಸೋಜಿಗಗೊಂಡು "ಏನೆಂದೆ? ಮೈಯಲ್ಲಿ ಚೆನಾಗಿಲ್ಲವೆ!" ಎಂದ.

"ಹಾಂ, ಚೆನ್ನಾಗಿಲ್ಲ. ಇವೊತ್ತು ನನ್ನ ಮೈಯೆಲ್ಲ ನೋಯಿಸುತ್ತಿದೆ" ಎಂದವಳೆ ವಿರಾಜ ಬಗಲಲ್ಲಿ ಹಿತ್ತಾಳೆ ಕೊಡವನ್ನಿಟ್ಟುಕೊಂಡು ನೀರು ತರಲು ಹೊಳೆಗೆ ಹೋದಳು.

ಎತ್ತಿನ ಬಂಡಿ ಮರಳಿ ಹೋಯಿತು. ರಾತ್ರಿ ಗಂಡ ಹೆಂಡಿರಲ್ಲಿ ಬಹಳಷ್ಟು ಮಾತುಕತೆ ಬುದ್ಧಿವಾದ ಆದ ಬಳಿಕ, ಎರಡು ದಿನಗಳ ತರುವಾಯ ಮಾವನ ಮನೆಗೆ ಹೋಗಲು ವಿರಾಜ ಒಪ್ಪಿದಳು. ಮೂರನೆಯ ದಿನ ಎತ್ತಿನ ಬಂಡಿ ಪುನಃ ಮನೆಯ ಬಾಗಿಲೆದುರಿನಲ್ಲಿ ಬಂದು ನಿಂತಿತು.

ಪ್ರಯಾಣದ ಪೂರ್ವ ಸಿದ್ಧತೆ ಮಾಡೆಂದು ವಿರಾಜಳಿಗೆ ನೀಲಾಂಬರ ಹೇಳಿದ. ಗಂಡನ ಈ ಮಾತು ಕಿವಿಗೆ ಬಿದ್ದುದೆ ತಡ "ಇಲ್ಲ, ನಾನೆಂದಿಗೂ ಹೋಗುವುದಿಲ್ಲ"ವೆಂದು ಸ್ಪಷ್ಟವಾಗಿ ನುಡಿದಳು ವಿರಾಜ.

ನೀಲಾಂಬರ ಮತ್ತಷ್ಟು ಅಚ್ಚರಿಗೊಂಡು "ಏಕೆ, ನೀನೇಕೆ ಹೋಗಲಾರೆ?" ಎಂದು ವಿಚಾರಿಸಿದ.

ವಿರಾಜ ಅಳತೊಡಗಿದಳು. ಕಂಬನಿ ಮಿಡಿಯುತ್ತ: "ಇಲ್ಲ, ನಾನು ಹೋಗುವುದಿಲ್ಲ. ನನ್ನ ಹತ್ತಿರ ಆಭರಣಗಳಿಲ್ಲ, ಅರಿವೆ ಅಂಚಡಿಗಳಿಲ್ಲ. ತಿರುಕಿಯಂತೆ ದೀನದರಿದ್ರಳಂತೆ ನಾನೆಂದಿಗೂ ಅಲ್ಲಿ ಕಾಲಿಡಲಾರೆ."

ನೀಲಾಂಬರ ಕಡುಕೋಪದಿಂದ ಬುಸುಗುಟ್ಟಿದ—"ಇಂದು ನಿನ್ನಲ್ಲಿ ಆಭರಣಗಳಿಲ್ಲವೆಂಬುದು ನಿಜ. ಆದರೆ ಇದ್ದಾಗ ಒಂದು ದಿನವಾದರೂ ನಿನ್ನ ದೃಷ್ಟಿ ಅವುಗಳ ಕಡೆಗಿರಲಿಲ್ಲವಲ್ಲ!"

ವಿರಾಜ ಮೌನದಿಂದ ತನ್ನ ಕಣ್ಣುಗಳನ್ನೊರೆಸತೊಡಗಿದಳು.

ನೀಲಾಂಬರ ಪುನಃ : "ಈ ನೆವಗಳನ್ನೇಕೆ ಒಡ್ಡುವೆಯೆಂದು ಈಗ ನನಗೆ ಸ್ಪಷ್ಟವಾಗಿ ತಿಳಿಯಿತು. ಈ ಬಗ್ಗೆ ಮೊದಲಿನಿಂದಲೂ ಮನದಲ್ಲಿಯೇ ಸಂದೇಹವುಂಟಾಗಿತ್ತು. ಆದರೂ ದುಃಖಬವಣೆಗಳನ್ನು ಸಹಿಸಿದ ಮೇಲಾದರೂ ನಿನ್ನ ಬುದ್ಧಿ ಸ್ಥಿಮಿತಕ್ಕೆ ಬರುವುದೆಂದು ಆಗ ಎಣಿಸಿದ್ದೆ. ಆದರೆ ಹಾಗೇನೂ ಆಗಲಿಲ್ಲ. ಒಳ್ಳೆಯದು! ನೀನೂ ಒಣಗಿ ಒಣಗಿ ಸಾಯು. ನನ್ನನ್ನು ಸಾಯುಗೊಲ್ಲು" ಎಂದು ಸಿಡುಕಿ ಎತ್ತಿನ ಬಂಡಿಯವನನ್ನು ಮರಳಿಸಿದ.

ಮಧ್ಯಾಹ್ನ ನೀಲಾಂಬರನು ಕೋಣೆಯಲ್ಲಿ ಮಲಗಿದ್ದ. ಪೀತಾಂಬರನು ಕೆಲಸಕ್ಕೆ ಹೋಗಿದ್ದ. ಮೋಹಿನಿ ತಟ್ಟಿಯ ಸಂದಿನಿಂದ ಕರೆದು ಮೆಲು ದನಿಯಲ್ಲಿ "ಕ್ಷಮಿಸು ಅಕ್ಕಾ - ನಿನಗೆ ತಿಳಿಹೇಳುವ ಯೋಗ್ಯತೆ ನನ್ನದಲ್ಲ. ಆದರೆ ಎರಡು ದಿನಗಳ ಮಟ್ಟಿಗಾಗಿ ನೀನೇಕೆ ಹೋಗಲಿಲ್ಲ?" ಎಂದಳು.

ವಿರಾಜ ಮೌನವಾಗಿಯೆ ಇದ್ದಳು.

ಮೋಹಿನಿ ಹೇಳತೊಡಗಿದಳು: "ಭಾವನವರನ್ನು ಮನೆಯಲ್ಲಿಯೆ ಕಟ್ಟಿಹಾಕಬೇಡ ಅಕ್ಕಾ! ಕಷ್ಟದ ದಿನಗಳಿವು. ಒಂದು ಸಲ ನಿನ್ನ ಹೃದಯವನ್ನಿಷ್ಟು ಗಟ್ಟಿಮಾಡಿಕೊ. ಇಂದಿಲ್ಲ ನಾಳೆಯಾದರೂ ದೇವರು ಖಂಡಿತ ಕಣ್ಣೆತ್ತಿ ನೋಡುವ."

ವಿರಾಜ ಮೆಲ್ಲಮೆಲ್ಲನೆ ನುಡಿದಳು: "ನಾನಂತೂ ನನ್ನ ಹೃದಯವನ್ನು ಕಲ್ಲನ್ನಾಗಿಯೆ ಮಾಡಿದ್ದೇನೆ ತಂಗೀ!"

ಮೋಹಿನಿ ಸ್ವಲ್ಪ ಒತ್ತಿ ನುಡಿದಳು: "ಹಾಗಾದರೆ ನೀನೊಮ್ಮೆ ಹೋಗಿ ಬಾ ಅಕ್ಕಾ! ಭಾವನವರು ನಾಲ್ಕು ಜನಗಳಂತೆ ಕೈಯಲ್ಲಿ ಸ್ವಲ್ಪ

ಕಾಸು ಮಾಡಲಿ. ನನಗೆ ತುಂಬ ವಿಶ್ವಾಸವಿದೆ – ದೇವರು ಇನ್ನು ಸ್ವಲ್ಪ ದಿನಗಳಲ್ಲಿಯೆ ನಿಮ್ಮ ಮೇಲೆ ಪ್ರಸನ್ನನಾಗುವ."

ವಿರಾಜ ಒಂದಾವರ್ತಿ ಮೊಗವೆತ್ತಿ ಏನೊ ಹೇಳಬೇಕೆಂದಳು. ಆದರೆ ಪುನಃ ಮುಖ ಕೆಳಗೆ ಹಾಕಿ ಸುಮ್ಮನೆ ನಿಂತುಬಿಟ್ಟಳು.

ಮೋಹಿನಿ ಪುನಃ "ಹೋಗುವೆಯಲ್ಲವೆ ಅಕ್ಕ?" ಎಂದಳು. ಈಗ ವಿರಾಜಳಿಗೆ ಉತ್ತರ ಕೊಡದೆ ಗತ್ಯಂತರ ಉಳಿಯಲಿಲ್ಲ. ತಲೆಯಲ್ಲಾಡಿಸುತ್ತ "ಇಲ್ಲ, ನಿದ್ರೆಯಿಂದೆಚ್ಚತ್ತ ಬಳಿಕ ಅವರ ಮುಖವನ್ನು ಒಂದು ಸಲವಾದರೂ ನೋಡದೆ ನನ್ನ ಮನಸ್ಸು ಶಾಂತವಾಗದು. ಅವರ ಮುಖ ನೋಡದೆ ನಾನೊಂದು ದಿನವೂ ಕಳೆಯಲಾರೆ. ಆದುದರಿಂದ ತಂಗೀ, ನನ್ನಿಂದ ಅಸಾಧ್ಯವಾದುದನ್ನು ಮಾಡಲು ನನ್ನನ್ನು ಒತ್ತಾಯಪಡಿಸಬೇಡ," ಎಂದು ವಿರಾಜ ಹೋಗತೊಡಗಿದಳು. ಆದರೆ ಅವಳ ಹಿಂದೆಯೆ ಹೆಜ್ಜೆ ಹಾಕುತ್ತ ಮೋಹಿನಿ ಅಳುಮೊಗದಿಂದ ಕೂಗಿ ಹೇಳಿದಳು: "ಹೀಗೆ ಮಾಡಬೇಡ ಅಕ್ಕಾ. ಕೆಲದಿನಗಳ ಮಟ್ಟಿಗಾಗಿ ನೀನು ಇಲ್ಲಿಂದ ಹೋಗಲೆಬೇಕು. ನೀನು ಹೋಗುವವರೆಗೆ ನನಗೆಂದಿಗೂ ಶಾಂತಿಯುಂಟಾಗದು."

ವಿರಾಜ ತಿರುಗಿ ನಿಂತಳು. ಒಂದು ಗಳಿಗೆ ಹೊತ್ತು ಸ್ಥಿರತೆಯಿಂದಿದ್ದು "ಓಹೊ, ಈಗೆಲ್ಲ ಗೊತ್ತಾಯಿತು; ಬಹುಶಃ ಸುಂದರಿ ಬಂದಿದ್ದಳೆಂದು ತೋರುತ್ತೆ" ಎಂದಳು.

ತಲೆಹಾಕುತ್ತ "ಹೌದು, ಬಂದಿದ್ದಳು" ಎಂದಳು ಮೋಹಿನಿ.

"ಆದುದರಿಂದ ನಾನು ಇಲ್ಲಿಂದ ಹೊರಡಬೇಕೆನ್ನುವೆಯಾ?"

"ಹೌದಕ್ಕ, ಅದಕ್ಕಾಗಿಯೆ ಹೇಳುತಿದ್ದೇನೆ. ನೀನು ಹೋಗಿಬಾ ಅಕ್ಕ."

ವಿರಾಜ ಮತ್ತೆ ಕ್ಷಣಹೊತ್ತು ಮೌನಳಾಗಿದ್ದು: "ನಾಯಿಗೆ ಹೆದರಿ ನಾನು ಮನೆಬಿಟ್ಟು ಹೋಗಲೆ?" ಎಂದಳು.

ಮೋಹಿನಿ ಒಡನುಡಿದಳು: "ನಾಯಿಗೆ ಹುಚ್ಚು ಹಿಡಿಯಿತೆಂದರೆ ಆಗ ಅದಕ್ಕೂ ಹೆದರಲೆಬೇಕು ಅಕ್ಕಾ! ಅಲ್ಲದೆ ಆ ಹೆದರಿಕೆ ನಿನ್ನ ಮಟ್ಟಿಗಾಗಿ ಮಾತ್ರವಲ್ಲ. ಸ್ವಲ್ಪ ಯೋಚಿಸಿ ನೋಡು. ಅದರಿಂದ ಇನ್ನು ಎಷ್ಟು ಅನಿಷ್ಟಗಳು ಸಂಭವಿಸುವವೆಂದು."

ವಿರಾಜ ಕೆಲಕ್ಷಣ ಸುಮ್ಮನುಳಿದಳು. ಬಳಿಕ ಮೊಗವೆತ್ತಿ ಒಗರು ದನಿಯಲ್ಲಿ, "ಇಲ್ಲ, ನಾನಾವಕಾರಣಕ್ಕೂ ಇಲ್ಲಿಂದ ಹೆಜ್ಜೆಕಿತ್ತಲಾರೆ" ಎಂದವಳೆ ನೆಗೆಣ್ಣಿಯು ಉತ್ತರ ಹೇಳುವ ಮೊದಲೆ ವೇಗವಾಗಿ ಹೆಜ್ಜೆ ಇಡುತ್ತ ಹೊರಟು ಹೋದಳು. ಆದರೆ ಆವಳಿಗಾವುದೊ ಒಂದು ಭಯದ ಅರಿವಾಯಿತು. ಆವಳು ನಿತ್ಯ ನೀರುದುಂಬುವ ಘಟ್ಟದೆದುರಿನಲ್ಲಿಯೆ ಮತ್ತೊಂದು ಘಟ್ಟವು ಸಿದ್ಧವಾಗತೊಡಗಿತ್ತು. ನದಿಯಲ್ಲಿ ನೀರು ಕಡಿಮೆ ಯಾದರೂ ಮೀನು ಹಿಡಿಯುವ ಮಂಚವೊಂದು ಸಿದ್ಧವಾಗತೊಡಗಿತ್ತು. ಈ ಎಲ್ಲ ಕಾರ್ಯಗಳ ಮೂಲೋದ್ದೇಶ ವಿರಾಜಳಿಗೆ ತಿಳಿಯದಿರಲಿಲ್ಲ.

ಒಂದು ದಿನ ಸ್ನಾನಮಾಡಿಕೊಂಡು ಬಂದಬಳಿಕ ನೀಲಾಂಬರನೆಂದ: "ಆ ಬದಿಯಲ್ಲಿ ಘಟ್ಟವನ್ನು ಯಾರು ಕಟ್ಟಿಸಿದರು ವಿರಾಜ?"

ವಿರಾಜ ಒಮ್ಮೆಲೆ ಕುಪಿತಳಾಗಿ ಒಗರುದನಿಯಲ್ಲಿ: "ನಾನೇನು ಬಲ್ಲೆ?" ಎಂದು ಸಿಟ್ಟಿನಿಂದ ಹೊರಟು ಹೋದಳು.

ಹೆಂಡತಿಯ ಮುಖಭಾವ ನೋಡಿ ನೀಲಾಂಬರ ಅವಾಕ್ಕಾದ. ವಿರಾಜ ಆ ದಿನದಿಂದಲೇ ಹೊತ್ತು ವೇಳೆ ನೋಡದೆ ನೀರು ತರಲು ಘಟಕ್ಕೆ ಹೋಗುವುದನ್ನು ನಿಲ್ಲಿಸಿದಳು. ತೀರ ನಸುಕಿನಲ್ಲಿ ಇಲ್ಲವೆ ಕತ್ತಲಾದ ಬಳಿಕ ನದಿಗೆ ಹೋಗುತ್ತಿದ್ದಳಲ್ಲದೆ ಸಾವಿರ ಕೆಲಸ ನಿಂತುಹೋದರೂ ಆವಳು ನದಿಯ ಕಡೆಗೆ ಹೆಜ್ಜೆ ಹಾಕುತಿದ್ದಿಲ್ಲ. ಆದರೆ ಅಂತರಂಗದಲ್ಲಿಯೆ ಆವಳ ಹೃದಯ ಜುಗುಪ್ಸೆ ನಾಚಿಕೆ ಕೋಪಗಳಿಂದ ತುಂಬಿತುಳುಕುತ್ತಿತ್ತು. ಇದರಿಂದ ತನ್ನನ್ನು ಸಂಬಾಳಿಸಿಕೊಳ್ಳಲು ಅವಳಿಗೆ ಅತ್ಯಂತ ಕಠಿಣ ಹೋಗುತ್ತಿತ್ತು. ಅಲ್ಲದೆ ಗಂಡನ ಈ ಅತ್ಯಂತ ಅಸಭ್ಯವರ್ತನೆಯನ್ನೆದುರಿಸಿ ಬಾಯಿ ಬಿಚ್ಚಿ ಮಾತನಾಡುವ ಧೈರ್ಯವೂ ಅವಳಿಗೆ ಆಗ ಆಗಲಿಲ್ಲ.

ನಾಲ್ಕು ದಿನಗಳ ಬಳಿಕ ಒಂದು ದಿನ ಘಟ್ಟದ ಬಳಿ ಸ್ನಾನಮಾಡಿ ಮರಳಿ ಬರುವಾಗ ನೀಲಾಂಬರ ಮುಗುಳು ನಗುತ ಕೇಳಿದ: "ವಿರಾಜ, ನೀನು ಆ ಹೊಸ ಜಮೀನುದಾರನ ಆಡಂಬರ ನೋಡಿದೆಯಾ?"

ವಿರಾಜ ಗಂಡನ ಮನೋಭಾವವನ್ನರಿತಳು. ಏನೋ ವಿಚಾರಿಸುತ್ತ "ನೋಡುತ್ತಲೆ ಇದ್ದೇನೆ" ಎಂದಳು.

ಮುಗುಳುನಗುತ್ತ ನೀಲಾಂಬರನೆಂದ: "ಆ ಜಮೀನುದಾರ ಸ್ವಲ್ಪ ಹುಚ್ಚನಿರಬೇಕೆಂದು ತೋರುತ್ತೆ. ನದಿಯಲ್ಲಿ ನಾಲ್ಕಾರು ಚಿಕ್ಕಮೀನು ಜೀವಿಸುವಷ್ಟೂ ನೀರಿಲ್ಲ. ಆದರೂ ಆತ ನಸುಕಿನಲ್ಲಿಯೆ, ಪಟವನ್ನು ಬಿಚ್ಚಿ ದೋಣಿಯಲ್ಲಿ ಕುಳಿತಿದ್ದಾನೆ."

ವಿರಾಜ ಸುಮ್ಮನಿದ್ದಳು. ಜಮೀನುದಾರನ ಗೇಲಿಮಾಡಲು ಅವಳು ಗಂಡನೊಂದಿಗೆ ಸಹಕರಿಸಲಿಲ್ಲ.

ನೀಲಾಂಬರ ಹೇಳತೊಡಗಿದ: "ಆದರೆ ಅವನ ಈ ನಡತೆ ಸರಿಯಲ್ಲ. ಒಳ್ಳೆಯ ಮನೆತನದವರ ಮನೆಯ ಎದುರಿನಲ್ಲಿರುವ ಘಟ್ಟದ ಬಳಿ ಪರ ಪುರುಷನು ಇಡಿಯ ದಿನ ಹೀಗೆ ಕುಳಿತುಬಿಟ್ಟರೆ ಆ ಮನೆಯ ಹೆಣ್ಣುಮಕ್ಕಳು ಅಲ್ಲಿ ಬಂದು ಹೋಗುವುದು ಹೇಗೆ? ನಿನಗಂತೂ ಬಹಳ ಅನನುಕೂಲ ವಾಗುವುದು ಅಲ್ಲವೆ ? "

ವಿರಾಜಳೆಂದಳು : "ಅನನುಕೂಲವಾಗುವುದೆಂದು ಇಟ್ಟುಕೊಳ್ಳಿ. ಆದರೆ ಅದರಲ್ಲಿ ನಮ್ಮದೇನು ಅಧಿಕಾರ ? "

ನೀಲಾಂಬರನಿಗೂ ಸ್ವಲ್ಪ ಕಾವೇರಿತು. "ಅಧಿಕಾರವೇಕಿಲ್ಲ ? ನದಿಯೊಳಗೆ ಬೇರೆ ಸ್ಥಳವಿಲ್ಲವೆ, ಇಡಿಯ ದಿನ ದೋಣಿಯಲ್ಲಿ ಕುಳಿತು ತನ್ನ ಹುಚ್ಚುತನ ಪೂರೈಸಿಕೊಳ್ಳಲು ? ಇಲ್ಲಿಲ್ಲ, ನಾಳೆಯಿಂದ ಹಾಗೆಂದಿಗೂ ಮಾಡಗೊಡಲಾರೆ. ನಾಳೆ ನಸುಕಿನಲ್ಲಿ ಅವನ ಬಿಡಾರಕ್ಕೆ ಹೋಗಿ 'ದೋಣಿಯಲ್ಲಿ ಕುಳಿತು ಮೋಜುಮಾಡುವ ಮನಸ್ಸಿದ್ದರೆ ಬೇರೆ ಸ್ಥಳಕ್ಕೆ ಹೋಗುವ ಕೃಪೆಮಾಡಬೇಕು. ನನ್ನ ಮನೆಯೆದುರು ಹೀಗೆ ಕುಳಿತುಕೊಳ್ಳಲಾಗದು' ಎಂದು ಸ್ಪಷ್ಟವಾಗಿ ಹೇಳಿಯೆ ಬಿಡುವೆ."

ಗಂಡನ ಮಾತು ಕೇಳಿ ವಿರಾಜಳ ಮನದಲ್ಲಿ ಭಯಸಂಚಾರವಾಯಿತು. ಗಾಬರಿಯಿಂದ: "ಇಲ್ಲಿಲ್ಲ, ಅಲ್ಲಿ ಹೋಗಿ ಹಾಗೆ ಹೇಳುವ ಆವಶ್ಯಕತೆಯಿಲ್ಲ. ಅವರನ್ನು ತಡೆಯಲು ನದಿಯೇನು ನಮ್ಮದಷ್ಟೆ ಅಲ್ಲ" ಎಂದಳು.

ಹೆಂಡತಿಯ ಮಾತು ಕೇಳಿ ನೀಲಾಂಬರ ನಸು ಅಚ್ಚರಿಗೊಂಡ. "ಇದೇನು ಹೇಳುತ್ತಿರುವೆ ವಿರಾಜ ? ನದಿ ನಮ್ಮದಲ್ಲದಿದ್ದರೆ ಇಲ್ಲ. ಆದರೆ ತಾನು ಮಾಡುವ ಕೆಲಸ ಉಚಿತವೊ ಅನುಚಿತವೊ ಎಂಬುದನ್ನು ಸ್ವಲ್ಪವೂ

ವಿಚಾರಮಾಡದೆ ತನ್ನ ಮನಬಂದಂತೆ ಅವನು ಮಾಡಬಹುದೆ? ನಾನು ನಾಳೆಯೆ ಹೋಗಿ ಹೇಳಿಬರುವೆ. ಆತ ಕಿವಿಗೊಡದೆ ಹೋದರೆ ನನ್ನ ಕೈಯಿಂದಲೆ ಆ ಮೀನು ಹಿಡಿಯುವ ಮಂಚವನ್ನು ಕೆಡವಿಬಿಡುವೆ. ಮುಂದೆ ಏನು ಮಾಡುತ್ತಾನೊ ಮಾಡಲಿ."

ಗಂಡನ ಮಾತು ಕೇಳಿ ವಿರಾಜ ದಂಗಾದಳು. ಬಳಿಕ ಮೆಲ್ಲಮೆಲ್ಲನೆ "ಹಾಗಾದರೆ ನೀವು ಜಮೀನುದಾರನೊಂದಿಗೆ ಜಗಳ ಕಾಯಲು ಹೋಗುವಿರಾ?"

ನೀಲಾಂಬರನೆಂದ: "ಏಕೆ ಕೂಡದು? ತಾನು ಸಿರಿವಂತನೆಂದು ಅವನು ಮನಬಂದಂತೆ ಅನ್ಯಾಯಮಾಡಬೇಕೇನು? ನಾವು ಅವುಗಳನ್ನು ತೆಪ್ಪಗೆ ಸಹಿಸುತ್ತಿರಬೇಕೇನು?"

"ಅವನು ಅನ್ಯಾಯ ಮಾಡುತ್ತಿದ್ದಾನೆಂದು ನೀವು ಪ್ರಮಾಣಿಸಿ ಕೊಡಬಲ್ಲಿರಾ?"

ನೀಲಾಂಬರ ನಸುಗೋಪದಿಂದ ನುಡಿದ: "ಈ ಗೊಡ್ಡು ಮಾತಿಗೆ ಅಳುಕುವ ವ್ಯಕ್ತಿ ನಾನಲ್ಲ ವಿರಾಜ. ಅವನು ಅನ್ಯಾಯಮಾಡುತ್ತಿರುವುದನ್ನು ಕಂಣಾರೆ ನೋಡುತಿದ್ದೇನೆ. ಮತ್ತೆ ನೀನು ಕೆದರಿ ಕೇಳುತ್ತಿರುವೆ—ಅದನ್ನು ಪ್ರಮಾಣಿಸಿ ಕೊಡಬಹುದೆ ಹೇಗೆ ಎಂದು. ಪ್ರಮಾಣಿಸಿ ಕೊಡುವುದು ಬಿಡುವುದು ನನ್ನ ಕೆಲಸ."

ವಿರಾಜ ಗಳಿಗೆ ಹೊತ್ತು ಸ್ಥಿರಭಾವದಿಂದ ಗಂಡನನ್ನು ದಿಟ್ಟಿಸಿ "ನೋಡಿ, ಮೊದಲು ನಿಮ್ಮ ತಲೆಯನ್ನು ಶಾಂತವಾಗಿಟ್ಟುಕೊಳ್ಳಿ. ನಿತ್ಯ ಎರಡೂ ವೇಳೆ ಊಟಕ್ಕಿಲ್ಲದವರ ಬಾಯಿಯಿಂದ ಇಂಥ ಮಾತು ಹೊರಬಿದ್ದರೆ ಜನ ಉಗುಳಿಬಿಟ್ಟಾರು!"

"ಅದೇಕೆ?"

"ಅದೇಕೆಂದರೆ? ಹೇಳಿ, ನಿಮ್ಮಿಂದ ಸಾಧ್ಯವೆ—ಜಮೀನುದಾರನ ಮಗನೊಂದಿಗೆ ಜಗಳ ಕಾಯಲು?"

ವಿರಾಜಳ ಬಾಯಿಂದ ಈ ಮಾತು ಅತಿ ಕಟುವಾಗಿ ಬಂದಿತು. ನೀಲಾಂಬರನಿಗೆ ಸಹಿಸದಂತಾಯಿತು. ಒಮ್ಮೆಲೆ ದಳ್ಳುರಿಯಂತಾಗಿ ಗರ್ಜಿಸಿದ: "ನಾನೇನು ನಾಯಿ ಬೆಕ್ಕು ಎಂದು ತಿಳಿದೆಯಾ, ಮಾತು

ಮಾತಿಗೆ ಊಟಕ್ಕಿಲ್ಲ ಊಟಕ್ಕಿಲ್ಲ ಎಂದು ಹಂಗಿಸಲು, ಮನಸ್ಸಿಗೆ ಬರುವುದೆ ತಡ ಹೇಳಿದಳೆ – ಎರಡೂ ಹೊತ್ತು ಊಟಕ್ಕಿಲ್ಲ ಎಂದು! ತುಸು ಹೇಳು ನೋಡೋಣ. ನಿನಗೆ ಯಾವ ದಿನ ಎರಡೂ ಹೊತ್ತು ಊಟಕ್ಕೆ ಸಿಗಲಿಲ್ಲ!''

ದುಃಖಬವಣೆಗಳೊಂದಿಗೆ ನಿರಂತರ ದ್ವಂದ್ವ ಯುದ್ಧ ಹೂಡಿ ಹೂಡಿ ವಿರಾಜಳ ಶರೀರ ಜರ್ಜರಿತವಾಗಿತ್ತು. ಅವಳಲ್ಲಿ ಮೊದಲಿನಂತೆ ಧೈರ್ಯ ವಾಗಲಿ, ತಾಳ್ಮೆಯಾಗಲಿ ಇರಲಿಲ್ಲ. ಆದುದರಿಂದ ಅವಳು ಕೆರಳಿ ಚೀರು ದನಿಯಲ್ಲಿ "ಸುಮ್ಮನೆ ಬೊಬ್ಬಿಡುವಿರೇಕೆ! ಎರಡೂ ಹೊತ್ತಿನ ಊಟದ ವ್ಯವಸ್ಥೆ ಹೇಗೆ ನಡೆದಿದೆಯೆಂದು ನಿಮಗೆ ಗೊತ್ತಿರಲಿಕ್ಕಿಲ್ಲ. ಆದರೆ ನನಗೆ ಗೊತ್ತಿದೆ. ಮತ್ತಾರಿಗಾದರೂ ಗೊತ್ತಿದ್ದರೆ ಆ ಅಂತರ್ಯಾಮಿಗೆ. ಈ ಬಗ್ಗೆ ನೀವೆಂದಾದರು ಏನಾದರೂ ಆಡಿದರೆ ನಾನು ವಿಷತಿಂದು ಸಾಯುವೆ,'' ಎಂದು ಮೊಗವೆತ್ತಿ ನೋಡಿದಾಗ ನೀಲಾಂಬರನ ಮುಖ ಅತ್ಯಂತ ಕಳೆಗುಂದಿತ್ತು. ಅವನ ಕಣ್ಣುಗಳಲ್ಲಿ ವಿಹ್ವಲತೆ ಮೂಡಿತ್ತು. ನೋಡಿದರೆ ಏನು ಮಾಡಲೂ ತಿಳಿಯದವನಾಗಿ ಪೆಚ್ಚನಂತಾಗಿದ್ದಾನೆಂದು ಯಾರಿಗೂ ತಿಳಿಯುವಂತಿತ್ತು. ಗಂಡನ ಈ ಅವಸ್ಥೆ ನೋಡಿದೊಡನೆಯೆ ವಿರಾಜ ಇಳಿದೆಹೋದಳು. ಹೆಚ್ಚಿಗೇನೂ ಮಾತನಾಡದೆ ಮೆಲುಮೆಲನೆ ಹೊರಟು ಹೋದಳು.

ವಿರಾಜ ಹೊರಟುಹೋದ ಮೇಲೆಯೂ ನೀಲಾಂಬರ ಹಾಗೆಯೆ ನಿಂತಿದ್ದ. ಬಳಿಕ ನಿಡುದಾದ ಉಸಿರೊಂದೆಳೆದು ಹೊರಗೆ ದೇವೀಮಂದಿರದ ಒಂದು ಮೂಲೆಗೆ ಹೋಗಿ ಕುಳಿತ. ಅತಿ ಎತ್ತರವಿಲ್ಲದ ಮಾಡಿನಡಿಯಲ್ಲಿ ಕುಳಿತ ವ್ಯಕ್ತಿ ಯೋಚನಾಪರನಾಗಿ ಚಟ್ಟನೆ ಎದ್ದಾಗ, ಮಾಡು ತಲೆಗೆ ತಾಕಿ ಬವಳಿಬಂದಂತೆ ನಿಲಾಂಬರನ ಪರಿಸ್ಥಿತಿಯಾಯಿತು. ಅವನ ಕೋಪ ಏಟು ತಿಂದು ಕುಸಿದುಬಿತ್ತು. ಅಲ್ಲದೆ ಏಟೂ ಅಸಹನೀಯ ವಾದುದರಿಂದ ಮೃತಪ್ರಾಯವಾದಂತಾಯಿತು. ಆಗ ಒಂದೆ ಸವನೆ "ಹೊಟ್ಟೆ ಹೇಗೆ ಸಾಗಿದೆ?" ಎಂಬ ವಿರಾಜಳ ಮಾತು ಅವನ ಕಿವಿಯಲ್ಲಿ ಸುತ್ತತೊಡಗಿತು; ಜೊತೆಗೆ ಅಂದು ಅಂಧಕಾರಮಯ ಗಂಭೀರ ರಾತ್ರಿಯಲ್ಲಿ ಕೋಣೆಯ ಹೊರಗೆ ನೆಲದಮೇಲೆ ಮಲಗಿದ ವಿರಾಜಳ ಕ್ಲಾಂತಿಯುಕ್ತ

ಮುಖದ ನೆನಪೂ ಬಿಟ್ಟುಬಿಡದೆ ಬರತೊಡಗಿತು. ಇತ್ತೀಚೆ ಮನೆಯ ವೆಚ್ಚ ಹೇಗೆ ಸಾಗಿದೆಯೆಂದೂ ಹಾಗೂ ಸಹಾಯಹೀನ ತನ್ನ ಹೆಂಡತಿಯು ಯಾವ ರೀತಿ ಮನೆಯ ಖರ್ಚನ್ನು ನೀಗುತ್ತಿದ್ದಾಳೆಂದೂ ನಿಲಾಂಬರನಿಗೆ ತಿಳಿದುಕೊಳ್ಳಲು ಆಗ ವೇಳೆ ಹಿಡಿಯಲಿಲ್ಲ! ಸ್ವಲ್ಪ ಹೊತ್ತು ಮೊದಲು ವಿರಾಜ ಆಡಿದ ಮೊನೆಮಾತುಗಳು ಅವನ ಹೃದಯವನ್ನು ಶಲ್ಯದಂತೆ ಚುಚ್ಚಿದ್ದವು. ಅಲ್ಲಿಯೆ ಕುಳಿತು ಪರಿಸ್ಥಿತಿಯನ್ನು ವಿಚಾರಿಸಿದಂತೆಲ್ಲ ಅವನ ಹೃದಯದ ನೋವು ಕಡಿಮೆಯಾಯಿತು, ಅವನ ಶೋಕ ಶಾಂತವಾಯಿತು. ಅಲ್ಲದೆ ಮೆಲ್ಲಮೆಲ್ಲನೆ ಅವನ ಮುಖದಲ್ಲಿ ವಿರಾಜಳ ವಿಷಯವಾಗಿ ಶ್ರದ್ಧೆ ವಿಸ್ಮಯಗಳು ಮೂಡಿದವು. ಅವನ ವಿರಾಜ ಕೇವಲ ಅಂದಿನ ವಿರಾಜ ಳಾಗಿರಲಿಲ್ಲ. ಅದೆಷ್ಟೊ ಕಾಲದಿಂದ ಅದೆಷ್ಟೊ ಯುಗಯುಗಾಂತರಗಳಿಂದ ಅವನ ವಿರಾಜಳೆ ಆಗಿದ್ದಳು. ಕೇವಲ ಎರಡು ದಿನಗಳ ವ್ಯವಹಾರವನ್ನು ಲಕ್ಷಿಸಿ, ಇಲ್ಲವೆ ಮನಸ್ತಾಪದಲ್ಲಿ ಆಡಿಕೊಂಡ ಒಂದೆರಡು ಮಾತುಗಳ ನ್ನಾಲಿಸಿ ಅವಳ ವಿಷಯವಾಗಿ ವಿಚಾರಮಾಡುವಂತಿಲ್ಲ! ವಿರಾಜಳ ಹೃದಯ ಎಂಥ ಸತ್ತ್ವದಿಂದ ಪರಿಪೂರ್ಣವಾಗಿದೆಂಬುದು ನೀಲಾಂಬರನಷ್ಟು ಬೇರಾರಿಗೂ ಗೊತ್ತಿರಲಿಲ್ಲ.

ಹೆಂಡತಿಯ ವಿಷಯವಾಗಿ ವಿಚಾರಿಸಿದಂತೆಲ್ಲ ನೀಲಾಂಬರನ ಕಣ್ಣು ಗಳಿಂದ ಅಶ್ರುಗಳು ಪಳಪಳನೆ ಉದುರತೊಡಗಿದವು. ಒಮ್ಮೆಲೆ ಕೈಗಳೆರ ಡನ್ನೂ ಜೋಡಿಸಿ ಅಳುದನಿಯಲ್ಲಿ "ಹೇ ಭಗವಂತನೆ, ನನ್ನಲ್ಲಿದ್ದ ಎಲ್ಲ ವಸ್ತುಗಳನ್ನೂ ಕಸಿದುಕೊ. ಆದರೆ ನನ್ನ ವಿರಾಜಳನ್ನು ಮಾತ್ರ ಕಸಿದು ಕೊಳ್ಳಬೇಡ," ಎಂದು ಬೇಡಿಕೊಳ್ಳುವಾಗ, ಒಮ್ಮೆಲೆ ಯಾವುದೊ ಒಂದು ಪ್ರಬಲ ಆಕಾಂಕ್ಷೆ ಅವನ ಅಂತಃಕರಣದಲ್ಲಿ ತಟ್ಟನೆ ತಲೆಯೆತ್ತಿ ತನ್ನ ಪ್ರಿಯತಮೆಯನ್ನು ಒಂದು ಬಾರಿ ತಬ್ಬಿಕೊಳ್ಳೋಣವೆನಿಸಿತು. ನೀಲಾಂಬರ ಓಡುತ್ತಲೆ ವಿರಾಜಳ ಕೊಠಡಿಯ ಬಾಗಿಲು ಬಳಿ ನಿಂತುಕೊಂಡ. ಬಾಗಿಲು ಒಳಗಣಿಂದ ಇಕ್ಕಿತ್ತು. ಆದುದರಿಂದ ಅವನು ಹೊರಗೆ ನಿಲ್ಲಬೇಕಾಯಿತು. ನಿಂತಲ್ಲಿಂದಲೆ ಬಾಗಿಲು ತಟ್ಟುತ್ತ ಆವೇಗದಿಂದ ಕಂಪಿಸುವ ದನಿಯಲ್ಲಿ "ವಿರಾಜ!" ಎಂದು ಕೂಗಿದ.

ವಿರಾಜ ಬೋರಲುಬಿದ್ದು ಅಳುತ್ತಲಿದ್ದಳು. ಗಂಡನ ಕೊರಲದನಿ ಆಲಿಸಿದೊಡನೆಯೆ ಅವಳು ಎದ್ದು ಕುಳಿತಳು.

"ಏನುಮಾಡುತ್ತಲಿರುವೆ ವಿರಾಜ? ಬಾಗಿಲು ತೆರೆ." ಎಂದು ನೀಲಾಂಬರ ಪುನಃ ಕೂಗಿದ.

ಅಂಜುತ್ತಲೆ ವಿರಾಜ ಬಾಗಿಲು ಬಳಿ ಬಂದು ನಿಂತಳು.

ನೀಲಾಂಬರ ವ್ಯಸ್ತನಾಗಿ: "ಬಾಗಿಲನ್ನೇಕೆ ತೆರೆಯುವುದಿಲ್ಲ ವಿರಾಜ?"

ಆಗ ವಿರಾಜ ಬಿಗಿದ ಕಂಠದಲ್ಲಿ "ನೀವು ಹೊಡೆಯುವುದಿಲ್ಲವಷ್ಟೆ!" ಎಂದಳು.

"ಹೊಡೆಯುವೆನೆ?"

ಹೆಂಡತಿಯ ಈ ಮಾತು ಹರಿತ ಚೂರಿಯಿಂದ ಅವನ ಹೃತ್ಪಿಂಡ ತಿವಿದಂತಾಯಿತು. ವೇದನೆ, ಲಜ್ಜೆ ಹಾಗೂ ಅಭಿಮಾನಗಳ ಮೂಲಕ ಅವನ ಗಂಟಲವು ಬಿಗಿದುಕೊಂಡಿತು. ಬವಳಿ ಬಂದಂತಾಗಿ ಅವನು ಚೌಕಟ್ಟಿಗೆ ಆನಿಕೊಂಡು ನಿಂತುಬಿಟ್ಟ. ವಿರಾಜಳಿಗೆ ಇದಾವುದೂ ತಿಳಿಯ ಲಿಲ್ಲ. ಇರಿತದಮೇಲೆ ಇರಿತ ಹಾಕುತ್ತ "ಇನ್ನು ನಾನೆಂದಿಗೂ ಇಂಥ ಮಾತುಗಳನ್ನಾಡುವುದಿಲ್ಲ. ಹೇಳಿ, ಹೊಡೆಯುವುದಿಲ್ಲವಷ್ಟೆ!" ಎಂದು ಅಂಗಲಾಚಿಕೊಂಡಳು.

ತೊದಲುವ ನಾಲಗೆಯಿಂದ 'ಇಲ್ಲ' ವೆನ್ನುವುದರಲ್ಲಿ ನೀಲಾಂಬರನಿಗೆ ಸಾಕುಬೇಕಾಯಿತು. ವಿರಾಜಳೂ ಅಳುಕುತ್ತ ಬಳುಕುತ್ತ ಮೆಲ್ಲನೆ ಕೊಂಡಿ ಸಡಲಿಸಿದಳು. ಬಾಗಿಲು ತೆರೆದೊಡನೆಯೆ ನೀಲಾಂಬರ ನಡಗುವ ಹೆಜ್ಜೆ ಯಿಂದ ಜೋಲಿ ಹೊಡೆಯುತ್ತ ಚಾಪೆಯ ಬಳಿ ಬಂದು ಕುಪ್ಪಳಿಸಿಬಿದ್ದ. ಅವನ ಕಣ್ಣುಗಳೆರಡೂ ಮುಚ್ಚಿದ್ದವು. ನಿಮಿಲಿತ ನೇತ್ರಗಳೆರಡರಿಂದಲೂ ಅಶ್ರುಧಾರೆ ಒಂದೆ ಸವನೆ ಹರಿಯತೊಡಗಿತು. ಗಂಡನ ಇಂತಹ ಮುಖ ದೃಶ್ಯ ವಿರಾಜ ಈವರೆಗೂ ಕಂಡಿರಲಿಲ್ಲ. ಈಗ ಅವಳಿಗೆಲ್ಲ ಚೆನ್ನಾಗಿ ಅರ್ಥವಾಯಿತು. ಎದ್ದು ಗಂಡನ ತಲೆಯ ಬಳಿ ಕುಳಿತಳು. ಅತ್ಯಂತ ನೇಹದಿಂದ ಅವನ ತಲೆಯನ್ನು ತೊಡೆಯ ಮೇಲಿಟ್ಟುಕೊಂಡು ಸೀರೆಯಿಂದ ಅವನ ಕಂಬನಿಯೊರಸತೊಡಗಿದಳು. ಮೆಲ್ಲನೆ ಸಂಜೆಯ ಕತ್ತಲು ಕೋಣೆ ಯಲ್ಲಿ ಗಾಢವಾಗತೊಡಗಿತು. ಆದರೂ ದಂಪತಿಗಳಲ್ಲಿ ಯಾರ ಬಾಯಿಯೂ

ತೆರೆಯಲಿಲ್ಲ, ಯಾರೂ ಮಾತಾಡಲಿಲ್ಲ. ಕತ್ತಲಲ್ಲಿಯೆ ಹಾಸಿಗೆಯ ಮೇಲೆ ಇಬ್ಬರೂ ಮೌನವಾಗಿ ಕುಳಿತಿದ್ದರು. ಆದರೆ ದಂಪತಿಗಳು ಮನದಲ್ಲಿಯೆ ಯಾವ ಯಾವ ಮಾತುಗಳನ್ನಾಡಿಕೊಂಡರೊ ಅಂತರ್ಯಾಮಿಯೆ ಬಲ್ಲ. ನೀಲಾಂಬರ ಯೋಚಿಸತೊಡಗಿದ: "ವಿರಾಜ ಇಂಥ ಮಾತುಗಳನ್ನು ಆಡಿದಳಾದರೂ ಹೇಗೆ? ನಾನು ಅವಳನ್ನು ಹೊಡೆಯಬಹುದೆಂಬ ವಿಚಾರ ಅವಳ ಮನದಲ್ಲಿ ಮೂಡಿತಾದರೂ ಹೇಗೆ? ನಾನು ಅಷ್ಟು ನೀಚನೆಂದು ಹೇಗೆ ಬಗೆದಳು? ಇತ್ತೀಚೆ ನನ್ನ ದಾಂಪತ್ಯ ಜೀವನ ಅತ್ಯಂತ ದುಃಖ ಮಯವಾಗಿದೆ. ನಿತ್ಯವೂ ಒಂದಿಲ್ಲೊಂದು ತೊಂದರೆ ಇದ್ದೇ ಇರುತ್ತದೆ. ಸಾಲದ್ದಕ್ಕೆ ಇದೊಂದು ಬೇರೆ ಏನೊ ಪ್ರಾರಂಭವಾಗಿದೆಯಲ್ಲ! ಸರಿಯಾಗಿ ಎರಡು ದಿನ ಕಳೆಯುವುದರಲ್ಲಿಯೆ ಯಾವುದಾದರೊಂದು ವಿಷಯವಾಗಿ ನಮ್ಮಿಬ್ಬರಲ್ಲಿ ಜಗಳವೆ ಹುಟ್ಟುತ್ತಿದೆಯಲ್ಲ! ಇತ್ತಿತ್ತ ನಮ್ಮಲ್ಲಿ ಮಾತು ಮಾತಿಗೆ ವ್ಯಥೆಗೆ ಕಾರಣವಾಗುತ್ತಿದೆ, ನೋಟ ಕೂಡಿದಾಗ ಜಗಳಕ್ಕೆ ಮೂಲವಾಗುತ್ತದೆ. ಹೆಜ್ಜೆ ಹೆಜ್ಜೆಗೆ ಮತಭೇದ ಹೆಚ್ಚುತ್ತಿದೆ. ನೀಲಾಂಬರ ನಿಗೆ ದೊಡ್ಡ ಚಿಂತೆಯೊಂದೆ—"ನನ್ನ ವಿರಾಜ ಇತ್ತೀಚೆ ಹೇಗೊ ಆಗುತ್ತಿದ್ದಾಳಲ್ಲ! ಅವಳ ಆರೋಗ್ಯ ಮತ್ತು ಸೌಂದರ್ಯ ದಿನದಿನಕ್ಕೂ ಕ್ಷೀಣಿಸಿದಂತೆ ಅವಳ ಮಧುರ ಸ್ವಭಾವವೂ ಕಟುವಾಗುತ್ತಿದೆಯಲ್ಲ! ಈ ಎಲ್ಲ ವಿಷಯಗಳನ್ನು ವಿಚಾರಮಾಡುತ್ತ ಮಾಡುತ್ತ ನೀಲಾಂಬರನಿಗೆ ತನ್ನ ಬನ್ನದ ಮುನ್ನೀರಿನ ಕೊನೆಯೆ ತೋಚಲಿಲ್ಲ.

ಭಗವಂತನಲ್ಲಿ ನೀಲಾಂಬರನ ಭಕ್ತಿ ಅತುಲವಾದುದು, ನಿಶ್ಚಲ ವಾದುದು. ಭಗವಂತನ ಲೀಲೆಯಲ್ಲಿ ಅವನಿಗೆ ಅಸೀಮ ವಿಶ್ವಾಸ. ಆದುದರಿಂದ ಅವನು ತನ್ನ ದುರ್ದೈವವನ್ನೆ ಹಳಿದುಕೊಂಡನಲ್ಲದೆ ಮನ ದಲ್ಲಿಯೂ ಸಹ ಯಾರನ್ನು ನಿಂದಿಸಲೂ ಇಲ್ಲ. ಯಾರಮೇಲೂ ದೋಷಾ ರೋಪಣೆಯನ್ನೂ ಮಾಡಲಿಲ್ಲ. ದೇವೀಮಂದಿರದ ಗೋಡೆಯಮೇಲೆ ರಾಧಾಕೃಷ್ಣರ ಸುಂದರಮೂರ್ತಿಯ ಚಿತ್ರಪಟವೊಂದು ತೂಗುಬಿದ್ದಿತ್ತು. ಆ ಮೂರ್ತಿಯ ಎದುರು ನಿಂತು ಒಂದೆಸವನೆ ಅಳುತ್ತ-"ಹೇ ಭಗವಂತನೆ ನನ್ನನ್ನು ಇಂಥ ದುಃಖದಲ್ಲಿ ತೊಳಲಾಡಿಸುವುದೆ ನಿನ್ನ ಇಚ್ಛೆಯಾಗಿದ್ದರೆ ನನ್ನನ್ನಿಷ್ಟು ನಿರುತ್ಸಾಹಿಯನ್ನಾಗಿ ಅದೇಕೆ ಹುಟ್ಟಿಸಿದೆ? ನಾನೆಷ್ಟು

ಸಹಾಯಹೀನ, ಎಷ್ಟು ಅಸಮರ್ಥನಿರುವೆನೆಂದು ನಾನಲ್ಲದೆ ಬೇರೆ ಯಾರು ಬಲ್ಲರು ? ”

ನೀಲಾಂಬರನಿಗೆ ಓದೂ ಬಾರದು; ಉದ್ಯೋಗ ದಂಧೆಗಳೊಂದೂ ತಿಳಿಯದು. ಅವನಿಗೆ ಗೊತ್ತಿದ್ದುದೇನೆಂದರೆ ದೀನದುಃಖಿಗಳ ಸೇವೆ; ಕಲಿತಿದ್ದನೆಂದರೆ ದೇವರ ನಾಮಸ್ಮರಣೆ ಮಾತ್ರ. ಇದರಿಂದ ಪರರ ದುಃಖ ದೂರಾಗುವುದೇನೋ ನಿಜ. ಆದರೆ ಈ ಸಂಕಟ ಕಾಲದಲ್ಲಿ ತನ್ನ ದುಃಖ ಹೇಗೆ ದೂರವಾದೀತು? ಇಂದು ಅವನಲ್ಲಿ ಏನೂ ಇಲ್ಲ. ಪೂರಾ ಬೋರೇಗೌಡನಾಗಿದ್ದಾನೆ. ಆದುದರಿಂದ ದುಃಖಪೀಡೆ ಸಹಿಸಲು ಅಸಮರ್ಥನಾಗಿ ಅನೇಕ ಸಲ ಮನದಲ್ಲಿಯೆ: “ಇನ್ನು ನಾನಿಲ್ಲಿರಲಾರೆ. ನೋಟ ಹೋದೆಡೆ ವಿರಾಜಳೊಂದಿಗೆ ಹೊರಟುಹೋಗುವೆ. ಆಧರೆ ಈ ಏಳು ತಲೆಗಳ ವಾಸಸ್ಥಾನವನ್ನು ತೊರೆದು ಯಾವ ಗಿಡದ ನೆರಳು ಆಶ್ರಯಿಸಿ ಸುಖಹೊಂದಲಿ! ಈ ಚಿಕ್ಕ ನದಿ, ಗಿಡ ಬಳ್ಳಿಗಳಿಂದ ಮುಕುರಿದ ಈ ಮನೆ, ಹುಟ್ಟಿದಾರಭ್ಯ ಪರಿಚಿತವಾದ ಮುಖ, ಇವೆಲ್ಲವುಗಳನ್ನು ತೊರೆದು ಎಂಥ ದೇಶಕ್ಕೂ ಅದೇಕೆ ಸ್ವರ್ಗಕ್ಕೂ ಹೋದರೂ ನಾನೊಂದು ದಿನವೂ ಬದುಕಲಾರೆ! ನನ್ನ ತಾಯಿ ಸ್ವರ್ಗವಾಸಿಯಾದುದೂ ಇದೆ ಮನೆಯಲ್ಲಿ. ಮೃತ್ಯುಶಯ್ಯೆಯಲ್ಲಿ ಒರಗಿದ ತಂದೆಯ ಸೇವೆಯನ್ನು ಮಾಡಿದುದು ಇದೇ ಮನೆಯಲ್ಲಿಯೆ. ತಂದೆಯು ಕಾಲವಾದ ಬಳಿಕ ಅವರ ಅಂತ್ಯಕ್ರಿಯೆಯನ್ನು ಮಾಡಿದುದೂ ಇದೆ ಗಂಗೆಯ ತಟದಲ್ಲಿ. ಪುಟ್ಟಿಯ ಪಾಲನೆ ಪೋಷಣೆಯಾದುದೂ ಈ ಮನೆಯಲ್ಲಿಯೆ. ಅವಳ ಮದುವೆ ಆದುದೂ ಇದೆ ಮನೆಯಲ್ಲಿ. ಆದರೂ ನಾನು ಈ ಮನೆಯ ಮೋಹವನ್ನು ಇಂದು ಹೇಗೆ ಕಡಿದುಕೊಳ್ಳಲಿ ? ”

ನೀಲಾಂಬರ ಅಲ್ಲಿಯೆ ಕುಳಿತು ಕೈಗಳಿಂದ ಮುಖ ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅಳತೊಡಗಿದ. ಅವನಿಗಿರುವ ದುಃಖವಿಷ್ಟೆ ಏನು ? ತಂಗಿಯ ಮದುವೆಯಾದಂದಿನಿಂದ ಈ ವರೆಗೆ ಅವಳ ಕ್ಷೇಮ ಸಮಾಚಾರವೂ ಅವನಿಗೆ ತಿಳಿದಿಲ್ಲ. ಎಷ್ಟೋ ದಿನಗಳಿಂದ ಅವಳ ಮುಖದರ್ಶನವೂ ಇಲ್ಲ. ‘ಅಂಣಾ, ಅಂಣಾ’ ಎಂಬ ಅವಳ ಏರು ದನಿಯ ಕರೆಯನ್ನೂ ಆಲಿಸಿಲ್ಲ.

ಆಗ ನೀಲಾಂಬರನಿಗೆ ತಂಗಿಯ ಸ್ಮರಣೆಯಲ್ಲದೆ ಬೇರಾವುದೂ ತಲೆಯಲ್ಲಿ ಸುಳಿಯುತ್ತಿರಲಿಲ್ಲ. ಅವನಿಗೆ ಯೋಚನೆಯೊಂದೆ—ತನ್ನ ತಂಗಿ ಅತ್ತೆಯ ಮನೆಯಲ್ಲಿ ಅದೆಷ್ಟು ಕಷ್ಟ ಸಹಿಸುತಿದ್ದಾಳೊ ಅದೆಷ್ಟು ಅಳುತಿದ್ದಾಳೊ! ಆದರೆ ಅದು ಅವನ ಕಲ್ಪನೆ ಮಾತ್ರ. ನಿಜವಾಗಿ ಪುಟ್ಟಿಯ ವಿಷಯವಾಗಿ ಅವನಿಗಾವ ವರ್ತಮಾನವೂ ಇರಲಿಲ್ಲ. ಪುಟ್ಟಿಯ ವಿಷಯವಾಗಿ ತಾನು ವಿರಾಜಳೆದುರು ಒಂದು ಮಾತೂ ಆಡುವಂತಿಲ್ಲವಲ್ಲವೆಂಬುದೆ ಅವನ ಹೆಚ್ಚಿನ ಚಿಂತೆಗೆ ಕಾರಣ. ಪುಟ್ಟಿಯ ಪಾಲನೆ-ಪೋಷಣೆ ವಿರಾಜಳೆ ಮಾಡಿದಳೆಂಬುದೇನೊ ನಿಜ. ಆದರೂ ಅವಳು ಪುಟ್ಟಿಯನ್ನು ಮರೆತಳು. ಆದರೆ ನೀಲಾಂಬರ ತನ್ನ ತಂಗಿಯನ್ನು ಹೇಗೆ ಮರೆತಾನು? ಎಷ್ಟೆಂದರೂ ಅವರು ಒಡಹುಟ್ಟಿದವರಲ್ಲವೆ? ಪುಟ್ಟಿ ಚಿಕ್ಕವಳಿರುವಾಗ ಅವಳನ್ನು ಕಂಕುಳಲ್ಲಿ, ಹೆಗಲಮೇಲೆ ಎತ್ತಿಕೊಂಡೇ ಕೆಲಸಕ್ಕೆ ಹೋಗುತಿದ್ದ. ತಾನೆಲ್ಲಿ ಹೋದರೂ ತನ್ನೊಂದಿಗೆ ಪುಟ್ಟಿಯನ್ನು ಕರೆದುಕೊಂಡೇ ಹೋಗುತಿದ್ದ. ಈ ಬಗ್ಗೆ ನೀಲಾಂಬರ ಅದೆಷ್ಟೊ ಚುಚ್ಚು ಮಾತುಗಳನ್ನು ಅಪಹಾಸ್ಯಗಳನ್ನು ಸಹಿಸಿಕೊಳ್ಳಬೇಕಾಯಿತು. ಆದರೆ ಆತನೆಂದೂ ಯಾವ ಕಾರಣದಿಂದಲೂ ಪುಟ್ಟಿಗೆ ಅಳುವುದಕ್ಕೆ ಆಸ್ಪದವೀಯಲಿಲ್ಲ. ಮನೆಯಲ್ಲಿ ಪುಟ್ಟಿಯನ್ನು ಅಳುವುದಕ್ಕೆ ಬಿಟ್ಟು ಹೊರಗೆ ಕಾಲಿಡಲೂ ಅವನಿಂದಾಗುತಿದ್ದಿಲ್ಲ. ಇವೆಲ್ಲ ಕೇವಲ ಅಂಣ ತಂಗಿಯರಿಗಲ್ಲದೆ ಅನ್ಯರಾರಿಗೂ ಗೊತ್ತಿಲ್ಲ.

ವಿರಾಜ ಅರಿತೂ ಅರಿಯದವಳಂತಿದ್ದಳು. ಈ ವಿಷಯವಾಗಿ ಅವಳೆಂದೂ ಚಕಾರ ಶಬ್ದವನ್ನೆತ್ತುತಿರಲಿಲ್ಲ. ಪುಟ್ಟಿಯ ವಿಷಯವಾಗಿ ಅವಳು ಕಲ್ಲು ಮೂರ್ತಿಯಂತೆ ಬಾಯಿಯಿಲ್ಲದವಳಂತಿರುತಿದ್ದಳು. ನಿರಪರಾಧಿ ನಾದಿನಿಯನ್ನು ಅಪರಾಧಿಯಂತೆ ಕಾಣುತಿದ್ದಳು. ಇದು ನೀಲಾಂಬರನ ಎದೆಯಲ್ಲಿ ಬಾಣದಂತೆ ಚುಚ್ಚುತಿತ್ತು. ಆದರೆ ಆ ಬಗ್ಗೆ ಚಕಾರವೆತ್ತಲೂ ಅವನಿಗೆ ಯಾವ ಮಾರ್ಗವೂ ಇರಲಿಲ್ಲ. ಎಂದಾದರೂ ತಾನೆ ಈ ವಿಷಯವಾಗಿ ಮಾತನ್ನೆತ್ತಿದಾಗ ವಿರಾಜ ಒಮ್ಮೆಗೆ ನಡುವೆ ಬಾಯಿಹಾಕಿ: “ ಆ ಮಾತೆಲ್ಲ ಇರಲಿ. ಅವಳು ಮಹಾರಾಣಿಯೆ ಆಗಲಿ. ಆದರೆ ನಮಗೇಕೆ ಆ ಚರ್ಚೆ ” ಎಂದು ಬಿಡುತ್ತಿದ್ದಳು. ಈ ‘ ಮಹಾರಾಣಿ ’ ಎಂಬ ಶಬ್ದವನ್ನು ವಿರಾಜ ವಿಚಿತ್ರವಾಗಿ ಉಚ್ಚರಿಸುವಾಗ ನೀಲಾಂಬರನ ಅಂತರಾತ್ಮವೂ ಕೂಡ ಉರಿ

ದೇಳುತಿತ್ತು. ತಂಗಿಯು ಹಿರಿಯರ ಶಾಪಕ್ಕೆ ಗುರಿಯಾದಾಳು, ಅವಳಿಗೇ ನಾದರೂ ಅನಿಷ್ಟ ಒದಗೀತು ಎಂಬ ಶಂಕೆಯಿಂದ ಮನದಲ್ಲಿಯೆ ವ್ಯಾಕುಲ ಗೊಳ್ಳುತಿದ್ದ. ಮನದಲ್ಲಿಯೆ ಅವಳ ಕಲ್ಯಾಣಕ್ಕಾಗಿ ದೇವನಲ್ಲಿ ಮೊರೆ ಯಿಡುತಿದ್ದ. ಸಾಧ್ಯವಾದಾಗ ಹೆಂಡತಿಗೆ ಕಾಣದಂತೆ ಪೂಜೆ ಅನುಷ್ಠಾನ ಗಳನ್ನೂ ಮಾಡುತಿದ್ದ. ಈ ರೀತಿ ನೀಲಾಂಬರನ ದಿನಗಳು ಸಾಗಿದ್ದವು.

ದುರ್ಗಾ ಪೂಜೆಯ ಸಮಯ ಬಂದಿತು. ಈಗ ನೀಲಾಂಬರನಿಂದ ತಡೆಯಲಾಗಲಿಲ್ಲ. ಹೆಂಡತಿಗೆ ತಿಳಿಯದಂತೆ ಎಲ್ಲಿಂದಲೊ ಸ್ವಲ್ಪ ಹಣ ಸಂಪಾದಿಸಿ ಕಡಿಮೆ ಬೆಲೆಯ ಒಂದು ಸೀರೆಯನ್ನೂ ಸ್ವಲ್ಪ ಮಿಠಾಯಿಯನ್ನು ಕೊಂಡು ಸುಂದರಿಯ ಬಳಿಗೆ ಬಂದ.

ಸುಂದರಿ ಮಣೆ ಹಾಕಿದಳು. ಚಿಲುಮೆಗೆ ಹೊಗೆಸೊಪ್ಪು ಹಾಕಿ ತಂದು ಕೊಟ್ಟಳು. ಮಣೆಯ ಮೇಲೆ ಕುಳಿತು ನೀಲಾಂಬರ ತನ್ನ ಹರಕು ಶಲ್ಲೆಯಿಂದ ಸೀರೆಯನ್ನೂ ಮಿಠಾಯಿಯನ್ನೂ ಹೊರದೆಗೆದು ಸುಂದರಿಯ ಇದಿರಿನಲ್ಲಿಟ್ಟ. "ಸುಂದರೀ, ನೀನು ಅವಳನ್ನು ಲಾಲಿಸಿ ಇಷ್ಟು ದೊಡ್ಡ ವಳನ್ನಾಗಿ ಮಾಡಿದೆ! ಹೋಗು-ಒಮ್ಮೆ ಅವಳನ್ನು ನೋಡಿಕೊಂಡು ಬಾ" ಎಂದ ನೀಲಾಂಬರ.

ಇದಕ್ಕಿಂತ ಹೆಚ್ಚು ನೀಲಾಂಬರನಿಂದ ಮಾತನಾಡಲಾಗಲಿಲ್ಲ. ಮುಖ ಹೊರಳಿಸಿ ಶಲ್ಲೆಯಿಂದ ಕಂಣೊರೆಸತೊಡಗಿದ.

ಇತ್ತೀಚೆ ನೀಲಾಂಬರನ ಸಂಸಾರ ಹೇಗೆ ಸಾಗಿದೆ ಎಂದು ಸುಂದರಿ ಬಲ್ಲಳು. ಸುಂದರಿಯಷ್ಟೆ ಅಲ್ಲ, ಹಳ್ಳಿಯುಲ್ಲೆಲ್ಲರೂ ಬಲ್ಲರು. "ಅವಳು ಈಗ ಹೇಗಿದ್ದಾಳೆ ಒಡೆಯಾ?" ಎಂದು ಸುಂದರಿ ಕೇಳಿದಳು.

"ಏನೂ ಗೊತ್ತಿಲ್ಲ" ಎಂದ ನೀಲಾಂಬರ ತಲೆಯಲ್ಲಾಡಿಸುತ್ತ. ಸುಂದರಿ ತಿಳಿವಳಿಕೆಯಿಲ್ಲದ ಹೆಂಗುಸಲ್ಲ. ಪರಿಸ್ಥಿತಿಯನ್ನು ಅರಿಯುವಷ್ಟು ಬುದ್ಧಿ ಶಕ್ತಿ ಅವಳಿಗಿತ್ತು. ಆದುದರಿಂದ ಅವಳೂ ಹೆಚ್ಚಿನ ಗೋಜಿಗೆ ಹೋಗದೆ, "ಆಗಲಿ ಒಡೆಯಾ, ನಾನು ನಾಳೆಯೆ ಹೋಗುವೆ" ಎಂದಳು. ನೀಲಾಂಬರ ಅವಳಿಗೆ ದಾರಿಯ ವೆಚ್ಚಕ್ಕಾಗಿ ಹಣ ಕೊಡಲು ಹೋದ. "ಬೇಡ ಒಡೆಯಾ, ಬೇಡ. ನಾನು ತೆಗೆದುಕೊಳ್ಳಲಾರೆ. ನೀವು ಸೀರೆ

ಕೊಂಡು ತಂದಿರಿ ಇಲ್ಲದಿದ್ದರೆ ಅದನ್ನೂ ತೆಗೆದುಕೊಳ್ಳುತ್ತಿದ್ದಿಲ್ಲ. ನಿಮ್ಮಂತೆ ನಾನೂ ಅವಳನ್ನು ಸಲಹಿ ದೊಡ್ಡವಳನ್ನಾಗಿ ಮಾಡಿದ್ದೇನೆ."

ನೀಲಾಂಬರನ ಕಂಣುಗಳಿಂದ ಪುನಃ ಕಂಬನಿಗಳುದುರ ತೊಡಗಿದವು. ಮುಖ ಹೊರಳಿಸಿ ಕಂಣುಗಳನ್ನೊರೆಸತೊಡಗಿದ. ಈ ರೀತಿಯ ಸಹಾನುಭೂತಿಯ ಮಾತನ್ನು ಅವನು ಈವರೆಗೆ ಯಾರ ಬಾಯಿಯಿಂದಲೂ ಕೇಳಿರಲಿಲ್ಲ. ಎಲ್ಲರೂ ಹೇಳುವುದೊಂದೆ: "ನೀಲಾಂಬರ ಬಹು ದೊಡ್ಡ ತಪ್ಪು ಮಾಡಿದ; ಅನ್ಯಾಯ ಮಾಡಿದ. ಪುಟ್ಟಿಯ ಕಾರಣದಿಂದಲೆ ನೀಲಾಂಬರ ದಂಪತಿಗಳ ಸರ್ವನಾಶವಾಯಿತು.'' ನೀಲಾಂಬರ ಏಳುವ ಸಿದ್ಧತೆ ಮಾಡುತ್ತ: ''ನಮ್ಮ ಕಷ್ಟ ನಷ್ಟಗಳ ಬಗ್ಗೆ ಪುಟ್ಟಿಗೆ ಸ್ವಲ್ಪವೂ ತಿಳಿಯಕೂಡದು" ಎಂದು ವಿಶೇಷವಾಗಿ ಎಚ್ಚರಿಕೆ ಕೊಟ್ಟ.

ನೀಲಾಂಬರ ಹೊರಟು ಹೋದ. ಸುಂದರಿಯು ಸೆರಗಿನಿಂದ ಕಂಣನ್ನು ಒರೆಸಿಕೊಂಡಳು. ನೀಲಾಂಬರನ ಗುಣವೆ ಅಂತಹದು. ಎಲ್ಲರೂ ಅವನನ್ನು ಮನಸ್ಸಿನಲ್ಲಿ ಪ್ರೀತಿಸುವವರೆ. ಅವನ ಬಗ್ಗೆ ಎಲ್ಲರಲ್ಲಿಯೂ ಅಪಾರ ಶ್ರದ್ಧೆ.

## ೮.

ವಿಜಯ ದಶಮಿಯ ದಿನ ಮಧ್ಯಾಹ್ನ ವಿರಾಜ ಮಲಗುವ ಕೋಣೆ ಹೊಕ್ಕು ಬಾಗಿಲಿಕ್ಕಿ ಕೊಂಡಳು. ಸಂಜೆಯ ಮುಂದೆ ಅನೇಕ ಜನರು ಅವಳ ಮನೆಗೆ ಬಂದರು. ನೀಲೂಕಕ್ಕ ಎಂದು ಕೆಲವರು, ನೀಲೂ ಅಣ್ಣಾ ಎಂದು ಹಲವರು ಕರೆಯುತ್ತ ಒಳಗೆ ನುಗ್ಗಿದರು. ಹಲವರು ಹೊರಗಿನಿಂದಲೆ ಕೂಗತೊಡಗಿದರು.

ನೀಲಾಂಬರ ಸುರ್ಕಿದ ಮುಖದೊಂದಿಗೆ ದೇವೀ ಮಂದಿರದಿಂದ ಹೊರ ಬಂದು ಅವರೆದುರು ನಿಂತ. ಅವರು ಪದ್ಧತಿಯಂತೆ ಅವನಿಗೆ ನಮಸ್ಕಾರ ಮಾಡಿ, ಅವನನ್ನು ತಬ್ಬಿಕೊಂಡು ಅನಂತರ ಮನೆಯೊಡತಿಗೆ ನಮಸ್ಕಾರ ಮಾಡಲು ಒಳಗೆ ಸಾಗಿದರು. ನೀಲಾಂಬರನೂ ಅವರ ಜೊತೆಗೆ ಒಳಗೆ ಬಂದ. ವಿರಾಜ ಅಡುಗೆ ಮನೆಯಲ್ಲಿಲ್ಲದುದನ್ನೂ ಮಲಗುವ ಕೋಣೆ

ಇಕ್ಕಿದುದನ್ನೂ ನೋಡಿ ಬಾಗಿಲು ತಟ್ಟಿತ್ತು: "ವಿರಾಜ, ಮಕ್ಕಳು ನಿನಗೆ ನಮಸ್ಕರಿಸಲು ಬಂದಿದ್ದಾರೆ" ಎಂದ.

ವಿರಾಜ ಒಳಗಿನಿಂದಲೆ "ನನಗೆ ಬಹಳ ಜ್ವರ ಬಂದಿದೆ. ಬಹಳ ನಿತ್ರಾಣ" ಎಂದಳು.

ಅವರೆಲ್ಲರೂ ಹೊರಟು ಹೋದ ಬಳಿಕ ಸ್ವಲ್ಪ ಹೊತ್ತಿನ ಮೇಲೆ ಪುನಃ ಬಾಗಿಲು ತಟ್ಟುವ ಸದ್ದಾಯಿತು. ವಿರಾಜ ಉತ್ತರವೀಯಲಿ ಇಲ್ಲ. ಹೊರಗಿನಿಂದಲೆ ಕೋಮಲ ಕಂಠವೊಂದು ಕೇಳಿ ಬಂತು — "ಅಕ್ಕಾ, ನಾನು ಮೋಹಿನಿ. ಸ್ವಲ್ಪ ಬಾಗಿಲು ತೆರೆ."

ವಿರಾಜ ಸುಮ್ಮನಿದ್ದಳು.

ಮೋಹಿನಿ ಮತ್ತೆ: "ಆದಾಗದು ಅಕ್ಕಾ-ಬಾಗಿಲ ಬಳಿ ರಾತ್ರಿಯೆಲ್ಲವೂ ನಿಂತರೂ ಪರವಿಲ್ಲ ಇಲ್ಲಿಂದ ಹೆಜ್ಜೆ ಕಿತ್ತಲಾರೆ. ನಿನ್ನ ಆಶೀರ್ವಾದ ಪಡೆದ ಬಳಿಕ ನಾನು ಇಲ್ಲಿಂದ ಹೋಗುವುದು."

ವಿರಾಜ ಬಾಗಿಲು ತೆರೆದು ಅವಳೆದುರಿನಲ್ಲಿ ನಿಂತಳು. ಮೋಹಿನಿ ಒಂದು ಕೈಯಲ್ಲಿ ತಿನಿಸನ್ನಿರಿಸಿದ ತಟ್ಟೆಯನ್ನೂ ಇನ್ನೊಂದರಲ್ಲಿ ಹಾಲು ತುಂಬಿದ ಲೋಟವನ್ನೂ ಹಿಡಿದು ನಿಂತಿದ್ದಳು. ಅವುಗಳನ್ನು ವಿರಾಜಳ ಕಾಲು ಬಳಿಯಿಟ್ಟು ಮೋಹಿನಿ ತನ್ನ ಹಣೆಯನ್ನು ಅಕ್ಕನ ಪಾದಗಳಿಗೆ ಮುಟ್ಟಿಸಿ ನಮಸ್ಕಾರ ಮಾಡಿ "ಅಕ್ಕ, ನಾನೂ ನಿನ್ನಂತೆಯೆ ಆಗಲೆಂದು ಹರಸು. ನಾನು ನಿನ್ನಿಂದ ಬೇರಾವ ಆಶೀರ್ವಾದವನ್ನು ಪಡೆಯ ಲಿಚ್ಛಿಸುವುದಿಲ್ಲ."

ವಿರಾಜ ತನ್ನ ಸಜಲ ನೇತ್ರಗಳನ್ನು ಒರೆಸಿಕೊಂಡು ನೀರವಳಾಗಿ ಮೋಹಿನಿಯ ಬಾಗಿದ ಶಿರದ ಮೇಲೆ ಹಸ್ತವನ್ನಿಟ್ಟಳು.

ಮೋಹಿನಿ ಎದ್ದು ನಿಂತು: "ಅಕ್ಕ ಈ ದಿನ ಕಣ್ಣೀರು ಸುರಿಸ ಕೂಡದು. ಆದರೆ ಈ ಮಾತನ್ನು ನಿಮಗೆ ಹೇಳುವುದು ನನ್ನವಳಿಗೆ ಯೋಗ್ಯವಲ್ಲ. ಆದರೆ ನಿನ್ನ ದೇಹಕ್ಕೆ ಸೋಂಕಿದ ಗಾಳಿ ನನ್ನ ದೇಹಕ್ಕೆ ಸೋಂಕಿದರೆ ಸಾಕು, ಅದರ ಬಲದಿಂದಲೆ ಮುಂದಿನ ವರುಷ ಇದೇ ದಿನ ಏನು ಸಂಭವಿಸಬಹುದೆಂದು ಇಂದೆ ಹೇಳಬಲ್ಲೆ ಅಕ್ಕಾ!"

ಮೋಹಿನಿ ಹೋದ ಬಳಿಕ ವಿರಾಜ, ಆ ತಿನಿಸನ್ನು ಕೋಣೆಯಲ್ಲಿಟ್ಟು ಗಂಭೀರಳಾಗಿ ಕುಳಿತು ಬಿಟ್ಟಳು. ಮೋಹಿನಿ ತನ್ನ ಮೇಲೆ ಪೂರ್ಣ ಲಕ್ಷ್ಯ ವಿಟ್ಟಿದ್ದಾಳೆಂದು ವಿರಾಜಳಿಗಿಂದು ಮತ್ತಿಷ್ಟು ಸ್ಪಷ್ಟವಾಗಿ ತಿಳಿಯಿತು. ಬಳಿಕ ಅದೆಷ್ಟೋ ಹುಡುಗರು ಬಂದು ಹೋದರು. ಆದರೆ ವಿರಾಜ ಪುನಃ ಬಾಗಿಲನ್ನು ಇಕ್ಕಿಕೊಳ್ಳಲಿಲ್ಲ. ನೆಗೆಂಣಿ ಕೊಟ್ಟು ಹೋದ ತಿನಿಸನ್ನು ಪ್ರಸಾದವೆಂದು ಹಂಚಿ ವಿರಾಜ ವಿಜಯ ದಶಮಿಯನ್ನು ಆಚರಿಸಿದಳು.

ಮಾರನೆಯ ದಿನ ವಿರಾಜ ಆಯಾಸಗೊಂಡವಳಾಗಿ ಜಗುಲಿಯ ಮೇಲೆ ಪಲ್ಲೆ ಆರಿಸುತ್ತಲಿದ್ದಳು. ಆಗ ಸುಂದರಿ ಬಂದು ನಮಸ್ಕರಿಸಿದಳು. ವಿರಾಜ ಅವಳನ್ನು ಆಶೀರ್ವದಿಸಿ ಕುಳಿತುಕೊಳ್ಳಲು ಹೇಳಿದಳು.

ನೆಲದ ಮೇಲೆ ಕುಳಿತುಕೊಳ್ಳುತ್ತಲೆ ಸುಂದರಿ ನುಡಿದಳು: "ನಿನ್ನೆಯೆ ಹೇಳಬೇಕೆಂದಿದ್ದೆ ತಾಯಿ, ರಾತ್ರಿ ಬಹಳ ಹೊತ್ತಾದುದರಿಂದ ಈಗ ಬೆಳಗಾದ ಕೂಡಲೆ ಬಂದೆ. ನೀವೇನೆ ಹೇಳಿ ತಾಯಿ, ನನಗೆ ಅದೆಲ್ಲ ಮೊದಲೆ ಗೊತ್ತಿದ್ದರೆ ನಾನೆಂದಿಗೂ ಅಲ್ಲಿ ಕಾಲಿಡುತಿದ್ದಿಲ್ಲ."

ವಿರಾಜಳಿಗೆ ಸುಂದರಿಯ ಮಾತಿನ ಅರ್ಥವೆ ಆಗಲಿಲ್ಲ. ಅವಳು ಸುಂದರಿಯ ಮುಖವನ್ನೆ ದಿಟ್ಟಿಸತೊಡಗಿದಳು.

ಸುಂದರಿ ಹೇಳತೊಡಗಿದಳು: "ಮನೆಯಲ್ಲಿ ಯಾರೂ ಇರಲಿಲ್ಲ. ಮುದಿ ಸೋದರತ್ತೆಯೊಬ್ಬಳ ಹೊರತು ಉಳಿದವರೆಲ್ಲರೂ ಪಶ್ಚಿಮ ದೇಶಕ್ಕೆ ತಿರುಗಾಡಲು ಹೋಗಿದ್ದಾರೆ. ಆ ಮುದಿ ಸೋದರತ್ತೆ ಎಂಥ ಮಾತುಗಳ ನ್ನಾಡಿದಳಮ್ಮಾ–ಕೇಳಿ ದಂಗಾದೆ. 'ತೆಗೆದುಕೊಂಡು ಹೋಗು ನಿನ್ನ ಈ ಸೀರೆಯನ್ನು. ಅಳಿಯನಿಗೊಂದು ಒಳ್ಳೆಯ ದೋತರ ಸಹ ಕಳುಹಿಸಲಿಲ್ಲ. ಸಾದಾ ನೂಲಿನ ಸೀರೆಯಿಂದ ಹಬ್ಬದ ಕಾಣಿಕೆ ಕೊಡಲು ಬಂದಿದ್ದಾಳೆ ಈಕೆ!" ಎಂದು ಸಿಡುಕಿ ಬಾಯಿಗೆ ಬಂದಂತೆ ಆಡಿದಳು. ಅವೆಲ್ಲ ನನಗೀಗ ನೆನಪಿಲ್ಲ. ಅಲ್ಲದೆ ಅವುಗಳ ಪುನರುಕ್ತಿ ಮಾಡಲೂ ಮನಸ್ಸಿಲ್ಲ.''

ವಿಸ್ಮಯದಿಂದ ವಿರಾಜ ಕೇಳಿದಳು: "ಇದನ್ನೆಲ್ಲ ಯಾರು ಯಾರನ್ನು ಕುರಿತು ಹೇಳಿದ್ದೆ ಸುಂದರಿ?''

''ಹಾಗೆಂದರೇನು? ನಮ್ಮ ಒಡೆಯನನ್ನು ಕುರಿತು ಹೇಳಿದ್ದು. ಅಲ್ಲದೆ ಮತ್ತಾರಿಗೆ ಹೇಳಬೇಕು?''

ವಿರಾಜ ಅಧೀರಳಾದಳು. ಅವಳಿಗೊಂದೂ ಗೊತ್ತಿರಲಿಲ್ಲ. ಆದುದರಿಂದ ಅವಳಿಗೇನೂ ಅರ್ಥವಾಗಲಿಲ್ಲ. "ನಮ್ಮ ಯಜಮಾನರನ್ನು ಕುರಿತು ಯಾರು ಏನೆಂದರೆ? ಸ್ವಲ್ಪ ವಿವರವಾಗಿ ತಿಳಿಸು."

ವಿರಾಜಳ ಈ ಮಾತು ಕೇಳಿ ಸುಂದರಿ ಕೊಂಚ ಅಚ್ಚರಿಗೊಂಡಳು. "ಈ ವರೆಗೆ ನಾನು ಹೇಳುತ್ತಿರುವುದು ಅದೆ ವಿಷಯ ತಾಯಿ! ಪುಟ್ಟಿಯ ಮುದಿ ಸೋದರತ್ತೆಗೆ ಅದೆಷ್ಟು ಜಂಬವಮ್ಮಾ! ಮಹಾ ಸಿಡುಕಿನ ಸ್ವಭಾವ ದವಳು. ಅವಳು ಸೀರೆ ತೆಗೆದುಕೊಳ್ಳಲೆ ಇಲ್ಲ; ಹಿಂದಿರುಗಿ ಕೊಟ್ಟುಬಿಟ್ಟಳು." ಎಂದು ಸುಂದರಿ ಉಡಿಯೊಳಗಿಂದ ಸೀರೆಯನ್ನು ಹೊರದೆಗೆದು ವಿರಾಜಳ ಮುಂದೆ ಇಟ್ಟಳು.

ಈಗ ವಿರಾಜಳಿಗೆ ಎಲ್ಲವೂ ಅರ್ಥವಾಯಿತು. ನೆಟ್ಟನೋಟದಿಂದ ಆ ಸೀರೆಯನ್ನೆ ನೋಡತೊಡಗಿದಳು. ಅವಳ ಸರ್ವಾಂಗವೂ ಉರಿಯ ತೊಡಗಿತು.

ನೀಲಾಂಬರನೆಲ್ಲಿಗೊ ಹೋಗಿದ್ದ. ಯಾವಾಗ ಮರಳಿ ಬರುವು ದೆಂಬುದೂ ಗೊತ್ತಿರಲಿಲ್ಲ. ಆದುದರಿಂದ ಸುಂದರಿ ಅವನ ನಿರೀಕ್ಷಣೆ ಮಾಡದೆ ಹೊರಟು ಹೋದಳು.

ಮಧ್ಯಾಹ್ನ ನೀಲಾಂಬರ ಊಟ ಮಾಡುತ್ತ ಕುಳಿತಿದ್ದ. ವಿರಾಜ ಕೋಣೆಯಿಂದ ಆ ಸೀರೆ ತಂದು ಅವನೆದುರಿಡುತ್ತ "ಸುಂದರಿ ಇದನ್ನು ಕೊಟ್ಟು ಹೋದಳು" ಎಂದಳು.

ಮೊಗವೆತ್ತಿ ನೋಡುತ್ತಲೆ ನೀಲಾಂಬರ ಒಮ್ಮೆಲೆ ಬೆದರಿದ. ವಿರಾಜಳ ಎದುರು ಈ ವಿಷಯ ಈ ಬಗೆಯಾಗಿ ಹೊರಬಿದ್ದೀತೆಂದು ಆತ ಕನಸಿನಲ್ಲಿಯೂ ಬಗೆದಿರಲಿಲ್ಲ. ಹೆಚ್ಚಿನ ಗೊಡವೆಗೆ ಹೋಗದೆ ಕೆಳಗೆ ಮುಖ ಮಾಡಿ ಕುಳಿತು ಬಿಟ್ಟ.

ವಿರಾಜ ನುಡಿದಳು: "ಈ ಸೀರೆಯನ್ನು ಅವರೇಕೆ ಸ್ವೀಕರಿಸಲಿಲ್ಲ? ಏಕೆ ಹಿಂದಿರುಗಿ ಕೊಟ್ಟರು? ಸಾಲದ್ದಕ್ಕೆ ಮೇಲೆ ಏನೆಂದು ಉಡುಗೊರೆ ಯಿತ್ತು ಕಳುಹಿದ್ದಾರೆ — ಇವೆಲ್ಲವನ್ನೂ ಸುಂದರಿಯ ಬಳಿಗೆ ಹೋದಾಗ ನಿಮಗೆ ತಿಳಿಯುವುದು."

ಆದರೂ ನೀಲಾಂಬರ ಮುಖವೆತ್ತಲಿಲ್ಲ. ಈ ವಿಷಯವಾಗಿ ಒಂದು ಮಾತು ಕೇಳುವ ಇಚ್ಛೆಯೂ ಇಲ್ಲವೆನ್ನುವಂತಿತ್ತು ಅವನ ಮುಖಭಾವ. ವಿರಾಜಳೂ ಸುಮ್ಮನುಳಿದಳು.

ನೀಲಾಂಬರನ ಹಸಿವೆ ನೀರಡಿಕೆ ಒಮ್ಮೆಲೆ ಇಂಗಿಹೋಯಿತು. ತಾನು ಭಯಭೀತನಾಗಿ ಮುಖ ಕೆಳಗೆ ಮಾಡಿ ಕುಳಿತಾಗ ವಿರಾಜ ಸ್ಥಿರನೋಟದಿಂದ ತನ್ನನ್ನೆ ನಿರುಕ್ಷಿಸುತ್ತಿದ್ದಾಳೆಂದೂ ಅವಳ ಕಣ್ಣುಗಳಿಂದ ಬೆಂಕಿ ಮಳೆ ಹೊರಬೀಳುತ್ತಿದೆಯೆಂದೂ ಅವನಿಗೆನಿಸುತ್ತಿತ್ತು.

ಸಾಯಂಕಾಲ ಸುಂದರಿಯ ಮನೆಗೆ ಹೋಗಿ ನೀಲಾಂಬರ ಎಲ್ಲವನ್ನೂ ಕೇಳಿ ತಿಳಿದುಕೊಂಡ. ಬಳಿಕ "ಆ ಜನ ಪಶ್ಚಿಮಕ್ಕೆ ತಿರುಗಾಡಲು ಹೋಗಿದ್ದಾರೆಂದಮೇಲೆ ಅವರೆಲ್ಲರೂ ಸೌಖ್ಯವಾಗಿರಬೇಕಲ್ಲವೆ ಸುಂದರಿ ?" ಎಂದ.

ಸುಂದರಿ ತಲೆದೂಗುತ್ತ "ಹೌದು ಒಡೆಯಾ, ಅವರು ಸೌಖ್ಯವಾಗಿರಲೇಬೇಕು." ಎಂದಳು.

ನೀಲಾಂಬರನ ಮುಖದಮೇಲೆ ಸಂತೋಷದ ಚಿಹ್ನೆ ಮಿನುಗಿತು. "ಅವಳೆಷ್ಟು ದೊಡ್ಡವಳಾಗಿರಬಹುದು ಸುಂದರಿ! ನೀನು ಅವಳನ್ನು ಕಂಡೆಯಾ ?"

ಸುಂದರಿ ನಗುತ್ತಲೆ, "ಇಲ್ಲ ಒಡೆಯಾ, ಅವಳು ನನಗೆ ಬೆಟ್ಟಿಯಾಗಲೆ ಇಲ್ಲ" ಎಂದಳು.

ಈ ಪ್ರಶ್ನೆ ಕೇಳಿದುದಕ್ಕಾಗಿ ನಾಚಿಕೊಂಡು ನೀಲಾಂಬರನೆಂದ: "ಹಾಂ, ನಿನಗೆ ಅವನ ಬೆಟ್ಟಿಯಾಗಿರಲಿಕ್ಕಿಲ್ಲ. ಆದರೆ ಅವಳ ಕ್ಷೇಮ ಸಮಾಚಾರವನ್ನೂ ಆಳು ಹೋಳುಗಳಿಂದ ತಿಳಿದುಕೊಳ್ಳಲಿಲ್ಲವೆ ?"

"ಇಲ್ಲ ಒಡೆಯಾ, ಇಲ್ಲ! ಅವಳ ಸೋದರತ್ತೆ ವಿಚಿತ್ರವಾಗಿ ಕೈ ಮುರಿದು ಮೈ ಕೊಂಕಿಸಿ ಕಟುಮಾತುಗಳನ್ನಾಡತೊಡಗಿದುದರಿಂದ ಕ್ಷೇಮ ಸಮಾಚಾರ ವಿಷಯ ಎರಡನೆಯವರಿಂದ ತಿಳಿದುಕೊಳ್ಳಬೇಕೆಂಬುದೂ ನನ್ನ ಲಕ್ಷ್ಯದಲ್ಲಿ ಉಳಿಯಲಿಲ್ಲ. ಅಲ್ಲದೆ ನನಗಂತೂ ಅಲ್ಲಿಂದ ಸುಸೂತ್ರ ಪಾರಾಗಿ ಬರಲು ದಾರಿ ಸಿಗುವುದೊ ಇಲ್ಲವೊ ಎಂದೆನಿಸಿತು."

ಕೋಪದಿಂದ ನೀಲಾಂಬರ ಮುಖ ಕಪ್ಪಿಟ್ಟಿತ್ತು. ಕೆಲಗಳಿಗೆ ಸ್ಥಿರವಾಗಿ ಕುಳಿತು "ಹೌದು ಸುಂದರಿ. ನಮ್ಮ ಪುಟ್ಟಿ ಹೇಗಿರಬಹುದು? ಸೊರಗಿರಬಹುದೊ ಅಥವಾ ಹೃಷ್ಟಪುಷ್ಟಳಾಗಿರಬಹುದೊ?" ಎಂದು ಕೇಳಿದ.

ಉತ್ತರವಿತ್ತು ಇತ್ತು ಸುಂದರಿ ಸೋತುಹೋಗಿದ್ದಳು. ಆದುದರಿಂದ "ಹೃಷ್ಟಪುಷ್ಟಳಾಗಿರಬೇಕು" ಎಂದು ಸಂಕ್ಷಿಪ್ತ ಉತ್ತರವಿತ್ತಳು.

ನೀಲಾಂಬರ ಆಶಾನ್ವಿತನಾದ. "ಬಹುಶಃ ನೀನು ಈ ವಿಷಯ ಕೇಳಿ ಬಂದಿರಬೇಕು ಅಲ್ಲವೆ?"

ತಲೆಯಲ್ಲಾಡಿಸುತ್ತ ಸುಂದರಿಯೆಂದಳು: "ಇಲ್ಲ ಒಡೆಯಾ, ನಾನು ಯಾರೊಂದಿಗೆ ಏನೂ ವಿಚಾರಿಸಲಿಲ್ಲ."

"ಹಾಗಾದರೆ ನಿನಗೆ ಇದು ಹೇಗೆ ಗೊತ್ತಾಯಿತು?"

ಈ ಸಲ ಸುಂದರಿ ಸ್ವಲ್ಪ ಸಿಡಿಮಿಡಿಗೊಂಡು: "ನಾನು ವಿಚಾರಿಸಿದ್ದರೆ ತಾನೆ? ಅವಳು ಹೇಗಿರಬಹುದೆಂದು ಕೇಳಿದಿರಿ. ಹೃಷ್ಟಪುಷ್ಟಳಾಗಿರಬಹುದೆಂದು ಹೇಳಿದೆ."

ತಲೆಯಲ್ಲಾಡಿಸುತ್ತ ಕೋಮಲದನಿಯಲ್ಲಿ "ಓ: ಹಾಗೇನು?" ಎಂದು ನೀಲಾಂಬರ ಸುಂದರಿಯ ಮುಖವನ್ನು ನಿಟ್ಟಿಸಿ ನೋಡತೊಡಗಿದ. ಬಳಿಕ ಉಸಿರ್ಗರೆದು "ಸರಿ, ಈಗ ಹೋಗುವೆ ಸುಂದರಿ, ಮತ್ತಾವಾಗಾದರೂ ಬರುವೆ" ಎಂದು ಎದ್ದು ನಿಂತ.

ಈಗ ಸುಂದರಿ ಸಮಾಧಾನದ ಉಸಿರೆಳೆದುಕೊಂಡಳು ನಿಜವಾಗಿ ಅವಳದೇನೂ ಅಪರಾಧವಿರಲಿಲ್ಲ. ಒಂದು, ಆದರಲ್ಲಿ ಹೇಳಿಕೊಳ್ಳುವಂತಹ ವಿಷಯವೇನೂ ಇರಲಿಲ್ಲ. ಅಲ್ಲದೆ ಒಂದೆ ಮಾತನ್ನು ನೂರಾರು ರೀತಿ ಹೇಳಿದರೂ ನೀಲಾಂಬರನ ಕುತೂಹಲವು ಕಡಿಮೆಯಾಗುವಂತಿರಲಿಲ್ಲ. ಈ ರೀತಿ ಒಂದೆ ಸವನೆ ಎರಡು ಗಂಟೆ ಕಾಲ ಚರ್ವಿತಚರ್ವಣ ಮಾಡಿ ಸುಂದರಿ ಬೇಸತ್ತಿದ್ದಳು. ಆದ್ದರಿಂದ ನೀಲಾಂಬರ ಹೋಗುವ ಮಾತು ಆಡಿದಾಗ ಅವಳು ತ್ವರಿತವಾಗಿ "ಹಾಗೆ ಆಗಲಿ ಒಡೆಯಾ, ಈಗ ರಾತ್ರಿಯಾಯಿತು. ಮತ್ತಾವಾಗಾದರೂ ಸ್ವಲ್ಪ ಬೇಗ ಬನ್ನಿ. ಸಾಕಷ್ಟು ಮಾತನಾಡೋಣವಂತೆ" ಎಂದಳು.

ಇಷ್ಟು ಹೊತ್ತಾದ ಬಳಿಕ ಸುಂದರಿಯ ವಿಶೇಷ ವ್ಯಗ್ರತೆಯ ಕಡೆಗೆ ನೀಲಾಂಬರನ ಲಕ್ಷ್ಯ ವೇಧಿಸಿತು. "ಸರಿ, ನಾನು ಬರುವೆ" ಎಂದವನೆ ಹೊರಟುಹೋದ.

ಸುಂದರಿಯ ಈ ಉತ್ಕಂಠತೆಗೆ ಒಂದು ವಿಶೇಷ ಕಾರಣವೂ ಇತ್ತು. ಈ ವಾತುಕತೆ ನಡೆದ ಸಮಯದಲ್ಲಿಯೆ ನಿತಾಯಿ ಗಂಗೊಳ್ಳಿ ಅವಳ ಮನೆಗೆ ಬರುವ ಸಮಯ. ನಿತಾಯಿ ಸನಿಹದ ಕೇರಿಯಲ್ಲಿರುತ್ತಿದ್ದ. ಸುಂದರಿಯ ಯೋಗಕ್ಷೇಮ ವಿಚಾರಿಸುವುದಕ್ಕೂ, ತನ್ನ ಪಾದಧೂಳಿ ಕೆಡಹುವುದಕ್ಕೂ ನಿತ್ಯ ಅವನು ಅವಳ ಮನೆಗೆ ಬರುತ್ತಿದ್ದ. ತನ್ನ ಒಡೆಯ ಮನೆಯಲ್ಲಿರುವಾಗಲೆ ಪಾದಧೂಳಿ ಕೆಡಹಲು ನಿತಾಯಿ ಎಲ್ಲಿ ಬಂದುಬಿಡುವನೊ ಎಂಬ ಶಂಕೆ ಸುಂದರಿಯ ಎದೆಯನ್ನು ಸುಡುತ್ತಿತ್ತು. ಇತ್ತಿತ್ತಲಾಗಿ ಅನೇಕ ಕಾರಣಗಳಿಂದ ಸುಂದರಿಯ ಕಣ್ಣುಗಳು ನೆತ್ತಿಗೇರಿದ್ದವು. ಜಮೀನ್ದಾರನ ಅನುಗ್ರಹಕ್ಕೆ ಪಾತ್ರಳಾದುದರಿಂದ ಅವಳ ಲಜ್ಜೆ ಗರ್ವದ ರೂಪಕ್ಕೆ ಪರಿವರ್ತನವಾಗುತ್ತಲಿತ್ತು. ಆದರೂ ಈ ನಿಷ್ಕಲಂಕ ಸದ್ಬ್ರಾಹ್ಮಣನೆದುರು ತನ್ನ ನಿಜಸ್ವರೂಪ ತೋರಿಸುವ ಧೈರ್ಯ ಅವಳಿಗಾಗಲಿಲ್ಲ. ಈ ಕಾರಣದಿಂದಲೆ ನೀಲಾಂಬರನು ಬಹಳ ಸಮಯ ಕುಳಿತಾಗ ಅವನ ಸಮ್ಮುಖದಲ್ಲಿಯೆ ನಿತಾಯಿಯ ಆಗಮನವೆಲ್ಲಿಯಾಗುವುದೊ ಎಂದು ಶಂಕಾಪೀಡಿತಳಾಗಿ, ನಾಚಿಕೆಯಿಂದ ಸಾಯುವಂತಾದಳು.

ನೀಲಾಂಬರ ಹೊರಬಿದ್ದಕೂಡಲೆ ಸುಂದರಿ ಹರುಷಗೊಂಡು ಬಾಗಿಲು ಮುಚ್ಚಲು ಎದ್ದು ಬಂದಳು. ಆದರೆ ದೃಷ್ಟಿ ಎತ್ತಿ ನೋಡಲಾಗಿ ನೀಲಾಂಬರ ಮರಳಿ ಬರುತ್ತಿದ್ದುದನ್ನು ಕಂಡಳು. ಆದ್ದರಿಂದ ಬಾಗಿಲಿಗೆ ಒರಗಿಕೊಂಡು ಇಳಿಮೊಗದಿಂದ ಅಲ್ಲಿಯೆ ನಿಂತಳು.

ಸನಿಹಕ್ಕೆ ಬಂದು ನೀಲಾಂಬರ ಒಂದು ಸಲ ಅನುಮಾನಿಸಿದ. ಬಳಿಕ ಶಲ್ಲೆಯಿಂದ. ಅರ್ಧಾಣೆ ನಾಣ್ಯವೊಂದನ್ನು ಹೊರದೆಗೆದು ಲಜ್ಜಾಯುಕ್ತ ಕೋಮಲ ಕಂಠದಲ್ಲಿ, "ಸುಂದರಿ, ನಿನ್ನಲ್ಲಿ ಏನು ಹೇಳಲೂ ನಾನು ನಾಚಿಕೊಳ್ಳುವ ಕಾರಣವಿಲ್ಲ. ನಿನಗೆ ನನ್ನ ಪರಿಸ್ಥಿತಿ ಗೊತ್ತಿಲ್ಲದಿಲ್ಲ. ನನ್ನ ಬಳಿ ಇರುವುದು ಇದೊಂದೆ ಅರ್ಧಾಣೆ ನಾಣ್ಯ. ಇದನ್ನು ತೆಗೆದುಕೊ"

ಎಂದು ನೀಲಾಂಬರ ಅದನ್ನು ಕೊಡಲು ಕೈ ಮುಂದೆ ಮಾಡಿದ. ಆದರೆ ಸುಂದರಿ ನಾಲಿಗೆ ಕಚ್ಚಿ ಹಿಂದೆ ಸರಿದಳು.

ನೀಲಾಂಬರ ದೈನ್ಯದಿಂದ: "ಸುಂದರಿ, ನಾನು ನಿನಗೆ ಬಹಳ ತೊಂದರೆ ಕೊಟ್ಟೆ. ಆದರೆ ಹೋಗಿ-ಬರುವ ವೆಚ್ಚವನ್ನೂ ಕೊಡಲಿಲ್ಲ." ಹೆಚ್ಚು ಮಾತಾಡಲು ಅವನಿಂದಾಗಲಿಲ್ಲ. ಅವನ ಕುತ್ತಿಗೆ ಬಿಗಿದುಕೊಂಡಿತು.

ಸುಂದರಿ ಗಳಿಗೆ ಹೊತ್ತು ಯೋಚಿಸಿ ಬಳಿಕ ಕೈಯೊಡ್ಡಿದಳು. "ಇಲ್ಲಿ ಕೊಡಿ. ನಿಮ್ಮ ಪಾಡು ಹೇಗಿದ್ದರೂ ನೀವು ನನಗಾವಾಗಲೂ ಒಡೆಯರೆ. ನಿಮ್ಮ ಮಾತನ್ನು ಮೀರುವುದು ನನಗೆ ಭೂಷಣವಲ್ಲ" ಎಂದು ಅವಳು ಅರ್ಧಾಣೆ ನಾಣ್ಯ ತೆಗೆದುಕೊಂಡಳು. ಬಳಿಕ ಅದನ್ನು ತಲೆಗೆ ಸವರಿಕೊಂಡು, ಸೆರಗಿನಲ್ಲಿ ಕಟ್ಟಿಕೊಳ್ಳುತ್ತಲೆ: "ಸ್ವಲ್ಪ ಒಳಗೆ ಬನ್ನಿ" ಎಂದು ಸುಂದರಿ ಒಳಗೆ ಹೋದಳು. ಅವಳ ಹಿಂದೆಯೆ ನೀಲಾಂಬರನೂ ಪಡಸಾಲೆಗೆ ನಡೆದ.

ಸುಂದರಿ ಕೋಣೆಯೊಳಗೆ ಹೋಗಿ ನಿಮಿಷಾರ್ಧದಲ್ಲಿ ಮುಷ್ಟಿದುಂಬ ರೂಪಾಯಿ ತಂದು ನೀಲಾಂಬರನ ಕಾಲು ಬಳಿ ಇಟ್ಟಳು. ತರುವಾಯ ಸಾಷ್ಟಾಂಗ ನಮಸ್ಕಾರ ಮಾಡಿ ಪಾದ ಧೂಳಿಕೊಂಡು ಎದ್ದುನಿಂತಳು.

ನೀಲಾಂಬರ ಅಚ್ಚರಿಯಿಂದ ಪೆಚ್ಚನಂತಾದುದನ್ನು ಕಂಡು ನಸುಮುಗುಳು ನಗುತ್ತಲೆ ಹೇಳಿದಳು. "ಹೀಗೆ ದಿಟ್ಟಿಸಿನೋಡುತ್ತ ನಿಲ್ಲುವುದರಿಂದ ಕೆಲಸವಾಗದು. ನಾನು ಚಿರಕಾಲದಿಂದಲೂ ನಿಮ್ಮ ದಾಸಿ. ನಾನು ಶೂದ್ರಳಿರಬಹುದು. ಆದರೂ ಹೀಗೆ ಮಾಡುವ ಅಧಿಕಾರ ನನಗೆ ಮಾತ್ರವೆ ಇದೆ."

ಬಳಿಕ ಸುಂದರಿ ನೀಲಾಂಬರನ ಚರಣದ ಬಳಿ ಬಾಗಿ ಹಣದ ಗಂಟೆನ್ನೆತ್ತಿ ಅವುಗಳನ್ನು ಅವನ ಶಲ್ಲೆಯಲ್ಲಿ ಕಟ್ಟುತ್ತಲೆ ಹೇಳಿದಳು: "ಒಡೆಯಾ, ಇವು ನನಗೆ ನೀವಿತ್ತ ರೂಪಾಯಿಗಳು. ನಾನು ತೀರ್ಥಯಾತ್ರೆ ಮಾಡಬೇಕೆಂದಿದ್ದೆ. ದೇವತಾಕಾರ್ಯಕ್ಕೆ ವಿನಿಯೋಗಿಸಬೇಕೆಂದು ಬಗೆದು ಈ ಹಣವನ್ನು ಶೇಖರಿಸಿಟ್ಟಿದ್ದೆ. ಆದರೆ ನನಗೆ ಯಾತ್ರೆಮಾಡುವುದಾಗಲಿಲ್ಲ. ಅಲ್ಲದೆ ಈಗ ನನ್ನ ಮನೆಗೆ ಭಗವಂತ ಬಂದಿದ್ದಾನೆ. ಅವನಿಗೆ ಸಮರ್ಪಿಸಲು ಮೀಸಲಾಗಿಟ್ಟ ಧನವನ್ನು ಈಗ ಅವನಿಗೆ ಅರ್ಪಿಸುವೆ."

ಸುಂದರಿಯ ಈ ಮಾತು ಕೇಳಿಯೂ ನೀಲಾಂಬರನ ಬಾಯಿಯಿಂದ ಒಂದಕ್ಕರವೂ ಹೊರಬೀಳಲಿಲ್ಲ. ಸುಂದರಿ ಶಲ್ಲೆಯಲ್ಲಿ ಹಣವನ್ನು ಗಟ್ಟಿಯಾಗಿ ಕಟ್ಟಿ "ಮನೆಯಲ್ಲಿ ತಾಯಿಯೊಬ್ಬರೆ ಇದ್ದಾರೆ. ಇನ್ನು ಇಲ್ಲಿ ನಿಂತಿರಬೇಡಿ. ಬೇಗ ಹೋಗಿ. ಆದರೆ ಈ ವಿಷಯ ಮಾತ್ರ ಅವರಿಗೆ ಖಂಡಿತ ತಿಳಿಯದಂತೆ ನೋಡಿಕೊಳ್ಳಬೇಕು" ಎಂದು ಪ್ರಾರ್ಥಿಸಿಕೊಂಡಳು.

ನೀಲಾಂಬರನೇನೊ ಹೇಳಲುದ್ಯುಕ್ತನಾಗಿದ್ದ. ಆದರೆ ನಡುವೆಯೆ ಅವನನ್ನು ತಡೆದು ಸುಂದರಿಯೆಂದಳು: "ನೀವು ಸಾವಿರ ಮಾತು ಹೇಳಿದರೂ ನಾನು ಕೇಳುವವಳಲ್ಲ. ಇಂದು ನೀವು ನನ್ನ ಮಾನರಕ್ಷಣೆ ಮಾಡದೆ ಹೋದರೆ ನಾನು ಹಣೆ ಚಚ್ಚಿಕೊಂಡು ಪ್ರಾಣ ಬಿಡುವೆ."

ನೀಲಾಂಬರನ ಶಲ್ಲೆಯ ಅಂಚು ಇನ್ನೂ ಸುಂದರಿಯ ಕೈಯಲ್ಲಿಯೆ ಇತ್ತು. ಅಷ್ಟರಲ್ಲಿ "ಏನು ನಡೆದಿದೆ?" ಎಂದೆನ್ನುತ್ತ ತೆರೆದ ಬಾಗಿಲಿಂದ ನಿತಾಯಿ ಗಂಗೊಳ್ಳಿ ಮೊಗಸಾಲೆಯಲ್ಲಿ ಕಾಲಿಟ್ಟ.

ಸುಂದರಿ ನೀಲಾಂಬರನ ಶಲ್ಲೆ ಬಿಟ್ಟು ಬಿಟ್ಟಳು. ನೀಲಾಂಬರನೂ ಸುಂದರಿಯ ಮನೆಯಿಂದ ಹೊರಬಿದ್ದು ಹೋದ.

ನಿತಾಯಿ ಕ್ಷಣ ಹೊತ್ತು ಅವಾಕ್ಕಾಗಿ ನಿಂತು, "ನೀಲೂ ಬದಮಾಷ್ ನಲ್ಲವೆ ಈತ?" ಎಂದ.

ಸುಂದರಿ ಮನದಲ್ಲಿಯೆ ಕೆರಳಿದಳು. ಆದರೂ ಸ್ವಾಭಾವಿಕ ದನಿಯಲ್ಲಿ "ಹೌದು ಅವರು ನನ್ನ ಒಡೆಯರು" ಎಂದಳು.

"ಇತ್ತೀಚೆ ಅವನಿಗೆ ಹೊಟ್ಟೆ ಹೊರುವುದೂ ಕಷ್ಟವಾಗಿದೆಯೆಂದು ಕೇಳಿದ್ದೆ. ಆದರೆ ಇಷ್ಟು ರಾತ್ರಿ ನಿನ್ನ ಮನೆಗೆ ಏಕೆ ಬಂದಿದ್ದ?"

"ಸ್ವಲ್ಪ ಕೆಲಸವಿತ್ತು; ಬಂದಿದ್ದರು."

"ಅಬ್ಬ-ಅವನ ಕೆಲಸವೆ!" ಎಂದೆನ್ನುತ್ತ ನಿತಾಯಿ ಮುಖ ಹೊರಳಿಸಿ ನಗತೊಡಗಿದ. ಅವನ ಹಾಸ್ಯದ ಅರ್ಥವಿಷ್ಟೆ – ತನ್ನಂತಹ ಅನುಭವಿಕನ ಕಂಣಿನಲ್ಲಿ ಧೂಳೆರಚುವ ಕಾರ್ಯ ಸುಲಭವಲ್ಲ – ಎಂದು.

ನಿತಾಯಿ ಯಾವ ಅಭಿಪ್ರಾಯದಿಂದ ನಕ್ಕನೆಂದು ಸುಂದರಿಗೂ ತಿಳಿಯದಿರಲಿಲ್ಲ. ನಿತಾಯಿಯ ವಯಸ್ಸು ೫೦ ಕ್ಕೆ ಮೀರಿತ್ತು. ಅವನ ತಲೆಗೂದಲು

ಹನ್ನೆರಡಾಣೆ ಭಾಗ ಬೆಳ್ಳಗಾಗಿದ್ದವು. ಮೀಸೆ ಗಡ್ಡಗಳೆಲ್ಲವೂ ಸಪಾಟಾಗಿದ್ದವು. ತಲೆಯ ಮೇಲೆ ಚಂಡಿಕೆ ಇತ್ತು. ಹಣೆಯಲ್ಲಿ ಬೆಳಿಗ್ಗೆ ಹಚ್ಚಿದ ಚಂದನದ ಬೊಟ್ಟು ಆ ವರೆಗೂ ಇತ್ತು. ಸುಂದರಿ ಅವನನ್ನೆ ಎವೆಯಿಕ್ಕದೆ ನೋಡುತಿದ್ದಳು. ಅವಳ ಆ ನೋಟದ ಅರ್ಥ ಊಹಿಸಲು ನಿತಾಯಿಯ ಬುದ್ಧಿಶಕ್ತಿಗೆ ನಿಲುಕದಂತಹದು. ಆದುದರಿಂದ ಸ್ವಲ್ಪ ಬಿಸಿಯಾಗಿ "ನೀನು ಹೀಗೇಕೆ ನನ್ನನ್ನು ದಿಟ್ಟಿಸುತ್ತಿರುವೆ?" ಎಂದ ನಿತಾಯಿ.

"ಸುಮ್ಮನೆ."

"ನೀನು ಯೋಚಿಸುತ್ತಿರುವುದಾದರೂ ಏನು?"

"ನಾನು ಯೋಚಿಸುತ್ತಿರುವುದಿಷ್ಟೆ – ನೀವೂ ಬ್ರಾಹ್ಮಣರು. ಇದೀಗ ಇಲ್ಲಿಂದ ಹೋದವರೂ ಬ್ರಾಹ್ಮಣರೆ. ಆದರೆ ನಿಮ್ಮಿಬ್ಬರಲ್ಲಿ ಭೂಮ್ಯಾಕಾಶದಷ್ಟು ಅಂತರವಿದೆ" ಎಂದು ನುಡಿದಳು. ಈ ಮಾತಿನ ಅಭಿಪ್ರಾಯ ತಿಳಿಯಲು ಅಸಮರ್ಥನಾಗಿ ನಿತಾಯಿಯೆಂದ — "ಯಾವ ವಿಷಯದಲ್ಲಿ ಅಂತರವಿದೆಯೆಂದೆ?"

ಸುಂದರಿ ನಸು ನಕ್ಕು ನುಡಿದಳು: "ಮುದಿ ಮನುಷ್ಯರು ನೀವು ಇಬ್ಬನಿಯಲ್ಲಿ ನಿಂತುಕೊಳ್ಳಬೇಡಿ. ಜಗುಲಿಯ ಮೇಲೆ ಬಂದು ಕುಳಿತುಕೊಳ್ಳಿ. ಯಾವ ವಿಷಯದಲ್ಲಿ ಅಂತರವಿದೆಯೆಂದು ಕೇಳುವಿರಲ್ಲವೆ? ನಮ್ಮ ಒಡೆಯನ ಚರಣ ಧೂಳಿಯ ಒಂದು ಕಣದಿಂದ ನಿಮ್ಮಂತಹ ಎಷ್ಟು ಗಂಗೊಳ್ಳಿಯವರ ಎಷ್ಟು ಜನ್ಮ ಸಾರ್ಥಕವಾಗುವವೆಂದು ನಾನು ನಿಮ್ಮನ್ನು ದಿಟ್ಟಿಸಿ ದಿಟ್ಟಿಸಿ ಯೋಚಿಸುತಿದ್ದೆ."

ಸುಂದರಿಯ ಮಾತು ಕೇಳಿ ನಿತಾಯಿಯ ಕೋಪ, ವಿಸ್ಮಯಗಳಿಗೆ ಸೀಮೆಯೆ ಉಳಿಯಲಿಲ್ಲ. ಅವಾಕ್ಕಾಗಿ ಸುಂದರಿಯನ್ನೆ ನಿಟ್ಟಿಸುತ್ತ ನಿಂತುಕೊಂಡ. ಸುಂದರಿ ಗುಡುಗುಡಿಯಲ್ಲಿ ತಂಬಾಕು ತುಂಬುತ್ತ ಅತ್ಯಂತ ಸ್ವಾಭಾವಿಕ ದನಿಯಲ್ಲಿ ಹೇಳತೊಡಗಿದಳು: "ತಪ್ಪು ತಿಳಿದುಕೊಳ್ಳಬೇಡಿ, ನನ್ನ ಹೃದಯ ದೇವತೆಯೆ, ನಾನಾಡಿದ ಮಾತು ಸತ್ಯವಾದುದು. ಇದು ಇಂದಿನ ಮಾತಲ್ಲ. ಮೊದಲಿನಿಂದಲೂ ನಾನು ಕಂಡು ಕಾಣುತ್ತಿರುವ ಸತ್ಯ. ಒಡೆಯನ ಜನಿವಾರದೆಡೆ ನೋಡಿದಾಗ ಕಂಣು ಕುಕ್ಕಿದಂತಾಗುತ್ತದೆ.

ಆಕಾಶದಲ್ಲಿ ಮಿಂಚು ಹೊಳೆದಂತೆ ಅವರ ಕೊರಳಲ್ಲಿಯ ಜನಿವಾರ ಮಿಂಚುತ್ತದೆ. ನಿಮಗೆಲ್ಲಿ ಆ ತೇಜ? ನಿಮ್ಮ ಮುಖದ ಕಡೆಗೆ ನೋಡಿದಾಗ ನನಗೆ ನಗು ಬರುತ್ತದೆ" ಎಂದು ಗೇಲಿಯಾಡಿ ಸುಂದರಿ ಗಹಗಹಿಸಿ ನಕ್ಕಳು. ಮೊದಲೆ ನಿತಾಯಿ ಈರ್ಷೆಯಿಂದ ಬೆಂಕಿಯಾಗಿದ್ದ. ಈಗ ಕೋಪದಿಂದ ಉನ್ಮತ್ತನಾದ. ಉರಿ ಬೆಂಕಿಯಂತೆ ಕಂಣುಗಳನ್ನು ಕೆಂಪಾಗಿಸಿ ಚೀರಿ ಹೇಳಿದ: "ಇಷ್ಟೊಂದು ಗರ್ವಬೇಡ ಸುಂದರಿ, ಈ ನಿನ್ನ ಗಲ್ಲಗಳು ಚಪ್ಪಟೆಯಾದಾವು!"

ಗುಡುಗುಡಿಯ ಬೆಂಕಿಯನ್ನೂದುತ್ತ ಸನಿಹಕ್ಕೆ ಬಂದು ಸುಂದರಿ ನಗುತ್ತ ಹೇಳಿದಳು — ಅದೇನೂ ಆಗದು. ಕೊಳ್ಳಿ — ತಂಬಾಕು ಸೇದಿ. ನಿಮ್ಮ ಮುಖಕ್ಕೇ ಕಪ್ಪು ತಗಲುವುದು. ನನ್ನ ಒಡೆಯ ದುಃಖಕ್ಕೀಡಾಗಿದ್ದಾರೆಂಬುದನ್ನು ನೋಡಿ ನೀವು ನಗುತ್ತಿದ್ದೀರಿ. ಆದರೆ ಗೇಲಿ ಮಾಡುವ ಆ ಬಾಯಿ ಸೇದಿ ಹೋಗದೆ ಇರಲಾರದು."

ನಿತಾಯಿ ಒಂದು ಜುರಿಕೆ ಎಳೆದು ಚಿಲುಮೆಯನ್ನು ಬೀಸಾಡಿ ಎದ್ದು ನಿಂತ. ಸುಂದರಿ ಅವನ ಶಲ್ಲೆಯ ಚುಂಗನ್ನು ಹಿಡಿದು ನಗುತ್ತ ನುಡಿದಳು: "ಕುಳಿತುಕೊಳ್ಳಿ - ಹೋಗಬೇಡಿ - ನನ್ನಾಣೆ ನಿಮಗೆ."

ನಿತಾಯಿ ಕೋಪದಿಂದ ಅಧೀರನಾಗಿದ್ದರೂ ಬಲದಿಂದ ಶಲ್ಲೆಯನ್ನೆಳೆದು "ನರಕಕ್ಕೆ ಹೋಗು - ಹಾಳಾಗಿ ಹೋಗು" ಇತ್ಯಾದಿಯಾಗಿ ಸುಂದರಿಯನ್ನು ಶಪಿಸಿ ದ್ರುತಗತಿಯಲ್ಲಿ ಮನೆಯಿಂದ ಹೊರಬಿದ್ದ.

ಸುಂದರಿ ಅಲ್ಲಿಯೆ ಕುಳಿತು ಸ್ವಲ್ಪ ಹೊತ್ತು ಮನದಣಿ ನಕ್ಕಳು. ಆ ಮೇಲೆ ಎದ್ದು ಬಾಗಿಲಿಕ್ಕಿಕೊಂಡಳು. ಮೆಲ್ಲ ಮೆಲ್ಲನೆ ಮನದೊಳಗೆಂದುಕೊಂಡಳು: "ಏನು ಅಂತರವಿದೆಯೆಂದು ಕೇಳುತ್ತಾರೆ! ಬ್ರಾಹ್ಮಣ ಎನ್ನಬೇಕು ಅವರಿಗೆ. ಇಷ್ಟೊಂದು ದುಃಖದಲ್ಲಿಯೂ ಅವರ ಮುಖದಲ್ಲಿ ಸದಾ ನಗು ಮಲ್ಲಿಗೆ ಅರಳುತ್ತಿರುತ್ತದೆ. ದೃಷ್ಟಿ ಮೇಲೆತ್ತಿ ಅವರೆಡೆ ನೋಡಿದಾಗ ಶರೀರ ಬೆಂಕಿಯಂತೆ ಬೆಳಗುತ್ತಿರುವಂತೆ ತೋರುತ್ತದೆ."

ಯಾರ ಕೃಪೆಯಿಂದಲೊ ಏನೊ ಅಂತೂ ಅಂದಿನ ಘಟನೆ ವಿರಾಜಳ ಕಿವಿಯುವರೆಗೆ ಹೋಗದೆ ಉಳಿಯಲಿಲ್ಲ. ಆ ವರ್ತಮಾನ ಮುಟ್ಟಿಸಿದವರು ಅದನ್ನು ವಿಕೃತಗೊಳಿಸಿ ಉಪ್ಪುಕಾರ ಬೆರೆಸಿ ವಿರಾಜಳ ಕಿವಿಗೆ ಬೀಳುವಂತೆ ಮಾಡಿದ್ದರು. ಆ ದಿನ ಆ ವಿಷಯವನ್ನೆ ಚರ್ಚಿಸಲು ನೆರೆಮನೆಯ ಮುದಿ ಅತ್ತೆ ಬಂದಿದ್ದಳು. ಲಕ್ಷ್ಯಪೂರ್ವಕವಾಗಿ ಅವಳ ಮಾತನ್ನೆಲ್ಲ ಕೇಳಿದ ತರುವಾಯ ವಿರಾಜ ಗಂಭೀರಳಾಗಿ — "ನೋಡು ಅತ್ತೆ! ನಿಜವಾಗಿ ನಿಮ್ಮ ಒಂದು ಕಿವಿಯನ್ನೆ ಕತ್ತರಿಸಬೇಕು" ಎಂದಳು.

ಸೋದರತ್ತೆ ವಿಷಣ್ಣವದನಳಾಗಿ ಹೊರಟು ಹೋದಳು. "ನಾನು ಇವಳನ್ನು ಚೆನ್ನಾಗಿ ಬಲ್ಲೆ. ಹಳ್ಳಿಯಲ್ಲಿವಳಂಥ ರಕ್ಕಸಿ ಹೆಂಣು ಯಾರಾದರೂ ಇದ್ದಾರೆಯೆ?" ಎಂದು ದಾರಿಯಲ್ಲಿ ಒಟಗುಟ್ಟುತ್ತ ಸಾಗಿದಳು.

ವಿರಾಜ ಗಂಡನನ್ನು ಕರೆದು "ಸುಂದರಿಯ ಬಳಿ ಪುನಃ ಹೋಗಿದ್ದಿರಾ?" ಎಂದು ವಿಚಾರಿಸಿದಳು.

ಭಯದಿಂದ ನೀಲಾಂಬರನ ಮುಖ ಬಾಡಿತು. ಸಂಕೋಚದಿಂದ "ಬಹಳ ದಿನಗಳಾಗಿದ್ದವು, ಪುಟ್ಟಿಯ ಸಮಾಚಾರ ತಿಳಿಯಲು ಅವಳಲ್ಲಿಗೆ ಹೋಗಿದ್ದೆ" ಎಂದ.

"ಇನ್ನು ಮುಂದೆ ಅವಳಲ್ಲಿಗೆ ಹೋಗಬೇಡಿ. ಅವಳ ಶೀಲ ಚೆನ್ನಾಗಿಲ್ಲವೆಂದು ಎಲ್ಲೆಡೆಯೂ ಸುದ್ದಿ ಹಬ್ಬಿದೆ" ಎಂದು ವಿರಾಜ ತನ್ನ ಕೆಲಸದಲ್ಲಿ ತೊಡಗಿಕೊಂಡಳು. ಮುಂದೆ ಎಷ್ಟೊ ದಿನಗಳುರುಳಿದವು. ನಿತ್ಯವೂ ರವಿ ಮೂಡುತಿದ್ದ; ಮುಳುಗುತಿದ್ದ. ಅವನ ಈ ನಿತ್ಯ ವಿಧಿಯಲ್ಲಿ ಅಡ್ಡಿ ಆತಂಕವನ್ನೊಡ್ಡುವಂತಿಲ್ಲ. ಹೀಗೆ ಒಂದೊಂದೆ ದಿನವಾಗಿ ಕ್ರಮಶಃ ಚಳಿಗಾಲವೂ ಸಂದಿತು. ಬೇಸಿಗೆಯೂ ಕಳೆಯುತ್ತ ಬಂದಿತು. ವಿರಾಜಳ ಮುಖದ ಮೇಲೆ ಕಪ್ಪು ಮೋಡ ಕವಿದಿತ್ತು. ಅದು ಕ್ರಮಶಃ ಗಾಢವಾಗುತ್ತ ಬಂದಿತು. ಅಲ್ಲದೆ ದಿನಗಳೆದಂತೆ ಅವಳ ಕಂಣುಗಳು ಕ್ಲಾಂತವಾಗಿಯೂ ಉಜ್ವಲವಾಗಿಯೂ ತೋರ ತೊಡಗಿದವು. ವಿರಾಜಳ ಮುಖವನ್ನು

ನೋಡುವ ಸಾಹಸಿಗನ ಕಂಣುಗಳು ತಾನಾಗಿಯೆ ನೆಲಕ್ಕೆ ಇಳಿಯುತಿದ್ದವು. ವಿಷದ ಹಾವು ಭಲ್ಲೆಯಿಂದ ತಿವಿಯಲ್ಪಟ್ಟಾಗ ಆ ಭಲ್ಲೆಯನ್ನೆ ಕಚ್ಚಿ ಕಚ್ಚಿ ಬೇಸತ್ತು ಅಶಕ್ತಗೊಂಡು ಅದನ್ನೆ ನಿರಿಕಿಸುವಂತೆ ವಿರಾಜಳ ದೃಷ್ಟಿಯು ಕರುಣರಾಯುಕ್ತವೂ ಭೀಷಣವೂ ಆಗಿತ್ತು. ಇತ್ತಿತ್ತ ಗಂಡನೊಂದಿಗೆ ಅವಳ ಮಾತುಕತೆ ಪೂರ್ಣವಾಗಿ ನಿಂತಿತ್ತು. ಬಹುಶಃ ನೀಲಾಂಬರ ಹೊರಗೆ ದೂರ ದೂರವೆ ಇದ್ದು ಬಿಡುತಿದ್ದ. ನಡು ನಡುವೆ ಕಳ್ಳನಂತೆ ಯಾವಾಗಾದರೊಮ್ಮೆ ಬರುತಿದ್ದರೂ ಪುನಃ ಕಳ್ಳನಂತೆ ಸುಳಿವಿಲ್ಲದೆ ನುಸುಳಿ ಹೋಗುತಿದ್ದ! ವಿರಾಜಳೂ ಅವನ ಬರುಹೋಗುವ ಕಡೆಗೆ ಲಕ್ಷ್ಯವಿಲ್ಲವೆನ್ನುವಂತೆ ಇರುತಿದ್ದಳು.

ಇತ್ತೀಚೆ ವಿರಾಜಳನ್ನು ಕಂಡರೆ ಎಲ್ಲರಿಗೂ ಭಯ. ಮೋಹಿನಿ ಮಾತ್ರ ಅವಳಿಗೆ ಅಂಜುತಿರಲಿಲ್ಲ. ಅವಳು ಸಮಯ ದೊರೆತಾಗ ನಡು ನಡುವೆ ಬಂದು ವಿರಾಜಳಿಗೆ ಉಪದ್ರವ ಕೊಡುತಿದ್ದಳು. ಅವಳಿಂದ ಪಾರಾಗಲು ಮೊದಮೊದಲು ವಿರಾಜ ಬಹು ಪ್ರಯತ್ನಿಸಿದಳು. ಆದರೆ ಅದರಿಂದಾವ ಲಾಭವೂ ಆಗಲಿಲ್ಲ. ವಿರಾಜ ಕಂಣು ಕೆಂಪಗೆ ಮಾಡಿದರೆ ಮೋಹಿನಿ ಅವಳ ಕೊರಳನ್ನಪ್ಪಿಕೊಳ್ಳುವಳು; ಸಿಡುಕಿದರೆ ಕಾಲುಗಳನ್ನು ಗಟ್ಟಿಯಾಗಿ ಹಿಡಿದುಕೊಳ್ಳುತಿದ್ದಳು.

ಅಂದು ದಸರೆಯ ದಿನ. ತೀರ ನಸುಕಿನಲ್ಲಿಯೆ ಎದ್ದು ಮೋಹಿನಿ ಮೆತ್ತಗೆ ಬಂದು ವಿರಾಜಳನ್ನು ಎಬ್ಬಿಸಿ "ಅಕ್ಕ, ಇನ್ನೂ ಯಾರೂ ಎಚ್ಚತ್ತಿಲ್ಲ. ನಡೆ, ನದಿಗೆ ಹೋಗಿ ಒಂದು ಮುಳುಗು ಹಾಕಿ ಬರೋಣ" ಎಂದಳು.

ನದಿಯಾಚೆಗೆ ಜಮೀನುದಾರನ ಘಟ್ಟ ಕಟ್ಟಿದಂದಿನಿಂದಲೆ ವಿರಾಜ ಹೊಳೆಯಲ್ಲಿ ಮೀಯುವುದನ್ನು ಬಿಟ್ಟಿದ್ದಳು.

ಅಂದು ಮೋಹಿನಿಯ ಆಗ್ರಹದಿಂದಲೆ ನೆಗೆಂಣಿಯರು ಮೀಯಲು ನದಿಗೆ ಹೋದರು. ಮಿಂದ ಬಳಿಕ ನೀರು ತುಂಬಿಕೊಂಡು ಮರಳುವಾಗ ಒಮ್ಮೆಗೆ ಅವರ ದೃಷ್ಟಿ ಜಮೀನುದಾರ ರಾಜೇಂದ್ರ ಕುಮಾರನ ಮೇಲೆ ಬಿದ್ದಿತು.. ಆತ ಒಂದು ಗಿಡದಡಿಯಲ್ಲಿ ನಿಂತಿದ್ದ. ಆಗ ಇನ್ನೂ ಕತ್ತಲಿದ್ದುದರಿಂದ ಚೆನ್ನಾಗಿ ಕಾಣಿಸುತಿದ್ದಿಲ್ಲ. ಆದರೂ ಆ ನೆಗೆಂಣಿಯರು ರಾಜೇಂದ್ರನನ್ನು ಗುರುತಿಸಿದರು. ಮೋಹಿನಿಗೆ ಹೆದರಿಕೆಯಿಂದ ಬವಳಿ

ಬಂದಂತಾಯಿತು. ಅವಳು ವಿರಾಜಳ ಹಿಂದೆ ಸರಿದು ನಿಂತುಕೊಂಡಳು. ವಿರಾಜ ಅತ್ಯಂತ ಸೋಜಿಗಗೊಂಡು ಮನದಲ್ಲಿಯೆ: "ಈ ವ್ಯಕ್ತಿ ಇಷ್ಟು ನಸುಕಿನಲ್ಲಿಯೆ ಇಲ್ಲಿ ಹೇಗೆ ಬಂದ" ಎಂದು ಯೋಚಿಸಿದಳು. ಆದರೆ ಮರು ಕ್ಷಣದಲ್ಲಿಯೆ ಯೋಚನೆಯೊಂದು ಅವಳ ಮನದಲ್ಲಿ ಮೂಡಿ ಬಂತು. ಕದಾಚಿತ್ ಈ ವ್ಯಕ್ತಿ ನಿತ್ಯವೂ ಈ ರೀತಿ ಇಲ್ಲಿ ಕಾಯುತ್ತಿರಬಹುದು. ಸ್ವಲ್ಪ ಹೊತ್ತು ದ್ವಿಧಾದ್ವಂದ್ವದಲ್ಲಿ ಮುಳುಗಿದ ಬಳಿಕ ನೆಗೆಂಣಿಯ ಕೈಹಿಡಿದು "ಇಲ್ಲೇಕೆ ನಿಂತೆ ತಂಗಿ, ಮನೆಗೆ ಹೋಗೋಣ ನಡೆ" ಎಂದಳು.

ವಿರಾಜ ನೆಗೆಂಣಿಯನ್ನು ಪಕ್ಕಕ್ಕೆ ಕರೆದುಕೊಂಡು ದ್ರುತಗತಿಯಲ್ಲಿ ಅವಳನ್ನು ಮನೆಗೆ ಮುಟ್ಟಿಸಿದಳು. ಬಳಿಕ ಯಾವ ವಿಚಾರ ಮೂಡಿತೊ ಏನೊ ಅಲ್ಲಿಯೆ ನಿಂತು ಬಿಟ್ಟಳು. ಸ್ವಲ್ಪ ಸಮಯ ತಡೆದು ಅವಳು ಸಾವಕಾಶವಾಗಿ ರಾಜೇಂದ್ರನ ಬಳಿಗೆ ಬಂದಳು. ಅವಳ ಕಂಣುಗಳೆರಡೂ ಬೆಂಕಿ ಕಾರುತಿದ್ದವು. ಆ ಕರಿಗತ್ತಲಲ್ಲಿಯೂ ವಿರಾಜಳ ಆ ಉಗ್ರದೃಷ್ಟಿಯನ್ನು ಸಹಿಸಲಾರದೆ ರಾಜೇಂದ್ರ ನತಮುಖನಾದ.

ವಿರಾಜಳೆಂದಳು: "ನೀವೂ ದೊಡ್ಡ ಮನುಷ್ಯರು. ಅಲ್ಲದೆ ನಿಮ್ಮ ಮನೆತನವೂ ಪ್ರತಿಷ್ಠಿತ ಮನೆತನ. ಆದರೆ ನೀವೆಂಥ ಕಾರ್ಯದಲ್ಲಿ ಕೈಹಾಕಿದ್ದೀರಲ್ಲ?"

ರಾಜೇಂದ್ರ ಪೆಚ್ಚನಂತಾದ. ವಿರಾಜಳಿಗೇನೂ ಉತ್ತರಕೊಡದವನಾದ.

ವಿರಾಜ ಹೇಳುತ್ತಲೆ ಹೋದಳು. "ನೀವು ದೊಡ್ಡ ಜಮಿನುದಾರರಿರಬಹುದು. ಆದರೆ ಈಗ ನೀವು ನಿಂತಿರುವುದು ನಮ್ಮ ಭೂಮಿಯ ಮೇಲೆಂದು ಬಲ್ಲಿರಾ?"

ನದಿಯಾಚೆಯ ದಡದಲ್ಲಿಯ ಘಟ್ಟವನ್ನು ಕೈಯಿಂದ ಸೂಚಿಸಿ "ನೀವೆಷ್ಟು ನೀಚರಿದ್ದೀರೆಂದು ಆ ಘಟ್ಟದ ಪ್ರತಿಯೊಂದು ಇಟ್ಟಿಗೆಯೂ ಬಲ್ಲುದು; ನಾನೂ ಬಲ್ಲೆ. ಬಹುಶಃ ನಿಮಗೆ ತಾಯಿ-ತಂಗಿಯರಾರೂ ಇರಲಿಕ್ಕಿಲ್ಲ. ಇಲ್ಲಿ ಕಾಲಿಕ್ಕ ಕೂಡದೆಂದು ಬಹು ದಿನಗಳ ಹಿಂದೆಯೆ ನಮ್ಮ ಒಕ್ಕಲುಗಿತ್ತಿಯಿಂದ ಹೇಳಿ ಕಳುಹಿದ್ದೆ. ಆದರೆ ನೀವು ನನ್ನ ಮಾತಿಗೆ ಮನ್ನಣೆ ಕೊಡಲಿಲ್ಲ."

ರಾಜೇಂದ್ರ ದಂಗು ಬಡಿದವನಂತಾಗಿ ಬಾಯಿಯಿಂದ ಒಂದು ಮಾತೂ ಆಡದಂತಾದ.

ವಿರಾಜ ಪುನಃ ಹೇಳತೊಡಗಿದಳು: "ನೀವು ನನ್ನ ಯಜಮಾನರನ್ನು ಗುರುತಿಸಿರಲಿಕ್ಕಿಲ್ಲ. ಗುರುತಿಸಿದ್ದರೆ ಇಲ್ಲಿ ಕಾಲಿಡುವ ಸಾಹಸ ಮಾಡುತಿದ್ದಿಲ್ಲ. ಆದುದರಿಂದ ಇಂದು ನಿಮಗಿಷ್ಟೆ ಹೇಳುವೆ – ಇನ್ನು ಮುಂದೆ ಇಲ್ಲಿ ಕಾಲಿಡುವ ಮೊದಲು ಅವರನ್ನೊಮ್ಮೆ ಪೂರ್ಣವಾಗಿ ಗುರುತಿಸುವ ಕಷ್ಟ ತೆಗೆದುಕೊಳ್ಳಿ." ಎಂದು ಎಚ್ಚರಿಕೆಯಿತ್ತು ಅಲ್ಲಿಂದ ಹೊರಟು ಮೆಲ್ಲ ಮೆಲ್ಲನೆ ಮನೆಯ ಬಾಗಿಲಿಂದ ಒಳಗೆ ಹೋಗುವಾಗಲೆ ಪೀತಾಂಬರ ಕೈಯಲ್ಲಿ ಲೋಟ ಹಿಡಿದುಕೊಂಡು ತನ್ನ ಮನೆಬಾಗಿಲಲ್ಲಿ ನಿಂತುದನ್ನು ಕಂಡಳು.

ಎಷ್ಟೊ ದಿನಗಳಿಂದ ಅತ್ತಿಗೆ ಭಾವ ಮೈದುನರಲ್ಲಿ ಮಾತುಕತೆ ನಿಂತಿತ್ತು. ಆದರೂ ಪೀತಾಂಬರ ಅತ್ತಿಗೆಯನ್ನು ಕರೆದು "ಅತ್ತಿಗೆ, ನೀನಿಷ್ಟೊತ್ತು ಮಾತನಾಡುತಿದ್ದೆಯಲ್ಲ, ಅವರು ಇಲ್ಲಿಯ ಜಮಾನುದಾರರಲ್ಲವೆ?" ಎಂದ.

ಕ್ಷಣಮಾತ್ರದಲ್ಲಿಯೆ ವಿರಾಜಳ ಮುಖ ಕೆಂಪಾಯಿತು. 'ಹಾಂ' ಎಂದವಳೆ ಒಳಗೆ ಹೋದಳು.

ಮನೆ ಸೇರಿದೊಡನೆಯೆ ವಿರಾಜ ತನ್ನ ವಿಷಯವನ್ನು ಮರೆತಳು. ಆದರೆ ನೆಗೆಂಣೆಯ ಬಗ್ಗೆ ಅತ್ಯಂತ ಕಸಿವಿಸಿ ಪಡತೊಡಗಿದಳು. ಮೈದುನ ಅವಳನ್ನು ನೋಡಿದನೆ ಹೇಗೆ-ಎಂಬುದೆ ಅವಳಿಗೆ ಆಲೋಚನೆ ಆದರೆ ವಿರಾಜಳಿಗೆ ಬಹಳ ಹೊತ್ತು ಆಲೋಚನೆ ಮಾಡುವ ಅಗತ್ಯ ಬೀಳಲಿಲ್ಲ. ಹತ್ತು ನಿಮಿಷಗಳಲ್ಲಿಯೆ ಪೀತಾಂಬರನ ಮನೆಯಿಂದ ಹೊಡೆಯುವ ಸದ್ದೂ, ಜೊತೆಗೆ ಹತ್ತಿಕ್ಕಿ ಅಳುವ ಹಾಗೂ ಕಾತರತೆಯಿಂದ ಬೇಡಿಕೊಳ್ಳುವ ದನಿಯೂ ಕೇಳಿ ಬಂತು.

ವಿರಾಜ ಓಡಿ ಅಡುಗೆ ಮನೆಯಲ್ಲಿ ಕಲ್ಲು ಮೂರ್ತಿಯಂತೆ ಕುಳಿತಳು.

ನೀಲಾಂಬರನು ಇನ್ನು ಅರೆ ನಿದ್ದೆಯಿಂದೆದ್ದು ಹೊರಗೆ ಮುಖತೊಳೆಯ ತೊಡಗಿದ್ದ. ಪೀತಾಂಬರ ಗುಡುಗುದನಿಯಲ್ಲಿ ಗರ್ಜಿಸುತಿದ್ದನಲ್ಲದೆ ಚಟ್ ಚಟ್ಟೆಂದು ಹೆಂಡತಿಯನ್ನು ಬಡೆಯುತಿದ್ದ. ನೀಲಾಂಬರ ಇದೆಲ್ಲವನ್ನೂ ಒಂದು ಗಳಿಗೆ ಕಿವಿಗೊಟ್ಟು ಕೇಳಿದ ಬಳಿಕ ಒಂದೇಟಿಗೆ ಬಿದಿರು ತಟ್ಟಿಯನ್ನು ಒದ್ದು ಮುರಿದು ಪೀತಾಂಬರನ ಮನೆಯೊಳಗೆ ನುಗ್ಗಿದ.

ತಟ್ಟೆ ಮುರಿದ ಸಪ್ಪಳ ಕೇಳಿ ಚಕಿತನಾಗಿ ಪೀತಾಂಬರ ಮೊಗವೆತ್ತಿದ, ಬಳಿಯಲ್ಲಿಯೆ ಅಂಣ ಯಮನಂತೆ ನಿಂತುದನ್ನು ನೋಡಿ ಬೆಪ್ಪಾಗಿ ಸುಮ್ಮನೆ ನಿಂತು ಬಿಟ್ಟ.

ನೆಲದ ಮೇಲೆ ಉರುಳಾಡುತಿದ್ದ ನಾದಿನಿಯನ್ನು ಕುರಿತು ನೀಲಾಂಬರ ನೆಂದ— "ಏಳಮ್ಮಾ ಒಳಗೆ ಹೋಗು. ಇನ್ನು ನಿನಗೆ ಯಾವ ಭಯವೂ ಬೇಡ."

ಮೋಹಿನಿ ನಡುಗುತ್ತಲೆ ಎದ್ದು ಒಳಗೆ ಹೋದಳು. ಬಳಿಕ ನೀಲಾಂಬರ ಸ್ವಾಭಾವಿಕ ದನಿಯಲ್ಲಿ— "ನಿನ್ನ ಹೆಂಡತಿಯ ಇದಿರು ನಿನ್ನ ಅವಮಾನ ಮಾಡಲಿಚ್ಛಿಸುವುದಿಲ್ಲ. ಆದರೆ ನಾನಿಲ್ಲಿರುವವರೆಗೆ ಇನ್ನು ಮುಂದೆ ಇಂಥ ಕೆಲಸ ಸಾಗದೆಂದು ನೀನು ನಿಶ್ಚಯವಾಗಿ ತಿಳಿದುಕೊ. ಇನ್ನು ನಿನ್ನ ಹೆಂಡತಿಯ ಮೇಲೆ ಕೈಯೆತ್ತಿದರೆ ಆ ಕೈಯನ್ನೆ ಮುರಿದು ಬಿಡುವೆ'' ಎಂದು ನೀಲಾಂಬರ ಹೊರಡಲುದ್ಯುಕ್ತನಾದ. ಅಷ್ಟರಲ್ಲಿ ಹೇಗೊ ಸಾಹಸ ತಂದು ಕೊಂಡು ಪೀತಾಂಬರನೆಂದ: "ಮನೆಯಲ್ಲಿ ಸುಗ್ಗಿ ಹೊಡೆಯಲು ನೀನೇನೊ ಬಂದೆ. ಆದರೆ ನಾನೇಕೆ ಅವಳನ್ನು ಬಡೆದೆನೆಂದು ನೀನು ಬಲ್ಲೆಯಾ?"

ನೀಲಾಂಬರ ಹೊರಳಿ ನಿಂತು "ಇಲ್ಲ ನನಗೆ ಗೊತ್ತಿಲ್ಲ. ಅದನ್ನು ತಿಳಿದುಕೊಳ್ಳುವ ಇಚ್ಛೆಯೂ ಇಲ್ಲ'' ಎಂದು ಬಿರಿನುಡಿದ.

''ನೀನೇಕೆ ತಿಳಿಯಲಿಚ್ಛಿಸುವೆ? ಆದರೆ ನಾನು ಈ ಮನೆ ಬಿಟ್ಟು ಬೇರೆ ಮನೆ ಮಾಡದೆ ಗತ್ಯಂತರವಿಲ್ಲ" ಎಂದ ಪೀತಾಂಬರ.

ನೀಲಾಂಬರ ತಮ್ಮನ ಮುಖವನ್ನೆ ದಿಟ್ಟಿಸುತ್ತಾ ನಿಂತು ಹೇಳಿದ: "ಮನೆ ಬಿಟ್ಟು ಯಾರು ಹೋಗಬೇಕಾದೀತೆಂಬುದರ ಬಗ್ಗೆ ನಾನು ಬಲ್ಲೆ ಪೀತಾಂಬರಾ! ಅದನ್ನು ನೀನು ನೆನಪುಗೊಡುವ ಆಗತ್ಯವಿಲ್ಲ. ಆದರೆ ಒಂದು ಸರಿಯಾದ ವ್ಯವಸ್ಥೆಯಾಗುವವರೆಗೆ ನೀನು ಇದನ್ನೆಲ್ಲ ಸಹಿಸಿಕೊಳ್ಳುವ ಧೈರ್ಯ ತಂದುಕೊಳ್ಳಬೇಕು. ಈ ಮಾತನ್ನು ಈಗಲೆ ನಿನಗೆ ತಿಳಿಸಿಡುತಿದ್ದೇನೆ."

ಹೀಗೆಂದು ನೀಲಾಂಬರ ಹೋಗ ತೊಡಗಿದ. ಆದರೆ ಪೀತಾಂಬರನು ದಾರಿ ಅಡ್ಡ ಗಟ್ಟಿ ಅಣ್ಣನೆದುರು ನಿಂತು ಬಿಟ್ಟ. "ನಿನಗೆ ಒಂದು ಮಾತು ಹೇಳಿಡುವೆ ಅಂಣಾ! ಮತ್ತೊಬ್ಬರಿಗೆ ಬುದ್ಧಿ ಹೇಳುವ ಮೊದಲು ನಿನ್ನ ಮನೆಯವರಿಗೆ ಮೊದಲು ಬುದ್ಧಿ ಹೇಳು.''

ನೀಲಾಂಬರ ಪುನಃ ತಮ್ಮನ ಮುಖವನ್ನೆ ದಿಟ್ಟಿಸಿ ನೋಡ ತೊಡಗಿದ. ಆದರಿಂದ ಮತ್ತಿಷ್ಟು ಸಾಹಸಗೊಂಡು ಪೀತಾಂಬರನೆಂದ: "ನದಿಯಾಚೆಯ ದಡದಲ್ಲಿಯ ಘಟ್ಟವನ್ನು ಯಾರು ಕಟ್ಟಿಸಿದರೆಂದು ನಿನಗೆ ಗೊತ್ತಿರಬಹುದು. ಆ ಘಟ್ಟ ಕಟ್ಟಿದಂದಿನಿಂದಲೆ ನದಿಕಡೆಗೆ ಹೋಗಬೇಡವೆಂದು ನನ್ನ ಹೆಂಡತಿಗೆ ಅಪ್ಪಣೆ ಮಾಡಿದೆ. ಆದರೆ ಇಂದು ಇನ್ನು ಕತ್ತಲಿರುವಾಗಲೆ ಅವಳು ಅತ್ತಿಗೆಯೊಂದಿಗೆ ಮಿಾಯಲು ನದಿಗೆ ಹೋಗಿದ್ದಳು. ಯಾರು ಬಲ್ಲರು — ಇವರು ಹೀಗೆ ನಿತ್ಯ ಹೋಗುತ್ತಿರಲೂ ಬಹುದು. ಇವರ ಮೇಲೆ ಯಾವಾಗಲೂ ಯಾರು ಲಕ್ಷ್ಯವಿಟ್ಟುಕೊಂಡೆ ಇರುತ್ತಾರೆ?"

ಆಶ್ಚರ್ಯ ಚಕಿತನಾಗಿ ನೀಲಾಂಬರನೆಂದ: "ಸರಿ, ಈ ಕಾರಣದಿಂದಲೆ ನೀನು ಅವಳ ಮೇಲೆ ಕೈಯೆತ್ತಿದೆಯಾ?"

"ಮೊದಲು ನನ್ನ ಮಾತನ್ನೆಲ್ಲ ಕೇಳು. ಅವನು ಹೇಳಿ ಕೇಳಿ ಜಮಿಾನುದಾರನ ಮಗ. ರಾಜನ್ ಬಾಬೂ ಹೀಗೇನೊ ಇರಬೇಕು ಅವನ ಹೆಸರು. ಹಳ್ಳಿ ಪಟ್ಟಣಗಳಲ್ಲೆಲ್ಲ ಅವನ ಕೀರ್ತಿ ಎಷ್ಟು ಹಬ್ಬಿದಯೆಂದೆ! ಇಂದು ಅತ್ತಿಗೆ ಅವನೊಂದಿಗೇ ಅರ್ಧ ಗಂಟೆ ಮಾತಾಡಿದಳು. ಅಲ್ಲ - ಅವನೊಂದಿಗೆ ಮಾತಾಡುವುದಾದರೂ ಏನಿತ್ತೊ ಇವಳಲ್ಲಿ?"

ನೀಲಾಂಬರನಿಗೆ ಪೀತಾಂಬರನ ಮಾತಿನ ಅರ್ಥ ಸರಿಯಾಗಿ ಆಗಲಿಲ್ಲ. "ಯಾರು ಮಾತಾಡುತಿದ್ದರೊ? ವಿರಾಜಳೇನು?" ಎಂದು ವಿಚಾರಿಸಿದ ನೀಲಾಂಬರ.

"ಹೌದು — ಅವಳೆ."

"ನೀನು ಕಣ್ಣಾರೆ ನೋಡಿದೆಯಾ?"

ಪೀತಾಂಬರನು ತನ್ನ ಮುಖವನ್ನು ವಿಚಿತ್ರವಾಗಿ ಮಾಡಿದ. ಅವನ ಮುಖದಲ್ಲಿ ಕೊಂಕುವ ಹಾಸ್ಯವಿತ್ತು. "ನೀನು ಯಾವಾಗಲೂ ನನ್ನನ್ನು ಈರ್ಷೆಯಿಂದಲೂ ಸಂದೇಹದಿಂದಲೂ ಕಾಣುವೆಯೆಂದು ನಾನು ಬಲ್ಲೆ. ನಮ್ಮಿಬ್ಬರ ನ್ಯಾಯ ಅನ್ಯಾಯಗಳ ತೀರ್ಮಾನ ಭಗವಂತನೆ ಮಾಡಲಿ. ಆದರೆ...."

ನೀಲಾಂಬರ ಗರ್ಜಿಸಿದ: "ಭಗವಂತನ ಹೆಸರನ್ನೇಕೆ ಎತ್ತುವೆ? ಬೊಗಳಬೇಕಾದುದನ್ನು ಸುಮ್ಮನೆ ಬೊಗಳು."

ಪೀತಾಂಬರ ಮೊದಲು ಬೆಪ್ಪಾದ. ಬಳಿಕ ತನ್ನನ್ನು ಸಾವರಿಸಿಕೊಂಡು ಮುನಿಸಿನಿಂದ "ಕಣ್ಣಾರೆ ನೋಡದೆ ಯಾವ ಮಾತು ಆಡುವುದೂ ನನ್ನ ಸ್ವಭಾವವೆ ಅಲ್ಲ. ನೀನು ಸ್ವತಃ ನಿನ್ನ ಮನೆಯವರನ್ನು ಚೆನ್ನಾಗಿ ನಿಯಂತ್ರಣದಲ್ಲಿಟ್ಟುಕೊಂಡಿರಲಾರೆ. ಆದರೆ ಮತ್ತೊಬ್ಬರ ಮೇಲೆ ನಿನ್ನ ನಿಯಂತ್ರಣ ಹೇರಲು ಏರಿ ಬರುವೆ. ಇದೆಂಥ ನ್ಯಾಯ?" ಎಂದ.

ನೀಲಾಂಬರನ ತಲೆಯ ಮೇಲೆ ವಜ್ರದೇಟು ಬಿದ್ದಂತಾಯಿತು. ಆರಗಳಿಗೆ ಭ್ರಮೆಗೊಂಡಂತಾಗಿ ದಿಟ್ಟಿಸುತ್ತ ನಿಂತ ಬಳಿಕ "ಅರ್ಧ ಗಂಟೆ ಮಾತನಾಡುತ್ತ ನಿಂತಿದ್ದಳೆ! ಯಾರು – ವಿರಾಜಳೆ? ಕಣ್ಣಾರೆ ಕಂಡೆಯಾ?" ಎಂದ ನೀಲಾಂಬರ.

ಪೀತಾಂಬರ ಒಂದು ಹೆಜ್ಜೆ ಹಿಂದೆ ಸರಿದು: "ನನ್ನ ಕಣ್ಣಿನಿಂದಲೆ ನೋಡಿದ್ದೇನೆ. ಬಹುಶಃ ಅರ್ಧ ಗಂಟೆಗಿಂತ ಹೆಚ್ಚು ವೇಳೆ ಮಾತನಾಡಿರಬಹುದು."

ಕೆಲಗಳಿಗೆ ನೀರವನಾಗಿ ದಿಟ್ಟಿಸಿ ನೀಲಾಂಬರನೆಂದ: "ಆಗಲಿ, ಅವಳು ಮಾತಾಡುತಿದ್ದಳೆಂದೇ ಇಟ್ಟುಕೊ. ಆದರೆ ಅವಳು ಮಾತನಾಡುವ ಅಗತ್ಯವಿರಲಿಲ್ಲವೆಂದು ನೀನು ಹೇಗೆ ತಿಳಿದೆ?"

ಮುಖ ಹೊರಳಿಸಿ ನಕ್ಕು ಪೀತಾಂಬರನೆಂದ: "ಅದೇನೂ ನನಗೆ ತಿಳಿಯದು. ಆ ಘಟ್ಟ ಏರ್ಪಟ್ಟುದು ನನ್ನ ಹೆಂಡತಿಗಾಗಿ ಅಲ್ಲವೆಂಬುದು ಮಾತ್ರ ನನಗೆ ತಿಳಿದಿದೆ."

ಕ್ಷಣ ಹೊತ್ತು ನೀಲಾಂಬರ ಸಿಡು ಬೆಂಕಿಯಂತಾದ. ಎರಡೂ ಕೈಗಳನ್ನೆತ್ತಿದವನೆ ಪೀತಾಂಬರನೆಡೆಗೆ ಓಡಿದ. ಆದರೆ ನಡುವೆಯೆ ನಿಂತುಬಿಟ್ಟ. ಬಳಿಕ ಪೀತಾಂಬರನ ಮುಖವನ್ನು ನೋಡುತ್ತ ಹೇಳಿದ: "ನೀನೊಬ್ಬ ಶುದ್ಧ ಪಶು. ಮೇಲಾಗಿ ನನ್ನ ಒಡಹುಟ್ಟಿದ ತಮ್ಮ. ದೊಡ್ಡಣ್ಣನಾಗಿ ನಿನಗೆ ಶಾಪವೀಯಲಾರೆ. ನಾನು ನಿನ್ನನ್ನು ಕ್ಷಮಿಸಿದ್ದೇನೆ. ಆದರೆ ಗುರುಹಿರಿಯರಿಗೆ ಕಲಂಕದ ಮಾತುಗಳನ್ನಾಡಿರುವೆ. ಆದುದರಿಂದ ದೇವರು ನಿನ್ನನ್ನು ಕ್ಷಮಿಸನು. ತೊಲಗಾಚೆ ನನ್ನೆದುರಿನಿಂದ" ಎಂದು ಬಿರು ನುಡಿದ. ಬಳಿಕ ಮೆಲು ನಡಿಗೆಯಲ್ಲಿ ಮನೆಗೆ ಬಂದು ತಾನು ಮುರಿದ ತಟ್ಟೆಯನ್ನು ಪುನಃ ತನ್ನ ಕೈಗಳಿಂದಲೆ ಕಟ್ಟ ತೊಡಗಿದ.

ವಿರಾಜ ಕಿವಿಗೊಟ್ಟು ಕೇಳಿದಳು. ನಾಚಿಕೆ ಜುಗುಪ್ಸೆಗಳಿಂದ ಅವಳ ಶರೀರವೆಲ್ಲವೂ ಒಂದೆ ಸವನೆ ಕಂಪಿಸ ತೊಡಗಿತು. ರಾಜೇಂದ್ರ ಕುಮಾರ ಹಾಗೂ ತನ್ನಲ್ಲಿ ಆದ ಮಾತುಕತೆಯನ್ನು ಇವರೆದುರು ಹೋಗಿ ಹೇಳ ಬೇಕೆಂದು ಒಮ್ಮೆ ಎನಿಸಿತು ಅವಳಿಗೆ. ಆದರೆ ಅವಳಿಗೆ ಹೆಜ್ಜೆಕಿತ್ತಲಿ ಆಗಲಿಲ್ಲ. ತನ್ನ ಸೌಂದರ್ಯದ ಮೇಲೆ, ಪರ ಪುರುಷನೊಬ್ಬನ ಕಾಕದೃಷ್ಟಿ ಬಿದ್ದಿದೆಯೆಂದು ತನ್ನ ಬಾಯಿಯಿಂದ ತನ್ನ ಗಂಡನೆದುರು ಹೇಗೆ ಅವಳು ಹೇಳಬಲ್ಲಳು ?"

ತಟ್ಟೆಕಟ್ಟಿ ನೀಲಾಂಬರ ಹೊರಗೆ ಹೊರಟು ಹೋದ. ಅವನ ಮಧ್ಯಾಹ್ನದ ಊಟಕ್ಕೆ ಎಲ್ಲವನ್ನು ಮೊದಲೆ ಅಣಿಮಾಡಿ, ವಿರಾಜ ಮರೆಯಲ್ಲಿ ದೂರವೆ ಕುಳಿತಳು. ರಾತ್ರಿ ಗಂಡ ನಿದ್ದೆ ಹೋದ ಮೇಲೆಯೆ ಸದ್ದಿಲ್ಲದೆ ಬಂದು ಮಲಗಿದಳು. ಹಾಗೂ ಬೆಳಿಗ್ಗೆ ಗಂಡ ಎಚ್ಚರವಾಗುವ ಮೊದಲೆ ಕೋಣೆಯಿಂದ ಹೊರಬಿದ್ದಳು.

ಈ ರೀತಿ ದೂರದೂರವೆ ಇದ್ದು ವಿರಾಜ ಎರಡು ದಿನಗಳನ್ನು ನೂಕಿದಳು. ಈ ನಡುವೆ ನೀಲಾಂಬರ ಅವಳೊಂದಿಗೆ ಯಾವ ವಿಷಯವನ್ನೂ ವಿಚಾರಿಸಲಿಲ್ಲ. ಆಗ ವಿರಾಜಳ ಹೃದಯದಲ್ಲಿ ಮತ್ತೊಂದು ಶಂಕೆ ಮೂಡ ತೊಡಗಿತು. ಹೆಂಡತಿಯ ವಿಷಯವಾಗಿ ಇಂತಹ ಮಹಾಪರಾಧದ ವರ್ತಮಾನ ಕೇಳಿಯೂ ಗಂಡನ ಹೃದಯದಲ್ಲಿ ಯಾವುದೆ ಕುತೂಹಲ ಹುಟ್ಟಿದಿದ್ದುದನ್ನು ಕಂಡು ಅದರ ನಿಜಸಂಗತಿ ತಿಳಿಯಲಾರದವಳಾದಳು. 'ಬಹುಶಃ ಈ ಘಟನೆಯ ಬಗ್ಗೆ ಅವರು ವಿಸ್ಮಯಗೊಂಡಿರಬಹುದೆ'ಂದು ಒಮ್ಮೆ ಭಾವಿಸಿದಳು. ಆದರೆ ಇದರಿಂದಲೂ ಅವಳ ಮನಸ್ಸಿಗೆ ನೆಮ್ಮದಿಯುಂಟಾಗಲಿಲ್ಲ. ತಾನು ಅಡಗಿ ಕುಳಿತ ಸ್ಥಳದಲ್ಲಿಯೆ ಈ ಎರಡು ದಿನಗಳಿಂದ "ಈಗ ಆ ವಿಷಯವೇಳುವುದು, ಈಗ ಅವರು ನನ್ನನ್ನು ಕರೆದು ಈ ಸಂಗತಿಯ ವಿವರವನ್ನೆಲ್ಲ ಕೇಳಬಹುದು. ಆಗ ನಾನು ಮೊದಲಿನಿಂದ ಕೊನೆಯವರೆಗೆ ಸಂಭವಿಸಿದ ವೃತ್ತಾಂತವೆಲ್ಲವನ್ನೂ ನಿವೇದಿಸಿ ಅವರ ಚರಣದಡಿಯಲ್ಲಿ ನನ್ನ ಹೃದಯದ ಭಾರವನ್ನು ಇಳಿಸುವೆ. ಅದರಿಂದ ನನ್ನ ಚಿತ್ತಕ್ಕೆ ಶಾಂತಿ ದೊರೆಯುವುದು" ಎಂಬುದಾಗಿ ಆಸೆ ತಳೆದಿದ್ದಳು. ಆದರೆ ಹಾಗೇನೂ ಆಗಲಿಲ್ಲ. ಅವಳ ಗಂಡ ತುಟಿ ಸಹ ಬಿಚ್ಚಲಿಲ್ಲ.

ತನ್ನ ಗಂಡ ಬಹುಶಃ ಆ ಮಾತಿನ ಮೇಲೆ ಸ್ವಲ್ಪವೂ ವಿಶ್ವಾಸವಿಟ್ಟಿರಲಿಕ್ಕಿಲ್ಲವೆಂದು ಮನದಲ್ಲಿ ಒಮ್ಮೆ ನಿರ್ಧರಿಸುವುದರಲ್ಲಿದ್ದಳು. ಆದರೆ ತಾನು ಹೀಗೆ ಮರೆಯಲ್ಲಿ ಕುಳಿತುಕೊಳ್ಳುವದರಿಂದ ಅವರ ಮನದಲ್ಲಿ ಸಂಶಯ ತಲೆಯೆತ್ತದೆ? ರಾಜೇಂದ್ರನ ವಿಷಯವಾಗಿ ಎಲ್ಲ ಮಾತನ್ನೂ ಗಂಡನಿಗೆ ಹೇಳಿಬಿಡಲೆ ಎಂದು ಒಮ್ಮೆ ಮನದಲ್ಲಿಯೆ ಎಂದುಕೊಂಡಳು ವಿರಾಜ. ಆದರೆ ಮತ್ತೊಂದು ಕಲ್ಪನೆ ಬಂತು: ಇಷ್ಟುದಿನಗಳವರೆಗೆ ಅವರಿಂದ ಮರೆಮಾಚಿಟ್ಟ ವಿಷಯವನ್ನು ಅವರಾಗಿ ಎತ್ತದೆ ತಾನಾಗಿಯೆ ಹೇಗೆ ಎತ್ತುವುದು?

ಆ ದಿನವೂ ಅದೆ ರೀತಿ ಸಂದಿತು. ಆದರೆ ಮೂರನೆಯ ದಿನ ಬೆಳಿಗ್ಗೆ ಭಯಪೀಡಿತವಾದ ಭಯಾತುರವಾದ ಹೃದಯದಿಂದ ವಿರಾಜ ಅರೆಮನದಿಂದ ಕೆಲಸ ಮಾಡುತಿದ್ದಳು. ಒಮ್ಮೆಲೆ– ಗಂಡನು ಪೀತಾಂಬರನ ಮಾತನ್ನೆ ನಂಬಿ ಬಿಟ್ಟಿದ್ದರೆ– ಎಂಬ ಭಯಂಕರವಾದ ಆಲೋಚನೆ ಅವಳ ಹೃದಯದ ಗಭೀರ ಅಂತರಾಳವನ್ನು ಮಥಿಸಿ ನೊರೆಯಂತೆ ಮೇಲಕ್ಕೆದ್ದು ಬಂದಿತು. ಆಗ ನಿಲಾಂಬರ ಸಂಧ್ಯೋಪಾಸನೆ ಮುಗಿಸಿ ಎದ್ದು ಹೋಗುತ್ತಲಿದ್ದ. ಅಷ್ಟರಲ್ಲಿ ವಿರಾಜ ಸುಂಟರ ಗಾಳಿಯಂತೆ ಬಂದು ಅವನ ಮುಂದೆ ತೇಕುತ್ತ ನಿಂತಳು.

ವಿಸ್ಮಯದಿಂದ ನೀಲಾಂಬರ ಮೊಗವೆತ್ತಿ ನೋಡಿದ – ವಿರಾಜ ಹಲ್ಲುಗಳಿಂದ ತುಟಿಗಳನ್ನು ಗಟ್ಟಿಯಾಗಿ ಅದುಮಿ ಹಿಡಿದು– "ಹೌದೆ, ನೀವು ನನ್ನೊಂದಿಗೆ ಏಕೆ ಮಾತಾಡುತ್ತಿಲ್ಲ? ಅಂತಹದೇನು ಮಾಡಿದೆ ನಾನು?" ಎಂದಳು.

ನೀಲಾಂಬರ ನಕ್ಕು– "ನೀನೆ ತಲೆಮರೆಸಿಕೊಂಡು ಓಡುವೆ. ಎಂದ ಮೇಲೆ ನಾನಾರ ಜೊತೆ ಮಾತನಾಡುವುದು?" ಎಂದ.

"ನಾನು ತಲೆಮರೆಸಿಕೊಂಡು ಓಡುವೆನೆ? ಏಕೆ, ನೀವು ಸ್ವಲ್ಪ ನನ್ನನ್ನು ಕೂಗಬಾರದೆ?"

ನೀಲಾಂಬರನೆಂದ: "ಯಾರು ಕಂಣು ತಪ್ಪಿಸಿ ಅಡ್ಡಾಡುವರೊ ಅಂತಹರನ್ನು ಕೆದರಿ ಮಾತನಾಡಿಸಿದರೆ ಪಾಪಕ್ಕೆ ಗುರಿಯಾಗಬೇಕಾದೀತು."

"ಪಾಪಕ್ಕೆ ಗುರಿಯಾಗಬೇಕೇ? ಇದರಿಂದ ನೀವು ನಿಮ್ಮ ತಮ್ಮನ ಮಾತನ್ನು ನಂಬಿಬಿಟ್ಟಿರುವಿರೆಂದು ಅರ್ಥವಾಗುತ್ತದೆ/ ಹೌದೊ ಅಲ್ಲವೊ?"

"ಸತ್ಯ ಸಂಗತಿಯನ್ನು ಅದೇಕೆ ನಂಬಕೂಡದು?"

ಕೋಪ ದುಃಖಗಳಿಂದ ವಿರಾಜ ಅತ್ತುಬಿಟ್ಟಳು. ಕಂಬನಿಯಿಂದ ವಿಕೃತವಾದ ಕಂಠದಿಂದ ಅವಳು ಚೀರಿ ಹೇಳಿದಳು: "ಅದು ನಿಜವಲ್ಲ; ಸಂಪೂರ್ಣ ಸುಳ್ಳು ಸಂಗತಿ. ಹದಿನಾರಾಣೆ ಸುಳ್ಳು. ನೀವು ಅದನ್ನೇಕೆ ನಂಬಿದಿರಿ?"

"ಹಾಗಾದರೆ ನೀನು ನದಿಯ ತಡೆಯಲ್ಲಿ ಅವನೊಂದಿಗೆ ಮಾತಾಡಲಿಲ್ಲವೆ?"

ವಿರಾಜ ಒಗರು ದನಿಯಲ್ಲಿ 'ಹೌದು, ಮಾತನಾಡಿದೆ' ಎಂದಳು.

"ನಾನು ನಂಬಿದ್ದೂ ಅಷ್ಟೆ"— ಎಂದ ನೀಲಾಂಬರ.

ವಿರಾಜ ಕೈಯಿಂದ ಕಂಬನಿ ಒರೆಸಿ–"ನೀವು ನಂಬಿದುದೆ ಆದರೆ ನಿಮ್ಮ ಆ ನೀಚ ತಮ್ಮನಂತೆ ನೀವೂ ನನ್ನನ್ನು ಶಿಕ್ಷಿಸಲಿಲ್ಲವೇಕೆ?"

ನೀಲಾಂಬರ ಪುನಃ ನಕ್ಕು ಬಿಟ್ಟ. ಅವನ ಮುಖದ ಮೇಲೆ ತೇಲಿದ ನಿರ್ಮಲ ಹಾಸ್ಯ ಅದೆ ಅರಳುವ ಹೂವಿನಂತೆ ತೋರಿತು. ಬಲಗೈಯನ್ನು ಮುಂದೆ ಮಾಡಿ "ಹಾಗಾದರೆ ನನ್ನ ಬಳಿಗೆ ಬಾ, ಚಿಕ್ಕಂದಿನಲ್ಲಿ ನಿನ್ನ ಕಿವಿ ಹಿಂಡಿದಂತೆ ಇಂದೂ ಹಿಂಡುವೆ" ಎಂದ.

ವಿರಾಜ ತಕ್ಷಣ ಗಂಡನ ಸನಿಹಕ್ಕೆ ಬಂದು ಮೊಂಡಿಯೂರಿ ಕುಳಿತಳು. ಬಳಿಕ ಮರುಕ್ಷಣದಲ್ಲಿಯೆ ಅವನ ತೊಡೆಯಮೇಲೆ ಬಿಮ್ಮನೆ ಬೋರಲು ಬಿದ್ದು ತನ್ನ ಬಾಹುಗಳಿಂದ ಗಂಡನ ಕೊರಳನ್ನು ಸುತ್ತಿ ಭೋರೆಂದು ಅಳ ತೊಡಗಿದಳು.

ನೀಲಾಂಬರ ಅವಳ ಅಳುವನ್ನು ತಡೆಯಲಿಲ್ಲ. ಸ್ವತಃ ಅವನ ಕಂಣು ಗಳೆರಡೂ ಒದ್ದೆಯಾದವು. ನೀರವತೆಯಿಂದ ಹೆಂಡತಿಯ ತಲೆಯಮೇಲೆ ಬಲಗೈಯಿರಿಸಿ ಮನದಲ್ಲಿಯೆ ಆಶೀರ್ವದಿಸತೊಡಗಿದ.

ಬಹಳ ಸಮಯದ ನಂತರ ಅಳುವಿನ ತೀಕ್ಷ್ಣತೆ ಕೊಂಚ ಕಡಿಮೆ ಯಾದಾಗ ವಿರಾಜ ಮುಖವೆತ್ತದೆ — "ನಾನು ಅವನಿಗೇನು ಹೇಳಿದೆನೆಂದು ಬಲ್ಲಿರಾ?" ಎಂದು ಕೇಳಿದಳು.

ನೀಲಾಂಬರ ಇನಿದನಿಯಲ್ಲಿ ಸ್ನೇಹಪೂರ್ವಕವಾಗಿ ನುಡಿದ - " ಬಲ್ಲೆ ; ಇನ್ನು ಮುಂದೆ ಇತ್ತ ಕಾಲಿಡಕೂಡದೆಂದು ಅವನಿಗೆ ಎಚ್ಚರಿಕೆ ಕೊಟ್ಟೆ."

" ಇದನ್ನಾರು ಹೇಳಿದರು ನಿಮಗೆ ? "

ನೀಲಾಂಬರ ಮುಗುಳು ನಗುತ ನುಡಿದ: " ನನಗಾರೂ ಹೇಳಲಿಲ್ಲ. ನೀನು ಪರ ಪುರುಷನೊಂದಿಗೆ ಮಾತನಾಡಿದೆಯೆಂದ ಮೇಲೆ ಬಹು ದೊಡ್ಡ ಸಂಕಟಕ್ಕೆರವಾಗಿಯೆ ಮಾತನಾಡಿರಬೇಕು. ಅಂಥ ಪ್ರಸಂಗದಲ್ಲಿ ನೀನು ಈ ರೀತಿ ನುಡಿಯದೆ ಬೇರೇನು ನುಡಿಯ ಬಲ್ಲೆ ವಿರಾಜ ? "

ವಿರಾಜಳ ಕಂಣಿನಿಂದ ಪುನಃ ಕಂಬನಿ ಹರಿಯ ತೊಡಗಿತು. ನೀಲಾಂಬರನೆಂದ : " ಆದರೂ ನೀನು ಹಾಗೆ ಮಾಡಬಾರದಾಗಿತ್ತು. ನೀನು ನನಗೆ ಆ ಬಗ್ಗೆ ಸೂಚನೆಯಿತ್ತಿದ್ದರೆ ನಾ ಹೋಗಿ ಅವನಿಗೆ ತಿಳಿಹೇಳುತಿದ್ದೆ. ಅವನ ಮನೋವೃತ್ತಿ ನನಗೆ ಈ ಹಿಂದೆಯೆ ಗೊತ್ತಾಗಿತ್ತು. ತೀರ ನಸುಕಿನಲ್ಲಿಯೆ ನಾನು ಆತನನ್ನು ಅನೇಕ ಸಲ ಇಲ್ಲಿ ಕಂಡಿದ್ದೇನೆ. ನೀನೆ ಜಮಿಾನುದಾರನೊಂದಿಗೆ ಕೀಟಲೆ ಬೇಡವೆಂದೆ. ಆದುದರಿಂದಲೆ ನಾನು ತೆಪ್ಪಗಿದ್ದೆ."

ಆ ದಿನ ಸಂಜೆಯಿಂದಲೆ ಆಗಸದಲ್ಲಿ ಮೋಡ ಕವಿದಿತ್ತು. ತಡೆ-ತಡೆದು ಮಳೆಯ ಹನಿಗಳೂ ಉದುರುತಿದ್ದವು. ರಾತ್ರಿ ಮಲಗಿದಾಗ ಗಂಡ-ಹೆಂಡಿರಲ್ಲಿ ಪುನಃ ಅದೆ ವಿಷಯವಾಗಿ ಮಾತುಕತೆಯಾರಂಭವಾಯಿತು.

ನೀಲಾಂಬರನೆಂದ: " ಇಂದು ದಿನವೆಲ್ಲವೂ ಅವನ ದಾರಿ ನೋಡುತ್ತ ಕುಳಿತಿದ್ದೆ.

ವಿರಾಜ ಭಯಭೀತಳಾಗಿ " ಏಕೆ, ಆದೇಕೆ ? " ಎಂದು ವಿಚಾರಿಸಿದಳು.

" ನಾನು ಅವನಿಗೆ ಎರಡು ಮಾತು ಆಡದೆ ಹೋದರೆ ಭಗವಂತನ ದೃಷ್ಟಿಯಲ್ಲಿ ಅಪರಾಧಿಯಾಗುವೆ."

ಭಯದಿಂದ ವಿರಾಜ ಎದ್ದು ಕುಳಿತಳು. " ಆಗದು, ಎಂದಿಗೂ ಆಗದು. ಯಾವ ರೀತಿಗೂ ಆಗದು. ಈ ವಿಷಯವಾಗಿ ನಿಮಗೆ ಒಂದು ಮಾತೂ ಆಡಗೊಡಲಾರೆ."

ಹೆಂಡತಿಯ ಕಂಣು ಮುಖ ನೋಡಿ ನೀಲಾಂಬರ ಅತ್ಯಂತ ಅಚ್ಚರಿಗೊಂಡ. ಬಳಿಕ ನುಡಿದ : " ನಾನು ನಿನ್ನ ಪತಿ. ಆ ಬಗ್ಗೆ ನನ್ನ ಕರ್ತವ್ಯವೇನೂ ಇಲ್ಲವೆ ? "

ಸ್ವಲ್ಪವೂ ವಿಚಾರ ಮಾಡದೆ ವಿರಾಜಳೆಂದಳು: " ಪತಿದೇವರ ಉಳಿದ ಕರ್ತವ್ಯಗಳನ್ನು ಮೊದಲು ಮಾಡಿ. ಆ ಬಳಿಕ ಈ ಕರ್ತವ್ಯವನ್ನು ಮಾಡ ಬಹುದು."

"ಏನೆಂದೆ?'' ಎಂದು ನೀಲಾಂಬರ ಮೊದಲು ಸ್ವಲ್ಪ ವಿವಶನಾದ ಬಳಿಕ ಇಳಿದನಿಯಲ್ಲಿ "ಒಳ್ಳೇದು'' ಎಂದು ನಿಡು ಉಸಿರ್ಗರೆದು ಸುಮ್ಮನೆ ಮಗ್ಗುಲಾಗಿ ಒರಗಿದ.

ವಿರಾಜ ಮಲಗಿಕೊಂಡಲ್ಲಿಂದಲೆ ಸ್ಥಿರಭಾವದಿಂದ — "ಒಮ್ಮೆಲೆ ನನ್ನ ಬಾಯಿಯಿಂದ ಈ ಮಾತು ಹೇಗೆ ಹೊರಹೊಮ್ಮಿತು?" ಎಂದು ವಿಚಾರಿಸ ತೊಡಗಿದಳು.

ಇಂದೇ ಮಳೆ ಬೀಳಲಾರಂಭಿಸಿತ್ತು. ಹೊರಗೆ ಟಪಟಪವೆಂದು ಮಳೆಯ ಹನಿಗಳು ಬೀಳುತಿದ್ದವು. ಅದರಿಂದ ಭೂಮಿತೊಯ್ದು ಮಣ್ಣಿನ ಸುವಾಸನೆ ತೆರೆದ ಕಿಟಿಕೆಗಳಿಂದ ಒಳಗೆ ತೂರಿ ಬರುತಿದ್ದಿತು. ಒಳಗೆ ದಂಪತಿಗಳು ಬಾಯಿ ಮುಚ್ಚಿ ತೆಪ್ಪಗೆ ಒರಗಿದ್ದರು.

ಎಷ್ಟೋ ಹೊತ್ತಿನ ಮೇಲೆ ನೀಲಾಂಬರ ನೀರವತೆಯನ್ನು ಭಂಗ ಗೊಳಿಸಿದ. ದುಃಖಭರಿತ ಗಂಭೀರ ದನಿಯಲ್ಲಿ ತನ್ನಷ್ಟಕ್ಕೆ ಹೇಳತೊಡಗಿದ: "ವಿರಾಜ, ನಾನೆಷ್ಟು ದುರ್ಬಲ ಮನುಷ್ಯನೆಂಬುದನ್ನು ನೀನು ಕೃತಿಯಿಂದ ಹೆಜ್ಜೆ ಹೆಜ್ಜೆಗೆ ತಿಳಿಯುವಂತೆ ಮಾಡುತ್ತಿರುವೆ. ಅನ್ಯರಿಂದ ನನಗೆ ಅದು ಅಷ್ಟು ಚೆನ್ನಾಗಿ ತಿಳಿಯುವ ಸಂಭವವಿರಲಿಲ್ಲ."

ವಿರಾಜಳಿಗೆ ಏನೊ ಆಡಬೇಕೆಂಬ ಇಚ್ಛೆಯಾಗಿತ್ತು. ಆದರೆ ಅವಳಿಗೆ ಬಾಯಿಯೆ ಬರಲಿಲ್ಲ. ಅಸಹನೀಯವಾದ ದುಃಖದಿಂದಲೂ, ದಾರಿದ್ರ್ಯ ದಿಂದಲೂ ಪೀಡಿತರಾದ ಈ ದಂಪತಿಗಳಲ್ಲಿ ಅನೇಕ ದಿನಗಳ ತರುವಾಯ ಇಂದು ರಾಜಿಯಾಗುತ್ತಲಿತ್ತು. ಆದರೆ ಆ ಸಂಧಿ ಸೂತ್ರ ಕಾಣಿಸಿತೆನ್ನು ವಷ್ಟರಲ್ಲಿ ಮತ್ತೆ ಛಿನ್ನ ವಿಚ್ಛಿನ್ನವಾಯಿತು.

# ೧೦

ಮಧ್ಯಾಹ್ನದ ಸಮಯ. ಮನೆಯಲ್ಲಿ ನೀಲಾಂಬರನೂ ಇರಲಿಲ್ಲ, ಪೀತಾಂಬರನೂ ಇರಲಿಲ್ಲ. ಬೇರೆ ಯಾರೂ ಇದ್ದಂತೆ ಕಾಣಲಿಲ್ಲ. ಈ ನಿಸ್ತಬ್ಧತೆಯನ್ನು ಕಂಡು ಮೋಹಿನಿ ಅಳುತ್ತ ಅಳುತ್ತ ಬಂದು ಅಕ್ಕನ ಪಾದದ ಮೇಲೆ ಬಿದ್ದಳು. ಗಂಡ ಮಾಡಿದ ಅಪರಾಧಗಳಿಂದ ಭಯ ವ್ಯಾಕುಲಳಾಗಿ ಎರಡು ದಿನಗಳಿಂದ ಪ್ರತಿಕ್ಷಣದಲ್ಲಿಯೂ ಇಂಥ ಸಮಯವನ್ನೆ ನಿರೀಕ್ಷಿಸುತಿದ್ದಳು. ಕಂಬನಿ ಮಿಡಿಯುತ್ತಲೆ—"ಯಾವ ಶಾಪವನ್ನೂ ಕೊಡಬೇಡಕ್ಕಾ ಕೊನೆಯ ಮಟ್ಟಿಗೆ ನನ್ನ ಮುಖ ನೋಡಿಯಾದರೂ ಅವರನ್ನು ಕ್ಷಮಿಸು. ಅವರಿಗೇನಾದರೂ ಆದರೆ ನಾನು ಬದುಕಲಾರೆ."

ವಿರಾಜ ನೆಗೆಂಣಿಯ ಕೈಹಿಡಿದು ಎಬ್ಬಿಸಿದಳು. ಬಳಿಕ ವಿಷಾದ ಪೂರ್ಣ ಗಂಭೀರ ದನಿಯಲ್ಲಿ "ನಾನು ಶಾಪವೀಯುವುದಿಲ್ಲ ತಂಗೀ! ನನಗೆ ಕೇಡುಂಟು ಮಾಡುವಷ್ಟು ಶಕ್ತಿ ಅವರಿಗಿಲ್ಲ. ಆದರೆ ನಿನ್ನಂತಹ ಸತಿ ಸಾಧ್ವಿಯ ಮೇಲೆ ಕೈಯೆತ್ತಿದ ಮಹಾಪರಾಧವನ್ನು ದುರ್ಗಾಮಾತೆ ಸಹಿಸಲಾರಳು."

ಮೋಹಿನಿಯ ಶರೀರ ನಡುಗಿತು. ಕಂಣೊರಿಸಿಕೊಂಡು—"ಏನು ಮಾಡಲಿ ಅಕ್ಕ – ಅದು ಅವರ ಹುಟ್ಟು ಸ್ವಭಾವವೆ ಆಗಿಬಿಟ್ಟಿದೆ. ಇಂತಹ ಸಿಡುಕು ಸ್ವಭಾವವನ್ನು ಕೊಟ್ಟ ದೇವರೆ ಅವರನ್ನು ಕ್ಷಮಿಸಲಿ. ಈ ಬಗ್ಗೆ ನಾನು ಹರಕೆ ಹೊತ್ತುಕೊಳ್ಳದಂತಹ ಯಾವ ದೇವತೆಯೂ ಉಳಿದಿಲ್ಲ. ಆದರೆ ನಾನು ಮಹಾ ಪಾಪಿಷ್ಠೆ. ಆದುದರಿಂದ ಯಾವ ದೇವತೆಯೂ ನನ್ನ ಕೂಗಿಗೆ ಓಗೊಡಲಿಲ್ಲ. ನನ್ನ ಒಂದು ದಿನವೂ ಹೀಗೆಯೆ....'' ಎಂದು ಒಮ್ಮೆಲೆ ನಿಂತು ಬಿಟ್ಟಳು.

ಮೋಹಿನಿಯ ಹಣೆಯ ಬಲಭಾಗದಲ್ಲಿಯ ಡೊಂಕಾದ ಒಂದು ದೊಡ್ಡ ಕಲೆಯನ್ನು ವಿರಾಜ ಈ ವರೆಗೂ ನೋಡಿರಲಿಲ್ಲ. ಅದರ ಕಡೆಗೆ ದೃಷ್ಟಿ ಹೋದೊಡನೆಯೆ "ನಿನ್ನ ಹಣೆಯ ಮೇಲೆ ಇದೇನೆ? ಏಟಿನ ಕಲೆಯೇನು?" ಎಂದು ವಿಚಾರಿಸಿದಳು.

ಮೋಹಿನಿ ತನ್ನ ಲಜ್ಜಿತ ಮುಖವನ್ನು ಕೆಳಗೆ ಮಾಡಿ ಹೌದೆನ್ನುವಂತೆ ತಲೆಹಾಕಿದಳು.

"ಏತರಿಂದ ಹೊಡೆದದು ?"

ಗಂಡನ ಹೇಸಿ ಕಾರ್ಯಕ್ಕಾಗಿ ಮೋಹಿನಿಗೆ ಮೊಗವೆತ್ತುವ ಸಾಹಸವಾಗ ಲಿಲ್ಲ. ನತಮುಖಳಾಗಿ ಇಳಿದನಿಯಲ್ಲಿ "ಕೋಪ ಬಂದಾಗ ಅವರಿಗೆ ವಿವೇಕವೇ ಇರುವುದಿಲ್ಲವಕ್ಕಾ !" ಎಂದಳು.

"ಅದನ್ನು ನಾ ಬಲ್ಲೆ. ಅವರು ಏತರಿಂದ ಹೊಡೆದದ್ದು ?"

ಮೋಹಿನಿ ಮೊದಲಿನಂತೆಯೆ ಮುಖ ಕೆಳಗೆ ಮಾಡಿ — "ತಮ್ಮ ಕಾಲೊಳಗಿನ...." ಎಂದಳು.

ವಿರಾಜ ದಂಗಾಗಿ ಕುಳಿತು ಬಿಟ್ಟಳು. ಅವಳ ಎರಡೂ ಕಂಣುಗಳಿಂದ ಬೆಂಕಿಯ ಕಿಡಿ ಹಾರುತ್ತಿರುವಂತೆ ತೋರಿತು. ಸ್ವಲ್ಪ ಸಮಯ ಸುಮ್ಮನಿದ್ದು ಇಳಿದನಿಯಲ್ಲಿ ನುಡಿದಳು : "ನೀನು ಅದನ್ನು ಹೇಗೆ ಸಹಿಸಿದೆ ತಂಗೀ ?"

ಮುಖವನ್ನು ಸ್ವಲ್ಪ ಮೇಲಕ್ಕೆತ್ತಿ ಮೋಹಿನಿಯೆಂದಳು : "ಏನು ಮಾಡಲಿ ಅಕ್ಕ – ಪೆಟ್ಟು ತಿಂದು ತಿಂದು ನನಗೆ ಸಹಿಸುವ ಅಭ್ಯಾಸವಾಗಿ ಹೋಗಿದೆ."

ವಿರಾಜಳ ಕಿವಿಗೆ ಬಹುಶಃ ಈ ಮಾತು ಕೇಳಿ ಬರಲಿಲ್ಲ. ಕರ್ಕಶ ವಾಗಿ - "ಹೀಗಿದ್ದೂ ನೀನು ಅವರ ಸಲುವಾಗಿಯೆ ಕ್ಷಮೆ ಬೇಡಬಂದೆಯಾ ?"

ಅಕ್ಕನ ಮೊಗವನ್ನು ನೋಡುತ್ತ ಮೋಹಿನಿಯೆಂದಳು : "ಹಾಂ, ಅವರ ಸಲುವಾಗಿಯೆ ಬಂದೆ. ಆದರೆ ನೀನು ಅವರ ಮೇಲೆ ಕೋಪಗೊಂಡರೆ ಅವರಿಗೆ ಅಮಂಗಲವಾಗುವುದಕ್ಕಾ. ಮೇಲಾಗಿ ನನ್ನ ಈ ತಾಳ್ಮೆ, ಸಹನೆ ಇವೆಲ್ಲವನ್ನೂ ನಿನ್ನಿಂದಲೆ ಕಲಿತೆ. ನನಗೇನಾದರೂ ತಿಳಿವಳಿಕೆ ಬಂದುದೆ ಆದರೆ ಅದೆಲ್ಲ ನಿನ್ನ ಚರಣ ...."

ವಿರಾಜ ವ್ಯಸ್ತಳಾದಳು. ನಡುವೆಯೆ ಬಾಯಿ ಹಾಕಿ "ಬೇಡ ತಂಗೀ. ಹೀಗೆ ಹೇಳಬೇಡ. ಈ ಅವಮಾನವನ್ನು ನಾನು ಸಹಿಸಲಾರೆ."

ನಸುನಕ್ಕು ಮೋಹಿನಿಯೆಂದಳು : "ನಮ್ಮ ಅಪಮಾನವನ್ನು ನಾವೇ ಸಹಿಸುವುದು ಮಹಾಕಾರ್ಯವೆಂದು ಬಗೆದೆಯಾ ಅಕ್ಕ ! ನಿನ್ನಂತಹ ಗಂಡನನ್ನು

ಪಡೆದ ಸೌಭಾಗ್ಯವತಿಯರು ಈ ಲೋಕದಲ್ಲಿ ಬಹಳ ಕಡಿಮೆ. ಆದರೂ ನೀನು ಸಹಿಸುವಂತಹ ಕಷ್ಟ-ದುಃಖಗಳ ಪ್ರಸಂಗಗಳು ನಮಗೆ ಬಂದರೆ, ನಾವು ಕೈಕಾಲೇ ಬಿಡುತಿದ್ದೆವು. ಅವರ ಮುಖದಲ್ಲಿ ನಗೆಯಿಲ್ಲ, ಮನಕ್ಕೆ ನೆಮ್ಮದಿಯಿಲ್ಲ. ಇದನ್ನು ದಿನ ರಾತ್ರಿ ಕಣ್ಣಾರೆ ಕಾಣುವ ಪ್ರಸಂಗ ಬಂದಿವೆ ನಿನಗೆ. ಗಂಡನ ಈ ಸಂಕಟಮಯ ಅವಸ್ಥೆಯನ್ನು ನೀನಲ್ಲದೆ ಮತ್ತಾರು ಸಹಿಸಬಲ್ಲರು ಅಕ್ಕಾ ? ”

ವಿರಾಜ ಸುಮ್ಮನೆ ಇದ್ದಳು.

ಮೋಹಿನಿ ತಟ್ಟನೆ ವಿರಾಜಳ ಎರಡೂ ಪಾದಗಳನ್ನು ಹಿಡಿದುಕೊಂಡು— “ ಹೇಳಕ್ಕಾ, ನೀನು ಅವರನ್ನು ಕ್ಷಮಿಸಿದೆಯೊ ಇಲ್ಲವೊ ? ನೀನು ಕ್ಷಮಿಸುವ ವರೆಗೆ ನಾನು ನಿನ್ನ ಪಾದಗಳನ್ನು ಬಿಡುವುದೆ ಇಲ್ಲ. ನೀನು ದಯೆ ತೋರದೆ ಹೋದರೆ ಅವರನ್ನು ಯಾರೂ ರಕ್ಷಿಸರು ಅಕ್ಕಾ ! ”

ವಿರಾಜ ತನ್ನ ಕಾಲುಗಳನ್ನೆಳೆದುಕೊಂಡು ನೆಗೆಂಣಿಯ ಗದ್ದವನ್ನು ಹಿಡಿದು “ ಕ್ಷಮಿಸಿದ್ದೇನೆ ತಂಗೀ ” ಎಂದಳು.

ಮೋಹಿನಿ ಅಕ್ಕನ ಚರಣ ಧೂಳಿಯನ್ನು ಪುನಃ ಕೊಂಡು, ಮುಖ ದಲ್ಲಿ ಪ್ರಸನ್ನತೆಯನ್ನು ಮೂಡಿಸುತ್ತ ಹೊರಟು ಹೋದಳು. ಆದರೆ ವಿರಾಜ ಕಕ್ಕಾವಿಕ್ಕಿಯಾಗಿ ಅದೆ ಸ್ಥಳದಲ್ಲಿ ಬಹಳ ಹೊತ್ತು ಸುಮ್ಮನೆ ಕುಳಿತಿದ್ದಳು. ಅವಳ ಹೃದಯಗಹ್ವರದಿಂದ ಒಂದೆ ಸವನೆ ಆದಾರೊ ಕೂಗಿ ಕೂಗಿ ಹೇಳ ತೊಡಗಿದಂತಾಯಿತು — “ ಇದನ್ನು ನೋಡಿಯಾದರೂ ಕಲಿತುಕೊ ವಿರಾಜ ! ”

ಮೋಹಿನಿ ಆ ದಿನದಿಂದ ಎಷ್ಟೊ ದಿನಗಳವರೆಗೆ ವಿರಾಜಳ ಮನೆಯಲ್ಲಿ ಪ್ರವೇಶ ಮಾಡದಿದ್ದರೂ ಅವಳ ಕಂಣು ಕಿವಿ ಯಾವಾಗಲೂ ವಿರಾಜಳ ಮನೆಯ ಕಡೆಗೇ ಇರುತ್ತಿತ್ತು. ಅಂದು ಬಹುಶಃ ಹಗಲು ಒಂದು ಗಂಟೆಗೆ ಅತ್ಯಂತ ಸಾವಧಾನದಿಂದ ಸುತ್ತಲೂ ನಿರೀಕ್ಷಿಸಿ ವಿರಾಜಳ ಮನೆಯನ್ನು ಬಿರ್ರನೆ ಹೊಕ್ಕಳು.

ವಿರಾಜ ಗಲ್ಲದ ಮೇಲೆ ಕೈಯಿಟ್ಟುಕೊಂಡು ಅಡುಗೆ ಮನೆಯ ಜಗುಲಿಯ ಮೇಲೆ ಕುಳಿತಿದ್ದಳು. ನೆಗೆಂಣಿ ಬರುವುದನ್ನು ನೋಡಿಯೂ ಸಹ ಅವಳು ತೆಪ್ಪಗೆ ಕುಳಿತಿದ್ದಳು.

ನೆಗೆಂಣಿ ಅಕ್ಕನ ಬಳಿಯಲ್ಲಿ ಕುಳಿತು ಅವಳ ಪಾದ ಮುಟ್ಟಿ ತಲೆ ಸವರಿಕೊಂಡಳು. ಬಳಿಕ ಮೆಲ್ಲ ಮೆಲ್ಲನೆ: "ಏನಕ್ಕಾ ನಿನಗೆ ಹುಚ್ಚು ಹಿಡಿಯುತ್ತಿಲ್ಲವಷ್ಟೆ?" ಎಂದಳು.

ವಿರಾಜ ಮುಖ ಹೊರಳಿಸಿ ಚುರುಕು ದನಿಯಲ್ಲಿ – "ನಿನಗೂ ಹುಚ್ಚು ಹಿಡಿದಿಲ್ಲವೆ?" ಎಂದು ಮಾರ್ನುಡಿದಳು.

ಮೋಹಿನಿಯೆಂದಳು: "ಅಕ್ಕ – ನಿನ್ನೊಂದಿಗೆ ನನ್ನನ್ನು ತುಲನೆ ಮಾಡಿ ನನ್ನ ಮೇಲೆ ಅಪರಾಧ ಹೊರಿಸಬೇಡ. ನಾನು ನಿನ್ನ ಈ ಚರಣ ಧೂಳಿಗೂ ಸಮಾನಳಲ್ಲ. ನೀನೇಕೆ ಹೀಗೆ ಆಗುತ್ತಿರುವೆಯಕ್ಕ? ಇಂದು ನೀನು ಭಾವನವರಿಗ್ಗೆ ಉಣಬಡಿಸಲಿಲ್ಲವೇಕೆ?"

"ನಾನೇನು ಅವರನ್ನು ಉಂಣಲು ಅಡ್ಡಿಪಡಿಸಲಿಲ್ಲ!"

ಮೋಹಿನಿ ನುಡಿದಳು: "ನೀನು ಅಡ್ಡಿಪಡಿಸಲಿಲ್ಲವೆಂಬುದು ನಿಜ. ಆದರೆ ಬಡಿಸಲು ನೀನೇಕೆ ಹೋಗಲಿಲ್ಲ? ಊಟಕ್ಕೆ ಕುಳಿತಾಗ ಅವರು ನಿನ್ನನ್ನೆಷ್ಟು ಕರೆದರೂ ನೀನು ಉತ್ತರವನ್ನೂ ಸಹ ಕೊಡಲಿಲ್ಲ. ಇದರಿಂದ ದುಃಖವಾಗುವುದಿಲ್ಲವೆ ನೀನೆ ಹೇಳು. ಕರೆದಾಗ ನೀನು ಹೋಗಿದ್ದರೆ ಅವರು ತಟ್ಟೆ ಬಿಟ್ಟು ಏಳುತ್ತಿರಲಿಲ್ಲ."

ಆಗಲೂ ವಿರಾಜ ಸುಮ್ಮನಿದ್ದಳು.

ಮೋಹಿನಿಯೆ ಹೇಳತೊಡಗಿದಳು: "ಬಿಡುವಿರಲಿಲ್ಲವೆಂದು ಬಹುಶಃ ನೀನು ಹೇಳಬಹುದು. ಆದರೆ ಹೀಗೆ ಹೇಳಿ ನನ್ನನ್ನು ನೀನು ಮೋಸ ಮಾಡಲಾರೆ ಅಕ್ಕ! ನೀನು ಯಾವಾಗಲೂ ಕೈಯಲ್ಲಿದ್ದ ಕೆಲಸ ಬೊಗಸೆಗಳನ್ನು ಬಿಟ್ಟು ಅವರ ಬಳಿಯಲ್ಲಿಯೆ ಕುಳಿತು ನೀಡುತ್ತಿದ್ದೆ. ನಿನ್ನ ದೃಷ್ಟಿಯಲ್ಲಿ ಇದಕ್ಕೂ ಮಹತ್ವವಾದ ಕಾರ್ಯ ಯಾವುದೂ ಇಲ್ಲ. ಆದರೂ ಇಂದು...."

ನೆಗೆಂಣಿಯ ಮಾತು ಮುಗಿಯುವುದರೊಳಗಾಗಿಯೆ ವಿರಾಜ ಹುಚ್ಚಳಂತೆ ಅವಳ ಒಂದು ಕೈಯನ್ನು ಹಿಡಿದು — "ನೀನು ಕಂಣಾರೆ ನೋಡುವೆಯಾದರೆ ನಡೆ, ತೋರಿಸುವೆ" ಎಂದು ಅವಳನ್ನು ದರದರನೆ ಎಳೆಯುತ್ತ ಅಡುಗೆ ಮನೆಗೆ ಒಯ್ದಳು. ಬಾಗಿಲ ಬಳಿಯಲ್ಲಿಯೆ ನಿಂತು "ಇದು ನೋಡು" ಎಂದಳು ವಿರಾಜ.

ಮೋಹಿನಿ ತಟ್ಟೆಯಲ್ಲಿದ್ದುದನ್ನು ದೃಷ್ಟಿಸಿದಳು. ಧಮ್ಮಕ್ಕಿಯ ಕೆಂಪು ಅನ್ನ ಹಾಗೂ ಸೊಣಕಲು ಪಲ್ಲೆ ಕಂಣಿಗೆ ಬಿದ್ದಿತು. ತಟ್ಟೆಯಲ್ಲಿ ಆ ಎರಡು ವಸ್ತುಗಳಲ್ಲದೆ ಬೇರೇನೂ ಇರಲಿಲ್ಲ.

ಅನ್ನದೊಂದಿಗೆ ಊಟ ಮಾಡಲು ಇಂದು ಯಾವ ವ್ಯಂಜನವೂ ಇರದ್ದರಿಂದ ನದಿಗೆ ಹೋಗಿ ವಿರಾಜ ಪಲ್ಲೆ ಕುಯ್ದು ತಂದಿದ್ದಳು.

ನೋಡುನೋಡುವಷ್ಟರಲ್ಲಿಯೆ ಮೋಹಿನಿಯ ಕಂಣುಗಳಿಂದ ಕಂಬನಿ ದಳದಳ ಸುರಿಯತೊಡಗಿತು. ಆದರೆ ವಿರಾಜಳ ಕಂಣಿನಲ್ಲಿ ಕಂಬನಿಯ ಆಭಾಸವೂ ಇರಲಿಲ್ಲ. ಆ ನೆಗೆಂಣಿಯರಿಬ್ಬರೂ ನೀರವತೆಯಿಂದ ಒಬ್ಬರನ್ನೊಬ್ಬರು ನಿಟ್ಟಿಸಿ ನೋಡತೊಡಗಿದರು.

ವಿರಾಜ ಸ್ವಾಭಾವಿಕ ದನಿಯಲ್ಲಿ ನುಡಿದಳು: "ನೀನೂ ಹೆಂಗುಸೆ, ಅಡುಗೆ ಮಾಡಿ ಗಂಡನಿಗೆ ನೀನೂ ಬಡಿಸಬೇಕಾಗುವುದು. ನೀನೆ ಹೇಳು — ಗಂಡನ ಬಳಿಯಲ್ಲಿಯೆ ಕುಳಿತು ಅವನು ಇಂಥ ಊಟ ಮಾಡುವುದನ್ನು ಕಣ್ಣಾರೆ ನೋಡಿ ಸಹಿಸುವಂತಹ ಹೆಂಡಂದಿರು ಈ ಜಗತ್ತಿನಲ್ಲಿ ಯಾರಾದರೂ ಇದ್ದಾರೆಯೆ? ಮೊದಲು ಈ ಮಾತಿಗೆ ಉತ್ತರ ಕೊಡು. ಬಳಿಕ ನಿನ್ನ ಮನ ಬಂದಂತೆ ಮೂದಲಿಸು, ನಾನು ತುಟಿ ಬಿಚ್ಚಿದರೆ ಕೇಳು."

ಮೋಹಿನಿಗೀಗ ಬಾಯಿ ತೆರೆವ ಧೈರ್ಯವಾಗಲಿಲ್ಲ. ಅವಳ ನೇತ್ರ ಪ್ರಾಂತದಿಂದ ಕಂಬನಿ ಏಕಧಾರೆಯಾಗಿ ಹರಿಯುತಿತ್ತು.

ವಿರಾಜ ಹೇಳತೊಡಗಿದಳು: "ಅಕಸ್ಮಾತ್ತಾಗಿ ಯಾವುದೇ ದಿನ ಅಡುವುದರಲ್ಲಿ ನನ್ನ ತಪ್ಪಿನಿಂದಲೆ ಹೆಚ್ಚು ಕಡಿಮೆಯಾಗಿ ಅಡುಗೆ ರುಚಿಸದೆ ಅವರು ಒಂದಗಳು ಅನ್ನ ಕಡಮೆ ಊಟಮಾಡಿದಾಗ ನನ್ನ ಹೃದಯಕ್ಕೆ ಅದೆಷ್ಟು ವೇದನೆಯಾಗುವುದು! ನನ್ನ ಆ ತಪ್ಪು ಹೃದಯವನ್ನು ಸೂಜಿಯ ಮೊನೆಯಂತೆ ಅದೆಷ್ಟು ಸಮಯ ಚುಚ್ಚುವುದೆಂಬುದು ತಂಗೀ, ಬೇರಾರಿಗೆ ಗೊತ್ತಾಗದಿದ್ದರೂ ನಿನಗೆ ಗೊತ್ತಿಲ್ಲದಿಲ್ಲ. ಆದರೂ ಇಂದು ಅವರು ಉಪವಾಸವಿದ್ದುದನ್ನು ಕಂಡು ಇಂಥ ಅಡುಗೆಯನ್ನೆ ಬಡಿಸಿದೆ. ಮುಂದೆ ಇದಾದರೂ ಹಾಕಲು ಸಾಧ್ಯಳಾಗುವೆನೊ ಇಲ್ಲವೊ ದೇವರೆ ಬಲ್ಲ."

ವಿರಾಜಳಿಂದ ಹೆಚ್ಚಿಗೆ ಮಾತನಾಡಲು ಸಾಧ್ಯವಾಗಲಿಲ್ಲ. ವೇದನೆಯ ಅಸಹ್ಯ ಭಾರವನ್ನು ಸಾವರಿಸಿಕೊಳ್ಳುವುದರಲ್ಲಿ ಅಸಮರ್ಥಳಾದುದರಿಂದ

ಆವಳಿಗೆ ಬವಳಿಬಂದಂತಾಯಿತು. ತಟ್ಟನೆ ನೆಗೆಂಣ್ಣಿಯ ಎದೆಯಮೇಲೆ ಬಿದ್ದು ಎರಡೂ ಕೈಗಳಿಂದ ಅವಳ ಕತ್ತನ್ನು ಸುತ್ತಿ ಗಳಗಳನೆ ಅಳತೊಡ ಗಿದಳು. ಆ ಸ್ತ್ರೀಯರಿಬ್ಬರೂ ಅವಳಿ ಮಕ್ಕಳಂತೆ ಎಷ್ಟೋ ಹೊತ್ತಿನವರೆಗೆ ಒಬ್ಬರನ್ನೊಬ್ಬರು ಅಪ್ಪಿಕೊಂಡಿದ್ದರು. ಎಷ್ಟೋ ಸಮಯದವರೆಗೆ ಎರಡು ಅಭಿನ್ನ ನಾರೀಹೃದಯುಗಳು ನೀರವತೆಯಿಂದ ಕಂಬನಿಗಳಲ್ಲಿ ತೇಲುತ್ತಿದ್ದವು. ಬಳಿಕ ತಲೆಯೆತ್ತಿ ವಿರಾಜಳೆಂದಳು: "ಇಲ್ಲ, ನಾನು ನಿನ್ನಿಂದ ಯಾವು ದನ್ನೂ ಮರೆಮಾಚುವುದಿಲ್ಲ. ನನ್ನ ದುಃಖವನ್ನು ತಿಳಿದುಕೊಳ್ಳುವವಳು ನೀನಲ್ಲದೆ ಬೇರಾರೂ ಇಲ್ಲ. ನಾನು ಬಹಳ ಯೋಚಿಸಿ ಒಂದು ನಿರ್ಧಾರಕ್ಕೆ ಬಂದಿದ್ದೇನೆ. ನಾನು ಇಲ್ಲಿಂದ ಹೊರಟುಹೋಗದೆ ಅವರ ಸಂಕಟ ನಿವಾರಣೆಯಾಗದೆಂದು ನನಗೆನಿಸಿದೆ. ಆದರೆ ಜೀವಿಸಿರುವವರೆಗೆ ಅವರ ಮುಖದರುಶನವಿಲ್ಲದೆ ನಾನು ಒಂದು ದಿನವೂ ಕಳೆಯುಲಾರೆ. ಆದ್ದರಿಂದ ನಾನು ಇಲ್ಲಿಂದ ಹೊರಟೇಹೋಗುವೆ. ಹೇಳು - ನಾನು ಇಲ್ಲಿಂದ ಹೋದ ಬಳಿಕ ನೀನು ಅವರನ್ನು ನೋಡಿಕೊಳ್ಳುವೆಯಾ ?"

ದೃಷ್ಟಿ ಮೇಲಕ್ಕೆತ್ತಿ "ನೀನೆಲ್ಲಿಗೆ ಹೋಗುವೆ ?" ಎಂದಳು ಮೋಹಿನಿ.

ವಿರಾಜಳ ಸುರ್ಕಿದ ತುಟಿಗಳ ಮೇಲೆ ಶೀತಲವಾದ ಕಠೋರ ಹಾಸ್ಯ ತೇಲಿತು. ಒಂದು ಸಲ ಅವಳೂ ಗೊಂದಲಗೆಟ್ಟಳು. ಬಳಿಕ "ನಾನೆಲ್ಲಿಗೆ ಹೋಗುವೆನೆಂದು ಹೇಗೆ ಹೇಳಲಿ ತಂಗೀ ? ಅದಕ್ಕಿಂತಲೂ ಹೆಚ್ಚಿನ ಪಾಪ ಕೃತ್ಯ ಬೇರೊಂದಿಲ್ಲವೆಂದು ಕೇಳಿದ್ದೇನೆ. ಏನೆ ಆಗಲಿ ಈ ಜ್ವಾಲೆಯಿಂದೊಮ್ಮೆ ನಾನು ಮುಕ್ತಿ ಹೊಂದಲೇಬೇಕು" ಎಂದಳು.

ವಿರಾಜಳ ಮನದಿಂಗಿತವನ್ನರಿತುಕೊಳ್ಳಲು ಮೋಹಿನಿ ಈಗ ಸಮರ್ಥ ಳಾದಳು. ಅದನ್ನು ತಿಳಿದು ನಡುಗಿದಳು. ವ್ಯಾಕುಲಳಾಗಿ ವಿರಾಜಳ ಬಾಯಿಯಮೇಲೆ ಕೈಯನ್ನಿಟ್ಟು — "ಛೀ ಅಕ್ಕ, ಇಂತಹ ಮಾತನ್ನು ನಾಲಿಗೆಯಮೇಲೆ ತರಲೂಕೂಡದು. ತಾನು ಆತ್ಮಹತ್ಯೆ ಮಾಡಿಕೊಳ್ಳುವೆ ಯೆಂದು ಹೇಳುವ ವ್ಯಕ್ತಿಯಂತೂ ಪಾಪಕ್ಕೆ ಗುರಿಯಾಗುವುದು. ಅಲ್ಲದೆ ಅದನ್ನು ಕೇಳುವ ವ್ಯಕ್ತಿಯೂ ಪಾಪಕ್ಕೆ ಭಾಗಿಯಾಗುವದು. ಛೀ ಛೀ, ಇತ್ತೀಚೆ ಹೀಗೇಕೆ ಆಗುತ್ತಿರುವೆ ಅಕ್ಕಾ?"

ತನ್ನ ಬಾಯಿಯ ಮೇಲಿಟ್ಟ ನೆಗೆಣ್ಣಿಯ ಕೈಯನ್ನು ದೂರ ಸರಿಸಿ ವಿರಾಜಳೆಂದಳು: "ಅದೆಲ್ಲ ನನಗೆ ಗೊತ್ತಿಲ್ಲ. ನಾನಿಷ್ಟೆ ಬಲ್ಲೆ. ಇನ್ನು ನಾನು ಅವರ ಊಟ ಉಡಿಗೆಯ ವ್ಯವಸ್ಥೆ ಮಾಡಲಾರೆ. ಇಂದು ನೀನು ನನ್ನನ್ನು ಮುಟ್ಟಿ ಪ್ರಮಾಣಮಾಡು. ಹೇಗಾದರೂ ಮಾಡಿ ಸೋದರರಲ್ಲಿ ರಾಜಿಮಾಡಿಸುವೆಯೆಂದು."

"ನಾನು ಪ್ರಮಾಣಮಾಡುವೆ ಅಕ್ಕಾ" ಎಂದು ಮೋಹಿನಿ ಒಮ್ಮೆಲೆ ಕುಳಿತಳು. ಬಳಿಕ ಅಕ್ಕನ ಪಾದಗಳನ್ನು ಗಟ್ಟಿಯಾಗಿ ಹಿಡಿದು– "ಹಾಗಾದರೆ ಅಕ್ಕ, ನನಗೊಂದು ಭಿಕ್ಷೆ ನೀಡುವೆಯಾ ?"

"ಯಾವ ಭಿಕ್ಷೆ ? "

"ಒಂದು ನಿಮಿಷ ನಿನ್ನ ಕುತೂಹಲವನ್ನು ತಡೆ. ಈಗ ಬರುವೆ" ಎಂದು ಮೋಹಿನಿ ಎದ್ದು ಹೋಗತೊಡಗಿದಳು. ಅಷ್ಟರಲ್ಲಿ ವಿರಾಜ ಅವಳ ಸೆರಗನ್ನು ಹಿಡಿದು "ಬೇಡ, ನೀನು ಹೋಗಬೇಡ. ನಾನು ಯಾರಿಂದಲೂ ಒಂದು ಸಾಸಿವೆಯಷ್ಟು ಸಾಮಾನೂ ಪಡೆಯಲಿಚ್ಛಿಸುವುದಿಲ್ಲ."

"ಅದೇಕೆ ?"

ತೀವ್ರವಾಗಿ ತಲೆಯಲ್ಲಾಡಿಸುತ್ತ ವಿರಾಜಳೆಂದಳು: "ಆಗದು, ಅದೆಂದಿಗೂ ಆಗದು. ಇನ್ನು ನಾನು ಯಾರಿಂದಲೂ ಏನನ್ನೂ ಪಡೆಯ ಲಾರೆ."

ಮೋಹಿನಿ ಕ್ಷಣಹೊತ್ತು ಸ್ಥಿರದೃಷ್ಟಿಯಿಂದ ಅಕ್ಕನ ಆಕಸ್ಮಿಕ ಉದ್ರಿಕ್ತ ಮುಖವನ್ನೆ ನೋಡಿದಳು. ಬಳಿಕ ಅಲ್ಲಿ ಕುಳಿತವಳೆ ಅಕ್ಕನನ್ನು ಬಲವಾಗಿ ಎಳೆದು ತನ್ನ ಬಳಿ ಕುಳ್ಳಿರಿಸಿಕೊಂಡಳು. "ಅಕ್ಕ ನನ್ನ ಮಾತೊಂದಿಷ್ಟು ಕೇಳು. ಅದೇಕೊ ಏನೊ ಮೊದಲು ನೀನು ನನ್ನನ್ನು ಪ್ರೀತಿಸುತ್ತಿರಲಿಲ್ಲ. ನನ್ನೊಂದಿಗೆ ಚನ್ನಾಗಿ ಮಾತು ಸಹ ಆಡುತಿದ್ದಿಲ್ಲ. ಅದಕ್ಕಾಗಿ ಏಕಾಂತದಲ್ಲಿ ಕುಳಿತು ಅತ್ತುದೆಷ್ಟೊ, ದೇವರುದಿಂಡರುಗಳಿಗೆ ಹರಕೆ ಹೊತ್ತುದೆಷ್ಟೊ, ಅವುಗಳಿಗೆ ಮಿತಿಯೆ ಇಲ್ಲ. ಇಂದು ಆ ದೇವತೆಗಳು ನನ್ನಮೇಲೆ ಕೃಪೆ ಗೊಂಡಿದ್ದಾರೆ; ನೀನೂ ಸಹ ನನ್ನನ್ನು 'ತಂಗೀ' ಎಂದು ಕರೆಯುತ್ತಿರುವೆ. ಸ್ವಲ್ಪ ಯೋಚಿಸಿ ನೋಡು--- ಒಂದು ವೇಳೆ ನನಗೂ ಇಂಥ ಪರಿಸ್ಥಿತಿ

ಒದಗಿದ್ದರೆ, ಆಗ ನನಗಾಗಿ ಯಾವ ಸಹಾಯವನ್ನೂ ಮಾಡದಂತಹ ಅವಸ್ಥೆ ನಿನ್ನದಾಗಿದ್ದರೆ ನಿನ್ನ ಮನಸ್ಸಿಗೆ ಎಷ್ಟು ವ್ಯಥೆಯುಂಟಾಗುತಿತ್ತು?''

ಈ ಮಾತಿಗೆ ಉತ್ತರವೀಯಲು ವಿರಾಜಳಿಗೆ ಸಾಧ್ಯವಾಗಲಿಲ್ಲ. ಅವಳು ಮುಖ ಕೆಳಗೆ ಮಾಡಿ ಸುಮ್ಮನೆ ಕುಳಿತಳು.

ಮೋಹಿನಿ ಎದ್ದು ಒಳಗೆ ಹೋಗಿ ಬಗೆಬಗೆಯ ತಿನಿಸನ್ನಿರಿಸಿದ ತಟ್ಟೆಯೊಂದನ್ನು ತಂದು ಅಕ್ಕನೆದುರು ಇಟ್ಟಳು.

ವಿರಾಜ ಸ್ಥಿರಭಾವದಿಂದ ನೋಡುತಿದ್ದಳು. ಆದರೆ ಮೋಹಿನಿ ಬಳಿಗೆ ಬಂದು ಅವಳ ಸೆರಗಿನಲ್ಲಿ ಬಂಗಾರದ ನಾಣ್ಯವೊಂದನ್ನು ಕಟ್ಟತೊಡಗಿದಾಗ ಅವಳ ಸಹನೆ ಮೀರಿತು. ನೆಗೆಣ್ಣಿಯನ್ನು ಬಲವಾಗಿ ತಳ್ಳಿ ಕರ್ಕಶ ದನಿಯಲ್ಲಿ: "ಆಗದು, ಪ್ರಾಣಹೋದರೂ ಆಗದು'' ಎಂದಳು.

ಮೋಹಿನಿ ಅವಳ ಆ ಧಕ್ಕೆಯನ್ನು ಸಂಬಾಳಿಸಿಕೊಂಡಳು. ಬಳಿಕ ಮೊಗವೆತ್ತಿ "ಅದೇಕೆ ಆಗದು ಅಕ್ಕ – ನೀನು ತೆಗೆದುಕೊಳ್ಳಲೆಬೇಕು. ಈ ನಾಣ್ಯ ಭಾವನವರದೆ. ಮದುವೆಯಲ್ಲಿ ಅವರು ನನಗೆ ಕಾಣಿಕೆಯಿತ್ತದ್ದು." ಎಂದು ಮೋಹಿನಿ ವಿರಾಜಳ ಸೆರಗಿನಲ್ಲಿ ಅದನ್ನು ಕಟ್ಟಿಯೆಬಿಟ್ಟಳು. ತರುವಾಯ ಬಾಗಿ ಮತ್ತೊಂದು ಸಲ ಅಕ್ಕನ ಪಾದಧೂಳಿ ಕೊಂಡು ತನ್ನ ಮನೆಗೆ ಹೋದಳು.

## ೧೧

ವಿರಾಜ ತಯಾರು ಮಾಡಿದ ಮಂಣಿನ ಪಡಿಯಚ್ಚುಗಳನ್ನು ಹೊಲೆಯರ ಹೆಂಣು ಮಗಳೊಬ್ಬಳು ಮಗರಾರ ಗಂಜಕ್ಕೆ ಕೊಂಡು ಹೋಗಿ ಮಾರಿ ಬರುತ್ತಿದ್ದಳು. ಅಲ್ಲಿಯ ಹಳೆಯ ಕಾರಖಾನೆಯು ಮುಚ್ಚಿದ ಸಮಾಚಾರವನ್ನು ತಿಳಿಸಲು ಅವಳು ವಿರಾಜಳಲ್ಲಿ ಬಂದಿದ್ದಳು. ಅವಳು ಕಾರಖಾನೆ ಮುಚ್ಚಿತೆಂದು ಮಾತ್ರ ಹೇಳಲಿಲ್ಲ. ಅದರಿಂದ ತಮ್ಮ ಉದ್ಯೋಗ ನಿಂತಿತೆಂದೂ ಅದರಿಂದ ಸ್ವತಃ ತನಗೂ, ತನ್ನ ನೆರೆಹೊರೆಯ ಹೊಲೆಯರ ಹೆಂಣು ಮಕ್ಕಳಿಗೂ ಅನೇಕ ತೊಂದರೆಗಳನ್ನು ಎದುರಿಸಬೇಕಾಗುವುದೆಂದೂ ಇನ್ನು ತಮಗೆ ಹಣದ ಕೊರತೆ ಮತ್ತಿಷ್ಟು ಹೆಚ್ಚುವುದೆಂದೂ ಸವಿಸ್ತಾರವಾಗಿ ಹೇಳಿ

ದಳು. ಆದರೆ ಇದನ್ನೆಲ್ಲ ಕೇಳಿ ವಿರಾಜ ಸುಮ್ಮನಿದ್ದಳೆ ಹೊರತು ಒಂದು ಮಾತನ್ನೂ ಆಡಲಿಲ್ಲ. ಕೇವಲ ಕಿರಿಯುಸಿರೊಂದು ಕರೆದಳು ಮಾತ್ರ. ಇದರಿಂದ ಆ ಹೆಂಣುಮಗಳು ನಿರಾಶಳಾದಳು. ತನ್ನ ದುಃಖದಲ್ಲಿ ಪಾಲು ಗೊಳ್ಳುವವರಾರೂ ಇಲ್ಲವೆಂದು ಭಾವಿಸಿ ದುಃಖಿತ ಮನದಿಂದಲೆ ಮರಳಿದಳು. ಅಯ್ಯೊ ದುಃಖ ಪೀಡಿತ ಅಜ್ಞಾನಿ ಹೆಂಣೆ, ವಿರಾಜಳ ಆ ಕಿರಿಯುಸಿರಿನಲ್ಲಿ ಏನಡಗಿದೆಂಬುದನ್ನು ತಿಳಿದುಕೊಳ್ಳುವ ಶಕ್ತಿ ನಿನಗೆಲ್ಲಿ? ವಿರಾಜಳ ಈ ನೀರ ವತೆಯ ಮರೆಯಲ್ಲಿ ಅದೆಂಥ ಸುಂಟರಗಾಳಿ ಚಲಿಸುತ್ತಿದೆ! ಈ ಪೃಥ್ವಿ ಶಾಂತವಿದೆಯೆಂದು ತೋರಿದರೂ, ಅದರ ಒಳಗಿನಿಂದ ಯಾವ ಸದ್ದೂ ಕೇಳಿ ಬರದಿದ್ದರೂ, ಆದರ ಅಂತರಾಳದಲ್ಲಿ ಎಂಥ ಬೆಂಕಿಯುರಿಯುತ್ತಿದೆಯೆಂಬು ದನ್ನು ನೀನೆಂತು ಅರಿತುಕೊಳ್ಳಬಲ್ಲೆ? ಆ ಕಲ್ಪನಾಶಕ್ತಿ ನಿನಗೆ ಹೇಗೆ ಬಂದೀತು?

ನೀಲಾಂಬರ ಬಂದು ಹೇಳಿದ: "ನನಗೆ ಕೆಲಸ ಸಿಕ್ಕಿತು ವಿರಾಜ. ದುರ್ಗಾಪೂಜೆಯ ಸಮಯ ಕಲಕತ್ತೆಯ ಪ್ರಸಿದ್ಧ ಕೀರ್ತನ (ಭಾಗವತರ ಆಟದ) ಮಂಡಳಿಯಲ್ಲಿ ನಾನೇ ಮೃದಂಗ ಬಾರಿಸುವವ."

ಈ ಸಮಾಚಾರ ಕೇಳಿದೊಡನೆಯೆ ವಿರಾಜಳ ಮುಖ ಹೆಣದ ಕಳೇಬರ ದಂತೆ ರಕ್ತಹೀನವಾಯಿತು. ಮನದಲ್ಲಿಯೆ ಎಂದುಕೊಂಡಳು: "ನನ್ನ ಯಜಮಾನರು ಒಂದು ಮಂಡಳಿಯ ಅಧೀನದಲ್ಲುಳಿದು ಸಭ್ಯಗೃಹಸ್ಥರ ಮುಂದೆ ನೃತ್ಯ-ಗಾಯನ ಮಾಡುತ್ತ ಅಲೆಯುವರೆ? ಹಾಗಾದರೆ ನಮ್ಮ ಉದರ ಪೂರ್ತಿಯಾದಂತೆಯೆ!" ನಾಚಿಕೆ ಜುಗುಪ್ಸೆಗಳಿಂದ ಅವಳು ಜರ್ರನೆ ಇಳಿದು ಹೋದಳು. ಆದರೆ ಬಾಯಿಬಿಚ್ಚಿ ಹೇಳಿ ನೀಲಾಂಬರನನ್ನು ಆ ಕೆಲಸದಿಂದ ತಡೆಹಿಡಿಯಲಿಲ್ಲ. ಹೇಗಾದರೂ ಹೊಟ್ಟೆ ಹೊರೆಯಬೇಕಲ್ಲವೆ! ಆಗ ವಿರಾಜಳ ಮುಖದ ಮೇಲೆ ಮೂಡಿದ ಕಪ್ಪು ಛಾಯೆ ಸಂಜೆಯ ಕತ್ತಲಲ್ಲಿ ನೀಲಾಂಬರನ ಕಂಣಿಗೆ ಬೀಳಲಿಲ್ಲ. ಹಾಗಾದುದು ಒಳಿತೆ ಆಯಿತು.

ಇಳಿತದ ಸೆಳೆತಕ್ಕೆ ಸಮುದ್ರದ ನೀರು ಪ್ರತಿ ಕ್ಷಣಕ್ಕೂ ಕ್ಷೀಣತೆಯ ಚಿಹ್ನವನ್ನು ದಂಡೆಯ ಮೇಲೆ ಮೂಡಿಸಿ ಹಿಂದೆ ಹಿಂದೆ ಸರಿಯುವಂತೆ ವಿರಾಜಳೂ ಒಂದೆ ಸವನೆ ಒಣಗಿ ಕೃಶಳಾಗತೊಡಗಿದಳು. ದೇವತೆಗಳೂ

ಆಸೆಬಟ್ಟು ಬಯಸುವ ಅವಳ ಆ ಏರುಜೌವನದ ಕಾಂತಿ ಈಗ ಎಲ್ಲಿ ಎಂತು ಅಡಗಿತೋ ಯಾರು ಬಲ್ಲರು! ಅವಳ ದೇಹವಂತೂ ಒಣಗಿತು. ಮುಖ ಕಪಿಟ್ಟಿತು! ದೃಷ್ಟಿಯೂ ಮಂದವಾಯಿತು. ಅವಳಿಗಾವ ಭಯವೊ— ದಿನ ದಿನಕ್ಕೂ ಆದರ ಪ್ರಭಾವ ಅವಳ ಮೇಲೆ ಹೆಚ್ಚಾಗುತ್ತಲೆ ಹೋಯಿತು. ಆದರೂ ಅವಳ ಕಡೆಗೆ ಲಕ್ಷ್ಯವೀಯುವವರಾದೂ ಇರಲಿಲ್ಲ. ನೆಗೆಂಣಿ ಮಾತ್ರ ಲಕ್ಷವೀಯುತಿದ್ದಳು. ಆದರೆ ಅವಳೂ ಸಹ ಒಂದು ತಿಂಗಳಿಂದ ಮನೆಯಲ್ಲಿಯೆ ಇಲ್ಲ. ಅಂಣನ ಅಸ್ವಸ್ಥತೆಯ ಸುದ್ದಿ ಕೇಳಿ ತವರಿಗೆ ಹೋಗಿದ್ದಳು. ನೀಲಾಂಬರನೂ ಬಹುಶಃ ಹಗಲು ಮನೆಯಲ್ಲಿ ಇರುತ್ತಿರಲೆ ಇಲ್ಲ. ಅವನು ಮನೆಗೆ ಬರುತ್ತಿದ್ದನೇನೊ ನಿಜ, ಆದರೆ ಕತ್ತಲಾದ ಬಳಿಕವೆ ಅವನು ಬರುವುದು. ಆಗ ಅವನ ಕಂಣುಗಳು ಬಹುಶಃ ರಕ್ತ ವರ್ಣದವಾಗಿರುತಿದ್ದವು. ಮೂಗಿನಿಂದ ಉಸಿರೂ ಬಿಸಿಯಾಗಿಯೆ ಹೊರಬೀಳುತಿತ್ತು. ವಿರಾಜ ಎಲ್ಲವನ್ನೂ ನೋಡುತಿದ್ದಳು, ಎಲ್ಲವೂ ಅವಳಿಗೆ ತಿಳಿಯುತಿತ್ತು. ಆದರೆ ಒಂದು ಮಾತನ್ನೂ ಆಡುತ್ತಿರಲಿಲ್ಲ. ಆಡುವ ಇಚ್ಛೆಯೂ ಆಗುತ್ತಿರಲಿಲ್ಲ. ಇತ್ತೀಚೆ ಮಾತನಾಡಿದರೂ ಅವಳಿಗೆ ಆಯಾಸವಾಗುತಿತ್ತು.

ಈಗ ಕೆಲ ದಿನಗಳಿಂದ ಸಂಜೆಯ ಮುನ್ನವೆ ವಿರಾಜಳಿಗೆ ಚಳಿ ಬರುತ್ತಿತ್ತು. ಹಾಗೂ ತಲೆಶೂಲೆಗೂ ಆರಂಭವಾಗುತ್ತಿತ್ತು. ಇಂಥ ಅವಸ್ಥೆಯಲ್ಲಿಯೂ ಕುರುಡು ದೀವಿಗೆ ಹಿಡಿದು ಅಡುಗೆ ಮಾಡಲು ಹೋಗಬೇಕಾಗುತ್ತಿತ್ತು. ನೀಲಾಂಬರ ಹಗಲು ಮನೆಯಲ್ಲಿಯೆ ಇರುತ್ತಿದ್ದಿಲ್ಲವಾದುದರಿಂದ ಹಗಲು ಒಲೆಗೆ ಉರಿಯನ್ನೆ ಹಾಕುತ್ತಿರಲಿಲ್ಲ. ರಾತ್ರಿ ಅಡುಗೆ ಮಾಡುತ್ತಿದ್ದಳು. ಆದರೆ ಆಗ ಅವಳ ಮೈಯಲ್ಲಿ ಜ್ವರವೇರಿಬರುತ್ತಿತ್ತು. ಹೀಗಾಗಿ ಗಂಡನ ಊಟವಾದ ಬಳಿಕ ಕೈಕಾಲು ತೊಳೆದುಕೊಂಡು ಉಪವಾಸವೆ ಮಲಗಿಬಿಡುತ್ತಿದ್ದಳು. ಇದೇ ರೀತಿ ಅವಳ ದಿನಗಳು ಸಾಗಿದ್ದವು. ವಿರಾಜ ಈಗ ದೇವರು ದಿಂಡರುಗಳ ಆಸೆ ತೊರೆದಳು. ಇತ್ತಿತ್ತಲಾಗಿ ಮೊದಲಿನಂತೆ ಪ್ರಾರ್ಥನೆಯನ್ನೂ ಮಾಡುತ್ತಿರಲಿಲ್ಲ. ಪ್ರಾತಃಕಾಲದ ನಿತ್ಯ ಪೂಜೆ ಮುಗಿಸಿ ಕೊರಳಿಗೆ ಸೆರಗು ಸುತ್ತಿಕೊಂಡು ದೇವರಿಗೆ ಪ್ರಣಾಮ ಮಾಡುತ್ತ ಮನದಲ್ಲಿಯೆ "ಹೇ ದೇವಾ ನನ್ನ ಈ ದಿಶೆಯನ್ನು ಬೇಗನೆ ಕೊನೆಗೊಳ್ಳುವಂತೆ ಮಾಡು. ನಾನು ತಲುಪಬೇಕಾದ ಸ್ಥಾನವನ್ನು ಅತಿ ಶೀಘ್ರವಾಗಿ ತಲ್ಪುವಂತಾಗಲಿ" ಎಂದು ಬೇಡಿಕೊಳ್ಳುತ್ತಿದ್ದಳು.

ಅಂದು ಶ್ರಾವಣ ಸಂಕ್ರಾಂತಿ. ಬೆಳಗಿನಿಂದಲೆ ಜಡಿಮಳೆ ಕುಟ್ಟು ತಿತ್ತು. ಒಂದು ಗಳಿಗೆ ಸಹ ಮಳೆ ನಿಲ್ಲಲಿಲ್ಲ. ಮೂರು ದಿನ ಜ್ವರದಿಂದ ಬಳಲಿ ಹಸಿವೆ ನೀರಡಿಕೆಗಳಿಂದ ಬೆಂಡಾಗಿ ವಿರಾಜ ಸಂಜೆಯಾದ ಬಳಿಕ ಹಾಸಿಗೆಯ ಮೇಲೆ ಎದ್ದು ಕುಳಿತಳು. ನೀಲಾಂಬರ ಮನೆಯಲ್ಲಿರಲಿಲ್ಲ. ಮೊನ್ನೆ, ಹೆಂಡತಿಗೆ ಬಹಳ ಜ್ವರ ಬಂದುದನ್ನು ಕಂಡೂ, ತನ್ನ ಶ್ರೀಮಂತ ಶಿಷ್ಯನ ವಾಸಸ್ಥಳವಾದ ಶ್ರೀರಾಮಪುರಕ್ಕೆ ಹೋಗಿದ್ದ. ಏನಾದರಷ್ಟು ಸಹಾಯ ಸಿಗಬಹುದೆಂಬ ಆಸೆಯಿಂದ ಅಲ್ಲಿಗೆ ಹೋದ. ಹೋಗುವ ಮುನ್ನ ತಾನು ರಾತ್ರಿಯಲ್ಲಿಯೆ ಮರಳುವುದಾಗಿಯೂ ಖಂಡಿತವಾಗಿ ತಾನು ಅಲ್ಲಿ ನಿಲ್ಲುವುದಿಲ್ಲವೆಂತಲೂ ವಿರಾಜಳಿಗೆ ಭರವಸೆಯಿತ್ತು ಹೋಗಿದ್ದ. ಆದರೆ ಮೂರು ದಿನಗಳು ಸಂದರೂ ವಿರಾಜಳಿಗೆ ಅವನ ಮುಖ ದರ್ಶನವೆ ಇಲ್ಲ. ಬಹುಶಃ ಇಂದೂ ಅವನು ಮರಳಿ ಬರುವಂತೆ ತೋರಲಿಲ್ಲ.

ಅನೇಕ ದಿನಗಳ ತರುವಾಯ ಇಂದು ವಿರಾಜಳ ಕಣ್ಣುಗಳಲ್ಲಿ ಕಂಬನಿ ಕದಡಿತು. ದಿನವೆಲ್ಲವೂ ಅವಳ ಕಣ್ಣುಗಳಿಂದ ಕಂಬನಿ ಇಳಿಯುತ್ತಲೆ ಇತ್ತು. ಅವಳಿಗೆ ಹಾಸಿಗೆಯ ಮೇಲೆ ಒರಗಿರಲು ಮನಸ್ಸೆ ಆಗಲಿಲ್ಲ. ಸಂಜೆಯಾದುದೆ ತಡ ದೀವಿಗೆ ಹಚ್ಚಿದಳು. ಬಳಿಕ ತಲೆಯಮೇಲೆ ಹೊದಿಕೆಯೊಂದನ್ನು ಹಾಕಿಕೊಂಡು ನಡುಗುತ್ತಲೆ ಮನೆಯಿಂದ ಹೊರಬಂದು ಬೀದಿಯ ಒಂದು ತುದಿಯಲ್ಲಿ ನಿಂತುಕೊಂಡಳು. ಮಳೆಗಾಲದ ಕತ್ತಲು ರಾತ್ರಿಯಲ್ಲಿ ದೃಷ್ಟಿಯೋಡುವ ಉದ್ದಕ್ಕೂ ಸುತ್ತಲೂ ನಿರೀಕ್ಷಿಸಿದಳು. ಆದರೆ ಅವಳಿಗಾರೂ ಕಾಣಲಿಲ್ಲ. ಪುನಃ ಮನೆಗೆ ಹಿಂದಿರುಗಿದಳು. ಒದ್ದೆ ಸೀರೆ ತೊಯ್ದು ಕೂದಲುಗಳಿಂದಲೆ ಅವಳು ದೇವೀಮಂದಿರದ ಕಂಬಕ್ಕೆ ಒರಗಿ ಕುಳಿತು ಅಳತೊಡಗಿದಳು. ದುಗುಡದಿಂದ ಮನದಲ್ಲಿಯೆ: “ಅವರಿಗೇನಾಗಿದೆಯೊ ಏನೊ? ದುಃಖ ತಾಪತ್ರಯ ಸಹಿಸಿ ಸಹಿಸಿ, ಉಪವಾಸ ಮಾಡಿ ಮಾಡಿ, ಅವರ ಶರೀರ ದುರ್ಬಲವಾಗಿದೆ. ಸಾಲದ್ದಕ್ಕೆ ಅಷ್ಟು ದೂರ ಬೇರೆ ನಡೆದುಕೊಂಡೆ ಹೋಗಬೇಕಾಯಿತು. ಅವರಿಗೇನಾದರೂ ಜಡ್ಡು ಜಾಪತ್ಯ ಉಂಟಾಗಿದೆಯೊ? ಅಥವಾ ಗಾಡಿ ಬಂಡಿಗಳ ಅಡಿಯಲ್ಲಿ ಸಿಕ್ಕಿದರೊ — ಏನು ಅನಿಷ್ಟ ಸಂಭವಿಸಿದೆಯೊ ಏನೊ? ನಾನು ಬಿದ್ದಿರುವುದು ಇಲ್ಲಿ ಮನೆಯಲ್ಲಿ! ಅವರ ಸಮಾಚಾರ ಹೇಗೆ ತಿಳಿಯಲಿ? ಅದಕ್ಕೇನು ಉಪಾಯ ಹೂಡಲಿ?” ಎಂದು ಕಳವಳಪಡತೊಡಗಿದಳು.

ಇನ್ನೊಂದು ಸಂಕಟ - ಮನೆಯಲ್ಲಿ ಪೀತಾಂಬರನೂ ಇರಲಿಲ್ಲ. ಹೆಂಡತಿಯನ್ನು ಕರೆತರಲು ನಿನ್ನೆ ಮಧ್ಯಾಹ್ನವೆ ಹೋಗಿದ್ದ. ಆ ದೊಡ್ಡ ಮನೆಯಲ್ಲಿ ವಿರಾಜಳೊಬ್ಬಳೆ ಒಬ್ಬಳು. ಮೇಲಾಗಿ ಅವಳೂ ರೋಗಿಷ್ಠೆ. ಅಂದು ಮಧ್ಯಾಹ್ನದಿಂದ ಜ್ವರ ಇಳಿದಿದೆಯೆಂಬುದೇನೋ ನಿಜ. ಆದರೆ ಹೊಟ್ಟೆಗೇನಾದರೂ ಹಾಕಿಕೊಳ್ಳೋಣವೆನ್ನಲು ಮನೆಯೆಲ್ಲವೂ ಬರಿದು. ಎರಡು ದಿನಗಳಿಂದ ಕೇವಲ ನೀರು ಕುಡಿದೆ ಇದ್ದಾಳೆ.

ಮಳೆಯಲ್ಲಿ ತೊಯ್ದುದರಿಂದ ವಿರಾಜಳಿಗೆ ಚಳಿಯಾಗತೊಡಗಿತು. ತಲೆಯೂ ಸುತ್ತತೊಡಗಿತು. ಕೈಕಾಲುಗಳಲ್ಲಿ ಶಕ್ತಿ ತಂದುಕೊಂಡು ಅತ್ಯಂತ ಪ್ರಯಾಸದಿಂದೆದ್ದು ದೇವೀಮಂದಿರವನ್ನು ಹೊಕ್ಕು ನೆಲದಮೇಲೆ ಬಿದ್ದು ತಲೆ ಚಚ್ಚಿಕೊಳ್ಳತೊಡಗಿದಳು.

ಆಗ ಒಮ್ಮೆಲೆ ಬಾಗಿಲು ತಟ್ಟಿದಂತಾಯಿತು. ವಿರಾಜ ಕಿವಿಗೊಟ್ಟು ಕೇಳಿದಳು. ಮತ್ತೊಮ್ಮೆ ಬಾಗಿಲು ತಟ್ಟಿದ ಸದ್ದು ಕೇಳಿಬಂತು. ಸದ್ದು ಕೇಳಿತೊ ಇಲ್ಲವೊ 'ಬಂದೆ' ಎಂದೆನ್ನುತ್ತ ವಿರಾಜ ಕ್ಷಣಮಾತ್ರದಲ್ಲಿಯೆ ಓಡಿ ಬಾಗಿಲು ತೆರೆದಳು. ಅರ್ಧ ಗಳಿಗೆ ಮೊದಲು ಇದೆ ವಿರಾಜಳಲ್ಲಿ ಎದ್ದು ನಿಲ್ಲಲೂ ಬಲವಿರಲಿಲ್ಲ.

ಬಾಗಿಲು ತಟ್ಟಿದವ, ಸನಿಹದ ಕೇರಿಯಲ್ಲಿ ವಾಸಿಸುವ ರೈತನ ಹುಡುಗ. "ಅವ್ವಾ - ದಣಿಯರಿಗೆ ಒಂದು ದೋತರಬೇಕಂತೆ" ಎಂದ ಆ ಹುಡುಗ.

ವಿರಾಜಳಿಗೆ ಆ ಹುಡುಗನ ಮಾತಿನರ್ಥ ಚೆನ್ನಾಗಿ ತಿಳಿಯಲಿಲ್ಲ. ಬಾಗಿಲಿಗೆ ಒರಗಿ ಸ್ವಲ್ಪಹೊತ್ತು ಅವನನ್ನೆ ದಿಟ್ಟಿಸಿ "ದೋತರ ಕೇಳಿದರೆ? ಅವರೆಲ್ಲಿದ್ದಾರೆ?" ಎಂದಳು.

ಹುಡುಗ ಉತ್ತರವಿತ್ತ. "ಗೋಪಾಲಧಣಿಯ ತಂದೆಯವರನ್ನು ಗಂಗೆಯ ಕಡೆಗೆ ಒಯ್ದು ಇದೀಗ ಮರಳಿ ಬಂದಿದ್ದಾರೆ."

"ಗಂಗೆಯ ಕಡೆಗೆ ಒಯ್ದು?" ವಿರಾಜಳಿಗೆ ಕತ್ತಲು ಕವಿದಂತಾಯಿತು. ಗೋಪಾಲ ಚಕ್ರವರ್ತಿ ಅವಳ ದೂರಿನ ಸಂಬಂಧಿಕರು. ಅವರ ತಂದೆ ಕೆಲ ದಿನಗಳಿಂದ ಅಸ್ವಸ್ಥರಾಗಿದ್ದರು. "ಈಗೆರಡು ದಿನಗಳ ಮೊದಲು ಅವರನ್ನು ಗಂಗಾತಟಕ್ಕೆ ಒಯ್ದಿದ್ದರು. ಇಂದು ಮಧ್ಯಾಹ್ನ ಅವರು ಕಾಲವಾದನಂತರ ಅಗ್ನಿ ಸಂಸ್ಕಾರ ಮಾಡಿ ಎಲ್ಲರೂ ಇದೀಗ ಮರಳಿ ಬಂದಿದ್ದಾರೆ" ಎಂದು ಎಲ್ಲ

ಸಮಾಚಾರವನ್ನು ತಿಳಿಸಿ ಪುನಃ ಆ ಹುಡುಗ ಹೇಳಿದ : " ಈ ಹಳ್ಳಿಯಲ್ಲೆಲ್ಲ ನಮ್ಮ ಧಣಿಗೆ ಸರಿಸಮಾನವಾದ ನಾಡಿ ಜ್ಞಾನ ಯಾರಿಗೂ ಇಲ್ಲವಮ್ಮಾ. ಆದುದರಿಂದಲೆ ರೋಗಿಯೊಂದಿಗೆ ಅವರು ಇದ್ದುದು."

ನಡುಗುವ ಕಾಲುಗಳಿಂದಲೆ ವಿರಾಜ ಒಳಗೆ ಹೋಗಿ ಹಾಸಿಗೆಯ ಮೇಲೆ ಬಿದ್ದುಕೊಂಡಳು.

ಒಬ್ಬ ಮನುಷ್ಯ ಅದೇಕೆ ಒಂದು ಪ್ರಾಣಿಯೂ ಇಲ್ಲದ ಇಂಥ ಮನೆಯಲ್ಲಿ ಜ್ವರ ಬಾಧೆಯಿಂದಲೂ ದುಶ್ಚಿಂತೆಗಳಿಂದಲೂ ನಿರಾಹಾರದಿಂದಲೂ ಮೃತಪ್ರಾಯಳಾಗಿ ಬಿದ್ದಿದ್ದ ವಿರಾಜ, ತನ್ನ ಗಂಡ ಹೊರಗೆ ಪರೋಪಕಾರ ಮಾಡುವುದರಲ್ಲಿಯೆ ತೊಡಗಿದ್ದಾನೆಂದು ವರ್ತಮಾನವನ್ನು ಕೇಳಿ ಆ ದುರ್ದೈವಿ ಹೆಂಣಿಗೆ ಮಾತನಾಡುವ ಇಚ್ಛೆ ಹೇಗೆ ಉಂಟಾದೀತು ? ವಿರಾಜ ಈಗ ಪೂರ್ಣ ಕುಸಿದಂತಾದಳು. ಅವಳ ವಿಕಾರಗೊಂಡ ಮಿದುಳಿನಲ್ಲಿ " ಈ ಜಗತ್ತಿನಲ್ಲಿ ನಿನ್ನವರೆಂಬವರಾರೂ ಇಲ್ಲ, ನಿನಗೆ ತಾಯಿಯಿಲ್ಲ, ತಂದೆಯಿಲ್ಲ. ಬಂಧುವಿಲ್ಲ, ಭಗಿನಿಯಿಲ್ಲ. ಅದೇಕೆ, ಗಂಡನೂ ಇಲ್ಲ. ನಿನಗಿರುವವ ಯಮನೊಬ್ಬನೆ. ಅವನಲ್ಲಿಯಲ್ಲದೆ ಬೇರೆಲ್ಲಿಯೂ ನೀನು ಶಾಂತಿ ಪಡೆವುದು ಅಸಂಭವವೆ " ಎಂಬ ವಿಚಾರ ಸ್ಫುರತ್ತ ತೊಡಗಿತು.

ಹೊರಗೆ ಜುಯ್ಯೆಂದು ಮಳೆ ಬೀಳುತಿತ್ತು. ಆಗಾಗ ಗುಡುಗು ಭೋರಿಡುತಿತ್ತು. ಗಾಳಿಯೂ ಸುಯ್ಯೆಂದು ಬೀಸುತಿತ್ತು. ಈ ಎಲ್ಲ ಸದ್ದುಗಳಿಂದ ಕೇವಲ " ಇಲ್ಲ-ಇಲ್ಲ " ವೆಂಬ ಸದ್ದು ಒಂದೆ ಸವನೆ ಹೊರಸೂಸಿ ಅವಳ ಎರಡೂ ಕಿವಿಗಳಲ್ಲಿ ಪ್ರವೇಶಿಸುತಿತ್ತು — " ಉಗ್ರಾಣದಲ್ಲಿ ಅಕ್ಕಿಯಿಲ್ಲ, ಕಣಜದಲ್ಲಿ ಧಾನ್ಯವಿಲ್ಲ. ತೋಟದಲ್ಲಿ ಹಂಣು ಹಂಪಲಗಳಿಲ್ಲ, ಕೆರೆಯಲ್ಲಿ ಮೀನುಗಳೂ ಇಲ್ಲ. ಸುಖವಿಲ್ಲ, ಶಾಂತಿಯಿಲ್ಲ, ಆರೋಗ್ಯವೂ ಇಲ್ಲ. ಮನೆಯಲ್ಲಿ ನೆಗೆಂಣಿಯೂ ಇಲ್ಲ. ಅಲ್ಲದೆ ಇವೆಲ್ಲವುಗಳ ಜೊತೆಗೆ ಗಂಡನೂ ಇಲ್ಲ." ಆಶ್ಚರ್ಯ ಸಂಗತಿಯೆಂದರೆ — ಇಷ್ಟಾದರೂ ವಿರಾಜಳ ಹೃದಯದಲ್ಲಿ ಯಾರ ವಿರುದ್ಧ ತಿಲಮಾತ್ರ ಕೋಪವೂ ಇರಲಿಲ್ಲ. ಇಂದು ವಿರಾಜಳಿಗೆ ಗೋಚರವಾದ ಗಂಡನ ನಿಷ್ಕರುಣೆಯ ವೃತ್ತಿಯಲ್ಲಿ ನೂರರಲ್ಲಿ ಒಂದಂಶವನ್ನು ಒಂದು ವರ್ಷ ಪೂರ್ವದಲ್ಲಿ ಗಂಡನಲ್ಲಿ ಕಂಡಿದ್ದರೆ ಕೋಪದಿಂದ ಹುಚ್ಚಿ

ಯಾಗದಿರುತ್ತಿದ್ದಿಲ್ಲ. ಆದರೆ ಅದಾವುದೊ ಒಂದು ಜಿಡತೆ ಅವಳನ್ನು ಸತ್ವ ಹೀನಳನ್ನಾಗಿ ಮಾಡಿತ್ತು.

ಹೀಗೆ ನಿರ್ಜೀವಳಂತೆ ಹಾಸಿಗೆಯ ಮೇಲೆ ಬಿದ್ದಾಗ ವಿರಾಜಳ ಮನದಲ್ಲಿ ಅದೆಷ್ಟೊ ಭಾವನೆಗಳು ತೂರಿ ಬರತೊಡಗಿದ್ದವು. ಆದರೆ ಅವೆಲ್ಲವೂ ತಾಳ ಮೇಳವಿಲ್ಲದ ಹುಚ್ಚು ಭಾವನೆಗಳು. ಈ ಎಲ್ಲ ವಿಚಾರಗಳಲ್ಲಿ ಮುಳುಗಿದರೂ ರೂಢಿಯ ಬಲದಿಂದ — "ಇಂದು ಅವರು ಇಡಿಯ ದಿನ ಉಪವಾಸವೆ ಇದ್ದಾರೆ" ಎಂಬ ವಿಚಾರ ಒಮ್ಮೆಲೆ ಅವಳ ಮನದಲ್ಲಿ ಮೂಡಿತು.

ಆಗ ವಿರಾಜಳಿಗೆ ಸುಮ್ಮನೆ ಒರಗಿರಲು ಸಾಧ್ಯವಾಗಲಿಲ್ಲ. ತಟ್ಟನೆ ಹಾಸಿಗೆಯಿಂದೆದ್ದವಳೆ ದೀವಿಗೆ ತೆಗೆದುಕೊಂಡು ಉಗ್ರಾಣದಲ್ಲಿ ಲಕ್ಷ್ಯ ಪೂರ್ವಕವಾಗಿ ಹುಡುಕ ತೊಡಗಿದಳು. "ಸ್ವಲ್ಪ ಅಕ್ಕಿ ದೊರೆತರೆ ಅವರಿಗೆ ಅನ್ನವನ್ನಾದರೂ ಮಾಡಿಡೋಣ" ವೆಂದು ಅವಳ ವಿಚಾರ. ಆದರೆ ಅಲ್ಲಿ ಅಡುಗೆಯ ಪದಾರ್ಥಗಳೊಂದೂ ಇರಲಿಲ್ಲ. ಅಕ್ಕಿ, ಬೇಳೆ, ತಿನ್ನುವ ಯಾವ ಸಾಮಾನೂ ಮನೆಯಲ್ಲಿರಲಿಲ್ಲ. ಉದ್ವಿಗ್ನಳಾಗಿ ಕೋಣೆಯಿಂದ ಹೊರ ಬಿದ್ದಳು. ಹೊರಗೆ ಗೋಡೆಯನ್ನು ಆತು ಅಲ್ಲಿಯೆ ಕ್ಷಣ ಹೊತ್ತು ಸ್ಥಿರತೆ ಯಿಂದ ಮನದಲ್ಲಿಯೆ ಯೋಚಿಸಿದಳು. ಬಳಿಕ ದೀಪ ನಂದಿಸಿ ಬಾಗಿಲು ತೆರೆದು ಹೊರಬಿದ್ದಳು. ಹೊರಗೆ ಗಾಢಾಂಧಕಾರ. ಎಲ್ಲೆಲ್ಲಿಯೂ ಮೈ ನವಿರೇಳುವ ನಿಸ್ತಬ್ಧತೆ. ಮಾರ್ಗದಲ್ಲಿ ಹೆಜ್ಜೆ ಹೆಜ್ಜೆಗೆ ಜಾರಿಕೆ. ಅಡಿಗಡಿಗೆ ಹುಲ್ಲು-ಕಂಟೆ, ಪೊದೆ-ಎಲೆವಳ್ಳಿ ರಟ್ಟಾಗಿ ಬೆಳೆದು ತಲೆಯೆತ್ತಿ ನಿಂತಿವೆ. ಆದರೆ ವಿರಾಜಳ ಕಾಲನ್ನು ತಡೆಯಲು ಅವುಗಳಿಗಾವುದಕ್ಕೂ ಇಂದು ಶಕ್ತಿ ಯಿರಲಿಲ್ಲ. ತೋಟದ ಒಂದು ಮೂಲೆಯಲ್ಲಿಯ ವನದಲ್ಲಿ ಹೊಲೆಯರ ಕೆಲವು ಜೋಪಡಿಗಳಿದ್ದವು. ವಿರಾಜ ಆ ಕಡೆಗೆ ಹೋಗುತ್ತಲಿದ್ದಳು. ಒಮ್ಮೆಲೆ ಒಂದು ಗುಡಿಸಲಿನೆದುರು ನಿಂತು "ತುಳಸೀ!" ಎಂದು ಕೂಗಿದಳು.

ಕರೆಕೇಳಿ ತುಳಸಿ ಕೈಯಲ್ಲಿ ದೀವಿಗೆ ಹಿಡಿದುಕೊಂಡು ಹೊರಬಂದಳು. ವಿರಾಜಳನ್ನು ನೋಡಿದೊಡನೆಯೆ ವಿಸ್ಮಯದಿಂದ ಅವಾಕ್ಕಾದಳು. ಕ್ಷಣ ಹೊತ್ತು ತಡೆದು, "ಇಂಥ ಕತ್ತಲಲ್ಲಿ ಏಕೆ ಬಂದಿರಿ ತಾಯಿ?" ಎಂದು ಕೇಳಿದಳು.

"ನನಗೆ ಸ್ವಲ್ಪ ಅಕ್ಕಿ ಬೇಕಾಗಿದೆ." ಎಂದಳು ವಿರಾಜ.

"ಅಕ್ಕಿ ಬೇಕೆ?" ತುಳಸಿ ಚಕಿತಳಾದಳು. ಇಂಥ ಪ್ರತಿಷ್ಠಿತ ಮನೆಯ ಹೆಣ್ಣು ತನ್ನ ಮನೆಯಲ್ಲಿಯ ಕೀಳು ತರಗತಿಯ ಅಕ್ಕಿಯನ್ನು ಕೇಳಲು ಬಂದಳೇಕೆಂಬುದು ಅವಳಿಗೆ ಹೊಳೆಯಲಿ ಇಲ್ಲ.

ಅವಳ ಮುಖವನ್ನೆ ದಿಟ್ಟಿಸುತ್ತ ವಿರಾಜಳೆಂದಳು: "ಸುಮ್ಮನೆ ನಿಂತಿರಬೇಡ ತುಳಸಿ! ತ್ವರೆಮಾಡು."

ಪುನಃ ಒಂದೆರಡು ಬಾರಿ ಹೇಳಿಸಿಕೊಂಡನಂತರವೆ ತುಳಸಿ ಒಳಗಿನಿಂದ ತುಸು ಅಕ್ಕಿಯನ್ನು ತಂದು ವಿರಾಜಳ ಸೆರಗಿನಲ್ಲಿ ಕಟ್ಟಿದಳು. ಬಳಿಕ "ಈ ಧಮ್ಮಕ್ಕಿಯನ್ನು ಕೊಂಡು ಏನು ಮಾಡುವಿರಮ್ಮ! ಇಂಥ ಅಕ್ಕಿಯನ್ನು ನೀವು ಉಂಡುವುದೇ ಇಲ್ಲ."

ತಲೆಯಲ್ಲಾಡಿಸುತ್ತ ವಿರಾಜಳೆಂದಳು: "ಇವೊತ್ತು ಈ ಅಕ್ಕಿಯ ಊಟವನ್ನೆ ಮಾಡುವುದು."

ಕೈಯಲ್ಲಿ ದೀವಿಗೆ ತೆಗೆದುಕೊಂಡು "ನಿಮ್ಮನ್ನು ಮನೆಗೆ ತಲುಪಿಸಿ ಬರುವೆ" ಎಂದು ತುಳಸಿ ಹೇಳಿದಾಗ ವಿರಾಜ ಅವಳನ್ನು ತಡೆದು "ಅದರ ಅಗತ್ಯವಿಲ್ಲ. ಅಲ್ಲದೆ ಮತ್ತೆ ನೀನೊಬ್ಬಳೆ ಹಿಂದಿರುಗಬೇಕಾದೀತು" ಎಂದು ನಿಮಿಷಮಾತ್ರದಲ್ಲಿಯೆ ವಿರಾಜ ಆ ಕರಿಗತ್ತಲಲ್ಲಿ ಅದೃಶ್ಯಳಾದಳು. ಇವೊತ್ತು ಅವಳು ಒಬ್ಬ ಮಾದಿಗನ ಮನೆಗೆ ಬಿಕ್ಕೆ ಬೇಡಲು ಹೋಗಿದ್ದಳು. ನೀಡಿಸಿಕೊಂಡೂ ಬಂದಳು. ಆದರೆ ಇಂಥ ದೊಡ್ಡ ಅಪಮಾನಜನಕ ಪರಿಸ್ಥಿತಿಯಿಂದಲೂ ವಿರಾಜಳಿಗೆ ಲವಲೇಶವೂ ದುಃಖವಾಗಲಿಲ್ಲ. ಶೋಕ, ದುಃಖ, ಅಭಿಮಾನ, ಅಪಮಾನ ಇವುಗಳ ವಿಚಾರಮಾಡುವ ಶಕ್ತಿಯೂ ಅವಳ ದೇಹದಲ್ಲಿರಲಿಲ್ಲ.

ವಿರಾಜ ಮರಳಿ ಮನೆಗೆ ಬಂದಾಗ ನೀಲಾಂಬರ ಮನೆಗೆ ಬಂದಿದ್ದ. ಮೂರು ದಿನಗಳಿಂದ ಅವಳಿಗೆ ಗಂಡನ ಮುಖದರ್ಶನವೆ ಆಗಿರಲಿಲ್ಲ. ಆದ್ದರಿಂದ ಅವನನ್ನು ನೋಡಿದೊಡನೆಯೆ ಅವಳ ದೇಹದ ರಕ್ತದ ಅಣು ಅಣುವೂ ಉತ್ತೇಜನಗೊಂಡಿತು. ಅಲ್ಲದೆ ತಡೆಯಲಾರದ ಒಂದು ಸೆಳೆತವು ಅವಳನ್ನು ಅವನ ಕಡೆಗೆ ಎಳೆಯತೊಡಗಿತು. ಆದರೆ ವಿರಾಜಳೆದುರು ಆ ಶಕ್ತಿಯ ಆಟ ನಡೆಯಲಿ ಇಲ್ಲ.

ತೀವ್ರ ವಿದ್ಯುತ್‌ಸ್ಪರ್ಶದಿಂದ ಧಾತುಶಕ್ತಿ ಹೊಂದುವಂತ ಗಂಡನ ಸಾನ್ನಿಧ್ಯದಿಂದ ವಿರಾಜಳಿಗೆ ಒಂದು ಹೊಸ ಶಕ್ತಿ ಮೂಡಿಬಂದಂತಾಯಿತು. ಆದರೂ ಅವಳು ಆ ಆಕರ್ಷಣಗಳನ್ನೆಲ್ಲ ವಿರೋಧಿಸಿ, ಸ್ತಬ್ಧಳಾಗಿ ನಿಂತು ಎವೆಯಿಕ್ಕದೆ ನಿಟ್ಟಿಸತೊಡಗಿದಳು.

ನೀಲಾಂಬರ ಒಂದು ಬಾರಿ ಮೊಗವೆತ್ತಿ ಮುಖವನ್ನು ಕೆಳಗೆ ಮಾಡಿದ. ಆದರೆ ಅವರೀರ್ವರ ದೃಷ್ಟಿ ಒಂದರಗಳಿಗೆ ಮಿಲನವಾದಾಗ ಗಂಡನ ನೇತ್ರಗಳೆರಡೂ ಕೆಂಪಾಗಿರುವುದನ್ನು ವಿರಾಜ ಕಂಡಳು. ಹೆಣವನ್ನು ಗಂಗೆಗರ್ಪಿಸಲು ಹೋದ ಜನ, ಮೂರು ದಿನ ಅಲ್ಲಿಯೆ ಉಳಿದಾಗ ನಿರಂತರ ಗಾಂಜಾ ಸೇದುತಿದ್ದರೆಂದು ವಿರಾಜಳಿಗೆ ತಿಳಿಯದೆ ಹೋಗಲಿಲ್ಲ. ಐದಾರು ನಿಮಿಷ ಹಾಗೆಯೆ ನಿಂತು ಬಳಿಕ ಗಂಡನ ಸನಿಹಕ್ಕೆ ಬಂದು "ಇನ್ನೂ ನಿಮ್ಮ ಊಟವಾಗಿಲ್ಲವೆ?" ಎಂದು ಕೇಳಿದಳು.

"ಇಲ್ಲ" ವೆಂದ ನೀಲಾಂಬರ.

ವಿರಾಜ ಅಡುಗೆ ಮನೆಗೆ ಹೋಗತೊಡಗಿದಳು. ಅಷ್ಟರಲ್ಲಿ ನೀಲಾಂಬರ ಒಮ್ಮೆಗೆ ಅವಳನ್ನು ಕೂಗಿ ಕರೆದು "ಇಷ್ಟು ರಾತ್ರಿಯಲ್ಲಿ ನೀನೊಬ್ಬಳೆ ಎಲ್ಲಿ ಹೋಗಿದ್ದೆ?" ಎಂದು ಪ್ರಶ್ನಿಸಿದ.

ಮನದಲ್ಲಿಯೆ ಯೋಚಿಸಿ ವಿರಾಜಳೆಂದಳು. "ಘಟ್ಟದ ಬಳಿ ಹೋಗಿದ್ದೆ."

ಅಪನಂಬಿಕೆಯನ್ನು ತೋರುತ್ತ ನೀಲಾಂಬರನೆಂದ: "ಇಲ್ಲ, ನೀನು ಘಟ್ಟದ ಬದಿಗೆ ಹೋಗಿರಲೆ ಇಲ್ಲ."

"ಹಾಗಾದರೆ ಸುಡುಗಾಡಕ್ಕೆ ಹೋಗಿದ್ದೆ" ಎಂದು ಸಿಡುಕಿದವಳೆ ವಿರಾಜ ಅಡುಗೆ ಮನೆ ಸೇರಿದಳು. ಒಂದು ಗಂಟೆಯಾದ ಬಳಿಕ ಅಡುಗೆ ಮಾಡಿ ಊಟಕ್ಕೆ ನೀಲಾಂಬರನನ್ನು ಕರೆಯಲು ಹೊರಬಂದಾಗ ಆತ ಕಂಣು ಮುಚ್ಚಿ ತೂಕಡಿಸುತ್ತಿದ್ದುದನ್ನು ಕಂಡಳು. ಗಾಂಜವನ್ನು ಅತಿಯಾಗಿ ಸೇವಿಸಿದ ಫಲವಾಗಿ ನೀಲಾಂಬರನ ತಲೆ ಕಾಯ್ದಿತ್ತು. ಬುದ್ಧಿಯೂ ಮಂಕು ಕವಿದಿತ್ತು. ಆತ ನೆಟ್ಟಗೆ ಕುಳಿತು – "ನೀನೆಲ್ಲಿ ಹೋಗಿದ್ದೆ– ಹೇಳು?" ಎಂದು ಪುನಃ ಪ್ರಶ್ನಿಸಿದ.

ಉತ್ತರವೀಯಲು ವಿರಾಜ ಬಾಯಿ ತೆರೆದಿದ್ದಳು. ಆದರೆ ತಟ್ಟನೆ ಹಲ್ಲಿನಿಂದ ಅದುಮಿ ಹಿಡಿದು ಶಾಂತಚಿತ್ತದಿಂದ ಹೇಳಿದಳು. "ಈಗ ನೀವು ಊಟಮಾಡಿ ಮಲಗಿಕೊಳ್ಳಿ. ನಾಳೆ ನಿಮಗೆ ಎಲ್ಲವನ್ನೂ ವಿವರಿಸಿ ಹೇಳುವೆ."

ತಲೆಯಲ್ಲಾಡಿಸುತ್ತ ನೀಲಾಂಬರನೆಂದ: "ಇಲ್ಲ–ನೀನೆಲ್ಲಿ ಹೋಗಿದ್ದೆ ಯೆಂದು ಈಗಲೆ ಹೇಳಬೇಕು."

ಗಂಡನ ಆಗಿನ ಭಾವಭಂಗಿ ನೋಡಿ, ಆ ಘೋರ ಸಂಕಟ ಸಮಯ ದಲ್ಲಿಯೂ ವಿರಾಜಳಿಗೆ ನಗು ಬಂತು. "ನಾನು ಹೇಳದೆಹೋದರೆ?" ಎಂದು ಮುಗುಳು ನಕ್ಕಳು.

"ಇಲ್ಲ, ನೀನು ಹೇಳಲೆಬೇಕು."

"ನಾನು ಈ ವಿಷಯವಾಗಿ ಇವೊತ್ತು ಹೇಳುವುದೆ ಇಲ್ಲ. ಮೊದಲು ಊಟಮಾಡಿರಿ, ಆಮೇಲೆ ನೋಡೋಣವಂತೆ."

ವಿರಾಜಳ ಮುಗುಳುನಗೆಯು ನೀಲಾಂಬರನಿಗೆ ಕಾಣಲಿಲ್ಲ. ಎರಡೂ ಕಣ್ಣುಗಳನ್ನು ತೆರೆದು ಮೊಗವನ್ನು ಮೇಲೆತ್ತಿದ. ಆಗ ನೀಲಾಂಬರನ ಕಣ್ಣುಗಳಲ್ಲಿ ಅಮಲು ಕಾಣಲಿಲ್ಲ. ಆ ಕಣ್ಣುಗಳಲ್ಲಿ ಹಿಂಸೆ ಹಾಗೂ ಜುಗುಪ್ಸೆಯ ನೋಟವಿತ್ತು. ಗರ್ಜಿಸಿ ಹೇಳಿದ: "ಇಲ್ಲ–ನಾನೆಂದಿಗೂ ಉಣ್ಣುವುದಿಲ್ಲ. ನೀನೆಲ್ಲಿ ಹೋಗಿದ್ದೆಯೆಂಬುದನ್ನು ವಿವರವಾಗಿ ಹೇಳದೆ ಹೋದರೆ ನೀನು ಮುಟ್ಟಿದ ನೀರನ್ನೂ ಕುಡಿಯುವುದಿಲ್ಲ."

ವಿರಾಜ ವ್ಯಗ್ರಳಾದಳು. ಕರಿ ಸರ್ಪ ಕಚ್ಚಿದ ಮನುಷ್ಯನಿಗಿಂತಲೂ ಹೆಚ್ಚು ವ್ಯಗ್ರಳಾದಳು. ನಡುಗುತ್ತಲೆ ಬಾಗಿಲಬಳಿ ನೆಲದಮೇಲೆ ಕುಸಿದು ಕುಳಿತಳು. "ನಾನು ಮುಟ್ಟಿದ ನೀರನ್ನೂ ಕುಡಿಯುವುದಿಲ್ಲವೆ?" ಎಂದು ಕೇಳಿದಳು ವಿರಾಜ.

"ಇಲ್ಲ, ಎಂದೆಂದಿಗೂ ಇಲ್ಲ."

"ಏಕೆ ಕುಡಿಯುವುದಿಲ್ಲ?"

ನೀಲಾಂಬರ ಚೀರಿದ: "ಗೊತ್ತಿದ್ದೂ ಕೇಳುವೆಯಾ?"

ಹೆಚ್ಚು ಮಾತನಾಡದೆ ವಿರಾಜ ಸ್ಥಿರದೃಷ್ಟಿಯಿಂದ ಗಂಡನನ್ನೆ ನಿರುಕಿಸಿದಳು. ಬಳಿಕ ಮೆಲ್ಲಮೆಲ್ಲನೆ ಹೇಳಿದಳು: "ನನಗೆಲ್ಲವೂ ಅರ್ಥವಾಯಿತು. ಇನ್ನು ನಿಮ್ಮನ್ನು ವಿಚಾರಿಸುವುದಿಲ್ಲ. ನಿಮ್ಮ ಪ್ರಶ್ನೆಗೂ ಈಗ ಉತ್ತರ

ವೀಯುವುದಿಲ್ಲ. ಕಾರಣವಿಷ್ಟೆ: ನಾಳೆ ನಿಮಗೆ ಅಮಲು ಇಳಿದಾಗ ಎಲ್ಲ ತಾನೆ ತಿಳಿಯುವುದು. ಈಗ ನಿಮಗೆ ಅಮಲೇರಿರುವುದರಿಂದ ನಿಮಗೆ ಪ್ರಜ್ಞೆಯಿಲ್ಲ.''

ಮಾದಕಪದಾರ್ಥ ಸೇವಿಸುವವನು ಬುದ್ಧಿ ಭ್ರಷ್ಟವಾಗುವ ಮಾತನ್ನೊಂದು ಬಿಟ್ಟು ಎಂಥ ಮಾತುಗಳನ್ನೂ ಸಹಿಸುತ್ತಾನೆ. ಆದುದರಿಂದ ಬುದ್ಧಿ ಭ್ರಷ್ಟವಾಗಿವೆಯೆಂದು ನೀಲಾಂಬರನಿಗೆ ವಿರಾಜ ಹೇಳಿದಾಗ ಅವನ ಕೋಪಕ್ಕೆ ಸೀಮೆಯೆ ಉಳಿಯಲಿಲ್ಲ. ಒಗರುದನಿಯಲ್ಲಿ, ''ನಾನು ಗಾಂಜಾ ಸೇದಿದ್ದೆನೆಂದು ನೀನು ಹೇಳುವೆಯಲ್ಲವೆ? ಆದರೆ ನನ್ನ ಬುದ್ಧಿ ಸ್ತಿಮಿತದಲ್ಲಿಲ್ಲವೆಂದು ಹೇಳಲು ನಾನು ಗಾಂಜಾ ಇಂದೆ ಹೊಸದಾಗಿ ಸೇದುತ್ತಿಲ್ಲ! ಭ್ರಮೆಯಾಗಿದೆ ನಿನಗೆ. ನಿನ್ನ ಬುದ್ಧಿಯೆ ಭ್ರಷ್ಟವಾಗಿದೆ.''

ವಿರಾಜ ಗಂಡನ ಮುಖವನ್ನು ನಿಟ್ಟಿಸುತ್ತಲಿದ್ದಳು.

ನೀಲಾಂಬರನೆಂದ: ''ನೀನಾರ ಕಣ್ಣಿಗೆ ಧೂಳೆರಚಬೇಕೆಂದಿರುವೆ ವಿರಾಜ? ನನ್ನ ಕಣ್ಣಿಗೆ? ನಾನು ಮಹಾ ಮೂರ್ಖ. ಆದುದರಿಂದಲೆ ಅಂದು ಪೀತಾಂಬರನ ಯಾವ ಮಾತನ್ನೂ ನಂಬಲಿಲ್ಲ. ಆತ ಎಷ್ಟೆಂದರೂ ನನ್ನ ಒಡಹುಟ್ಟಿದ ತಮ್ಮ. ಅಣ್ಣನ ವಿಷಯವಾಗಿ ತಾನು ಮಾಡಬೇಕಾದ ಕರ್ತವ್ಯವನ್ನು ಅವನು ಮಾಡಿದ. ಅವನ ಮಾತು ನಿಜವಲ್ಲವೆನ್ನುವುದಾದರೆ– ನೀನೆಲ್ಲಿ ಹೋಗಿದ್ದೆಯೆಂಬುದನ್ನು ಸರಿಯಾಗಿ ತಿಳಿಸುತ್ತಿಲ್ಲವೇಕೆ ಹೇಳು! ನೀನು ಸುಳ್ಳೇಕೆ ಆಡುತ್ತಿರುವೆ? ನಿಜ ಹೇಳು– ನೀನು ಘಟ್ಟದ ಬಳಿ ಹೋಗಿದ್ದೆಯಾ?''

ಈಗ ವಿರಾಜಳ ಎರಡೂ ಕಣ್ಣುಗಳಲ್ಲಿ ಹುಚ್ಚು ಕಳೆ ಮಿಂಚತೊಡಗಿತು. ಆದರೂ ಅವಳು ತನ್ನ ದನಿಯನ್ನು ಸಂಯತಗೊಳಿಸಿ– ''ನಾನು ಸುಳ್ಳಾಡುವ ಕಾರಣವಿಷ್ಟೆ: ನಿಜ ಸಂಗತಿ ನಿಮ್ಮ ಕಿವಿ ಸೇರಿದರೆ, ನೀವು ನಾಚಿಕೊಳ್ಳುವಿರಿ ಮತ್ತು ಅದರಿಂದ ನೀವು ಊಟವನ್ನು ಬಿಡುವಿರಿ. ಆದರೆ ನನ್ನ ಈ ನಿವೇದನೆ ವ್ಯರ್ಥವೆಂದೆ ತೋರುತ್ತಿದೆ. ನೀವು ನಾಚಿಕೆ ಸಂಕೋಚಗಳೆಲ್ಲವನ್ನೂ ತೊರೆದಿದ್ದೀರಿ, ಜೊತೆಗೆ ಮನುಷ್ಯತ್ವವೂ ನಷ್ಟವಾಗಿದೆ. ನೀವೂ ಸುಳ್ಳನ್ನಾಡಲಿಲ್ಲವೆ? ನೀವು ನನ್ನೊಡನೆ ನಡೆದುಕೊಂಡಂತೆ ನಡೆಯಲು ಪಶುವಿಗೂ ನಾಚಿಕೆಯಾಗುತ್ತದೆ. ಆದರೆ ನಿಮಗೆ

ಅಂಥದೇನೂ ಆಗಲಿಲ್ಲ. ಸಾಧು ಪುರುಷರಲ್ಲವೆ ನೀವು! ಮನೆಯಲ್ಲಿ ಜ್ವರ ಗ್ರಸ್ತಳಾದ ಹೆಂಡತಿಯನ್ನು ಬಿಟ್ಟು ಚಿಲುಮೆ ಸೇದಲು ಯಾವ ಶಿಷ್ಯನ ಬಳಿಗೆ ಹೋಗಿದ್ದಿರಿ? ತುಸು ಹೇಳಿ ನೋಡೋಣ!'' ಎಂದು ಕೇಳಿದಳು ವಿರಾಜ.

ನೀಲಾಂಬರನ ಸಹನ ಶಕ್ತಿ ಮೀರಿತು. 'ಹೇಳುವೆ' ಎಂದವನೆ ಕೈಯಲ್ಲಿದ್ದ ಬರಿದಾದ ಎಲೆಯಡಿಕೆ ಡಬ್ಬಿಯನ್ನು ವಿರಾಜಳಿಗೆ ಗುರಿಯಿಟ್ಟು ಬೀಸಿ ಒಗೆದ. ಡಬ್ಬಿ ಸಾಕಷ್ಟು ದೊಡ್ಡದಿತ್ತು. ವಿರಾಜಳ ಹಣೆಗೆ ತಾಕಿ ಝಣ್ ಝಣ್ ಎಂದು ಬಾಯಿ ತೆರೆದು ಬಿದ್ದಿತು. ನೋಡನೋಡುವಷ್ಟ ರಲ್ಲಿ ಕಣ್ಣಿನ ಬದಿಯಿಂದ ರಕ್ತ ಸರಸರನೆ ತುಟಿಯವರೆಗೂ ಹರಿದುಬಂದು ವಿರಾಜಳ ಮುಖವೆಲ್ಲವೂ ರಕ್ತಮಯವಾಯಿತು. ಎಡಗೈಯಿಂದ ಹಣೆ ಒತ್ತಿಕೊಂಡು 'ಅಯ್ಯೋ, ನನ್ನನ್ನು ಕೊಂದಿರಿ' ಎಂದು ಚೀರಿದಳು ವಿರಾಜ.

ನೀಲಾಂಬರನ ತುಟಿಗಳು ಅದರತೊಡಗಿದವು. "ಇಲ್ಲ, ನಾನು ನಿನ್ನನ್ನು ಕೊಂದಿಲ್ಲ. ಇರಲಿ, ಈ ನಿನ್ನ ಮುಖವನ್ನು ನನಗಿನ್ನು ತೋರಿಸ ಬೇಡ. ತೊಲಗಾಚೆ – ನಾಚಿಕೆಗೇಡಿ!''

ವಿರಾಜ ಎದ್ದುನಿಂತಳು. 'ಆಗಲಿ, ತೊಲಗುವೆ' ಎಂದು ಒಂದು ಹೆಜ್ಜೆ ಮುಂದೆ ಹೋದವಳು ಒಮ್ಮೆಲೆ ಹಿಂದಿರುಗಿ ನಿಂತಲ್ಲಿಂದಲೆ ಹೇಳಿದಳು: "ತೊಲಗುವೆ, ಆದರೆ ನಾಳೆ ನಿಮ್ಮ ಬುದ್ಧಿ ಸ್ತಿಮಿತಕ್ಕೆ ಬಂದಾಗ ಇದನ್ನು ಸಹಿಸಿಕೊಳ್ಳಬಲ್ಲಿರಾ? ಜ್ವರಪೀಡಿತಳಾದ ನನ್ನನ್ನು ಹೊಡೆದಿರಿ, ಮನೆ ಯಿಂದ ಹೊಡೆದೋಡಿಸಿದಿರಿ, ಈ ಮೂರು ದಿನಗಳಿಂದ ನಾನೇನು ತಿಂದಿರ ಲಿಲ್ಲ. ಆದರೂ ಇಂಥ ಕರಿಗತ್ತಲಲ್ಲಿಯೆ ನಿಮಗಾಗಿ ಭಿಕ್ಷೆ ಬೇಡಿ ತಂದೆ. ಹೀಗಿದ್ದೂ ನೀವು ನನ್ನ ಹೆಸರಿಗೆ ಕಲಂಕ ತೊಡೆಯುತಿದ್ದೀರಿ. ಹೇಳಿ – ಮುಂದೆ ನಾನಿಲ್ಲದಾಗ ನನ್ನ ವಿರಹವನ್ನು ಸಹಿಸಿಕೊಳ್ಳಬಲ್ಲಿರಾ? ಈ ಲಜ್ಜೆ ಗೇಡಿಯನ್ನು ಮರೆತು ಒಬ್ಬರೆ ಇರಬಲ್ಲಿರಾ?"

ವಿರಾಜಳ ಹಣೆಯಿಂದ ರಕ್ತ ಸೋರುತಿದ್ದುದನ್ನು ನೋಡಿದೊಡನೆಯೆ ನೀಲಾಂಬರನ ಅಮಲು ದೂರವಾಯಿತು. ಆತ ಹುಚ್ಚನಂತೆ ವಿರಾಜಳನ್ನೆ ದಿಟ್ಟಿಸಿ ನೋಡತೊಡಗಿದ.

ಸೆರಗಿನಿಂದ ರಕ್ತ ಒರಸುತ್ತ ವಿರಾಜಳೆಂದಳು: "ಈಗ ಒಂದು ವರುಷದಿಂದಲೆ ಬೀಳ್ಕೊಳ್ಳೋಣವೆಂದೆನಿಸಿತ್ತು ನನಗೆ. ಆದರೆ ನಿಮ್ಮನ್ನು ಬಿಟ್ಟುಹೋಗಲು ಸಾಧ್ಯವಾಗಲಿಲ್ಲ. ನನ್ನ ಮೈಯಲ್ಲಿ ಏನೂ ಶಕ್ತಿ ಉಳಿದಿಲ್ಲವೆಂದು ಸ್ವಲ್ಪ ಕಣ್ಣೆತ್ತಿ ನೋಡಿದರೆ ನಿಮಗೆ ತಿಳಿಯುವುದು. ನನ್ನ ಕಣ್ಣುಗಳೂ ಮಂದವಾಗಿವೆ. ಒಂದು ಹೆಜ್ಜೆ ನಡೆಯಲೂ ನನಗೆ ಶಕ್ತಿಯಿಲ್ಲ: ಆದರೂ ನಾನು ನಿಮ್ಮನ್ನು ಬಿಟ್ಟುಹೋಗುತಿದ್ದಿಲ್ಲ. ಆದರೆ ಪತಿಯಾಗಿ ನೀವೆ ನನ್ನಮೇಲೆ ಕಲಂಕ ತೊಡೆದಿರಂದ ಬಳಿಕ ಇನ್ನು ನಾನು ನಿಮಗೆ ನನ್ನ ಮುಖ ತೋರಲಾರೆ. ಈ ಜಗತ್ತಿನಲ್ಲಿ ನನಗಿದ್ದ ಅನೇಕ ಆಸೆಗಳಲ್ಲಿ ನಿಮ್ಮ ಚರಣಗಳ ಬಳಿಯಲ್ಲಿಯೆ ನನಗೆ ಸಾವು ಉಂಟಾಗಲೆಂಬ ಆಸೆ ಎಲ್ಲಕ್ಕೂ ಹಿರಿದಾದುದು. ಆ ಆಸೆಯನ್ನು ಬಿಟ್ಟುಬಿಡಲು ನಾನೆಂದಿಗೂ ಸಿದ್ಧಳಿದ್ದಿಲ್ಲ. ಆದರೆ ಇಂದು ನಾನು ಅದಕ್ಕೂ ತಿಲಾಂಜಲಿಯನ್ನಿತ್ತಿದ್ದೇನೆ," ಎಂದು ಮುಖಕ್ಕೆ ತೊಡರಿದ್ದ ರಕುತವನ್ನು ಒರಸುತ್ತಲೆ ತೆರೆದ ಬಾಗಿಲಿಂದ ಹೊರಬಿದ್ದು ವಿರಾಜ ಗಾಢಕತ್ತಲು ಮುಸುಕಿದ ತೋಟದಲ್ಲಿ ಮರೆಯಾದಳು.

ನೀಲಾಂಬರನಿಗೆ ಏನೊ ಹೇಳುವ ಇಚ್ಛೆಯಾಯಿತು. ಆದರೆ ಅವನ ನಾಲಿಗೆಯೆ ಏಳಲಿಲ್ಲ. ತಾನು ಅವಳ ಹಿಂದೆ ಹಿಂದೆಯೆ ಹೋಗಲಾ ಎಂದೆನಿಸಿತು ನೀಲಾಂಬರನಿಗೆ. ಆದರೆ ಅವನಿಗೆ ಎದ್ದು ನಿಲ್ಲಲೂ ಆಗಲಿಲ್ಲ. ಯಾವ ಮಂತ್ರಶಕ್ತಿಯ ಬಲದಿಂದಲೊ ಏನೊ ಅವನನ್ನು ಕಲ್ಲುಮೂರ್ತಿಯನ್ನಾಗಿ ಮಾಡಿ ವಿರಾಜ ಅದೃಶ್ಯಳಾಗಿದ್ದಳು!

ಮಳೆಗಾಲದ ಅಂಥ ಭಯಾನಕ ರಾತ್ರಿಯಲ್ಲಿ ಆ ಸರಸ್ವತಿ ನದಿಯ ಕಡೆಗೆ ಒಮ್ಮೆ ದೃಷ್ಟಿ ಎತ್ತಿ ನೋಡಿದರೂ ಸಾಕು, ಎದೆಯಲ್ಲಿ ಭಯ ಸಂಚಾರವಾಗದೆ ಇರುತ್ತಿರಲಿಲ್ಲ. ಆದರೆ ಇಂದಿನ ಸರಸ್ವತಿ ನದಿ ಬತ್ತಿ ಮೆಲ್ಲನೆ ಹರಿಯುತ್ತಿರುವ ವೈಶಾಖ ಮಾಸದ ಸರಸ್ವತಿ ನದಿಯಲ್ಲ. ಸಂತತ ಧಾರೆಯಿಂದ ಎರಡೂ ದಡಗಳನ್ನು ತುಂಬಿ ಸೂಸಿ ಪ್ರಚಂಡ ವೇಗದಿಂದ ಹರಿವ ಶ್ರಾವಣ ಮಾಸದ ಸರಸ್ವತಿ ನದಿಯು. ವಸಂತಋತುವಿನ ಒಂದು ದಿನ ಸುಪ್ರಭಾತದಲ್ಲಿ ನೀಲಾಂಬರ ತನ್ನ ತಂಗಿಯೊಡನೆ ಕಪ್ಪುಕಲ್ಲಿನ ಮೇಲೆ ಕುಳಿತು ಸ್ನೇಹಸುಖ ಅನುಭವಿಸುತಿದ್ದ. ಇಂದು ಈ ಅಂಧಕಾರಮಯ ರಾತ್ರಿಯಲ್ಲಿ ಎಂಥ ಹೃದಯ ಹೊತ್ತುಕೊಂಡೊ – ದೇವರೆ ಬಲ್ಲ! ವಿರಾಜ

ಅದೆ ಕಲ್ಲಿನಮೇಲೆ ನಡುಗುತ್ತ ನಿಂತಿದ್ದಳು. ಕೆಳಗಡೆ ಗಂಭೀರ ಜಲರಾಶಿ ಪ್ರಾಕಾರಕ್ಕೆ ಅಪ್ಪಳಿಸುತ್ತ ಮಡುವುಗಳನ್ನು ಸೃಚಿಸುತ್ತ ವೇಗದಿಂದ ಓಡು ತಿತ್ತು. ವಿರಾಜ ಅದರ ಕಡೆಗೆ ನೋಡಿ ಒಂದು ಬಾರಿ ತಲೆ ಕೆಳಗೆ ಮಾಡಿ ದಳು. ಬಳಿಕ ಎದುರುಗಡೆ ನಿಟ್ಟಿಸಿ ನೋಡುತ್ತ ನಿಂತಳು. ಅವಳ ಕಾಲಡಿ ಯಲ್ಲಿ ಕರಿಶಿಲೆ, ತಲೆಯಮೇಲೆ ಕಾರ್ಮೋಡ ಕವಿದ ಕರಿಯಾಗಸ. ಎದುರುಗಡೆ ಕರಿ ನೀರಿನ ಅಪಾರ ರಾಶಿ. ನಾಲ್ಕು ದಿಕ್ಕುಗಳಲ್ಲಿಯೂ ನೀರವತೆ ಮುತ್ತಿದ ವಿಶಾಲವಾದ ನಿಬಿಡ ಕರಿ ಕಾಡುಗಳು. ಇವುಗಳ ಜೊತೆಗೆ, ಇವುಗಳೆಲ್ಲವುಗಳಿಗಿಂತ ಹೆಚ್ಚು ಕರಿದಾದ ಅವಳ ಮನದಲ್ಲಿ ಜಾಗ್ರತವಾದ ಆತ್ಮಹತ್ಯೆಯ ಪ್ರವೃತ್ತಿ. ವಿರಾಜ ಅದೆ ಕಲ್ಲಿನಮೇಲೆ ಕುಳಿತು ಸೀರೆಯಿಂದ ತನ್ನ ಕೈಕಾಲುಗಳನ್ನು ಬಿಗಿಯಾಗಿ ಕಟ್ಟಿಕೊಳ್ಳ ತೊಡಗಿದಳು.

## ೧೨

ಇನ್ನೂ ನಸುಕು ನಸುಕು. ಆಕಾಶವು ಪೂರ್ಣವಾಗಿ ಮೋಡಗಳಿಂದ ಕವಿದಿದ್ದಿತು. ಜಿಟಿ ಜಿಟಿಯೆಂದು ಮಳೆಯು ಬೀಳುತಿತ್ತು. ತೆರೆದ ಬಾಗಿಲಿನ ಹೊಸ್ತಿಲಕ್ಕೆ ನೀಲಾಂಬರ ತಲೆಯೂನಿಸಿ ಮಲಗಿ ಎಷ್ಟೊ ಹೊತ್ತಾಗಿತ್ತು. ಇನ್ನೂ ಆತನ ನಿದ್ದೆ ಮುಗಿದಿರಲಿಲ್ಲ. ಅಷ್ಟರಲ್ಲಿ 'ಏನು ನಡೆದಿದೆ ವಿರಾಜಮ್ಮ?' ಎಂದು ಒಮ್ಮೆಲೆ ಯಾರೊ ಕೂಗಿದರು.

ನೀಲಾಂಬರ ಗಡಿಬಿಡಿಸಿ ಎದ್ದುಬಿಟ್ಟ. ಮಳೆಗಾಲದ ಕಾರ್ಮುಗಿಲಿನ ಒಂದು ನಸುಕಿನಲ್ಲಿ ರಾಧೆಯೂ ಕೃಷ್ಣನ ಹೆಸರು ಕೇಳಿದಾಗ ವ್ಯಾಕುಲಳಾಗಿ ಹೀಗೆಯೆ ಎದ್ದು ಕುಳಿತಿರಬೇಕು. ಕಣ್ಣುಗಳನ್ನು ತಿಕ್ಕುತ್ತ ನೀಲಾಂಬರ ಹೊರಗೆ ಬಂದ. ಬಾಗಿಲು ಬಳಿ ತುಳಸಿ ನಿಂತು ಕೂಗುತ್ತಿದ್ದಳು. ವಿರಾಜ ಳನ್ನು ಹುಡುಕುವುದಕ್ಕಾಗಿ ನೀಲಾಂಬರ ರಾತ್ರಿಯೆಲ್ಲವನ್ನೂ ಅಲೆದ. ಸನಿಹದ ಎಲ್ಲ ತೋಟಗಳಲ್ಲಿಯೂ ಹುಡುಕಿದ. ಪ್ರತಿಯೊಂದು ಗಿಡದಡಿಯ ವರೆಗೂ ಹೋಗಿ ಆರಸಿದ. ಕೊನೆಗೆ ಅವಳ ಪತ್ತೆಯೆ ಸಿಗದ್ದರಿಂದ ಬೇಸತ್ತು ಮನೆಗೆ ಬಂದು ಹೊಸ್ತಿಲಕ್ಕೆ ತಲೆಯೂನಿಸಿ ಮಲಗಿದ್ದ. ಅವನು

ಮರಳಿ ಬಂದು ಒಂದು ಗಂಟೆಯಾಗಿರಬಹುದು. ಆಗಲೆ ಅವನಿಗೆ ಗಾಢ ನಿದ್ದೆ ಹತ್ತಿತ್ತು.

"ಅಮ್ಮಾವರು ಎಲ್ಲಿದ್ದಾರೆ ಧಣೀ?" ಎಂದು ಕೇಳಿದಳು ತುಳಸಿ.

ಹತಬುದ್ಧಿಯವನಾಗಿ ತುಳಸಿಯ ಕಡೆಗೆ ನೋಡುತ್ತ ನೋಡುತ್ತ "ನೀನಾರನ್ನು ಕೂಗುತ್ತಿರುವೆ?" ಎಂದ ನೀಲಾಂಬರ.

''ಅಮ್ಮನವರನ್ನೆ ಕೂಗುತಿದ್ದೇನೆ ಧಣೀ! ನಿನ್ನೆ ರಾತ್ರಿ ಮೂರು ತಾಸು ರಾತ್ರಿಯಲ್ಲಿ ಆ ಕರಿಗತ್ತಲಲ್ಲಿಯೆ ನನ್ನ ಮನೆಗೆ ಬಂದಿದ್ದರು. 'ಮನೆಯಲ್ಲಿ ಏನು ಇಲ್ಲ, ಸ್ವಲ್ಪ ಅಕ್ಕಿ ಕೊಡು' ಎಂದು ಸ್ವಲ್ಪ ಧಮ್ಮಕ್ಕಿಯನ್ನು ನನ್ನಿಂದ ತಂದರು. ಇನ್ನೂ ಬೆಳಗು ಬೆಳಗಾಗುತ್ತಲೆ ನಿಮ್ಮ ಮನೆ ಬಾಗಿಲು ತೆರೆದುದನ್ನು ಕಂಡು, ನಿನ್ನೆ ತಂದ ಅಕ್ಕಿಯಿಂದ ಕೆಲಸ ಪೂರೈಸಿತೊ ಹೇಗೆ ಎಂದು ಕೇಳೋಣವೆಂದುಕೊಂಡೆ.''

ನೀಲಾಂಬರನಿಗೀಗ ಎಲ್ಲವೂ ಸ್ಪಷ್ಟವಾಗಿ ತಿಳಿಯಿತು. ಆತನಿಗೆ ಮಾತನಾಡಲು ಬಾಯಿ ಬರಲೆ ಇಲ್ಲ.

ತುಳಸಿ ಪುನಃ ''ಇಷ್ಟು ನಸುಕಿನಲ್ಲಿ ಬಾಗಿಲವನ್ನು ಯಾರು ತೆರೆದರು? ಅಮ್ಮನವರು ಘಟ್ಟದೆಡೆ ಹೋಗಿರಬಹುದೆಂದು ತೋರುತ್ತದೆ,'' ಎಂದು ಹೊರಟುಹೋದಳು ನೀಲಾಂಬರ ಪುನಃ ವಿರಾಜಳನ್ನು ಅರಸುತ್ತ ಹೊರಟ. ನದಿ.ದಂಡೆಯಲ್ಲಿಯು ಗುಳೆ, ಪೊದೆಯೆಲ್ಲವನ್ನೂ ಹುಡುಕಿದ. ಎಲ್ಲಿಯೂ ವಿರಾಜಳ ಸುಳಿವೆ ಇಲ್ಲ. ಊಟ ಉಡಿಗೆಯ ಮಾತು ದೂರ ಇರಲಿ, ನೀಲಾಂಬರ ಬೆಳಗಿನಿಂದ ಈವರೆಗೆ ಸ್ನಾನವನ್ನೂ ಮಾಡಿರಲಿಲ್ಲ. ಹೀಗೆ ಅಲೆದಲೆದು ದಣಿದು ನೀಲಾಂಬರನು ಒಂದೆಡೆಯಲ್ಲಿ ಸ್ವಲ್ಪ ತಂಗಿದ. ಆಗ ಮನದಲ್ಲಿಯೆ "ಇದೆಂಥ ಹುಚ್ಚು ಕೆಲಸ ನಡೆಸಿದ್ದೇನೆ ನಾನು? ಬೆಳಗಿನಿಂದ ಈವರೆಗೆ ನಾನು ಬಾಯಿಯಲ್ಲಿ ಏನೂ ಹಾಕಿಕೊಂಡಿಲ್ಲ. ಆ ಬಗ್ಗೆ ಅವಳಿಗೆ ಲಕ್ಷ್ಯವಿರಲಿಕ್ಕಿಲ್ಲವೆ? ಇಂಥ ಸ್ಥಿತಿಯಲ್ಲಿ, ಯಾವ ಕಾರಣದಿಂದಲೆ ಆಗಲಿ, ಅವಳು ಒಂದು ಕ್ಷಣವಾದರೂ ಸುಮ್ಮನೆ ಇರಬಹುದೆ? ವೃಥಾ ಬೆಳಗಿನಿಂದ ಅವಳನ್ನು ಹುಡುಕುವುದರಲ್ಲಿಯೆ ಅಲೆಯುತಿದ್ದೇನಲ್ಲ!'' ಎಂದುಕೊಂಡ.

ನೀಲಾಂಬರನ ಮನದಲ್ಲಿ ಈ ವಿಚಾರ ಮೂಡಿದುದೆ ತಡ, ವಿರಾಜ ಮನೆಗೆ ಮರಳಿ ಬಂದಿದ್ದಾಳೆಂದು ಅವನಿಗೆ ಖಚಿತವಾಯಿತು. ಮನೆಯಲ್ಲಿ ವಿರಾಜ ಮೌನಳಾಗಿದ್ದಾಳೆಂದೂ, ಕುತೂಹಲದಿಂದ ತನ್ನ ಆಗಮನವನ್ನೆ ನಿರೀಕ್ಷಿಸುತ್ತಿದ್ದಾಳೆಂದೂ ಅವನ ಮಾನಸ ನೇತ್ರಗಳಿಗೆ ಸ್ಪಷ್ಟವಾಗಿ ತೋರತೊಡಗಿತು. ಅದರಿಂದ ಅವನ ದುಶ್ಚಿಂತೆಗಳೆಲ್ಲವೂ ಕರಗತೊಡಗಿದವು. ಅವನು ತಟ್ಟನೆ ಮನೆಯ ಹಾದಿಯನ್ನೆ ಹಿಡಿದ. ಹಾದಿಯಲ್ಲಿಯ ಹೊಲಗದ್ದೆ, ಹಳ್ಳ, ಮಡುವುಗಳೆಲ್ಲವನ್ನೂ ಒಂದೇಟಿಗೆ ಹಾರಿ ಗಾಳಿವೇಗದಲ್ಲಿ ಮನೆಗೆ ಬಂದು ತಲ್ಪಿದ.

ಆಗ ಹಗಲು ಬಹುಶಃ ಮುಗಿಯಬಂದಿತ್ತು. ಪಶ್ಚಿಮಾಕಾಶದಲ್ಲಿ ಸೂರ್ಯನಾರಾಯಣನು ಕ್ಷಣಹೊತ್ತು ಮೇಘಮಾಲಿಕೆಯಿಂದ ತನ್ನ ರಕ್ತ ಮುಖವನ್ನು ಆದೆ ಹೊರಗೆ ಚಾಚಿದ್ದ. ಅದೆ ಹೊತ್ತಿಗೆ ನೀಲಾಂಬರ ಮನೆಯನ್ನು ಸೇರಿದ. ಮೊದಲು ನೇರವಾಗಿ ಅವನು ಅಡುಗೆ ಮನೆಯನ್ನೆ ಹೊಕ್ಕ. ಆಗಲೂ ಊಟದ ಮಣೆ ಹಾಗೆಯೆ ಇತ್ತು. ಮುನ್ನಾರಾತ್ರಿ ವಿರಾಜ ಮಾಡಿದ ಅಡುಗೆ ಒಣಗಿ ಹಾಗೆಯೆ ಬಿದ್ದಿತ್ತು. ಅಡುಗೆ ಮನೆಯಲ್ಲಿ ಇಲಿ—ಹಲ್ಲಿಗಳು ಅತ್ತಿತ್ತ ಸುಳಿಯುತ್ತಿದ್ದವು. ಊಟದ ತಟ್ಟೆಯಲ್ಲಿದ್ದ ಬಹಳ ಭಾಗ ಅನ್ನವು ಇಲಿಗಳಿಗಾಹಾರವಾಗಿತ್ತು. ನೀಲಾಂಬರ ಹಿಂದಿನ ರಾತ್ರಿ ಒಳಗೆ ಕಾಲಿಟ್ಟಿರಲಿಲ್ಲ. ಈಗ ಹಗಲಿನಲ್ಲಿ ನೋಡಿದಾಗ ಆ ಅನ್ನ ತುಳಸಿಯು ಕೊಟ್ಟ ಧಮ್ಮಕ್ಕಿಯ ಅನ್ನವೆಂದು ಅವನಿಗೆ ಖಂಡಿತವಾಯಿತು. ವಿರಾಜ ಜ್ವರದಲ್ಲಿ ನಡುಗುತ್ತ ಕಾರಿರುಳಲ್ಲಿಯೆ ಹಸಿದ ಗಂಡನಿಗಾಗಿ ಈ ಅಕ್ಕಿಯನ್ನು ಬಿಕ್ಕೆ ಬೇಡಿ ತಂದಿದ್ದಳು. ಈ ಅಕ್ಕಿಗಾಗಿಯೆ ಅವಳು ಪೆಟ್ಟು ತಿಂದಳು. ಈ ಅಕ್ಕಿಗಾಗಿಯೆ ಕೇಳಬಾರದಂತಹ ಕಟು ನುಡಿ ಕೇಳಿದಳು. ಅದರಿಂದ ಜುಗುಪ್ಸೆಗೊಂಡು, ಮಳೆಗಾಲದ ಆ ಭಯಾನಕ ರಾತ್ರಿಯಲ್ಲಿಯೆ ಗೃಹತ್ಯಾಗ ಮಾಡಿದಳು.

ನೀಲಾಂಬರ ಅಲ್ಲಿಯೆ ಕುಸಿದು ಕುಳಿತ. ಎರಡೂ ಕೈಗಳಿಂದ ಮುಖ ಮುಚ್ಚಿ ಹೆಂಗಳೆಯರಂತೆ ಕೂಗಿಕೂಗಿ ಅಳತೊಡಗಿದ. ವಿರಾಜ ಈವರೆಗೂ ಮರಳಿ ಬಂದಿರಲಿಲ್ಲ. ಆದುದರಿಂದ ಇನ್ನು ಅವಳು ಮರಳಿ ಬರುವ ಆಸೆಯೆ ಉಳಿಯಲಿಲ್ಲ. ಹೆಂಡತಿಯ ಸ್ವಭಾವವನ್ನು ಅವನು ಚೆನ್ನಾಗಿ ಬಲ್ಲನು.

ಅವಳೆಷ್ಟು ಅಭಿಮಾನಿಯೆಂಬುದು ಅವನಿಗೆ ಗೊತ್ತಿಲ್ಲದಿಲ್ಲ. ಪ್ರಾಣಹೋದರೂ ಅನ್ಯರ ಆಶ್ರಯ ಪಡೆದು ತನ್ನ ಅವಮಾನಕ್ಕೆ ಎಡೆಗೊಡಲಾರಳೆಂದೂ ಬಲ್ಲ. ಈ ಕಾರಣದಿಂದಲೆ ಅವನ ಅಂತಃಕರಣದಲ್ಲಿ ಅಷ್ಟು ತೀವ್ರವಾದ ಅಂತಹ ಭೀಷಣವಾದ ಹಾಹಾಕಾರ ಉಂಟಾಯಿತು. ಬೋರಲು ಬಿದ್ದು ಕೈಮುಂದೆ ಚಾಚಿ "ನಾನು ಸಹಿಸಲಾರೆ ವಿರಾಜ, ಬೇಗ ಮರಳಿ ಬಾ!" ಎಂದು ಒಂದೇ ಸವನೆ ಕೂಗುತ್ತ ಅಳತೊಡಗಿದ.

ಸಂಜೆಯಾಯಿತು. ಆದರೂ ಮನೆಯಲ್ಲಿ ದೀಪ ಹಚ್ಚುವವರಾರೂ ಬರಲಿಲ್ಲಿ. ರಾತ್ರಿಯಾದರೂ ಅಡುಗೆ ಮಾಡಲು ಯಾರೂ ಬರಲಿಲ್ಲ. ಅತ್ತು ಅತ್ತು ನೀಲಾಂಬರನ ಕಣ್ಣು ಮುಖ ಉಬ್ಬಿಕೊಂಡವು. ಆದರೆ ಯಾರೂ ಅವನ ಕಂಬನಿಗಳನ್ನು ಒರೆಸಲಿಲ್ಲ. ಈಗೆರಡು ದಿನಗಳಿಂದ ಉಪವಾಸವೆ ಇದ್ದ; ಒಂದಗಳು ಅನ್ನವೂ ಅವನ ಹೊಟ್ಟೆಯೊಳಗೆ ಹೋಗಿರಲಿಲ್ಲ. ಆದರೂ ಅವನನ್ನು ಊಟಕ್ಕೆ ಯಾರೂ ಕರೆಯಲಿಲ್ಲ. ಹೊರಗೆ ಮಳೆ ಧಾರೆಗಟ್ಟಿ ಸುರಿಯತೊಡಗಿತ್ತು. ಮಿಂಚು ಅಂದಿನ ರಾತ್ರಿಯ ಗಾಢ ಅಂಧಕಾರವನ್ನು ಭೇದಿಸುತ್ತ ಅವನ ಮುಚ್ಚಿದ ಕಣ್ಣುಗಳಿಗೂ ಮಬ್ಬು ಉಂಟುಮಾಡುತ್ತ ಆ ರಾತ್ರಿ ತುಂಬ ಭಯಾನಕವಾದುದೆಂಬ ಸೂಚನೆ ಕೊಡತೊಡಗಿತ್ತು. ಆದರೂ ನೀಲಾಂಬರ ಎದ್ದು ಕುಳಿತುಕೊಳ್ಳಲೂ ಇಲ್ಲ; ಕಣ್ಣುಗಳನ್ನೂ ತೆರೆಯಲಿಲ್ಲ. ಹಾಗೆಯೆ ಒರಗಿ ಬಿಕ್ಕಿಬಿಕ್ಕಿ ಅಳುತ್ತಲಿದ್ದ.

ನೀಲಾಂಬರನು ನಿದ್ರೆಯಿಂದೆಚ್ಚತ್ತಾಗ ಬೆಳಕು ಹರಿದಿತ್ತು. ಹೊರಗೆ ಅಸ್ಪಷ್ಟವಾದ ಕೋಲಾಹಲ ಕೇಳಿ ಒಳಗಿನಿಂದ ಓಡುತ್ತ ಹೊರಬಂದ. ಬಾಗಿಲು ಬಳಿ ಒಂದು ಬಂಡಿ ನಿಂತಿತ್ತು. ವ್ಯಗ್ರವಾಗಿ ಸನಿಹಕ್ಕೆ ಬಂದು ನಿಂತಕೂಡಲೆ ಮೋಹಿನಿ ಸೆರೆಗೆಳೆದುಕೊಳ್ಳುತ್ತ ಗಾಡಿಯಿಂದಿಳಿದಳು. ಪೀತಾಂಬರನು ಅಣ್ಣನನ್ನು ಸೊಟ್ಟಗಣ್ಣಿನಿಂದೊಮ್ಮೆ ನೋಡಿ ತನ್ನ ಮನೆಗೆ ತೆರಳಿದ. ಮೋಹಿನಿ ಭಾವನ ಬಳಿ ಬಂದು ಸಾಷ್ಟಾಂಗ ಸಮಸ್ಕಾರ ಮಾಡಿದಳು. ನೀಲಾಂಬರ ಅಸ್ಪಷ್ಟ ದನಿಯಲ್ಲಿ ಆಶೀರ್ವಾದಮಾಡಬೇಕೆಂದು ಬಗೆದ. ಆದರೆ ಅವನ ಬಾಯಿಯಿಂದ ಮಾತೆ ಹೊರಬೀಳಲಿಲ್ಲ. ಒಮ್ಮೆಲೆ ಭೋರೆಂದು ಅಳತೊಡಗಿದ. ಚಕಿತಳಾಗಿ ಮೋಹಿನಿ ಮೊಗವೆತ್ತುವಷ್ಟರಲ್ಲಿಯೆ ಅವನು ಎಲ್ಲಿಯೊ ಅದೃಶ್ಯನಾದ.

ಜೀವನದಲ್ಲಿ ಇಂದು ಮೊತ್ತಮೊದಲು ಮೋಹಿನಿ ಗಂಡನನ್ನು ಎದುರಿಸುವ ಹೊಸ ಸಾಹಸಕ್ಕೆ ಅಣಿಯಾದಳು. ಅಶ್ರುಭಾರದಿಂದ ತುಂಬಿದ ರಕ್ತ ನೇತ್ರಗಳನ್ನು ಮೇಲಕ್ಕೆತ್ತಿ–"ನಿಮ್ಮ ಹೃದಯ ಕಲ್ಲಿನದೆ ಹೇಗೆ? ದುಃಖಬವಣೆಗಳಿಂದ ಬೇಸತ್ತು ಅಕ್ಕ ಆತ್ಮಹತ್ಯೆ ಮಾಡಿಕೊಂಡಳು. ಆದರೂ ನಾವು ಇನ್ನೂ ಪರಕೀಯರಂತೆ ದೂರವಿರೋಣವೆ? ನಿಮ್ಮ ಅಂತಃಕರಣಕ್ಕೆ ಅದು ಸರಿಯೆಂದೆನಿಸಿದರೆ ನೀವು ಹಾಗೆ ಮಾಡಬಹುದು. ಆದರೆ ನಾನಿಂದಿನಿಂದಲೆ ಆ ಮನೆಯ ಎಲ್ಲ ಭಾರವನ್ನೂ ಹೊರುವೆ" ಎಂದಳು.

ಪೀತಾಂಬರನು ವಿಸ್ಮಿತನಾಗಿ–"ಇದೆಂಥ ಮಾತೆ?" ಎಂದ.

ಮೋಹಿನಿ ತುಳಸಿಯಿಂದ ಕೇಳಿ ತಿಳಿದ, ಅಲ್ಲದೆ ತಾನು ಊಹಿಸಿದ ಅಕ್ಕನ ಎಲ್ಲ ವೃತ್ತಾಂತವನ್ನು ಗಂಡನಿಗೆ ಅಳುತ್ತಳುತ್ತಲೆ ತಿಳುಹಿದಳು.

ಪೀತಾಂಬರ ಎಂಥ ಮಾತನ್ನೂ ಸುಲಭದಲ್ಲಿ ನಂಬುವ ವ್ಯಕ್ತಿಯಲ್ಲ. ಅವನೆಂದ—"ಆದರೆ ಅವಳ ಹೆಣವಂತೂ ಇನ್ನು ಎಲ್ಲಿಯೂ ತೇಲಿ ಬಂದಿಲ್ಲವಲ್ಲ!"

ಕಣ್ಣುಗಳನ್ನೊರಸಿಕೊಂಡು ಮೋಹಿನಿಯೆಂದಳು—"ಹೆಣ ತೇಲಿ ಬರಬೇಕೆಂಬುದೇನೂ ಇಲ್ಲ. ನದಿಯಲ್ಲಿ ಹಾರಿದಾಗ ಬಹುಶಃ ನೀರಿನ ಪ್ರವಾಹದಲ್ಲಿ ಹರಿದುಹೋಗಿರಲೂಬಹುದು. ಅಥವಾ ಸತಿ ಲಕ್ಷ್ಮಿಯ ಶರೀರವಿದ್ದುದರಿಂದ ಗಂಗಾಮಾತೆಯು ಅವಳನ್ನು ತನ್ನ ಮಡಿಲಲ್ಲಿಟ್ಟುಕೊಂಡಿರಲೂಬಹದು. ಅದಲ್ಲದೆ ಅವಳ ಸಮಾಚಾರ ತಿಳಿದುಕೊಳ್ಳಲು ಯಾರು ಪ್ರಯತ್ನಿಸಿದ್ದಾರೆ? ಹುಡುಕಲು ಯಾರು ಹೋಗಿದ್ದಾರೆ?"

ಹೆಂಡತಿಯ ಮೊದಲಿನ ಮಾತುಗಳಲ್ಲಿ ಪೀತಾಂಬರನಿಗೆ ನಂಬಿಕೆಯುಂಟಾಗದಿದ್ದರೂ ಕೊನೆಯ ಮಾತಿನಮೇಲೆ ನಂಬಿಕೆಯುಂಟಾಯಿತು. "ಒಳ್ಳೆಯದು, ನಾನು ಅತ್ತಿಗೆಯನ್ನು ಹುಡುಕುವೆ" ಎಂದು ಸ್ವಲ್ಪಹೊತ್ತು ವಿಚಾರಿಸಿ–"ಅತ್ತಿಗೆ ತನ್ನ ಮಾವನ ಮನೆಗೆ ಹೋಗಿರಲಿಕ್ಕಿಲ್ಲವೆ?" ಎಂದ.

ತಲೆಯಲ್ಲಾಡಿಸುತ್ತ ಮೋಹಿನಿಯೆಂದಳು: "ಅವಳೆಂದಿಗೂ ಅಲ್ಲಿ ಹೋಗಲಾರಳು. ಅಕ್ಕ ತುಂಬ ಅಭಿಮಾನಿನಿ. ಆದುದರಿಂದ ಅವಳೆಲ್ಲಿಗೂ ಹೋಗಲಾರಳು. ಈ ನದಿಯಲ್ಲಿಯೆ ಅವಳು ಮುಳುಗಿದ್ದಾಳೆ."

"ಆಗಲಿ, ನದಿಯಲ್ಲಿಯೆ ಅವಳನ್ನು ಹುಡುಕುವೆ" ಎಂದು ಒಣ ಮೊಗದಿಂದ ಪೀತಾಂಬರ ಹೊರಗೆ ನಡೆದ. ಅತ್ತಿಗೆಯ ಬಗ್ಗೆ ಇಂದು ಆತನಿಗೆ ದುಃಖವುಂಟಾಯಿತು. ವಿರಾಜಳನ್ನು ಹುಡುಕುವುದಕ್ಕಾಗಿ ಅವನು ಕೆಲ ಜನರನ್ನು ನೇಮಿಸಿದ. ಒಬ್ಬನನ್ನು ವಿರಾಜಳ ಸೋದರಮಾವನ ಮನೆಗೂ ಕಳುಹಿದ. ಈ ರೀತಿ ಪೀತಾಂಬರ ತನ್ನ ಜೀವನದಲ್ಲಿ ಮೊದಲ ಬಾರಿ ಪುಣ್ಯ ಕಾರ್ಯ ಮಾಡಿದ. ಹೆಂಡತಿಯನ್ನು ಕರೆದು, "ಯದುನನ್ನು ಕರೆದು ಅಂಗಳ ದಲ್ಲಿಯ ಅಡ್ಡಕಟ್ಟೆಯನ್ನು ತೆಗೆಯಿಸಿಬಿಡು, ಮತ್ತು ನಿನಗೇನು ಬೇಕೊ ಹಾಗೆ ಮಾಡು" ಎಂದ. ಬಳಿಕ ಬೆಲ್ಲ, ನೀರು ಕುಡಿದು ಬಗಲಲ್ಲಿ ಕಾಗದ ಪತ್ರ ಸಿಕ್ಕಿಸಿ ತನ್ನ ಕೆಲಸಕ್ಕೆ ಹೋದ. ಈಗ ನಾಲ್ಕಾರು ದಿನಗಳಿಂದ ತನ್ನ ಕಡತ ಬಿಚ್ಚಲು ಆಗದ್ದರಿಂದ ಅವನಿಗೆ ತುಂಬ ಹಾನಿಯಾಗಿತ್ತು."

ಮನೆಗೆಲಸ ಮಾಡುತ್ತಿರುವಾಗ ಮೋಹಿನಿ ಯೋಚಿಸುತ್ತಿದ್ದಳು. "ಅಣ್ಣನ ಮುಖವನ್ನು ನೋಡುವ ಧೈರ್ಯ ತಮಗಿಲ್ಲವೆಂದು ಇವರು ಹೇಳು ತಿದ್ದಾರೆ. ಏಕೆ, ಅವರ ಮುಖಕ್ಕೆ ಏನಾಗಿದೆ?"

ನೀಲಾಂಬರ ದೇವೀಮಂದಿರದಲ್ಲಿ ನಡುವೆ ಕಣ್ಣು ಮುಚ್ಚಿಕೊಂಡು ಸ್ತಬ್ಧನಾಗಿ ಕುಳಿತಿದ್ದ. ಎದುರು ಗೋಡೆಯಮೇಲೆ ರಾಧಾಕೃಷ್ಣರ ಚಿತ್ರ ಪಟ ತೂಗುಬಿದ್ದಿತ್ತು. ಆ ಚಿತ್ರಪಟ ಸಜೀವವಾಗಿತ್ತು! ರೈಲುಬಂಡಿ ಇಲ್ಲದಿರುವ ಕಾಲದಲ್ಲಿ ನೀಲಾಂಬರನ ತಂದೆಯವರು ಕಾಲ್ನಡಿಗೆಯಿಂದ ವೃಂದಾವನಕ್ಕೆ ಹೋಗಿ ಅಲ್ಲಿಂದ ಈ ಚಿತ್ರಪಟ ತಂದಿದ್ದರು. ಅವರು ಕಟ್ಟಾವೈಷ್ಣವರು. ಎಲ್ಲರೊಡನೆ ಮಾತಾಡುವಂತೆ ಅವರು ಆ ಚಿತ್ರಪಟ ದೊಂದಿಗೆ ಮಾತಾಡುತ್ತಿದ್ದರು. ಈ ಬಗ್ಗೆ ನೀಲಾಂಬರ ತಾಯಿಯಿಂದ ಅನೇಕ ವಿಷಯ ಕೇಳಿ ತಿಳಿದಿದ್ದ. ಅವರಿಗೆ ಈ ಮೂರ್ತಿಗಳು ಜಡವಸ್ತು ಗಳಾಗಿರಲಿಲ್ಲ. ಆ ಮೂರ್ತಿಗಳ ಮನಕ್ಕೆ ತಟ್ಟುವಂತೆ ಕೂಗಿದರೆ ರಾಧಾ ಕೃಷ್ಣರು ಬಂದು ಅವರೊಂದಿಗೆ ಮಾತಾಡುತಿದ್ದರೆಂದು ಅವರಿಗೆ ನಂಬಿಗೆ ಇತ್ತು. ಈ ಕಾರಣದಿಂದ ನೀಲಾಂಬರ ಈ ಚಿತ್ರಪಟದೊಂದಿಗೆ ಮಾತಾ ಡುವ ಇಚ್ಛೆಯಿಂದ ಇದಕ್ಕೂ ಮೊದಲು ಕದ್ದುಮುಚ್ಚಿ ಅನೇಕ ಸಲ ಬಹಳ ಪ್ರಯತ್ನಮಾಡಿದ್ದ. ಅಲ್ಲದೆ ಎಷ್ಟೊ ಸಲ ಅಸಾಧ್ಯ ಸಾಧನೆಗಳನ್ನೂ ಮಾಡಿದ್ದ. ಆದರೆ ಅವನಿಗೆ ಯಶಸ್ಸುಂಟಾಗಲಿಲ್ಲ. ಆದರೂ ಅವನು

ನಿರಾಶನಾಗಲಿಲ್ಲ. ಈ ಅಪಯಶಸ್ಸಿಗೆ ತನ್ನ ಅಸಮರ್ಥತೆಯೆ ಕಾರಣ ಎಂದು ಅವನಿಗೆನಿಸತೊಡಗಿತು.. ಆದರೆ ತನ್ನೊಂದಿಗೆ ಮಾತಾಡುವ ಶಕ್ತಿ ಆ ಚಿತ್ರಪಟಕ್ಕಿಲ್ಲವೆಂಬ ಸಂಶಯ ಅವನ ಹೃದಯದಲ್ಲಿ ಒಮ್ಮೆಯೂ ಏಳಲಿಲ್ಲ.

ನೀಲಾಂಬರ ಓದು-ಬರಹ ಅರಿತವನಲ್ಲ. ಹೇಗೊ ಅಲ್ಪ ಅಕ್ಷರಜ್ಞಾನ ಮಾಡಿಕೊಂಡಿದ್ದ. ತಾಯನುಡಿಯಲ್ಲಿ ಅಶುದ್ಧವಾಗಿ ಮಹಾಭಾರತ ಓದಲು ಬಲ್ಲ. ಅಲ್ಲದೆ ಹರಕು ಮುರುಕು ಭಾಷೆಯಲ್ಲಿ ಕಾಗದ ಪತ್ರವನ್ನೂ ಬರೆಯ ಬಲ್ಲ. ಶಾಸ್ತ್ರ ಅಥವಾ ಧರ್ಮ ಸಂಬಂಧವಾದ ಯಾವ ಪುಸ್ತಕವನ್ನೂ ಅವನು ಓದಿರಲಿಲ್ಲ. ಆದುದರಿಂದ ಭಗವಂತನ ವಿಷಯವಾಗಿ ಅವನು ಸ್ವತಂತ್ರ ವಿಚಾರವಿಟ್ಟುಕೊಂಡಿದ್ದ. ಅಲ್ಲದೆ ತನ್ನ ವಿಚಾರದಲ್ಲಿ ದೃಢ ನಂಬಿಕೆಯೂ ಇತ್ತು. ಪರರ ಯುಕ್ತಿಯನ್ನಾಗಲಿ, ತರ್ಕ ಪಾಂಡಿತ್ಯವನ್ನಾಗಲಿ ಅವನು ಲಕ್ಷಿಸುತ್ತಿರಲೆ ಇಲ್ಲ. ಈ ಬಗ್ಗೆ ಚಿಕ್ಕಂದಿನಲ್ಲಿ ಕೆಲಸಲ ಪೀತಾಂಬರನೊಂದಿಗೂ ಹಲವು ಸಲ ವಿರಾಜಳೊಂದಿಗೂ, ವಾದ ವಿವಾದ ಹೊಡಿ ಬಡೆದಾಟವಾಡಿದುದೂ ಉಂಟು.

ವಿರಾಜ ನೀಲಾಂಬರನಿಗಿಂತ ನಾಲ್ಕು ವರ್ಷ ಮಾತ್ರ ಚಿಕ್ಕವಳು. ಆದುದರಿಂದ ಅವಳು ಅವನಿಗೆ ಅಷ್ಟು ಅಂಜುತಿರಲಿಲ್ಲ. ಒಂದುಸಲ ನೀಲಾಂಬರನು ವಿರಾಜಳಿಗೆ ಏಟುಕೊಟ್ಟಾಗ ವಿರಾಜ ಅವನನ್ನು ಬಲವಾಗಿ ಕಚ್ಚಿದಳು. ಆ ಗಾಯದಿಂದ ರಕ್ತ ಬರತೊಡಗಿತು. ಆಗ ನೀಲಾಂಬರನ ತಾಯಿಯೆ ಅವರ ಜಗಳ ಬಿಡಿಸಿದಳು. ಆ ಬಳಿಕ — " ಛೀ ಛೀ-ಇದೇನು ವಿರಾಜ. ಈತ ನಿನ್ನ ಪತಿರಾಯ. ಹೀಗೆ ಅವನನ್ನು ಕಚ್ಚಕೂಡದು. ಇದು ನಿನಗೆ ತರವಲ್ಲ"ವೆಂದು ಬಯ್ದಳು.

ಆಗ ವಿರಾಜ ಅಳುತ್ತಲೆ — " ಮೊದಲು ಅವರೆ ನನ್ನನ್ನು ಹೊಡೆದರು " ಎಂದು ದೂರಿದಳು. ಆಗ ತಾಯಿ ನೀಲಾಂಬರನನ್ನು ಕೂಗಿ ಕರೆದು — " ನೀನು ಇನ್ನೆಂದಿಗೂ ವಿರಾಜಳ ದೇಹಕ್ಕೆ ಕೈಹಚ್ಚುವುದಿಲ್ಲವೆಂದು ಆಣೆ ಮಾಡು " ಎಂದು ಆಜ್ಞಾಪಿಸಿದಳು. ಆಗ ವಿರಾಜ ಹದಿನಾಲ್ಕು ವರುಷದವಳಿರಬಹುದು. ಅವಳಿಗೀಗ ಮೂವತ್ತು ವರುಷ. ಅಂದಿನಿಂದ ಈವರೆಗೂ ಮಾತೃಭಕ್ತನಾದ ನೀಲಾಂಬರನು ತಾಯಿಯ ಆಣತಿಯನ್ನು ಉಲ್ಲಂಘಿಸಿಲ್ಲ.

ಇವೊತ್ತು ಕೈಕಾಲು ಮುದುಡಿಕೊಂಡು ಶಾಂತಭಾವದಿಂದ ನೀಲಾಂಬರ ಕುಳಿತಾಗ ಒಮ್ಮೆಲೆ ಹಿಂದಿನ ಮರೆತ ಸಂಗತಿಗಳೆಲ್ಲವೂ ಅವನ ಮಾನಸ ಪಟಲದಲ್ಲಿ ನುಸುಳಿದವು. ಮೊದಲು ಅತ ತನ್ನ ಸ್ವರ್ಗವಾಸಿಯಾದ ತಾಯಿಯ ಕ್ಷಮೆಬೇಡಿದ. ಬಳಿಕ ಗಡಗಡ ನಡಗುತ್ತ — “ಹೇ ಅಂತರ್ಯಾಮಿಯೆ, ನೀನೆಲ್ಲವೂ ಕಂಣಾರೆ ನೋಡುತ್ತಿರುವೆ. ವಿರಾಜ ಯಾವ ಅಪರಾಧವನ್ನೂ ಮಾಡಿಲ್ಲ. ಆದುದರಿಂದ ಅವಳ ಎಲ್ಲ ಅಪರಾಧಗಳ ಭಾರವನ್ನೂ ನನ್ನ ತಲೆಯ ಮೇಲೆ ಹೇರು. ಅವಳಿಗೆ ಸ್ವರ್ಗದಲ್ಲಿ ಆಶ್ರಯವನ್ನು ಕೊಡು. ಈ ಲೋಕದಲ್ಲಿ ಅವಳು ಬಹಳ ದುಃಖ ಸಹಿಸಿದಳು. ಅಲ್ಲಿಯೂ ಅವಳನ್ನು ದುಃಖಕ್ಕೀಡು ಮಾಡಬೇಡ” ಎಂದು ಬೇಡಿಕೊಳ್ಳತೊಡಗಿದ.

ನೀಲಾಂಬರನ ಮುಚ್ಚಿದ ಕಂಣುಗಳಿಂದ ಕಂಬನಿ ಇಳಿಯುತ್ತಿತ್ತು. ಒಮ್ಮೆಲೆ ಆತನ ಧ್ಯಾನ ಭಂಗವಾಯಿತು.

“ಭಾವಯ್ಯ!”

ನೀಲಾಂಬರನು ಕೌತುಕಗೊಂಡು ಕಂಣು ತೆರೆದೊಡನೆಯೆ ಮೋಹಿನಿ ಬಳಿಯಲ್ಲಿಯೆ ಕುಳಿತುದನ್ನು ಕಂಡ. ಅವಳ ಮುಖದ ಮೇಲಿನ ಸೆರಗು ಅಲ್ಪ ತೆರೆದಿತ್ತು. ಸ್ವಾಭಾವಿಕ ದನಿಯಲ್ಲಿ ಅವಳು “ಭಾವಯ್ಯಾ! ನಾನು ನಿಮ್ಮ ಮಗಳ ಸಮಾನಳು. ಒಳಗೆ ಬನ್ನಿ; ಸ್ನಾನ ಮಾಡಿ ಸ್ವಲ್ಪ ಊಟ ಮಾಡಿ. ನೀವು ಉಪವಾಸದಿಂದಿರಲು ನಾನೆಂದಿಗೂ ಒಪ್ಪಲಾರೆ.”

ನೀಲಾಂಬರ ಮೊದಲು ಅವಾಕ್ಕಾಗಿ ಅವಳನ್ನೆ ದಿಟ್ಟಿಸ ತೊಡಗಿದ. ಎಷ್ಟೊ ಯುಗಗಳಿಂದ ತನ್ನನ್ನು ಊಟಕ್ಕೆ ಯಾರೂ ಕರೆದಿಲ್ಲವೆಂದು ಅವನಿಗೆನಿಸಿತ್ತು. ಅಷ್ಟರಲ್ಲಿ ಮೋಹಿನಿ ಪುನಃ — “ಭಾವಯ್ಯಾ, ಅಡುಗೆ ಸಿದ್ಧವಾಗಿದೆ” ಎಂದಳು.

ಈಗ ನೀಲಾಂಬರನಿಗೆ ಪೂರ್ಣ ಪ್ರಜ್ಞೆಯುಂಟಾಯಿತು. ಆಗ ಅವನ ದೇಹ ಒಮ್ಮೆ ನಡುಗಿತು. ಅವನು ಬೋರಲು ಬಿದ್ದು ಅಳುತ್ತಲೆ — “ಇನ್ನೆಲ್ಲಿಯ ಊಟವಮ್ಮಾ!” ಎಂದ.

ಹಳ್ಳಿಯಲ್ಲಿ ಎಲ್ಲೆಡೆಗೂ ಸುದ್ದಿ ಹಬ್ಬಿತು. ವಿರಾಜ ಮುಳುಗಿ ಆತ್ಮಹತ್ಯೆ ಮಾಡಿಕೊಂಡಳೆಂದು ಎಲ್ಲರೂ ನಂಬಿದರು. ಧೂರ್ತ ಪೀತಾಂಬರನೊಬ್ಬ ಮಾತ್ರ ಇದನ್ನು ನಂಬಲೆ ಇಲ್ಲ. ಅವನು ಮನದಲ್ಲಿಯೆ ಯೋಚಿಸ

ತೊಡಗಿದ. "ಈ ನದಿ ಬಹಳಷ್ಟು ಅಂಕುಡೊಂಕಾಗಿ ಹರಿಯುತ್ತಿದೆ— ಅಲ್ಲದೆ ನದಿಯಲ್ಲಿ ಹೆಜ್ಜೆ ಹೆಜ್ಜೆಗೆ ಗಿಡಗಂಟೆ, ಹುಲ್ಲು–ಪೊದೆ ಹುಲುಸಾಗಿ ಬೆಳೆದು ನಿಂತಿವೆ. ಆದುದರಿಂದ ಹೆಣ ಹರಿದು ದೂರ ಹೋಗಲು ಸಾಧ್ಯವಿಲ್ಲ. ಸನಿಹದಲ್ಲಿ ಎಲ್ಲಿಯಾದರೂ ಸಿಕ್ಕಿ ಬೀಳದೆ ಬೇರೆ ಹಾದಿಯೆ ಇಲ್ಲ." ಅವನು ಚಿಕ್ಕ ದೋಣಿಯಲ್ಲಿ ಕುಳಿತು ನದಿಯ ದಂಡೆ ಗುಂಟ ಬಹು ದೂರದವರೆಗೂ ಹುಡುಕಿದ. ನದಿಯ ಮಧ್ಯ ಭಾಗದಲ್ಲಿಯೂ, ಅತ್ತಿತ್ತ ಹುಲುಸಾಗಿ ಬೆಳೆದ ಗಿಡ ಗಂಟೆಗಳಲ್ಲಿಯೂ ಲಕ್ಷ್ಯಪೂರ್ವಕವಾಗಿ ನಿರುಕಿಸಿದ. ಕೊನೆಗೆ ಆತ ಮನದಲ್ಲಿಯೆ ದೃಢವಾಗಿ ನಿರ್ಧರಿಸಿದ— "ಅತ್ತಿಗೆಗೆ ಮತ್ತೇನಾದರೂ ಆಗಿರಬಹುದು. ಆದರೆ ಈ ನದಿಯಲ್ಲಿ ಆಕೆ ಮುಳುಗಿ ಸತ್ತಿಲ್ಲ."

ಕೆಲ ದಿನಗಳ ಮೊದಲು ಪೀತಾಂಬರನ ಹೃದಯದಲ್ಲಿ ಸಂಶಯವೊಂದು ತಲೆಯೆತ್ತಿತ್ತು. ಮತ್ತೆ ಅದೆ ಸಂದೇಹವೆ ಅವನ ಹೃದಯವನ್ನು ಮಥಿಸ ತೊಡಗಿತು. ಆದರೆ ಪೀತಾಂಬರ ಈ ವಿಷಯವನ್ನು ಯಾರೆದುರೂ ಬಿಚ್ಚಲಿಲ್ಲ. ಒಂದು ಸಲ ಮೋಹಿನಿಯೆದುರು ಈ ವಿಷಯ ಎತ್ತಿದ. ಆಗ ಮೋಹಿನಿ ನಾಲಿಗೆ ಕಚ್ಚಿಕೊಂಡು ಎರಡು ಹೆಜ್ಜೆ ಹಿಂದೆ ಸರಿದಳು. ಅಪನಂಬಿಕೆಯ ದನಿಯಲ್ಲಿ— "ಈ ಮಾತು ಸತ್ಯವೆ ಆದರೆ ದೇವರು ದಿಂಡರೆಲ್ಲವೂ ಸುಳ್ಳೆಂದೆನಬೇಕಾದೀತು" ಎಂದು ಗೋಡೆಯ ಮೇಲಿನ ಅನ್ನಪೂರ್ಣೆಯ ಚಿತ್ರವನ್ನು ನೋಡಿ "ಅಕ್ಕ, ಅವರ ಅವತಾರ. ಈ ವಿಷಯ ಪರರಿಗೆ ಗೊತ್ತಿರಲಿಕ್ಕಿಲ್ಲ. ಆದರೆ ನಾನು ಮಾತ್ರ ಬಲ್ಲೆ" ಎಂದವಳೆ ಹೊರಟು ಹೋದಳು.

ಹೆಂಡತಿಯ ಮಾತಿನಿಂದ ಪೀತಾಂಬರನಿಗೆ ಸಂತಾಪವಾಗಲಿಲ್ಲ. ಆ ದಿನ ಅಕಸ್ಮಾತ್ತಾಗಿ ಅವನಲ್ಲಿ ಬೇರೆ ಭಾವನೆಯುಂಟಾಗಿತ್ತು.

ಮೋಹಿನಿ ಭಾವಯ್ಯನೊಂದಿಗೆ ಮಾತನಾಡಲಾರಂಭಿಸಿದ್ದಳು. ಭಾವಯ್ಯನವರ ತಟ್ಟೆಯಲ್ಲಿ ಅನ್ನ ಬಡಿಸಿ, ಮರೆಯಲ್ಲಿ ಕುಳಿತು, ಅಕ್ಕನ ವಿಷಯವನ್ನು ಒಂದೊಂದಾಗಿ ವಿಚಾರಿಸಿ ಎಲ್ಲವನ್ನೂ ತಿಳಿದುಕೊಂಡಳು. ನಿಜವಾದ ಸಂಗತಿ ಅವಳಿಗೊಬ್ಬಳಿಗೇ ಗೊತ್ತು. ಆ ಸಂಗತಿಗಳಿಂದ ಆದ ಮರ್ಮಾಂತಿಕ ವ್ಯಥೆ, ನೀಲಾಂಬರನ ಅಂತಃಕರಣವನ್ನು ಅದೆಷ್ಟು ಪೀಡಿಸುತಿತ್ತೆಂಬುದು ಈ ಜಗತ್ತಿನಲ್ಲಿ ಮೋಹಿನಿಯ ಹೊರತು ಅನ್ಯರಾರಿಗೂ ತಿಳಿಯಲಿಲ್ಲ.

ನೀಲಾಂಬರನೆಂದ–" ಸಾದಿನಿ, ನಾನು ಮಹಾಪರಾಧ ಮಾಡಿರ ಬಹುದು; ಆದರೆ ಬುದ್ಧಿಪೂರ್ವಕವಾಗಿ ಮಾಡಿದುದಲ್ಲ. ಆದರೆ ಅವಳು ಮಾಯಾಮಮತೆಯನ್ನೆಲ್ಲವನ್ನು ಒದ್ದು ಹೇಗೆ ಹೊರಟು ಹೋದಳೊ ದೇವರೆ ಬಲ್ಲ. ಬಹುಶಃ ಅವಳಿಗೆ ಇಲ್ಲಿಯ ದುಃಖಬವಣೆ ಸಹಿಸಲಾಗಿರಲಿಕ್ಕಿಲ್ಲ."

ಮೋಹಿನಿ ಬಹುಶಃ ಎಲ್ಲವನ್ನೂ ಬಲ್ಲಳು. ಅಕ್ಕ ಒಂದಿನ ತಾನು ಹೊರಟು ಹೋಗುವುದಾಗಿಯೂ, ಅಲ್ಲದೆ ತನ್ನ ವಿಷಯದಲ್ಲಿ ಗಂಡನ ಅಭಿಪ್ರಾಯ ಹೇಗಿದೆಯೆಂಬುದನ್ನು ತನಗೆ ಹೇಳುತಿದ್ದಳೆಂಬುದಾಗಿಯೂ — ಎಲ್ಲವನ್ನು ನೀಲಾಂಬರನಿಗೆ ಹೇಳಲು ಬಾಯಿ ತೆರೆದಿದ್ದಳು. ಆದರೆ ಅವಳಿಗೆ ಹೇಳುವುದಾಗಲಿಲ್ಲ.

" ನೀನು ಅಣ್ಣನೊಂದಿಗೆ ಮಾತನಾಡುವೆಯಾ ?" ಎಂದು ಪೀತಾಂಬರ ಹೆಂಡತಿಯುನ್ನು ವಿಚಾರಿಸಿದ.

ಮೋಹಿನಿ ಉತ್ತರವಿತ್ತಳು : " ಹೌದು, ಅವರು ನನ್ನ ತಂದೆಯ ಸಮಾನರು. ಆದುದರಿಂದಲೆ ಅವರೊಂದಿಗೆ ಮಾತನಾಡುವೆ."

" ಜನ ಕೇಳಿದರೆ ನಿಂದೆಯಾಡುವರು" ಎಂದ ಪೀತಾಂಬರ. ಮೋಹಿನಿಯು — " ಜನರಿಗೆ ಪರ ನಿಂದೆಯಾಡುವುದಲ್ಲದೆ ಬೇರೆ ಕೆಲಸವೆಲ್ಲಿದೆ ? ಎಲ್ಲರೂ ತಮ್ಮ ತಮ್ಮ ಕೆಲಸಗಳನ್ನು ಮಾಡುವವರೆ. ನಾನೂ ನನ್ನ ಕೆಲಸ ಮಾಡುವೆ. ಈ ಬಾರಿ ಭಾವಯ್ಯನವರನ್ನು ಹೇಗಾದರೂ ಉಳಿಸಿಕೊಳ್ಳಬಲ್ಲೆನಾದರೆ, ಜನನಿಂದೆಗೂ ಸ್ವಾಗತವೀಯುವೆ," ಎಂದು ತನ್ನ ಕೆಲಸದಲ್ಲಿ ತೊಡಗಿಕೊಂಡಳು.

## ೧೩

ಹದಿನೈದು ತಿಂಗಳುಗಳು ಉರುಳಿದವು. ಆಶ್ವೀಜ ನವರಾತ್ರಿ ಸಮಾಪಿಸಿತು. ದುರ್ಗಾಪೂಜೆಯ ಆನಂದ ಉತ್ಸಾಹಗಳ ಆಭಾಸವು ನೆಲ-ಜಲ, ವಾಯು-ಆಕಾಶ ಎಲ್ಲವನ್ನೂ ವ್ಯಾಪಿಸಿತ್ತು. ಅಪರಾಹ್ಣದಲ್ಲಿ ನೀಲಾಂಬರ ಕಂಬಳಿಯಮೇಲೆ ಸುಮ್ಮನೆ ಕುಳಿತಿದ್ದ. ಆತನ ಶರೀರ ಬಹಳ ಬಡವಾಗಿತ್ತು. ಮುಖವರ್ಣ ಹಳದಿ ಬಣ್ಣಕ್ಕೆ ತಿರುಗಿತ್ತು. ತಲೆಗೂದಲು

ಗಳು ಉದ್ದ ಬೆಳೆದು ಚಿಕ್ಕ ಜಟೆಯಾಗಿತ್ತು. ಅವನ ಕಣ್ಣುಗಳಲ್ಲಿ ವೈರಾಗ್ಯ ಭಾವವೂ, ವಿಶ್ವ ವ್ಯಾಪಿ ಕರುಣಾಭಾವವೂ ಮೇಳಗೂಡಿದಂತಿತ್ತು. ಮಹಾ ಭಾರತವನ್ನು ಮುಚ್ಚಿ ವಿಧವೆ ಮೋಹಿನಿಯನ್ನು ಸಂಭೋಧಿಸಿ – "ಬಹೂ, ಪುಟ್ಟಿ ಬಹುಶಃ ಈ ದಿನವೂ ಬರಲಿಕ್ಕಿಲ್ಲ" ಎಂದ.

ಮೋಹಿನಿ ಸಾಧಾರಣವಾದ ಬಟ್ಟೆ ಉಟ್ಟುಕೊಂಡಿದ್ದಳು. ಅವಳು ಯಾವ ಒಡವೆ-ಆಭರಣಗಳನ್ನೂ ತೊಟ್ಟುಕೊಂಡಿರಲಿಲ್ಲ. ಭಾವಯ್ಯನವ ರಿಂದ ಸ್ವಲ್ಪ ದೂರದಲ್ಲಿಯೆ ಕುಳಿತು ಈ ವರೆಗೆ ಮಹಾಭಾರತವನ್ನು ಕೇಳು ತಿದ್ದಳು. "ಹಾಗೇನಿಲ್ಲ ಭಾವಯ್ಯ! ಇನ್ನೂ ಸಾಕಷ್ಟು ಸಮಯವಿದೆ. ಅವರು ಈಗ ನಡುದಾರಿಯಲ್ಲಿರಬಹುದು."

ಪುಟ್ಟಿಯ ಮಾವ ಬಹು ಸಿಡುಕಿನ ಸ್ವಭಾವದವ. ಈಗ ಅವನ ದೇಹಾ ವಸಾನವಾಗಿತ್ತು. ಆದುದರಿಂದ ಪುಟ್ಟಿ ಸರ್ವತಂತ್ರ ಸ್ವತಂತ್ರಳಾಗಿದ್ದಳು. ಅವಳು ಗಂಡನ ಜೊತೆಗೆ, ದಾಸದಾಸಿಯರನ್ನು ಕರೆದುಕೊಂಡು ತವರಿಗೆ ಬರುವಳೆಂದೂ, ದುರ್ಗಾಪೂಜೆ ಮುಗಿವವರೆಗೆ ತವರಿನಲ್ಲಿಯೆ ಉಳಿಯು ವಳೆಂದೂ ವರ್ತಮಾನ ಬಂದಿತ್ತು. ಈವರೆಗೆ ಇಲ್ಲಿ ಆದ ದುರ್ಘಟನೆಯ ವಿಷಯವಾಗಿ ಅವಳಿಗೇನೂ ಗೊತ್ತಿರಲಿಲ್ಲ. ತಾಯಿಯಂತೆ ಸ್ನೇಹವನ್ನು ಕರೆವ ಅವಳ ದೊಡ್ಡತ್ತಿಗೆ ಮನೆಯಲ್ಲಿರಲಿಲ್ಲ. ಆರು ತಿಂಗಳ ಹಿಂದೆ ಅವಳ ಚಿಕ್ಕಣ್ಣ ಹಾವು ಕಡಿತದಿಂದ ಕಾಲವಶನಾಗಿದ್ದ. ಈ ಎಲ್ಲ ಸುದ್ದಿಗಳು ಈವರೆಗೂ ಅವಳ ಕಿವಿಯವರೆಗೆ ಹೋಗಿರಲಿಲ್ಲ.

ಉಸಿರ್ಗರೆದು ನೀಲಾಂಬರನೆಂದ: "ಅವಳು ಬಾರದಿದ್ದರೆ ಒಳಿತು. ಈ ಎಲ್ಲ ದುಃಖದುಮ್ಮಾನವನ್ನು ಒಮ್ಮೆಲೆ ಅವಳು ಸಹಿಸಬಹುದೆ?"

ಪ್ರಾಣಕ್ಕಿಂತಲೂ ಪ್ರಿಯಳಾದ ತನ್ನ ತಂಗಿಯ ಸವಿನೆನಪು ಬರಲು ಅನೇಕ ದಿನಗಳ ತರುವಾಯ ಇಂದು ನೀಲಾಂಬರನ ಕಣ್ಣುಗಳಲ್ಲಿ ಕಂಬನಿ ಕದಡಿತು. ಹಾವು ಕಡಿದ ದಿನದ ರಾತ್ರೆ ಪೀತಾಂಬರ ಅಣ್ಣನ ಎರಡೂ ಪಾದಗಳನ್ನು ಗಟ್ಟಿಯಾಗಿ ಹಿಡಿದು ''ನನಗಾವ ಔಷಧದ ಉಪಚಾರ ಬೇಕಾಗಿಲ್ಲವಣ್ಣಾ! ಕೇವಲ ನಿನ್ನ ಪಾದಧೂಳಿಯನ್ನು ನನ್ನ ತಲೆಗೆ ಸವರು; ಅಲ್ಲದೆ ಸ್ವಲ್ಪ ನನ್ನ ಬಾಯಿಯಲ್ಲಿಯೂ ಹಾಕು. ಅದರಿಂದ ನಾನು ಬದುಕಿದರೆ ಒಳಿತಾಯಿತು. ಇಲ್ಲದಿದ್ದರೆ ಇನ್ನು ಹೆಚ್ಚು ಜೀವಿಸಲು ನನಗೂ

ಮನಸ್ಸಿಲ್ಲ'' ಎಂದು ಪೀತಾಂಬರ ಸೊಪ್ಪು ಬೇರುಗಳ ಔಷಧಿಯ ಉಪಚಾರವನ್ನು ಪ್ರಬಲ ಹಟದಿಂದ ತಡೆದು ಅಣ್ಣನ ಚರಣಗಳಲ್ಲಿಯೆ ತನ್ನ ಹಣೆ ಚಚ್ಚಿಕೊಳ್ಳತೊಡಗಿದ. ಈ ರೀತಿ ವಿಷಜ್ವಾಲೆಯಿಂದ ಮುಕ್ತಿ ಹೊಂದುವ ಆಸೆಯಿಂದ ಅವನು ಕೊನೆಯ ಗಳಿಗೆಯವರೆಗೂ ಅಣ್ಣನ ಪಾದಗಳನ್ನು ಬಿಡಲಿಲ್ಲ. ಈ ರೀತಿ ತಮ್ಮನ ದೇಹಾವಸಾನವಾದ ಬಳಿಕ ನೀಲಾಂಬರ ಅತ್ತು ಅತ್ತು ಸುಮ್ಮನುಳಿದ. ಅನಂತರ ಇಂದೆ ಅವನ ಕಣ್ಣುಗಳಲ್ಲಿ ಕಂಬನಿ ಮೂಡಿದ್ದು. ಸತಿ ಸಾಧ್ವಿ ಮೋಹಿನಿಯೂ ಕಾಣದಂತೆ ತನ್ನ ಕಣ್ಣುಗಳನ್ನೊರಸಿಕೊಂಡಳು. ಅವಳು ಯಾವ ಮಾತನ್ನೂ ಆಡಲಿಲ್ಲ.

ನೀಲಾಂಬರ ಮೆಲ್ಲಮೆಲ್ಲನೆ ಹೇಳತೊಡಗಿದ: "ಅದಕ್ಕಾಗಿ ನಾನಿಷ್ಟು ದುಃಖಿತನಾಗಿಲ್ಲವಲ್ಲವಮ್ಮಾ! ಭಗವಂತನು ನಮ್ಮ ಪೀತಾಂಬರನನ್ನು ಕರೆದುಕೊಂಡಂತೆ ವಿರಾಜಳನ್ನೂ ಕರೆದುಕೊಂಡಿದ್ದರೆ, ಇಂದು ನನಗೆ ಇವೆಲ್ಲ ಸುಖದ ದಿನಗಳಾಗುತ್ತಿದ್ದವು. ಆದರೆ ಹಾಗಾಗಲಿಲ್ಲ. ಪುಟ್ಟಿ ಈಗ ದೊಡ್ಡವಳಾಗಿದ್ದಾಳೆ. ಒಳಿತು ಕೆಡಕು ಅರಿಯುವ ಬುದ್ಧಿ ಈಗ ಅವಳಿಗಿದೆ. ಇಂಥ ಅವಸ್ಥೆಯಲ್ಲಿ ತಾಯ ಸಮಳಾದ ಅತ್ತಿಗೆಯ ಕಲಂಕಪ್ರಾಯ ಸಮಾಚಾರ ಕೇಳಿದಾಗ ಅವಳ ಮನದ ಸ್ಥಿತಿ ಹೇಗಾದೀತು? ಮುಂದೆ ಜನರೆದುರು ಮುಖವೆತ್ತಿ ನಡೆಯಲು ಸಾಧ್ಯವೆ ಅವಳಿಗೆ?"

ಸುಂದರಿಗೆ ಆತ್ಮಗ್ಲಾನಿಯನ್ನು ಸಹಿಸುವುದಾಗಲಿಲ್ಲ. ಆದುದರಿಂದ ಈಗ ಎರಡು ತಿಂಗಳ ಮೊದಲು ನೀಲಾಂಬರನ ಬಳಿಗೆ ಬಂದು – "ತಾಯಿಯವರು ಅಂದು ರಾತ್ರಿ ಆತ್ಮಹತ್ಯೆ ಮಾಡಿಕೊಂಡಿಲ್ಲ. ಜಮೀನುದಾರ ರಾಜೇಂದ್ರಬಾಬುಗಳೊಂದಿಗೆ ಓಡಿಹೋದರು" ಎಂದು ಹೇಳಿದಳು. ವಿರಾಜಳ ವಿಯೋಗದಿಂದ ನೀಲಾಂಬರ ಅಸೀಮವೇದನೆ ಪಡುತ್ತಿದ್ದ. ಅದು ಸುಂದರಿಗೆ ಸಹಿಸದಂತಾಗಿ, ನಿಜಸಂಗತಿ ಅರಿತಮೇಲಾದರೂ ಒಡೆಯನಿಗೆ ವಿರಾಜಳ ವಿಷಯದಲ್ಲಿ ಕೋಪ, ಜುಗುಪ್ಸೆಯುಂಟಾಗುವುದು. ಹಾಗೂ ಅವಳಿಗಾಗಿ ಪಡುತಿದ್ದ ಅವನ ಕಳವಳ ದೂರಾಗಬಹುದು ಎಂದು ಬಗೆದಿದ್ದಳು. ನೀಲಾಂಬರ ಮನೆಗೆ ಬಂದು ಮೋಹಿನಿಗೆ ಈ ಸಮಾಚಾರ ತಿಳುಹಿದ.

ಇಂದು ಭಾವನವರು ಈ ವಿಷಯವಾಗಿ ಮಾತನ್ನೆತ್ತಿದಾಗ ಮೋಹಿನಿ ಸ್ವಲ್ಪ ಸಮಯ ಸುಮ್ಮನುಳಿದು– "ಪುಟ್ಟಿಗೆ ಈ ವಿಷಯ ತಿಳಿಸುವ ಅಗತ್ಯ ವಿಲ್ಲ" ಎಂದು ನುಡಿದಳು.

"ಅವಳಿಂದ ಅದನ್ನು ಹೇಗೆ ಮುಚ್ಚಿಡಬಲ್ಲೆಯಮ್ಮಾ? ದೊಡ್ಡತ್ತಿಗೆ ಎಲ್ಲಿದ್ದಾಳೆಂದು ವಿಚಾರಿಸಿದಾಗ ಏನು ಹೇಳುವುದು?"

"ಎಲ್ಲರೂ ತಿಳಿದುಕೊಂಡಿದ್ದನ್ನೇ–ನದಿಯಲ್ಲಿ ಮುಳುಗಿ ಆತ್ಮಹತ್ಯೆ ಮಾಡಿಕೊಂಡಳೆಂದು ಹೇಳುವುದು."

ತಲೆಯಲ್ಲಾಡಿಸುತ್ತಾ ನೀಲಾಂಬರನೆಂದ: "ಅದು ಒಳಿತಲ್ಲವಮ್ಮ. ಪಾಪ ಮರೆಮಾಡುವುದರಿಂದ ಹೆಚ್ಚುವುದೆಂದು ನಾನು ಕೇಳಿದ್ದೇನೆ. ನಾವು ಅವಳ ಸಂಬಂಧಿಕರು. ಆದುದರಿಂದ ನಾವೆ ಅವಳ ಪಾಪದ ಭಾರವನ್ನು ಹೆಚ್ಚಿಸುವುದು ಸರಿಯಲ್ಲ."

ಹೀಗೆಂದು ನೀಲಾಂಬರ ನಸು ನಕ್ಕ. ಆ ಹಾಸ್ಯದಲ್ಲಿಯ ವ್ಯಥೆಯನ್ನು, ಕರುಣಾರ್ದ್ರಭಾವವನ್ನು ಮೋಹಿನಿ ಹೃದಯಂಗಮ ಮಾಡಿಕೊಂಡಳು. ಸ್ವಲ್ಪ ಸಮಯದ ನಂತರ ಮೋಹಿನಿ ಸಂಕೋಚದಿಂದ ಇಳಿದನಿಯಲ್ಲಿ—"ಇವೆಲ್ಲ ನಿಜ ಸಂಗತಿಗಳೆಂದು ಹೇಳಲು ಸಾಧ್ಯವಿಲ್ಲ ಭಾವಯ್ಯ!" ಎಂದಳು.

"ಯಾವ ಸಂಗತಿಯಮ್ಮಾ? ನಿನ್ನ ಅಕ್ಕನಿಗೆ ಸಂಬಂಧಿಸಿದ ಸಂಗತಿಯೆ?"

ಮೋಹಿನಿ ಅಧೋಮುಖಿಯಾಗಿ ಕುಳಿತಿದ್ದವಳು ಹಾಗೆಯೆ ಕುಳಿತಳು.

ನೀಲಾಂಬರ ಮತ್ತೆಂದ: "ಇಲ್ಲವಮ್ಮಾ! ಆ ಸಂಗತಿ ನಿಜಸಂಗತಿಯೆ. ಅದರಲ್ಲೊಂದಕ್ಕರವೂ ಸುಳ್ಳಿಲ್ಲ. ಅಲ್ಲದೆ ಕೋಪ ಬಂದಾಗ ಆ ಹುಚ್ಚಿಗೆ ಬುದ್ಧಿ ಶುದ್ಧಿ ಲೋಪವಾಗುವುದೆಂಬದನ್ನು ನೀನೂ ಬಲ್ಲೆ. ಚಿಕ್ಕ ಮಗುವಿದ್ದಾಗಲೂ ಹಾಗೆಯೆ ಇತ್ತು ಅವಳ ಸ್ವಭಾವ. ದೊಡ್ಡವಳಾದಾಗಲೂ ಅದರಲ್ಲಿ ಯಾವ ವ್ಯತ್ಯಾಸವೂ ಆಗಲಿಲ್ಲ. ಮೇಲಾಗಿ ನಾನು ಮಾಡಿದ ಅತ್ಯಾಚಾರ, ಅಪಮಾನಗಳನ್ನು ಬಹುಶಃ ಭಗವಂತನಿಗೂ ಸಹಿಸಲಸಾಧ್ಯ. ಅವಳಂತೂ ಮನುಷ್ಯ ಮಾತ್ರಳು."

ಎಂದು ನೀಲಾಂಬರ ಕೈಯಿಂದ ಕಂಬನಿ ಒರಸಿಕೊಂಡು ಪುನಃ ಹೇಳಿದ: "ಈ ವಿಚಾರ ನೆನಪಾದಾಗ ನನ್ನ ಹೃದಯವೆ ಸೀಳಿ ಹೋದಂತಾಗುವುದು. ಆ ಬಡಪ್ರಾಣಿ ಮೂರು ದಿನಗಳವರೆಗೆ ಏನೂ ತಿಂದಿರಲಿಲ್ಲ. ಜ್ವರದ ತಾಪದಲ್ಲಿಯೆ ನಡುಗುತ್ತ ನನಗಾಗಿ ಅಕ್ಕಿ ಬೇಡಲು ಹೋಗಿದ್ದಳು. ಆ ಅಪರಾಧಕ್ಕಾಗಿಯೆ ನಾನು........"

ನೀಲಾಂಬರನ ಗಂಟಲು ಒಮ್ಮೆಲೆ ಕಟ್ಟಿಕೊಂಡಿತು. ದೋತರದ ಚುಂಗನ್ನು ಬಾಯಿಯಲ್ಲಿ ಅದುಮಿ ಹೊರ ಉಕ್ಕಲಿದ್ದ ಅಳುವನ್ನು ಹತ್ತಿಕ್ಕಿದ. ಅವನ ಮುಖವೆಲ್ಲವೂ ಉಬ್ಬಿಕೊಂಡಿತು.

ಮೋಹಿನಿ ಅಳುತ್ತಿದ್ದಳು. ಅವಳೂ ಮಾತನಾಡಲೆ ಇಲ್ಲ. ಹೀಗೆಯೆ ಎಷ್ಟೊ ಸಮಯ ಕಳೆಯಿತು.

ಎಷ್ಟೊ ಹೊತ್ತಿನ ಮೇಲೆ ನೀಲಾಂಬರ ಪೂರ್ವ ಸ್ಥಿತಿಗೆ ಬಂದ. ಮುಖ ಕಂಣುಗಳನ್ನೊರಸಿಕೊಂಡು — "ಬಹುಶಃ ನಿನಗೆಲ್ಲ ವಿಷಯವೂ ಗೊತ್ತಿರಬೇಕು. ಆದರೂ ಒಂದು ವಿಷಯ ನಿನಗೆ ಹೇಳುವೆ — ಅಂದು ರಾತ್ರಿ ಬುದ್ಧಿ ಹೀನಳಾಗಿ ಉನ್ಮಾದಾವಸ್ಥೆಯಲ್ಲಿಯೆ ಅವಳು ಸುಂದರಿಯ ಮನೆಗೆ ಹೇಗೆ ಹೋದಳೊ ದೇವರೆ ಬಲ್ಲ! ಆದರೆ ಆ ಸುಂದರಿ – ದುರ್ದೈವವೆನ್ನಬೇಕು - ಹಣದಾಸೆಯಿಂದ ಆ ಅರೆಹುಚ್ಚಿಯನ್ನು ಆ ರಾತ್ರಿಯಲ್ಲಿಯೆ ಜಮೀನುದಾರ ರಾಜೇಂದ್ರನ ನಾವೆಯನ್ನು ಹತ್ತಿಸಿ ಬಂದಳು."

ನೀಲಾಂಬರನ ಮಾತು ಮುಗಿದಿರಲಿಲ್ಲ. ಅಷ್ಟರಲ್ಲಿ ಮೋಹಿನಿ ತನ್ನನ್ನು ಮರೆತು ನಾಚಿಕೆ ಸಂಕೋಚಗಳನ್ನೆಲ್ಲ ತೊರೆದು ಏರುದನಿಯಲ್ಲಿ "ಅದೆಂದಿಗೂ ದಿಟವಲ್ಲ ಭಾವಯ್ಯ. ಎಂದಿಗೂ ದಿಟವಲ್ಲ. ಅಕ್ಕ ಜೀವಂತಳಿರುವಾಗ ಅವಳಿಂದ ಇಂಥ ಕೆಲಸ ಮಾಡಿಸಲು ಯಾರಿಗೂ ಸಾಧ್ಯವಿಲ್ಲ– ಅಕ್ಕ, ಸುಂದರಿಯ ಮುಖವನ್ನೂ ನೋಡುತಿದ್ದಿಲ್ಲ,"ಎಂದಳು.

ನೀಲಾಂಬರ ಶಾಂತಭಾವದಿಂದ ನುಡಿದ: "ಅದನ್ನು ನಾನು ಬಲ್ಲೆಯಮ್ಮಾ. ಬಹುಶಃ ನಿನ್ನ ಮಾತಿನಲ್ಲಿಯೂ ಸತ್ಯವಿರಬಹುದು! ಆಗ ಅವಳ ದೇಹದಲ್ಲಿ ಪ್ರಾಣವಿರಲಿಕ್ಕಿಲ್ಲ! ತನ್ನ ಜ್ಞಾನ-ಬುದ್ಧಿ ಪೂರ್ಣವಾಗಿ ನಷ್ಟವಾಗುವ ಮೊದಲೆ ಅವಳು ತನ್ನ ಪ್ರಾಣವನ್ನು ನನಗೆ ಒಪ್ಪಿಸಿದ್ದಾಳೆ.

ಮನೆ ಬಿಟ್ಟು ಹೋಗುವಾಗ ಅವಳು ತನ್ನೊಂದಿಗೆ ಅದನ್ನು ಒಯ್ದಿಲ್ಲ. ಇಂದಿಗೂ ಅವಳ ಜೀವ ನನ್ನ ಬಳಿಯಲ್ಲಿಯೆ ಇದೆ.''

ಬಳಿಕ ನೀಲಾಂಬರ ತನ್ನ ಕಂಣುಗಳನ್ನು ಮುಚ್ಚಿ ತನ್ನ ಹೃದಯಾಂತರಾಳವನ್ನು ಹೊಕ್ಕು ಅದನ್ನು ಅರಸುವ ಯತ್ನ ಮಾಡತೊಡಗಿದ.

ಮೋಹಿನಿ ಮುಗ್ಧಳಾಗಿ ಕಣ್ಣು ಮುಚ್ಚಿ ಕುಳಿತ ಭಾವಯ್ಯನವರ ಪ್ರಶಾಂತವಾದ, ಪೀತವರ್ಣದ ಮುಖವನ್ನೆ ನಿಟ್ಟಿಸಿದಳು. ಆ ಮುಖಕ್ಕೆ ಈರ್ಷೆ, ಕೋಪ-ದ್ವೇಷಗಳ ನೆರಳು ಲವಲೇಶವೂ ಸೋಂಕಿರಲಿಲ್ಲ. ಕೇವಲ ಅಪರಿಸೀಮ ವ್ಯಥೆ, ಅನಂತ ಕ್ಷಮಾದಾನದ ಅಕಥನೀಯ ಮಹಿಮೆ ಆ ಮುಖದಲ್ಲಿ ಕಾಣುತಿತ್ತು. ಮೋಹಿನಿ ಕೊರಳಿಗೆ ಸೆರಗು ಸುತ್ತಿಕೊಂಡು ಭಾವನಿಗೆ ತಿಳಿಯದಂತೆ ಪ್ರಣಾಮ ಮಾಡಿ ಪಾದಧೂಳಿಕೊಂಡು ಸುಮ್ಮನೆ ಎದ್ದು ಹೋದಳು. ಸಂಜೆಯ ಸಮಯದಲ್ಲಿ ದೀವಿಗೆ ಹಚ್ಚುತಿರುವಾಗ ಮನದಲ್ಲಿಯೆ ಎಂದುಕೊಳ್ಳತೊಡಗಿದಳು: ''ಅಕ್ಕ ಭಾವಯ್ಯನವರನ್ನು ಚೆನ್ನಾಗಿ ಗುರುತಿಸಿದ್ದಾಳೆ. ಆದುದರಿಂದಲೆ ಅವರನ್ನು ಒಂದು ದಿನವೂ ಬಿಟ್ಟಿರಲು ಅವಳಿಗೆ ಸಾಧ್ಯವಾಗಿರಲಿಲ್ಲ.''

ನಾಲ್ಕು ವರ್ಷಗಳ ಸುದೀರ್ಘ ಸಮಯದನಂತರ ಪುಟ್ಟಿ ತವರು ಮನೆಗೆ ಬಂದಳು. ದೊಡ್ಡ ಮನೆತನದ ಸ್ತ್ರೀಯಂತೆಯೆ ಅವಳ ಆಗಮನವಾಯಿತು.

ಜೊತೆಗೆ ಗಂಡ, ಕಂಕುಳಲ್ಲಿ ಆರು ತಿಂಗಳ ಮಗು, ಅಲ್ಲದೆ ಐದಾರು ದಾಸ ದಾಸಿಯರೊಂದಿಗೆ ಗೃಹ ಪ್ರವೇಶ ಮಾಡಿದಳು. ಸಾಮಾನು ಸರಂಜಾಮುಗಳಿಗೂ ಮಿತಿಯೆ ಇರಲಿಲ್ಲ. ಇದರಿಂದ ಮನೆಯೆಲ್ಲವೂ ತುಂಬಿ ಹೋಯಿತು. ರೈಲು ಬಂಡಿಯಿಳಿದು ನಿಲ್ದಾಣದಲ್ಲಿ ಕಾಲಿಟ್ಟಾಗಲೆ ಪುಟ್ಟಿಗೆ ಯದುವಿನಿಂದ ಮನೆಯ ಸಮಾಚಾರವೆಲ್ಲವೂ ತಿಳಿಯಿತು. ಆದ್ದರಿಂದ ಅವಳು ಅಲ್ಲಿಯೆ ಅಳಲು ಪ್ರಾರಂಭಿಸಿದಳು. ಗಂಟಲು ಹರಿಯುವಂತೆ ಅಳುತ್ತ ಊರನ್ನೆ ನಡುಗಿಸುತ್ತ ಮೂರು ತಾಸು ರಾತ್ರಿಯ ಸಮಯ ಮನೆ ಸೇರಿದಳು. ಸೇರಿದ್ದೆ ತಡ, ಅಂಣನ ಮಡಿಲಲ್ಲಿ ತಲೆಯಿಟ್ಟು ಬೋರಲು ಬಿದ್ದಳು. ಅಂದು ರಾತ್ರಿ ಪುಟ್ಟಿ ತಾನೂ ತುಟಿಗೆ ನೀರು ಸಹ ಹಚ್ಚಲಿಲ್ಲ; ಅಂಣನಿಗೂ ಬಿಡಲಿಲ್ಲ. ಹಾಗೆಯೆ ಬಿದ್ದುಕೊಂಡು ಒಂದೊಂದಾಗಿ ಎಲ್ಲ ವಿಷಯವನ್ನು ಕೇಳಿ

ಕೊಂಡಳು. ಮೊದಲು ಪುಟ್ಟಿ ಅತ್ತಿಗೆಗೆ ಕೊಂಚ ಹೆದರುತಿದ್ದಳು. ಅವಳೆದುರಿನಲ್ಲಿ ಪುಟ್ಟಿಗೆ ತುಂಬ ಸಂಕೋಚ. ಆದರೆ ಅಂಣನಲ್ಲಿ ಅವಳಿಗಾವ ಸಂಕೋಚವೂ ಇರಲಿಲ್ಲ. ಅಂಣ ಒಬ್ಬ ಗಂಡಸು; ಅವನೊಂದಿಗೆ ಎಂಥ ಮಾತುಗಳನ್ನಾಡಬೇಕು; ಅವನೊಂದಿಗೆ ಯಾವ ರೀತಿಯ ವ್ಯವಹಾರವಿಟ್ಟುಕೊಳ್ಳಬೇಕು — ಇದಾವುದೂ ಅವಳಿಗೆ ತಿಳಿಯುತ್ತಿರಲಿಲ್ಲ. ಯಾವ ವಿಷಯವಾಗಿಯೆ ಆಗಲಿ, ಅವಳು ಹಟ ಮಾಡುವುದು ಅಣ್ಣನಲ್ಲಿಯೆ. ಅತ್ತೆಯ ಮನೆಗೆ ಹೋಗುವ ಮುನ್ನಾದಿನ ಅವಳು ಅತ್ತಿಗೆಯಿಂದ ಬೈಗಳನ್ನು ತಿಂದಿದ್ದಳು. ಆಗಲೂ ಅಂಣನ ಕೊರಲು ಸುತ್ತಿ ತನ್ನ ಕಂಬನಿಯಿಂದ ಮನೆಯೆಲ್ಲವನ್ನೂ ತೋಯಿಸಿದಳು. ಈಗ ಆ ಅಂಣನನ್ನು ಈವರೆಗೂ ದುಃಖಕ್ಕೀಡುಮಾಡಿದವರ ಮೇಲೆ, ದುಃಖಸಾಗರದಲ್ಲಿ ಮುಳುಗಿಸಿ ಜೀಣಶೀರ್ಣನನ್ನಾಗಿ ಮಾಡಿದವರ ಮೇಲೆ ಪುಟ್ಟಿಯ ಕೋಪ ದ್ವೇಷಗಳಿಗೆ ಸೀಮೆಯೆ ಉಳಿಯಲಿಲ್ಲ. ಅಂಣನ ದುಃಖದೆದುರು ತನ್ನ ದುಃಖ ಅತಿ ಸಾಮಾನ್ಯವಾದುದೆಂದು ಅವಳಿಗೆನಿಸಿತು. ಆ ಬಗ್ಗೆ ತನ್ನ ಮನೆಯವರ ಮೇಲೂ ಪುಟ್ಟಿಗೆ ಜುಗುಪ್ಸೆಯುಂಟಾಯಿತು. ಚಿಕ್ಕಣ್ಣ ಹಾವಿನ ಕಡಿತದಿಂದ ಅಕಾಲಿತ ಮೃತ್ಯುವಿಗೆರವಾದ ಬಗ್ಗೆ ಅವಳ ಹೃದಯದಲ್ಲಿ ಹೇಳಿಕೊಳ್ಳುವಂತಹ ದುಃಖ ಉಂಟಾಗಲಿಲ್ಲ. ಅದಲ್ಲದೆ ದುಃಖಕ್ಕೀಡಾದ ಚಿಕ್ಕ ಅತ್ತಿಗೆಯಿಂದಲೂ ಆಕೆ ಮುಖ ಹೊರಳಿಸಿದಳು.

ಎರಡು ದಿನಗಳಾದ ಮೇಲೆ ಪುಟ್ಟಿ ಗಂಡನನ್ನು ಕರೆದು – " ನಾನು ಅಣ್ಣನನ್ನು ಸಂಗಡ ಕರೆದುಕೊಂಡು ಪಶ್ಚಿಮದೆಡೆ ಹೋಗಲಿಚ್ಛಿಸಿದ್ದೇನೆ. ಆದ್ದರಿಂದ ನೀವು ಆಳು-ಹೋಳುಗಳೊಂದಿಗೆ ಮನೆಗೆ ಹೋಗಿ, ಅಥವಾ ಮನಸ್ಸಿದ್ದರೆ ನೀವೂ ನಮ್ಮೊಟ್ಟಿಗೆ ಹೊರಟು ಬಿಡಿ."

ಬಹಳ ಯೋಚಿಸಿದ ಬಳಿಕ ಪುಟ್ಟಿಯ ಗಂಡ ಯತೀನನಿಗೆ ಹೆಂಡತಿಯ ಜೊತೆಗೆ ಹೋಗುವುದೆ ವಿಹಿತವೆಂದೆನಿಸಿತು. ಆದ್ದರಿಂದ ಪುನಃ ಗಂಟುಗದಡಿಗಳನ್ನೆಲ್ಲ ಕಟ್ಟಡುವುದಕ್ಕಾಗಿ ಹೊರಟು ಹೋದ. ಪ್ರಯಾಣದ ಸಿದ್ಧತೆ ನಡೆಯಿತು. ಮನೆಯವರಾರಿಗೂ ತಿಳಿಯದಂತೆ ಪುಟ್ಟಿ ಸುಂದರಿಯನ್ನೊಮ್ಮೆ ಕರೆಕಳುಹಿದ್ದಳು. ಆದರೆ ಸುಂದರಿ ಬರಲೆ ಇಲ್ಲ. ಕರೆಯ ಹೋಗಿದ್ದ ವ್ಯಕ್ತಿಗೆ — " ಇನ್ನು ಈ ಮುಖ ಯಾರಿಗೂ ತೋರುವಂತಿಲ್ಲ. ಅಲ್ಲದೆ

ನಾನೀಗಲೆ ಎಲ್ಲ ವಿಷಯ ತಿಳಿಸಿಬಿಟ್ಟಿದ್ದರಿಂದ ನನ್ನಿಂದ ತಿಳಿದುಕೊಳ್ಳಬೇಕಾದ ಸಂಗತಿ ಯಾವುದೂ ಇಲ್ಲ" ಎಂದು ಹೇಳಿ ಕಳುಹಿದ್ದಳು. ಪುಟ್ಟಿ ಕೋಪದಿಂದ ಚೌಡು ಕಚ್ಚಿ ತೆಪ್ಪಗುಳಿದಳು.

ಪುಟ್ಟಿಯ ಅತ್ಯಧಿಕ ಉಪೇಕ್ಷೆಯ ಭಾವ, ಅದಕ್ಕೂ ಹೆಚ್ಚಿನ ಅವಳ ಸಿಸ್ತುರ ನಡತೆ ಇದರಿಂದ ಮೋಹಿನಿಗಾದ ಹೃದಯ ವೇದನೆ ಅಂತರ್ಯಾಮಿಗಲ್ಲದೆ ಬೇರಾರಿಗೂ ತಿಳಿಯಲಿಲ್ಲ. ಕೈ ಜೋಡಿಸಿ ಅವಳು ಅಕ್ಕನನ್ನು ಸ್ಮರಿಸಿ ಮನದಲ್ಲಿಯೆ: "ಅಕ್ಕ, ನೀನಲ್ಲದೆ ಬೇರಾರು ನನ್ನನ್ನು ಗುರುತಿಸಬಲ್ಲರು? ನೀನಿದ್ದಲ್ಲಿಂದಲೆ ನನ್ನನ್ನು ಕ್ಷಮಿಸಿದ್ದಾದರೆ ನನಗೆ ಅಷ್ಟೆ ಸಾಕು" ಎಂದು ಬೇಡಿಕೊಳ್ಳತೊಡಗಿದಳು.

ಕೈಕಾಲು ಮುದುಡಿಕೊಂಡು ಏಕಾಂತ ಸ್ಥಳದಲ್ಲಿ ಮೌನವಾಗಿ ಕುಳಿತಿರುವುದು ಮೋಹಿನಿಯ ಸ್ವಭಾವ. ವಿಶೇಷ ಕಾರಣವಿಲ್ಲದೆ ಅವಳು ಬಹುಶಃ ಯಾರೊಡನೆಯೂ ಮಾತನಾಡುತ್ತಿರಲಿಲ್ಲ. ಇವತ್ತು ನೀರವ ಭಾವದಿಂದ ಎಲ್ಲರ ಸೇವೆಯಲ್ಲಿ ತೊಡಗಿದ್ದಳು. ಅವಳು ಯಾರೊಂದಿಗೂ ಮಾತಾಡಲಿಲ್ಲ. ಅಂಣನ ಊಟದ ವ್ಯವಸ್ಥೆ ಸ್ವತಃ ಪುಟ್ಟಿಯೆ ಹೊತ್ತಿದ್ದರಿಂದ ಎಷ್ಟೋ ದಿನಗಳಿಂದ ಭಾವಯ್ಯನವರ ಬಳಿ ಕುಳಿತುಕೊಳ್ಳುವ ಅಗತ್ಯವೂ ಮೋಹಿನಿಗೆ ಉಳಿಯಲಿಲ್ಲ.

ಯಾತ್ರೆಗೆ ಹೊರಡುವ ದಿನ ನೀಲಾಂಬರ ಅತ್ಯಂತ ಸೋಜಿಗಗೊಂಡು- "ಏಕಮ್ಮಾ ನೀನೂ ನಮ್ಮೊಂದಿಗೆ ಹೊರಡುವುದಿಲ್ಲವೆ?" ಎಂದು ಕೇಳಿದಾಗ ಮೋಹಿನಿ ನಕಾರಾತ್ಮಕವಾಗಿ ತಲೆ ಅಲ್ಲಾಡಿಸಿದಳು.

ಕೆಂಕುಳಲ್ಲಿ ಮಗುವನ್ನೆತ್ತಿಕೊಂಡು ಪುಟ್ಟಿಯು ಅಂಣನ ಬಳಿ ಬಂದು ನಾದಿನಿ ಮೈದುನರ ಮಾತುಕತೆಯನ್ನು ಕೇಳತೊಡಗಿದಳು.

ನೀಲಾಂಬರನೆಂದ — "ಅದಾಗದು. ನೀನೊಬ್ಬಳೆ ಇಲ್ಲಿ ಹೇಗೆ ಇರಬಲ್ಲೆ? ಅಲ್ಲದೆ ಇಲ್ಲಿ ಇದ್ದಾದರೂ ನೀನು ಮಾಡುವುದೇನು? ಆದುದರಿಂದ ನೀನು ನಮ್ಮೊಂದಿಗೆ ಹೊರಡು."

ಮೋಹಿನಿ ಪುನಃ ತಲೆಯಲ್ಲಾಡಿಸಿ – "ಇಲ್ಲ ಭಾವಯ್ಯ – ನಾನೆಲ್ಲಿಯೂ ಹೋಗಲಾರೆ" ಎಂದಳು.

ಮೋಹಿನಿಯ ತವರಿನವರು ಸಿರಿವಂತರು. ವಿಧವೆ ಮಗಳನ್ನು ತಮ್ಮ ಮನೆಗೆ ಕರೆದೊಯ್ಯಲು ಅವರೆಷ್ಟು ಬಾರಿ ಯತ್ನಿಸಿದರೂ ಅವಳು ಹೋಗಲೆ ಇಲ್ಲ.

ತನ್ನ ಸಲುವಾಗಿಯೆ ಅವಳೆಲ್ಲಿಯೂ ಹೋಗುವುದಿಲ್ಲವೆಂದು ನೀಲಾಂಬರ ಆಗ ಭಾವಿಸಿದ್ದ. ಆದರೆ ಈಗ ನಿರ್ಜನವಾದ ಮನೆಯಲ್ಲಿ ತಾನೊಬ್ಬಳೆ ಏಕೆ ಇರುವಳೆಂಬ ಸಂಗತಿ ಎಷ್ಟು ಯೋಚಿಸಿದರೂ ಅವನಿಗೆ ಹೊಳೆಯಲಿಲ್ಲ. "ಆದೇಕೆ ನೀನೆಲ್ಲಿಯೂ ಹೋಗಬಯಸುವುದಿಲ್ಲವಮ್ಮಾ ?"

ಮೋಹಿನಿ ಸುಮ್ಮನಿದ್ದಳು.

"ಆದರೆ ನೀನು ಹೋಗದಿರುವ ಕಾರಣ ಹೇಳುವವರೆಗೆ ನಾನೂ ಎಲ್ಲಿಯೂ ಹೋಗುವುದಿಲ್ಲ."

ಮೋಹಿನಿ ಇಳಿದನಿಯಲ್ಲಿ: "ನೀವು ಹೋಗಿ ಬನ್ನಿ. ನಾನು ಇಲ್ಲಿಯೆ ಇರುವೆ," ಎಂದಳು.

"ಆದೇಕೆ ?"

ಮೋಹಿನಿ ಕೆಲಕ್ಷಣ ಮೌನವಾಗಿ ಉಳಿದಳು. ಸಂಕೋಚವಶದಿಂದ ಅವಳಲ್ಲಿ ಜಡತೆಯುಂಟಾಗಿತ್ತು. ಅದನ್ನು ದೂರುಗೊಳಿಸಲು ಒಳಗೊಳಗೆ ತನ್ನೆಲ್ಲ ಶಕ್ತಿ ವಿನಿಯೋಗಿಸಿ ಯತ್ನಿಸತೊಡಗಿದಳು. ಕೊನೆಗೆ ಮನವನ್ನು ಸ್ಥಿರಗೊಳಿಸಿ ಇಳಿದನಿಯಲ್ಲಿ ಹೇಳಿದಳು: "ಅಕ್ಕ ಖಂಡಿತವಾಗಿ ಒಂದಿಲ್ಲ ಒಂದು ದಿನ ಬಂದೆ ಬರುವಳು. ಆದುದರಿಂದಲೆ ನಾನಿಲ್ಲಿಂದ ಎಲ್ಲಿಯೂ ಹೋಗಲಾರೆ."

ನೀಲಾಂಬರನು ದಂಗುಬಡಿದವನಂತಾದ. ಮಿಂಚಿನ ಪ್ರಖರ ಪ್ರಕಾಶದಿಂದ ಮುಖ ಬೆಂದಂತಾಗಿ ಕಂಣಿಗೆ ಮಬ್ಬು ಕವಿದು ಎಲ್ಲಿಯೂ ಏನೂ ಕಾಣಿಸದು, ಹಾಗೆಯೆ ನೀಲಾಂಬರನಿಗೂ ಒಮ್ಮೆಲೆ ಮಬ್ಬು ಆವರಿಸಿದಂತಾಯಿತು. ಆದರೆ ಹಾಗಾದುದು ಒಂದು ಕ್ಷಣ ಮಾತ್ರ. ಮರುಕ್ಷಣದಲ್ಲಿಯೆ ತನ್ನನ್ನು ಸಾವರಿಸಿಕೊಂಡು ಕಿರಿನಗೆಯೊಂದನ್ನು ನಕ್ಕು – "ಛೀ ಛೀ, ನೀನು ಹೀಗೆ ಹುಚ್ಚಿಯಂತೆ ಬಡಬಡಿಸತೊಡಗಿದರೆ, ಮಕ್ಕಳ ಹಾಗೆ ಮಾಡುವುದಾದರೆ ನನ್ನ ಗತಿಯೇನು ?"

ಮೋಹಿನಿ ಕ್ಷಣಮಾತ್ರದಲ್ಲಿಯೆ ತನ್ನ ಹೃದಯವನ್ನು ಬಗೆದು ನೋಡಿದ ಬಳಿಕ ನಿಸ್ಸಂದೇಹದ ಸ್ಥಿರವಾದ ಮೃದುದನಿಯಲ್ಲಿ ಹೇಳಿದಳು: "ನಾನು ಚಿಕ್ಕ ಮಕ್ಕಳ ಹಾಗೆ ಮಾಡುತ್ತಿಲ್ಲ ಭಾವಯ್ಯ! ನೀವು ನಿಮ್ಮ ಮನಬಂದಂತೆ ಅಂದುಕೊಳ್ಳಿ. ಆದರೆ ನನ್ನ ಜೀವವಿರುವವರೆಗೆ ಅನ್ಯರ ಮಾತಿಗೆ ನಾನು ಕಿವಿಗೊಡಲಾರೆ."

ಬಳಿಯಲ್ಲಿಯೆ ನಿಂತುಕೊಂಡಿದ್ದ ಅಣ್ಣತಂಗಿಯರಿಬ್ಬರೂ ಅವಾಕ್ಕಾಗಿ ಮೋಹಿನಿಯನ್ನೆ ದಿಟ್ಟಿಸಿನೋಡತೊಡಗಿದರು. ಪುನಃ ಮೋಹಿನಿ ಅಷ್ಟೆ ದೃಢಕಂಠದಲ್ಲಿ ಹೇಳತೊಡಗಿದಳು: "ನಿಮ್ಮ ಚರಣಗಳಲ್ಲಿಯೆ ತಲೆಯಿಟ್ಟು ಪ್ರಾಣಬಿಡುವಂತಾಗಲೆಂದು ಅಕ್ಕ ನಿಮ್ಮಲ್ಲಿ ವರ ಬೇಡಿದ್ದಾಳೆ. ಆ ವರವೆಂದಿಗೂ ನಿಷ್ಫಲವಾಗದು. ನನ್ನಕ್ಕ ನಿಜವಾಗಿಯೂ ಸತಿ ಲಕ್ಷ್ಮಿಯು. ಅವಳು ಖಂಡಿತವಾಗಿ ಮರಳಿ ಬರುವಳು. ನನ್ನ ದೇಹದಲ್ಲಿ ಪ್ರಾಣವಿರುವವರೆಗೆ ಆ ಆಸೆಯನ್ನೆಂದಿಗೂ ಬಿಡಲಾರೆ. ಆದುದರಿಂದ ದಯವಿಟ್ಟು ಇಲ್ಲಿಂದ ಹೋಗಲು ನನ್ನನ್ನು ಒತ್ತಾಯಪಡಿಸಬೇಡಿ ಭಾವಯ್ಯಾ!"

ನೀಲಾಂಬರನಿಗೆ ದುಃಖ ತಡೆಯಲಾಗಲಿಲ್ಲ. ಅಳು ಒಳಗೊಳಗೆ ನೂಕುನುಗ್ಗುತ್ತ ಅವನ ಕಂಠನಾಳದವರೆಗೂ ಬಂದಿತ್ತು. ಅದನ್ನು ಹೊರಗೆ ಹಾಕುವ ಇಚ್ಛೆಯಿಂದ ಯಾವುದೊ ಏಕಾಂತಸ್ಥಾನಕ್ಕೆ ದ್ರುತಗತಿಯಲ್ಲಿ ಹೊರಟುಹೋದ.

ಪುಟ್ಟಿ ಒಂದು ಬಾರಿ ಸುತ್ತಲೂ ನಿರೀಕ್ಷಿಸಿ, ಚಿಕ್ಕ ಅತ್ತಿಗೆಯ ಬಳಿ ಮಗುವನ್ನು ಕುಳ್ಳಿರಿಸಿದಳು. ಅಂದು ತನ್ನ ಜೀವನದಲ್ಲಿ ಮೊತ್ತಮೊದಲು ಈ ವಿಧವೆ ಅತ್ತಿಗೆಯ ಕೊರಳನ್ನು ಅಪ್ಪಿಕೊಂಡು ಅಳುತ್ತಳುತ್ತಲೆ ಸ್ಫುಟ ಸ್ವರದಲ್ಲಿ: "ಅತ್ತಿಗೆ, ಈವರೆಗೂ ನಾನು ನಿನ್ನನ್ನು ಗುರುತಿಸಿರಲಿಲ್ಲ. ನನ್ನನ್ನು ಕ್ಷಮಿಸಿ" ಎಂದು ಬೇಡಿಕೊಂಡಳು.

ಸ್ವಲ್ಪ ಬಾಗಿ ಮೋಹಿನಿ ಪುಟ್ಟಿಯ ಮಗುವನ್ನು ಎತ್ತಿಕೊಂಡಳು. ಬಳಿಕ ಮಗುವಿನ ಮುಖಕ್ಕೆ ಮುದ್ದಿಟ್ಟು ತನ್ನ ಕಂಬನಿಗಳನ್ನು ಅಡಗಿಸುತ್ತ ಅಡುಗೆಮನೆಗೆ ಹೋದಳು.

ವಿರಾಜ ಸಾವನ್ನಪ್ಪಿಕೊಂಡಿದ್ದರೆ ವಿಹಿತವಿತ್ತು. ಆದರೆ ಅವಳು ಹಾಗೆ ಮಾಡಲಿಲ್ಲ. ಅಂದು ರಾತ್ರಿ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಅವಳು ನಿಶ್ಚಯಿಸಿಕೊಂಡಿದ್ದಳು. ಆದರೆ ಅವಳು ಮೃತ್ಯುಮಾರ್ಗವನ್ನು ಬಿಟ್ಟು ಅದಕ್ಕೆ ವಿಪರೀತವಾದ ಬೇರೆ ಮಾರ್ಗವನ್ನೆ ಹಿಡಿದಳು. ಅನೇಕ ದಿನಗಳಿಂದ ಒಂದೆ ಸವನೆ ದುಃಖ ಕ್ಲೇಶ ಹಾಗೂ ದಾರಿದ್ರ್ಯದೊಂದಿಗೆ ಕಾದಾಡಿ ಅವಳ ಬುದ್ಧಿಯೂ ಶೂನ್ಯವಾಗಿತ್ತು. ಈಗ ಮೂರು ದಿನಗಳಿಂದ ಉಪವಾಸವಿದ್ದುದರಿಂದಲೆ ಹಸಿವೆಯ ಕಿಚ್ಚಿನಿಂದ ವ್ಯಾಕುಲಗೊಂಡಿದ್ದಳು. ಸಾಲದ್ದಕ್ಕೆ ಅಪಮಾನದ ಅಸಹನೀಯ ಆಘಾತದಿಂದ ಅವಳು ಮತ್ತಿಷ್ಟು ಜರ್ಜರಿತಳಾದಳು. ಅದರಿಂದ ಅವಳ ಬುದ್ಧಿ ತೀರ ವಿಕಾರಗೊಂಡು ಅವಳನ್ನು ಅಡ್ಡಹಾದಿ ಹಿಡಿಯುವಂತೆ ಮಾಡಿತು. ಮೃತ್ಯುವನ್ನಪ್ಪಿಕೊಳ್ಳಲು ಅವಳು ತನ್ನ ಕೈಕಾಲುಗಳನ್ನು ಸೀರೆಯಿಂದ ಗಟ್ಟಿಯಾಗಿ ಕಟ್ಟಿಕೊಳ್ಳುತ್ತಿರುವಾಗ ಒಮ್ಮೆಲೆ ಎಲ್ಲಿಯೊ ಸಿಡಿಲೆರಗಿದಂತಾಯಿತು! ಸಿಡಿಲಿನ ಅಬ್ಬರದ ದನಿಯಿಂದ ಚಕಿತಳಾಗಿ ಮುಖವೆತ್ತಿದಾಗ ನದಿಯಾಚೆಗೆ ಸ್ನಾನಕ್ಕಾಗಿ ಕಟ್ಟಿಸಿದ ಘಟ್ಟವೂ ಮೀನು ಹಿಡಿಯುವ ತಟ್ಟಿಗೆಯ ಮಂಚವೂ ಅವಳ ಕಣ್ಣಿಗೆ ಬಿದ್ದವು. ಆ ಘಟ್ಟ ಹಾಗೂ ಆ ಮಂಚ ಈವರೆಗೆ ಕಣ್ಣು ತೆರೆದು ಮೌನವಾಗಿ ಅವಳ ದಾರಿಯನ್ನೆ ನೋಡುತಿದ್ದವೆನಿಸಿತು. ದೃಷ್ಟಿ ಮಿಲನವಾದೊಡನೆಯೆ ಅವು ವಿರಾಜಳನ್ನು ಸನ್ನೆಯಿಂದ ಕರೆಯುತ್ತಿರುವಂತೆ ತೋರಿತು. ವಿರಾಜ ಒಮ್ಮಿಂದೊಮ್ಮೆಲೆ ಭೀಷಣಕಂಠದಲ್ಲಿ: "ಸಾಧು ಪುರುಷರಾದ ನನ್ನ ಪತಿ ನಾನು ಮುಟ್ಟಿದ ನೀರನ್ನೂ ಕುಡಿಯುವುದಿಲ್ಲವಾದರೆ ಬಿಡಲಿ! ಆದರೆ ಈ ಪಾಪಿಷ್ಠನಾದರೂ ಸೇವಿಸುವನಲ್ಲ! ಹಾಗೆಯೆ ಆಗಲಿ!"

ಕಮ್ಮಾರನ ಕುಲಿಮೆಯಲ್ಲಿ ಹಾಕಿದ ಇದ್ದಲು ಭಗ್‌ಭಗ್ಗೆಂದು ಉರಿದು ಬೂದಿಯಾದಂತೆ ವಿರಾಜಳ ಕಾಯ್ದು ಮಿದುಳಿನಲ್ಲಿ ಅತ್ಯಂತ ಅಮೌಲ್ಯವಾದ ಅವಳ ಹೃದಯವು ಸುಟ್ಟು ಬೂದಿಯಾಯಿತು. ವಿರಾಜ ಗಂಡನನ್ನು ಮರೆತಳು. ಧರ್ಮವನ್ನು ಮರೆತಳು; ಸಾವನ್ನೂ ಮರೆತಳು. ಕಣ್ಣು

ಗಳನ್ನು ಸಾಧ್ಯವಿದ್ದಷ್ಟು ಹಿಗ್ಗಿಸಿ ಏಕದೃಷ್ಟಿಯಿಂಥ ಆ ಬದಿಯ ಘಟ್ಟದೆಡೆ ನೋಡತೊಡಗಿದಳು. ಪುನಃ ಖಡ್‌ಖಡಲ್ಲೆಂದು ಸಿಡಿಲೆರಗಿತು. ಕತ್ತಲಲ್ಲಿ ಮಿಂಚು ಆಕಾಶದ ಒಡಲನ್ನೆ ಸೀಳಿ ಹೊರಹೊಮ್ಮಿದಂತಾಯಿತು.

ವಿರಾಜಳ ಕಣ್ಣುಗಳು ಒಮ್ಮೆಲೆ ಸಂಕುಚಿತವಾಗಿ ಆ ಮಿಂಚಿನೆಡೆ ಅವಳ ದೃಷ್ಟಿ ಹೋಯಿತು. ಅವಳು ಮುಖವೆತ್ತಿ ಒಮ್ಮೆ ನೀರಿನೆಡೆ ನೋಡಿದಳು; ಹೊರಳಿ ಒಮ್ಮೆ ಮನೆಯ ಕಡೆಗೆ ನೋಡಿದಳು. ಬಳಿಕ ತನ್ನ ಕೈಗಳಿಂದಲೆ ಕಟ್ಟಿಕೊಂಡಿದ್ದ ಬಂಧನಗಳನ್ನೆಲ್ಲ ಸಡಲಿಸಿ ನಿಮಿಷಮಾತ್ರದಲ್ಲಿಯೆ ವನದಲ್ಲಿ ಅದೃಶ್ಯಳಾದಳು. ವಿರಾಜ ದ್ರುತಗತಿಯಲ್ಲಿ ಮುಂದುವರೆಯುತ್ತಿದ್ದಳು. ಅವಳ ಕಾಲ ಸದ್ದಿಗೆ ಎಷ್ಟೊ ಕ್ರಿಮಿಕೀಟಗಳು ಸರಸರವೆಂದು ಬುಳುಬುಳುವೆಂದು ಸರಿದು ಅವಳಿಗ ದಾರಿಮಾಡಿಕೊಟ್ಟವು. ಆದರೆ ಅವಳಿಗಾವುದೂ ಲಕ್ಷ್ಯವಿರಲಿಲ್ಲ. ಅವಳು ಹೋಗುತ್ತಿದ್ದುದು ಸುಂದರಿಯ ಮನೆಗೆ. ದೇವಮಂದಿರದ ಪೂಜಾಸಾಮಗ್ರಿ ಕಳುಹಲು ಎಷ್ಟೊ ಬಾರಿ ಪೂಜಾರಿಯ ಮನೆಗೆ ಹೋಗಿ ಬರುತ್ತಿದ್ದಾಗ ಅವಳು ಸುಂದರಿಯ ಮನೆಯನ್ನೂ ನೋಡಿದ್ದಳು. ಆ ಹಳ್ಳಿಯಲ್ಲಿ ದೊಡ್ಡವರ ಮನೆಯ ಸೊಸೆಯಾಗಿ ಬಂದಿದ್ದರೂ ಚಿಕ್ಕಂದಿನಲ್ಲಿಯೆ ಅವಳಿಗೆ ಆ ಹಳ್ಳಿಯ ಎಲ್ಲ ಓಣಿ ಸಂದಿಗಳು ಪರಿಚಿತವಾಗಿದ್ದುವು. ಆದುದರಿಂದ ಅವಳು ಸ್ವಲ್ಪ ಸಮಯದಲ್ಲಿಯೆ ಸುಂದರಿಯ ಮನೆ ಬಾಗಿಲಿಗೆ ಬಂದು ನಿಂತಳು. ಬಾಗಿಲು ಒಳಗಿನಿಂದ ಇಕ್ಕಿತ್ತು.

ವಿರಾಜಳು ಸುಂದರಿಯ ಮನೆಯ ಬಾಗಿಲನ್ನು ತಟ್ಟಿ, ಎರಡು ಗಂಟೆಗಳ ತರುವಾಯ ಅಂಬಿಗ ಕಂಗಾಲಿಯು ದೋಣಿಯನ್ನು ನೀರಿನಲ್ಲಿ ಇಳಿಬಿಟ್ಟ. ಹೀಗೆ ರಾತ್ರಿಯೆ ದೋಣಿಯನ್ನು ಬಿಡುವುದು ಕಂಗಾಲಿಗೆ ಹೊಸದಲ್ಲ. ಹಣದಾಸೆಯಿಂದ ಇಂಥ ಕಗ್ಗತ್ತಲು ರಾತ್ರಿಯಲ್ಲಿಯೆ ಎಷ್ಟೊ ಬಾರಿ ಸುಂದರಿಯನ್ನು ನದಿಯಾಚೆಗೆ ತಲ್ಪಿಸಿ ಬಂದಿದ್ದ. ಆದರೆ ಇಂದು ಒಂದು ವೈಶಿಷ್ಟ್ಯವಿತ್ತು. ಅವನ ದೋಣಿಯಲ್ಲಿ ಒಬ್ಬರ ಬದಲು ಇಬ್ಬರು ನೀರವಭಾವದಿಂದ ಕುಳಿತಿದ್ದರು. ಆ ಕತ್ತಲಲ್ಲಿ ಕಂಗಾಲಿಗೆ ವಿರಾಜಳ ಮುಖ ಚೆನ್ನಾಗಿ ಕಾಣಲಿಲ್ಲ. ಕಂಡಿದ್ದರೂ ಅವಳನ್ನು ಗುರುತಿಸುವುದೂ ಸಾಧ್ಯವಾಗುತಿದ್ದಿಲ್ಲ.

ಘಟ್ಟದ ಬಳಿ ಬಂದಾಗ, ದೂರ ಕತ್ತಲಲ್ಲಿ ಉದ್ದ ನಿಲುವಿಕೆಯ ವ್ಯಕ್ತಿಯೊಂದು ವಿರಾಜಳ ಕಣ್ಣಿಗೆ ಸ್ಪಷ್ಟವಾಗಿ ಕಾಣಿತು. ಕೂಡಲೆ ವಿರಾಜಳ ಕಣ್ಣುಗಳು ಮುಚ್ಚಿಕೊಂಡವು.

ಸುಂದರಿ ಮೆಲ್ಲಮೆಲ್ಲನೆ ಕೇಳಿದಳು – “ ಹೌದು ತಾಯಿ, ನಿಮ್ಮನ್ನಾರು ಹೀಗೆ ಹೊಡೆದದ್ದು? ”

ಚಂಚಲಚಿತ್ತಳಾಗಿ ವಿರಾಜ ಉತ್ತರವಿತ್ತಳು — “ ಇದೇನು ಸುಂದರಿ, ನನ್ನ ಮೈಗೆ ಕೈಹಚ್ಚುವ ಅಧಿಕಾರ ಅವರಿಗಲ್ಲದೆ ಬೇರಾರಿಗಿದೆ? ಇದೆಲ್ಲ ಗೊತ್ತಿದ್ದೂ ನೀನೇಕೆ ಯಾವಾಗಲೂ ಈ ಪ್ರಶ್ನೆ ಕೇಳುವೆ? ”

ಸುಂದರಿ ನಾಚಿಗೊಂಡು ಸುಮ್ಮನುಳಿದಳು.

ಅರ್ಧಗಂಟೆಯ ಬಳಿಕ ಸುಸಜ್ಜಿತ ದೋಣಿಯೊಂದು ಎದುರುಬಂದು ನಿಂತಿತು. ಆ ದೋಣಿಗೆ ಲಂಗರು ಹಾಕುವುದನ್ನು ಕಂಡು “ಹೌದು ಸುಂದರಿ, ನನ್ನೊಟ್ಟಿಗೆ ನೀನೂ ಬರುವೆಯಲ್ಲವೆ ? ” ಎಂದಳು ವಿರಾಜ.

“ ಇಲ್ಲ ತಾಯಿ, ನಾನಿಲ್ಲಿರದಿದ್ದರೆ ಜನ ಸಂಶಯಪಡಬಹುದು. ನೀವೊಬ್ಬರೆ ಹೋಗಿ. ಅನಂತರ ನಿಮ್ಮ ಬೆಟ್ಟಿಗೆ ಬರುವೆ.”

ವಿರಾಜ ಸುಮ್ಮನಾದಳು. ಸುಂದರಿಯು ಕಂಗಾಲಿಯ ದೋಣಿಯಲ್ಲಿ ಕುಳಿತು ತನ್ನ ಮನೆಗೆ ಹಿಂತಿರುಗಿದಳು.

ಚಿಕ್ಕ ಕೊಠಡಿಯುಳ್ಳ ಜಮೀನುದಾರನ ಆ ದೋಣಿಯು ಅಲಂಕಾರ ವಾಗಿ ಸಿಂಗರಿಸಲ್ಪಟ್ಟಿತ್ತು. ವಿರಾಜಳನ್ನು ಹೊತ್ತುಕೊಂಡು ಆ ದೋಣಿ ಬಾಣವೇಗದಲ್ಲಿ ತ್ರಿವೇಣಿಯೆಡೆಗೆ ಓಡತೊಡಗಿತು.

ಬೆಸ್ತರು ಬಲವಾಗಿ ಹುಟ್ಟುಹಾಕುತಿದ್ದಾಗ ಚಪ್‌ಚಪ್ಪೆಂದು ಸದ್ದಂ ಟಾಗುತಿತ್ತೇನೊ ನಿಜ. ಆದರೆ ಆಗ ಗಾಳಿಯು ಸುಯ್ಯೆಂದು ಬೀಸುತಿದ್ದ ದರಿಂದ ಆ ಹುಟ್ಟಿನ ಸದ್ದು ಗಾಳಿಯ ಸದ್ದಿನೊಂದಿಗೆ ವಿಲೀನವಾಗುತಿತ್ತು. ರಾಜೇಂದ್ರ ದೋಣಿಯ ಒಂದು ಬದಿ ಮುಖ ಕೆಳಗೆಮಾಡಿ ಮೌನವಾಗಿ ಸೆರೆಕುಡಿಯತೊಡಗಿದ. ಸ್ವಲ್ಪ ದೂರದಲ್ಲಿಯೆ ಕಲ್ಲುಮೂರ್ತಿಯಂತೆ ಕುಳಿತ ವಿರಾಜ ನೀರಿನೆಡೆ ನಿಟ್ಟಿಸಿನೋಡುತ್ತಿದ್ದಳು. ರಾಜೇಂದ್ರ ಇಂದು ಬಹಳ ಸೆರೆ ಕುಡಿದ: ಅಮಲಿನಿಂದ ಅವನ ದೇಹರಕ್ತವೆಲ್ಲವೂ ಕಾಯ್ದಂತಾಯಿತು. ಅವನು ಉನ್ಮತ್ತನಾದನು. ದೋಣಿಯು ಸಪ್ತಗ್ರಾಮದ ಸೀಮೆಯನ್ನು ದಾಟದ ಬಳಿಕ ಅವನು ವಿರಾಜಳ ಮಗ್ಗುಲಿಗೆ ಬಂದು ಕುಳಿತ. ವಿರಾಜಳ ಒರಟು ಕೂದಲುಗಳು ಬೆನ್ನ ಮೇಲಿಂದ ಇಳಿದು ದೋಣಿಯ ನೆಲದಮೇಲೆ ಬಿದ್ದಿದ್ದವು. ತಲೆಯಮೇಲಿನ ಸೆರಗು ಜಾರಿ ಹೆಗಲಮೇಲೆ ಬಿದ್ದಿತ್ತು. ಆದರೆ

ಅವಳಿಗಿದಾವುದೂ ಗೊತ್ತಿರಲಿಲ್ಲ. ತನ್ನ ಮಗ್ಗುಲಲ್ಲಿ ಯಾರು ಕುಳಿತ ರೆಂಬುದೂ ಅವಳ ಲಕ್ಷ್ಯಕ್ಕೆ ಬರಲಿಲ್ಲ.

ಆದರೆ ರಾಜೇಂದ್ರನ ಸ್ಥಿತಿ ಮಾತ್ರ ವಿಚಿತ್ರವಾಯಿತು. ಭಯಾನಕ ಸ್ಥಾನಕ್ಕೆ ಏಕಾಂಗಿಯಾಗಿ ಒಮ್ಮೆಲೆ ಬಂದಾಗ ಭೂತ ಪಿಶಾಚಿಗಳು ಎದುರು ಗೊಂಡ ಕಾಲಕ್ಕೆ ಮನುಷ್ಯನ ಹೃದಯವು ಹೆದರಿಕೆಯಿಂದ ಹಿಂಡಿ ಹಿಪ್ಪಿ ಯಾಗುವಂತೆ ರಾಜೇಂದ್ರನು ವಿರಾಜಳ ಮಗ್ಗುಲಲ್ಲಿ ಕುಳಿತುಕೊಂಡ. ಕೂಡಲೆ ಅವನ ಎದೆಯಲ್ಲಿ ಭಯದ ಸುಂಟರಗಾಳಿಯು ಎದ್ದಿತು. ಅವನು ಅವಳನ್ನೇ-ದಿಟ್ಟಿಸಿ ನೋಡತೊಡಗಿದ. ಅವಳನ್ನು ತಾನಾಗಿ ಮಾತನಾಡಿಸುವ ಧೈರ್ಯ ಅವನಿಗಾಗಲೆ ಇಲ್ಲ.

ವಿರಾಜಳನ್ನು ಹೊಂದಲು ರಾಜೇಂದ್ರ ಅಸಾಧ್ಯ ಪ್ರಯತ್ನ ಮಾಡಿದ್ದ. ಎರಡು ವರ್ಷ ಅವನು ಅವಳನ್ನು ನೆಳಲಿನಂತೆ ಅನುಸರಿಸಿದ್ದ. ನಿದ್ರಾವಸ್ಥೆ ಯಲ್ಲಾಗಲಿ, ಜಾಗೃತಾವಸ್ಥೆಯಲ್ಲಾಗಲಿ ಅವನು ವಿರಾಜಳನ್ನೆ ನೆನೆಸುತಿದ್ದ. ಅವಳನ್ನು ಕಣ್ತುಂಬ ಒಮ್ಮೆ ನೋಡುವ ಆಸೆಯಿಂದ ಊಟ ನಿದ್ದೆಗಳ ಪರಿವಿಲ್ಲದೆ ಎಷ್ಟೊ ಸಮಯದವರೆಗೆ ಪೊದೆ ಸಂದಿಗಳಲ್ಲಡಗಿ ಕುಳಿತಿರುತಿದ್ದ. ಆದರೆ ತಾನು ಕನಸುಮನಸಿನಲ್ಲಿಯೂ ನಂಬದ ಸಂಗತಿಯನ್ನು ಸುಂದರಿ ಕಿವಿಯಲ್ಲಿ ಉಸಿರಿದಾಗ ಅವನು ಬೆರಗಾದ. ಎಷ್ಟೊ ಹೊತ್ತಿನವರೆಗೆ ಆ ಮಾತು ನಿಜವೆಂದು ತಿಳಿಯಲು ಅವನಿಂದಾಗಲಿಲ್ಲ.

ಸನಿಹದಲ್ಲಿಯೆ ನದಿಯು ಹೊರಳಿ ಮುಂದೆ ಸಾಗಿತ್ತು. ನದಿಯ ಇಬ್ಬದಿಯಲ್ಲಿಯೂ ಮೆಳೆಯ ಗುಂಪುಗಳು ದಟ್ಟವಾಗಿ ಬೆಳೆದಿದ್ದವು. ಆಲದ ಎಷ್ಟೊ ಹಳೆಯ ಹೆಮ್ಮರಗಳೂ ಇದ್ದುವು. ಅವುಗಳ ಮಧ್ಯೆ ನದಿಯು ಹರಿಯುತ್ತಿತ್ತು. ಹೆಜ್ಜೆಹೆಜ್ಜೆಗೆ ಮೆಳೆಯ ತುದಿಗಳೂ ಮರಗಳ ಟೊಂಗೆಗಳೂ ನದಿಯ ಮುಖದವರೆಗೆ ಬಾಗಿದ್ದರಿಂದ ಆ ಭಾಗವೆಲ್ಲವೂ ಅಂಧಕಾರಮಯ ವಾಗಿತ್ತು. ನದಿಯು ಹೊರಳುವ ಭಾಗವನ್ನು ದೋಣಿ ಸೇರುವ ಮೊದಲೆ ರಾಜೇಂದ್ರ ಬಹು ಪ್ರಯತ್ನದಿಂದ ಧೈರ್ಯವನ್ನು ತಂದುಕೊಂಡ. ದನಿ ಯಲ್ಲಿಯ ಜಡತೆಯನ್ನು ದೂರಮಾಡಿ ಅತ್ಯಂತ ಪ್ರಯಾಸದಿಂದ ಹೀಗೆ ಹೇಳಿದ: "ನೀವು.......ತಾವು.......ತಾವು ಸ್ವಲ್ಪ ಒಳಗೆ ಕುಳಿತುಕೊಳ್ಳಿ. ಇಲ್ಲಿ ಗಿಡಗಳ ರೆಂಬೆ ತಲೆಗೆ ತಾಕಬಹುದು."

ವಿರಾಜ ಮುಖ ಹೊರಳಿಸಿ ರಾಜೇಂದ್ರನೆಡೆಗೆ ನೋಡಿದಳು. ಸನಿಹ ದಲ್ಲಿಯೆ ಚಿಕ್ಕ ದೀವಿಗೆಯೊಂದು ಉರಿಯುತ್ತಿತ್ತು. ಆದರ ಮಸಕು ಬೆಳಕಿ ನಲ್ಲಿಯೆ ಅವರ ದೃಷ್ಟಾದೃಷ್ಟಿಯಾಯಿತು. ಈ ಮೊದಲೂ ಒಮ್ಮೆ ಅವರ ಕಣ್ಮಿಲನವಾಗಿತ್ತು. ಆದರೆ ದುಷ್ಟಹೇತುವುಳ್ಳ ರಾಜೇಂದ್ರ ಮೊದಲನೆ ಬಾರಿ ತನಗೆ ಹಕ್ಕಿಲ್ಲದ ಭೂಮಿಯಮೇಲೆ ನಿಂತು ವಿರಾಜಳನ್ನು ನೋಡಿದ್ದ. ಆದುದರಿಂದ ಆಗ ಯಾರು ಏನೆಂದರೂ ಅದನ್ನು ಸಹಿಸಿಕೊಳ್ಳದೆ ಗತ್ಯಂತರ ವಿರಲಿಲ್ಲ. ಈ ಮಾತೂ ಅವನಿಗೆ ಗೊತ್ತಿತ್ತು. ಆದರೆ ಇಂದು ವಿರಾಜ ಳನ್ನು ನೋಡುತ್ತಿದ್ದುದು ತನ್ನ ಅಧಿಕಾರವಿದ್ದ ಭೂಮಿಯಮೇಲೆ ನಿಂತು ಕೊಂಡು. ಇಂದು ಉನ್ಮತ್ತನಾಗುವಷ್ಟು ಸೆರೆ ಕುಡಿದಿದ್ದ. ಆದರೂ ವಿರಾಜಳ ದೃಷ್ಟಿಯನ್ನು ಇಂದೂ ಸಹಿಸಲು ಸಮರ್ಥನಾಗಲಿಲ್ಲ. ಒಂದು ಬಾರಿ ವಿರಾಜಳ ಮುಖದೆಡೆ ದಿಟ್ಟಿಸಿನೋಡಿ ಅಧೋಮುಖಿಯಾಗಿ ಕುಳಿತ.

ಇತ್ತ ವಿರಾಜಳ ಪರಿಸ್ಥಿತಿ ಬೇರೆಯೆ ಇತ್ತು. ಅವಳು ರಾಜೇಂದ್ರ ನನ್ನು ದಿಟ್ಟಿಸುತ್ತಲೆ ಇದ್ದಳು. ಈ ದಿನ ಅವಳ ಹತ್ತಿರದಲ್ಲಿಯೆ ಪರಪುರುಷ ನೊಬ್ಬ ಕುಳಿತಿದ್ದ. ಆದರೂ ಅವಳು ತನ್ನ ಮುಖದಮೇಲೆ ಸೆರಗೆಳೆದು ಕೊಳ್ಳಲಿಲ್ಲ. ಅಲ್ಲದೆ ತಲೆಯಮೇಲೂ ಸೆರಗಿರಲಿಲ್ಲ. ಅಷ್ಟರಲ್ಲಿ ದೋಣಿಯು ಗಾಢ ನೆಳಲಿನ ಭಾಗಕ್ಕೆ ಬಂದಿತು. ಬೆಸ್ತರು ಹುಟ್ಟು ಕಡಿಯುವುದನ್ನು ನಿಲ್ಲಿಸಿ ಗಿಡಗಳ ಟೊಂಗೆಗಳನ್ನು ಮಗ್ಗಲುಮಾಡಿ ದಾರಿ ಮಾಡತೊಡಗಿದರು. ಆ ಭಾಗದಲ್ಲಿ ನದಿಯ ಪಾತ್ರ ಉಳಿದ ಭಾಗಕ್ಕಿಂತ ಕಿರಿದಾಗಿದ್ದರಿಂದ ನೀರಿನ ಸೆಳೆತವೂ ಅತ್ಯಂತ ಪ್ರಬಲವಾಗಿತ್ತು. ದೋಣಿಯು ಸಾವಧಾನದಿಂದ ಸಾಗಲಿ ಎಂದು ಬೆಸ್ತರಿಗೆ ರಾಜೇಂದ್ರ ಏರುದನಿಯಲ್ಲಿ ಆದೇಶವಿತ್ತ. ಇವೆಲ್ಲ ಸಂಗತಿಗಳೆಡೆ ಲಕ್ಷ್ಯವೀಯುತ್ತಲೆ ವಿರಾಜಳನ್ನುದ್ದೇಶಿಸಿ— "ಸ್ವಲ್ಪ ಒಳಗೆ ನಡೆಯಿರಿ. ಇಲ್ಲಿ ನಿಮಗೆ ರೆಂಬೆಗಳು ತಾಕಬಹುದು" ಎಂದು ಹೇಳಿದವನೆ ತಾನು ಕೊಠಡಿಯೊಳಗೆ ಹೋದ. ವಿರಾಜಳಿಗೆ ಆಗಿನ್ನೂ ಪ್ರಜ್ಞೆ ತಿಳಿದಿರ ಲಿಲ್ಲ. ಯಂತ್ರದಿಂದ ಎಳೆದಂತವಳಾಗಿ ಅವಳೂ ರಾಜೇಂದ್ರನ ಹಿಂದೆಯೆ ಕೊಠಡಿಯಲ್ಲಿ ಪ್ರವೇಶಿಸುವುದರಲ್ಲಿದ್ದಳು. ಆದರೆ ಕೋಣೆಯೊಳಗೆ ಕಾಲಿಡು ತ್ತಲೆ 'ಅಮ್ಮಯ್ಯಾ!' ಎಂದು ಚೀರಿದಳು.

ವಿರಾಜಳ ಬೊಬ್ಬೆಯಿಂದ ರಾಜೇಂದ್ರ ಬೆಚ್ಚಿಬಿದ್ದ. ಆಗ ದೀಪದ ಮಸುಕು ಬೆಳಕಿನಲ್ಲಿಯೆ ವಿರಾಜಳ ಕಣ್ಣುಗಳೆರಡೂ ಕೆಂಪಾಗಿ ಕಂಡವು;

ಹಾಗೂ ಹಣೆಯಮೇಲಿನ ಕುಂಕುಮ, ರಕ್ತದಲ್ಲಿ ತೊಯ್ದುದರಿಂದ ಚಾಮುಂಡಿಯ ಮೂರನೆಯ ಕಣ್ಣಿನಂತೆ ಉರಿಯುವಂತೆಯೂ ತೋರಿತು. ಸೆರೆಯ ಅಮಲಿನಲ್ಲಿ ಲೋಲಾಡುತಿದ್ದ ರಾಜೇಂದ್ರನು ಹೆದರಿ ಏಟುತಿಂದ ನಾಯಿ ಕಿರುಗುಡುವಂತೆ ಚೀರುತ್ತ ನಡುಗುತ್ತಲೆ ಆ ಜ್ಯೋತಿಯ ಎದುರಿಗೆ ನಿಲ್ಲಲಾರದೆ ಮರೆಯಾದ. ಕತ್ತಲಲ್ಲಿ ಹಾವಿನಮೇಲೆ ಅಕಸ್ಮಾತ್ತಾಗಿ ಕಾಲಿಟ್ಟಾಗ ಅದರ ನುಣ್ಣನೆಯ, ತಣ್ಣನೆಯ ಮೈಯ ಸ್ಪರ್ಶದಿಂದ ಭಯಗೊಂಡು ಒಂದೇಟಿಗೆ ಹಾರಿ ದೂರ ನಿಲ್ಲುವಂತೆ, ವಿರಾಜ ಒಂದೇಟಿಗೆ ಆ ಕೊಠಡಿಯಿಂದ ಹಾರಿ ಹೊರಬಂದು ನಿಂತಳು. ಅನಂತರ ಒಂದು ಸಲ ನೀರಿನೆಡೆ ನೋಡಿ "ಅಮ್ಮಯ್ಯಾ, ನಾನಿದನ್ನೇನು ಮಾಡಿದೆ!" ಎಂದೆನ್ನುತ್ತ ಮೈನವಿರೇಳುವಷ್ಟು ಭಯಾನಕವಾದ ಆ ನದಿಯಲ್ಲಿ ಹಾರಿದಳು.

ಬೆಸ್ತರೂ ಸಹ ಅಂಜಿಕೆಯಿಂದ ಚೀರಿದರು. ದೋಣಿ ಮುಗುಚಿ ಬೀಳುವಂತೆ ಅತ್ತಿಂದಿತ್ತ ಇತ್ತಿಂದತ್ತ ಓಡಾಡತೊಡಗಿದರು. ಆದರೆ ಅವರಿಂದ ವಿರಾಜಳನ್ನು ಹುಡುಕುವುದಾಗಲೆ ಇಲ್ಲ. ಎಲ್ಲರೂ ವ್ಯಾಕುಲಚಿತ್ತರಾಗಿ ಕಣ್ಣು ಹಿಗ್ಗಿಸಿ ಅತ್ತಿತ್ತ ನೋಡತೊಡಗಿದರು. ಆದರೆ ಆ ಗಾಢಗತ್ತಲೆಯಲ್ಲಿ ಅವರಿಗೆಲ್ಲಿಯೂ ಏನೂ ಕಾಣಲಿಲ್ಲ. ರಾಜೇಂದ್ರ ದಂಗಾಗಿ ಕಲ್ಲಿನ ಮೂರ್ತಿಯಂತೆ ಕುಳಿತಿದ್ದ. ಅವನ ಅಮಲು ಆಗಲೆ ಹಾರಿಹೋಗಿತ್ತು. ಆದರೆ ಆತ ನಿಂತಲ್ಲಿಯೆ ನಿಂತನಲ್ಲದೆ ಸ್ವಲ್ಪವೂ ಅಲುಗಾಡಲಿಲ್ಲ. ಸ್ವಲ್ಪ ಸಮಯದ ನಂತರ ದೋಣಿಯು ಪ್ರವಾಹದೇಟಿಗೆ ತಾನಾಗಿಯೆ ದಂಡೆಗೆ ಬಂದು ನಿಂತಿತು. ಆಗ ಬೆಸ್ತರೆಲ್ಲರೂ ಉದ್ವಿಗ್ನರಾಗಿ ರಾಜೇಂದ್ರನ ಬಳಿ ಬಂದರು. ಭಯದಿಂದ ಅವರ ಉಸಿರೆ ಕಟ್ಟಿದಂತಾಗಿತ್ತು. ನಡಗುತ್ತಲೆ ಅವರು "ಬಾಬೂಸಾಹೇಬರೆ, ಇನ್ನುಮುಂದೆ ಏನುಮಾಡುವುದು! ಪೋಲೀಸರಿಗೆ ವರದಿ ಕಳಿಸುವುದೆ?" ಎಂದು ವಿಚಾರಿಸಿದರು. ರಾಜೇಂದ್ರನೂ ವಿಹ್ವಲಗೊಂಡಿದ್ದ. ಬೆಸ್ತರೆಡೆ ನೋಡಿ ಒಡಕುದನಿಯಲ್ಲಿ – "ಪೋಲೀಸರಿಗೆ ವರದಿಮಾಡುವುದೆ? ಏಕೆ, ಜೇಲು ನೋಡುವ ಹುರುಪುಂಟಾಗಿದೆಯೆ? ಏ ಗದಾಯಿ, ನೀವೆಲ್ಲರೂ ಸಾಧ್ಯವಿದ್ದಷ್ಟು ಬೇಗ ಇಲ್ಲಿಂದ ಕಾಲು ಕಿತ್ತುವ ಯೋಚನೆ ಮಾಡಿ" ಎಂದು ಆದೇಶವಿತ್ತ.

ಗದಾಯಿಯು ರಾಜೇಂದ್ರ ಕುಮಾರನ ಬಹು ಹಳೆಯ ಸೇವಕ. ಅವನಿಗೆ ರಾಜೇಂದ್ರ ಕುಮಾರನ ಪರಿಸ್ಥಿತಿಯೆಲ್ಲವೂ ಮೊದಲಿನಿಂದಲೆ

ಗೊತ್ತಿತ್ತು. ಆದುದರಿಂದ ಈ ವಿಷಯ ಅರ್ಥ ಮಾಡಿಕೊಳ್ಳಲು ಅವನಿಗೆ ತಡವಾಗಲಿಲ್ಲ. ಯಜಮಾನನ ಸಂಕೇತದಿಂದಲೆ ಅವನ ಕಂಣುಗಳು ನಿಚ್ಚಳವಾದವು. ಅವನು ಬೆಸ್ತರೆಲ್ಲರನ್ನೂ ಒಂದೆಡೆ ಕರೆದು ಪಿಸುದನಿಯಲ್ಲಿ —“ಬಲವಾಗಿ ಹುಟ್ಟು ಕಡೆಯಿರಿ” ಎಂದು ಸೂಚನೆಯಿತ್ತ. ಅವನ ಸೂಚನೆಯಂತೆ ಅವರು ನಡೆದರು. ಅವರ ಪ್ರಯತ್ನದಿಂದ ಕ್ಷಣದಲ್ಲಿಯೆ ದೋಣಿಯು ಮಿಂಚಿನ ವೇಗದಲ್ಲಿ ಮುಂದುವರಿಯಿತು.

ಕಲಕತ್ತೆಯ ಸಮೀಪಕ್ಕೆ ಬಂದ ನಂತರವೆ ರಾಜೇಂದ್ರ ಸಮಾಧಾನದ ಉಸಿರನ್ನೆಳೆದುಕೊಂಡ. ಮುನ್ನಾ ರಾತ್ರಿ ವಿರಾಜಳೊಂದಿಗೆ ದೃಷ್ಟಾದೃಷ್ಟಿಯಾದಾಗ ಅವಳ ಸಿಡುಗಂಣುಗಳನ್ನು ನೋಡಿದ್ದ. ಇಂದು, ಹಾಡು ಹಗಲಿನಲ್ಲಿ ಅದನ್ನು ನೆನೆಸಿದಾಗ, ತಾನು ಇಷ್ಟು ದೂರದಲ್ಲಿದ್ದರೂ ಅವನ ದೇಹ ಥರ ಥರ ನಡುಗತೊಡಗಿತು. ಕಿವಿ ಹಿಂಡಿಕೊಂಡು ಮನದಲ್ಲಿಯೆ – “ಈ ಜೀವನದಲ್ಲಿ ಇನ್ನೆಂದಿಗೂ ಅಂಥ ಹೊಲೆಗೆಲಸ ಮಾಡಲಾರೆ. ಯಾರ ಅಂತರಂಗದಲ್ಲಿ ಎಂಥ ಶಕ್ತಿ ಅಡಗಿರುವುದೊ ಯಾರು ಬಲ್ಲರು? ಆ ಹುಚ್ಚಿಯು ತನ್ನ ಸಿಡಿಗಂಣುಗಳಿಂದ ನನ್ನ ತಂದೆ ತಾತಂದಿರ ಪ್ರಾಣವನ್ನೂ ಸುಟ್ಟು ಬಿಡದಿದ್ದುದು ನನ್ನ ಪರಮ ಸೌಭಾಗ್ಯ!” ಎಂದುಕೊಂಡ. ಮುಂದೆ ಪುನಃ ಇಂಥ ಕೆಲಸ ಮಾಡುವ ಧೈರ್ಯ ತನ್ನಿಂದಾದೀತೆಂಬ ಆಸೆ ರಾಜೇಂದ್ರನಲ್ಲಿ ಉಳಿಯಲಿಲ್ಲ. ಇಷ್ಟು ದಿನಗಳವರೆಗೆ ಮೂರ್ಖ ಕುಲಟೆಯರ ಮಡುವಿನಲ್ಲಿ ಬಿದ್ದು ತನ್ನ ಮನೋ ವಿನೋದ ಮಾಡಿಕೊಳ್ಳುತಿದ್ದ. ಸತಿ ಸಾಧ್ವಿಯರ ಶಕ್ತಿ ಎಂಥದೆಂಬುದು ಅವನಿಗೆ ಗೊತ್ತಿರಲಿಲ್ಲ. ಇಂದು ಆ ಪಾಪಿಷ್ಠನ ಜೀವನದಲ್ಲಿ ಮೊದಲನೆಯ ಬಾರಿ ವಿವೇಕ ಮೂಡಿತು. ಹಾವಿನ ಪರಿಯೆನೋ ಚಿನ್ನಾಟದ ವಸ್ತುವಾಗಬಹುದು; ಆದರೆ ದೊಡ್ಡ ಜಮೀನುದಾರನ ಮಗನಾದರೇನು — ಸಜೀವ ಹಾವು ಅವನ ಚಿನ್ನಾಟದ ಸಾಮಗ್ರಿಯಾಗಲು ಒಪ್ಪೀತೆ?

## ೧೫

ಅಂದು ಮೂರನೆಯ ಜಾವದಲ್ಲಿ ವಿರಾಜ ತನ್ನ ತಲೆಯ ಬಳಿ ಕುಳಿತ ಹೆಂಗುಸನ್ನು ವಿಚಾರಿಸಲಾಗಿ ತಾನು ಹುಗುಳಿಯ ಆಸ್ಪತ್ರೆಯಲ್ಲಿದ್ದುದಾಗಿ

ಅವಳಿಗೆ ತಿಳಿಯಿತು. ಕಫದ ವಿಕಾರದಿಂದ ಎಷ್ಟೋ ದಿನಗಳವರೆಗೆ ಅವಳಿಗೆ ಪ್ರಜ್ಞೆಯೆ ಇರಲಿಲ್ಲ. ಪ್ರಜ್ಞೆ ಬಂದನಂತರ ಅವಳು ಮೆಲ್ಲ ಮೆಲ್ಲನೆ ತನ್ನ ಸಂಬಂಧವಾಗಿ ಎಲ್ಲವನ್ನೂ ಸ್ಮರಿಸಿಕೊಳ್ಳಲು ಯತ್ನಿಸತೊಡಗಿದಳು. ಒಂದೊಂದಾಗಿ ಎಲ್ಲವೂ ಅವಳಿಗೆ ನೆನಪಾದವು.

ಮಳೆಗಾಲದ ಒಂದು ರಾತ್ರಿ ಅವಳ ಗಂಡ ಅವಳ ಪವಿತ್ರತೆಯ ವಿಷಯದಲ್ಲಿ ಅಪನಂಬಿಗೆ ತೋರಿದ. .ರೋಗದಿಂದಲೂ ಉಪವಾಸದಿಂದಲೂ ಅವಳ ದೇಹ ಬಳಲಿ ಬೆಂಡಾಗಿ ಶಿಥಿಲಗೊಂಡಿತ್ತು; ಮನವೂ ಚಂಚಲವಾಗಿತ್ತು. ಅಂಥ ಸ್ಥಿತಿಯಲ್ಲಿ ಆ ದೊಡ್ಡ ಅಪಮಾನ ಸಹಿಸಲು ಅವಳಿಗಾಗಲಿಲ್ಲ. ಅನೇಕ ದಿನಗಳಿಂದ ಅಪಮಾನ ಸಹಿಸಿ ಸಹಿಸಿ ಅವಳೂ ಒಂದು ರೀತಿಯಲ್ಲಿ ಹುಚ್ಚಳಂತಾಗಿದ್ದಳು. ಅಂದು ಅಭಿಮಾನ ಪ್ರೇರಿತಳಾಗಿ ಜುಗುಪ್ಸೆಗೊಂಡು ಗಂಡನ ಮುಖವನ್ನೆಂದಿಗೂ ನೋಡಲಾರೆನೆಂದು ನಿಶ್ಚಯಿಸಿದಳು. ಆದುದರಿಂದ ಆತ್ಮೀಯ ಬಂಧನಗಳನ್ನೆಲ್ಲ ಹರಿದು ಆತ್ಮಹತ್ಯೆ ಮಾಡಿಕೊಳ್ಳುವ ಉದ್ದೇಶದಿಂದ ನದಿಯೆಡೆಗೆ ಹೊರಟಳು. ಆದರೆ ನದಿಯ ಹತ್ತಿರ ಬಂದ ಬಳಿಕ ಆತ್ಮಹತ್ಯೆ ಮಾಡಿಕೊಳ್ಳಲು ಅವಳಿಗೆ ಸಾಧ್ಯವಾಗಲಿಲ್ಲ.

ಹಾಗೆಯೇ ಅವಳು ಜ್ವರದ ಬೇಗೆಯ ಮಟ್ಟಿನಲ್ಲಿ ಬಂದು ದೋಣಿಯಲ್ಲಿ ಕುಳಿತಳು. ಅರ್ಧ ಹಾದಿ ದಾಟಿದ ನಂತರ ಒಮ್ಮೆಲೆ ನದಿಯಲ್ಲಿ ಹಾರಿ ಈಜುತ್ತ ದಂಡೆ ಸೇರಿದಳು. ಅಲ್ಲಿಯೆ, ಒದ್ದೆಗೂದಲುಗಳಿಂದಲೆ, ಒದ್ದೆ ಬಟ್ಟೆಯಿಂದಲೇ ಇಡಿಯ ರಾತ್ರಿ ಜ್ವರದಿಂದ ನಡುಗುತ್ತ ಕಳೆದಳು. ಕೊನೆಗೆ ಅದು ಹೇಗೊ ಒಬ್ಬ ಗೃಹಸ್ಥನ ಮನೆಯ ಬಾಗಿಲ ಬಳಿ ಬಂದು ಅಲ್ಲಿಯೆ ಒರಗಿದಳು. ವಿರಾಜಳಿಗೆ ಇದಿಷ್ಟೆ ನೆನಪಾಗುತಿತ್ತು. ತನ್ನನ್ನು ಆಸ್ಪತ್ರೆಗೆ ತಂದವರಾರು, ಯಾವಾಗ ತಂದುದು ಹಾಗೂ ಈ ಅವಸ್ಥೆಯಲ್ಲಿ ತಾನು ಅದೆಷ್ಟು ದಿನಗಳಿಂದ ಆಸ್ಪತ್ರೆಯಲ್ಲಿ ಬಿದ್ದಿರುವೆನೆಂಬುದು ಆವುದೂ ಅವಳಿಗೆ ಹೊಳೆಯಲಿಲ್ಲ. ಇದಲ್ಲದೆ ಮನೆಯನ್ನು ತೊರೆದು ಪರಪುರುಷನ ಬೆನ್ನುಹತ್ತಿ ಮನೆ ಬಿಟ್ಟು ಓಡಿಹೋದ ಕುಲಟೆ ತಾನೆಂಬ ಸಂಗತಿಯೂ ಅವಳಿಗೆ ನೆನಪಾಗುತ್ತಿತ್ತು.

ವಿರಾಜಳಿಗೆ ಮುಂದಿನ ಸಂಗತಿಗಳ ಬಗ್ಗೆ ಯಾವ ನೆನಪೂ ಆಗಲಿಲ್ಲ. ಅಲ್ಲದೆ ಅವುಗಳ ಬಗ್ಗೆ ವಿಚಾರ ಮಾಡಲು ಅವಳಿಗೆ ಇಚ್ಛೆಯೂ ಆಗುತಿರಲಿಲ್ಲ.

ಅವಳು ಕ್ರಮೇಣ ಗುಣಮುಖಳಾಗತೊಡಗಿದಳು. ಎದ್ದು ಕುಳಿತುಕೊಳ್ಳು ವಷ್ಟು ಶಕ್ತಿಯೂ ಬಂದಿತು. ಕೆಲದಿಸಗಳಲ್ಲಿಯೆ ಅತ್ತಿತ್ತ ಮೆಲ್ಲನೆ ನಡೆ ಯಲೂ ಬಂದಿತು. ಆದರೆ ಅವಳು ಬೇಕೆಂತಲೆ ಭವಿಷ್ಯತ್ತಿನ ಚಿಂತೆಯನ್ನು ಯತ್ನಪೂರ್ವಕವಾಗಿ ಹತ್ತಿಕ್ಕಿಕೊಂಡಳು. ಅವಳ ದೇಹದ ಅಣುಅಣುಗಳಿಗೂ ಆ ಘಟನೆಗಳ ಅನುಭವ ಉಂಟಾಗತೊಡಗಿತು. ಆದರೆ ನಾಟಕದ ಅಂಕು ಪಡದೆ ಬಿದ್ದ ಮೇಲೆ ಆ ಪಡದೆಯ ಕೆಳ ತುದಿಯನ್ನೆತ್ತಿ ಒಳಗೆ ಇಣಿಕಿ ನೋಡಲೂ ಅವಳಿಗೆ ಭಯ. ಆಗ ಶರೀರ ಮಂಜುಗಡ್ಡೆಯಂತಾಗುತಿತ್ತು ; ಅಲ್ಲದೆ ತಲೆಯೂ ಸುತ್ತಿದಂತಾಗುತಿತ್ತು. ಫಾಲ್ಗುಣ ಮಾಸದ ಒಂದು ದಿನ ಅದೆ ಹೆಂಗುಸು ಪುನಃ ಬಂದು — "ಈಗ ನೀವು ಗುಣಮುಖವಾದಿರಮ್ಮ - ಇನ್ನು ಮುಂದೆ ನೀವು ಬೇರೆ ವ್ಯವಸ್ಥೆ ನೋಡಿಕೊಳ್ಳಬೇಕು," ಎಂದು ಹೇಳಿದಳು. "ಒಳ್ಳೆಯದು" ಎಂದು ವಿರಾಜ ಸುಮ್ಮನುಳಿದಳು. ವಿರಾಜ ಳಿಗೆ ಈ ಸೂಚನೆಯಿತ್ತ ಹೆಂಗಸು ಆ ವೈದ್ಯಶಾಲೆಯ ಒಬ್ಬ ದಾಯಿ. ಈ ಬಡ ಹೆಂಗುಸಿಗೆ ಬಹುಶಃ ಆತ್ಮೀಯರಾರೂ ಇರಲಿಕ್ಕಿಲ್ಲವೆಂದು ಆ ದಾಯಿಗೂ ಅನಿಸುತಿತ್ತು. ಅವಳು ಪುನಃ — "ತಪ್ಪು ತಿಳಿದುಕೊಳ್ಳಬೇಡಿಯಮ್ಮಾ - ನಿಮ್ಮನ್ನು ಇಲ್ಲಿ ತಂದು ಬಿಟ್ಟ ಆ ಜನ ನಿಮ್ಮ ಬಳಗದವರಲ್ಲವೆ? ಅವರು ನಿಮ್ಮನ್ನು ನೋಡಲು ಸಹ ಒಮ್ಮೆಯೂ ಬರಲಿಲ್ಲವಲ್ಲ ?" ಎಂದು ವಿಚಾರಿಸಿದಳು.

ವಿರಾಜಳೆಂದಳು : "ಅಲ್ಲ — ಅವರು ನಮ್ಮ ಬಳಗದವರಲ್ಲ - ನಾನು ಅವರನ್ನು ಕಂಣಾರೆ ಸಹ ನೋಡಲಿಲ್ಲ. ಮಳೆಗಾಲದ ರಾತ್ರಿ ನಾನು ತ್ರಿವೇಣಿ ನದಿಯಲ್ಲಿ ಮುಳುಗಿ ಬಿಟ್ಟೆ. ಬಹುಶಃ ಕರುಣೆಗೊಂಡು ಅವರು ನನ್ನನ್ನು ಇಲ್ಲಿ ತಂದು ಬಿಟ್ಟಿರಬೇಕು."

"ಏನು! ನದಿಯಲ್ಲಿ ಮುಳುಗಿದ್ದಿರಾ? ಹಾಗಾದರೆ ನಿಮ್ಮ ಊರಾವುದು?"

ತನ್ನ ಸೋದರಮಾವನ ಊರಿನ ಹೆಸರು ಹೇಳಿ - "ನಾನಲ್ಲಿಗೇ ಹೋಗುವೆ. ಅಲ್ಲಿ ನನ್ನ ಬಳಗದವರಿದ್ದಾರೆ" ಎಂದಳು.

ಆ ದಾಯಿ ಮುದಿ ವಯಸ್ಸಿನವಳು. ವಿರಾಜಳ ಮಧುರ ಸ್ವಭಾವ ವನ್ನು ಕಂಡು ಆ ದಾಯಿಯ ಹೃದಯದಲ್ಲಿ ಮಮತೆಯ ಸೆಲೆ ಉಕ್ಕಿತು. ದಯಾರ್ದ್ರ ಕಂಠದಲ್ಲಿ - "ಹಾಗೆಯೆ ಆಗಲಿ, ನೀವು ಅಲ್ಲಿಗೇ ಹೋಗಿರಮ್ಮ.

ಈಗ ಸ್ವಲ್ಪ ಜೋಕೆಯಿಂದಿರಿ. ಒಂದೆರಡು ದಿನಗಳಲ್ಲಿಯೆ ನಿಮ್ಮ ಪ್ರಕೃತಿ ಪೂರ್ಣ ಸುಧಾರಿಸುವುದು" ಎಂದಳು.

ವಿರಾಜ ನಸುನಗುತ-"ಇನ್ನೇನು ಸುಧಾರಿಸುವುದಮ್ಮಾ! ಈ ಕಣ್ಣೂ ನೆಟ್ಟಗಾಗುವಂತಿಲ್ಲ; ಈ ಕೈಯೂ ಕೆಲಸಕ್ಕೆ ಬರುವಂತಿಲ್ಲ."

ಬೇನೆ ಬಿದ್ದಬಳಿಕ ಅವಳ ಎಡಗಣ್ಣಿನ ದೃಷ್ಟಿ ಹೋಗಿತ್ತು. ಅಲ್ಲದೆ ಎಡಗೈಯೂ ಮುರಿದಂತಾಗಿತ್ತು; ಆ ದಾಯಿ ಕಣ್ಣಲ್ಲಿ ಕಂಬನಿ ತುಂಬಿ ಕೊಂಡು-"ಹಾಗೇನಿಲ್ಲವಮ್ಮಾ. ನಿಮ್ಮ ಕಣ್ಣು ಕೈಗಳೆರಡೂ ನೆಟ್ಟಗಾಗ ಬಹುದು" ಎಂದು ಸಮಾಧಾನಪಡಿಸಿದಳು.

ಮಾರನೆಯ ದಿನ ಆ ದಾಯಿ ವಿರಾಜಳಿಗೆ ತನ್ನ ಕಂಬಳಿಯನ್ನೂ ಹಾದಿ ವೆಚ್ಚಕ್ಕಾಗಿ ಸ್ವಲ್ಪ ಹಣವನ್ನೂ ಕೊಟ್ಟಳು. ವಿರಾಜ ಅವುಗಳನ್ನು ಸ್ವೀಕರಿಸಿದಳು. ಬಳಿಕ ಆ ದಾಯಿಗೆ ನಮಸ್ಕರಿಸಿ ಬೀಳ್ಕೊಟ್ಟು ಮುಂದೆ ನಡೆದಳು. ನಾಲ್ಕಾರು ಹೆಜ್ಜೆ ಮುಂದೆ ಸಾಗಿದ ಬಳಿಕ ಪುನಃ ಮರಳಿ ಬಂದು, "ನನ್ನ ಮುಖವನ್ನೊಮ್ಮೆ ನೋಡಿಕೊಳ್ಳುವ ಇಚ್ಛೆಯಾಗಿದೆ. ಸ್ವಲ್ಪ ಕನ್ನಡಿ ಸಿಗುವಂತಿದ್ದರೆ........" ಎಂದು ದೈನ್ಯದಿಂದ ಬೇಡಿದಳು.

"ಸಿಗುವಂತಿದ್ದರೆ........ಏಕೆ? ಇದೀಗ ತಂದುಕೊಡುವೆ" ಎಂದು ಆ ದಾಯಿ ಒಳಗೆ ಹೋದಳು. ಸ್ವಲ್ಪ ಸಮಯದ ಬಳಿಕ ಕನ್ನಡಿಯನ್ನು ತಂದು ವಿರಾಜಳ ಕೈಗಿತ್ತವಳೆ ಅಲ್ಲಿಂದ ತಟ್ಟನೆ ಕಾಲ್ದೆಗೆದಳು. ವಿರಾಜ ತನ್ನ ಮಂಚದಮೇಲೆ ಕುಳಿತು ತನ್ನ ಮುಖದೆದುರು ಕನ್ನಡಿ ಹಿಡಿದಳು. ಕನ್ನಡಿಯಲ್ಲಿಯ ತನ್ನ ಮುಖದ ಪ್ರತಿಬಿಂಬ ನೋಡಿದೊಡನೆಯೆ ಅತ್ಯಂತ ಜುಗಪ್ಸೆಯಿಂದ ಅವಳ ಮುಖ ತನ್ನಷ್ಟಕ್ಕೆ ತಾನೆ ಬೇರೆ ಕಡೆಗೆ ಹೊರಳಿತು. ಕನ್ನಡಿಯನ್ನು ದೂರ ಎಸೆದು ಹಾಸಿಗೆಯಲ್ಲಿ ಮುಖವಡಗಿಸಿ ಕರುಣೆ ಉಕ್ಕು ವಂತೆ ವಿರಾಜ ಅಳತೊಡಗಿದಳು. ಅವಳ ತಲೆಗೂದಲುಗಳೆಲ್ಲವೂ ಉದುರಿ ಹೋಗಿದ್ದವು. ಆಗಸವನ್ನೆ ಮುಚ್ಚುವ ಕಾರ್ಮೋಡದಂತಹ ಅವಳ ಕೇಶ ರಾಶಿಗಳು ಈಗೆಲ್ಲಿ? ಮುಖ ರೂಪವನ್ನು ಹೀಗೆ ಅಂದಗೆಡಿಸುವರಾರು? ಕಮಲದಂತಹ ಅವಳ ಕಣ್ಣುಗಳು ಏನಾದುವು? ಅತುಲನೀಯವಾದ ಅವಳ ಬಂಗಾರದ ದೇಹಕಾಂತಿಯನ್ನು ಆದಾರು ಅಪಹರಿಸಿದರು? ವಿರಾಜ ಮನದಲ್ಲಿಯೆ ಎಂದುಕೊಂಡಳು: "ಹೇ ಭಗವಂತನೆ, ಇಂದೆಂಥ ಪರಿಶಿಕ್ಷೆ

ನೀನು ನನಗೆ ವಿಧಿಸಿದೆ? ಮುಂದೆ ಎಂದಾದರೂ ಅವರ ಬೆಟ್ಟಿ ಘಟಿಸಿದರೆ, ಅವರಿಗೆ ಈ ಮುಖವನ್ನು ಹೇಗೆ ತೋರಿಸಲಿ?'' ಜೀವಿಸಿರುವವರೆಗೂ ಮನುಷ್ಯನ ಆಸೆ ಎಂದಿಗೂ ಹಿಂಗದು. ಈ ಕಾರಣದಿಂದಲೊ ಏನೊ, ಅತ್ಯಂತ ಕ್ಷೀಣ ಆಸೆಯೊಂದು ಝರಿಯಂತೆ ಅವಳ ಅಂತರಂಗದ ಏಕಾಂಕಿತ ಸ್ಥಳದಲ್ಲಿ ಹರಿಯುತ್ತಿತ್ತು. ಓ, ದಯಾಮಯ ಭಗವಂತನೆ, ಈ ಚಿಕ್ಕ ಆಸೆಗೆ ಪುಟವೀಯುವುದರಲ್ಲಿ ನಿನಗಾವ ಲಾಭವೆಂದು ಅದರಲ್ಲಿ ತೊಡಗಿರುವೆ?

ಪ್ರಜ್ಞೆ ಬಂದಂದಿನಿಂದ ವಿರಾಜ ರೋಗಶಯ್ಯೆಯಲ್ಲಿಯೆ ಬಿದ್ದು ತನ್ನ ಮನಶ್ಚಕ್ಷುಗಳಿಂದ ಪತಿಯ ಅತ್ಯುಜ್ವಲವಾದ ಮುಖವನ್ನು ನೋಡುತಿದ್ದಳು. ಅವನ ಸ್ವರೂಪವನ್ನು ನೆನೆಸುತಿರುವಾಗ ಅವಳಿಗೆ ಒಮ್ಮೊಮ್ಮೆ ''ನಾನು ಪ್ರಜ್ಞೆಯಿಲ್ಲದಾಗ ಹಾಗೆ ಮಾಡಿದೆ. ಬುದ್ಧಿಪೂರ್ವಕವಾಗಿ ಮಾಡಿದುದಲ್ಲ. ಎಂದಮೇಲೆ ನನ್ನ ಈ ಪಾಪಕಾರ್ಯ ಕ್ಷಮಾರ್ಹವಲ್ಲವೆ? ಮಾನವನ ಎಲ್ಲ ಪಾಪಕೃತ್ಯಗಳಿಗೂ ಪ್ರಾಯಶ್ಚಿತ್ತವಿದ್ದೆ ಇದೆ. ಆದರೆ ನನ್ನ ಈ ಪಾಪಕ್ಕೆ ಪ್ರಾಯಶ್ಚಿತ್ತವಿಲ್ಲವೆ? ನಿಜವಾಗಿಯೂ ನಾನು ಪಾಪ ಮಾಡಿಲ್ಲವೆಂದು ಅಂತರ್ಯಾಮಿಯೂ ಬಲ್ಲ. ಹೀಗಿದ್ದೂ ತನ್ನಿಂದಾದ ಈ ಚಿಕ್ಕ ಅಪರಾಧವು ಇಷ್ಟು ದಿನಗಳವರೆಗೆ ಮಾಡಿದ ಗಂಡನ ಸೇವೆಯ ಪುಣ್ಯಪ್ರಭಾವದಿಂದ ನಷ್ಟವಾಗುವುದಿಲ್ಲವೆ?'' ಎಂದೆನಿಸುತ್ತಿತ್ತು.

ವಿರಾಜ ಒಂದೊಂದು ದಿನ ಮನದಲ್ಲಿಯೆ ಎಂದುಕೊಳ್ಳುತಿದ್ದಳು? ''ಅವರ ಮನದಲ್ಲಿ ಕೋಪವೆಂದಿಗೂ ಉಳಿಯುವುದಿಲ್ಲ. ನಾನು ಅವರ ಬಳಿ ಹೋಗಿ ಕಾಲುಗಳ ಮೇಲೆ ಬಿದ್ದು ಎಲ್ಲವನ್ನೂ ಸವಿಸ್ತಾರವಾಗಿ ಹೇಳಿದರೆ ನನ್ನನ್ನು ಕಡೆಗಣಿಸಲಾರರು.'' ತಾನು ಪ್ರಾರ್ಥಿಸಿಕೊಂಡರೆ ಗಂಡ ಏನು ಮಾಡಬಹುದೆಂಬ ಕಲ್ಪನಾ ಚಿತ್ರವನ್ನು ವಿಧವಿಧವಾಗಿ ತನ್ನ ಮಾನಸ ಪಟಲದಲ್ಲಿ ಮೂಡಿಸುವುದರಲ್ಲಿಯೆ ಅವಳು ಇಡಿಯ ರಾತ್ರಿಯನ್ನು ಜಾಗರಣೆಯಾಗಿಯೆ ಕಳೆಯುತಿದ್ದಳು. ಈ ವಿಷಯವಾಗಿ ಯೋಚಿಸುವಾಗ ನಿದ್ದೆ ಬರುವಂತಾದರೆ ತಟ್ಟನೆದ್ದು ಮೋರೆ ಕಂಣುಗಳನ್ನು ಚೆನ್ನಾಗಿ ತೊಳೆದುಕೊಂಡು ಬಂದು ಪುನಃ ಹೊಸ ರೀತಿಯ ಚಿತ್ರವನ್ನು ಮನದಲ್ಲಿಯೆ ಬರೆಯ ತೊಡಗುತಿದ್ದಳು. ಹೇ ಭಗವಂತನೆ, ನೀನವಳ ಆ ವಿಚಿತ್ರ ಕಲ್ಪನಾ ಚಿತ್ರವನ್ನು ತೊಡೆದು ಅದೇಕೆ ಹಾಳು ಮಾಡಿ ಬಿಟ್ಟೆ! ಇಂದು ಅವಳು ತನ್ನ

ಗಂಡನ ಬಳಿಗೆ ಹೋಗಿ ಅವನ ಕಾಲುಗಳ ಮೇಲೆ ಹಣೆಯಿಟ್ಟು ಬೋರಲು ಬಿದ್ದರೂ, ಲಜ್ಜಾ ಪೀಡಿತಳಾದ ಅವಳಿಗೆ ತಲೆಯೆತ್ತಿ ಗಂಡನ ಮುಖ ನೋಡುವ ಧೈರ್ಯವುಂಟಾದೀತೆ?

ವೈದ್ಯಶಾಲೆಯ ಆ ಕೋಣೆಯಲ್ಲಿಯೆ ಇನ್ನೊಬ್ಬ ರೋಗಿಯಿದ್ದಳು. ಕೊನೆಯ ದಿನ ವಿರಾಜ ಅಳುತಿದ್ದುದನ್ನು ನೋಡಿ ಎದ್ದು ಬಂದು ಅಚ್ಚರಿಯ ವಾಣಿಯಲ್ಲಿ – "ಏನಾಯಿತಮ್ಮ? ನೀವು ಹೀಗೇಕೆ – ಅಳುತಿದ್ದೀರಿ?" ಎಂದು ವಿಚಾರಿಸಿದಳು. ಅಯ್ಯೊ ದೈವವೆ. ಬೇರೊಂದು ವ್ಯಕ್ತಿಗೆ ವಿರಾಜ ಅಳುವ ಕಾರಣ ತಿಳಿದುಕೊಳ್ಳುವ ಕುತೂಹಲವುಂಟಾಗಿದೆ!

ವಿರಾಜ ಗಡಿಬಿಡಿಯಿಂದ ಕಂಣುಗಳನ್ನೊರಸಿಕೊಂಡು ಮೆಲ್ಲ ಮೆಲ್ಲನೆ ಕೋಣೆಯಿಂದ ಹೊರಬಿದ್ದಳು.

ವಿರಾಜ ಬೀದಿಯ ಒಂದು ಮೂಲೆಗೆ ಬಂದು ನಿಂತಿದ್ದಳು. ಈಗ ತಾನೆಲ್ಲಿ ಹೋಗಬೇಕೆಂಬುದೂ ಅವಳಿಗೆ ಗೊತ್ತಿರಲಿಲ್ಲ. ಬೀದಿಯಲ್ಲಿ ಅಸಂಖ್ಯ ಜನ ಅತ್ತಿತ್ತ ಅಲೆದಾಡುತಿದ್ದರು. ಜನರ ಹೆಜ್ಜೆಯ ಸಪ್ಪಳ, ಮಾತಿನ ಗಲಿಬಿಲಿ, ವಾಹನಗಳ ಖಡಖಡಾಟಗಳಿಂದ ಅಲ್ಲಿಯ ವಾಯು ಮಂಡಲವು ತುಂಬಿ ಹೋಗಿತ್ತು. ವಿರಾಜ, ಅಲೆಯುವ ಅಭ್ಯಾಸವಿಲ್ಲದ ನಿಶ್ಶಕ್ತವಾದ ಕಾಲುಗಳನ್ನು, ಗದ್ದಲ-ಕೋಲಾಹಲಗಳಿಂದ ತುಂಬಿದ ಆ ಮಾರ್ಗದ ಮೇಲೆ ಎಳೆಯ ತೊಡಗಿದಳು. ಆಗ ಉದ್ದನ್ನ ಉಸಿರೊಂದು ವಿರಾಜಳ ಎದೆಯನ್ನೆ ಸೀಳುವಂತೆ ಹೊರಹೊಮ್ಮಿತು. ಅವಳು ಮನದಲ್ಲಿಯೆ ಎಂದುಕೊಂಡಳು: "ದೇವಾ, ನೀನು ಹೀಗೆ ಮಾಡಿದ್ದು ಯೋಗ್ಯವೆ ಆಯಿತು. ಇನ್ನು ನನ್ನ ಮುಖದ ಕಡೆಗೆ ಯಾರೂ ಹೊರಳಿ ನೋಡರು. ಈ ಯಾತ್ರೆಗಾಗಿಯೆ ನನ್ನ ಈ ಮುಖ, ಕಂಣು ಈ ರೂಪಗೊಂಡಿರಬೇಕು. ಅದಕ್ಕಾಗಿಯೆ ಇವುಗಳು ನಿರ್ಗತವಾದವುಗಳಾಗಿರಬೇಕು. ಮನೆ ಬಿಟ್ಟು ಓಡಿ ಹೋದ ಕುಲಟೆ ನಾನು ಎಂದು ನಮ್ಮ ಊರಿನ ಜನ ನಂಬಿದಾರೆ. ಇನ್ನು ಮೇಲೆ ನಾನು ತಲೆಯೆತ್ತಿ ನನ್ನ ಪತಿದೇವನ ಮುಖವನ್ನಾಗಲಿ ನಮ್ಮ ಊರಿನವರನ್ನಾಗಲಿ ನೋಡುವಂತಿಲ್ಲ. ಆದುದರಿಂದಲೆ ದೇವರು ನನ್ನ ಈ ರೂಪವನ್ನು ವಿದ್ರೂಪ ಗೊಳಿಸಿದ್ದಾನೆ. ಹೇ ಭಗವಂತನೆ, ನನ್ನ ಮಂಗಲಕ್ಕಾಗಿಯೆ ನೀನು ಹೀಗೆ ಮಾಡಿದೆ ಎಂದು ನನ್ನ ನಂಬಿಕೆ" ಎನ್ನುತ್ತ ದೇವರಿಗೆ ಧನ್ಯವಾದಗಳನ್ನರ್ಪಿಸುತ್ತ ಅವಳು ಮುಂದೆ ಮುಂದೆ ಸಾಗಿದಳು.

ಎಷ್ಟೋ ದಿನಗಳು ಉರುಳಿ ಹೋದವು. ವಿರಾಜ ಮೊದಲು ಒಕ್ಕಲು ಗಿತ್ತಿತನಕ್ಕೆ ಸಿದ್ಧಳಾದಳು. ಆದರೆ ಅವಳ ದುರ್ಬಲ ದೇಹ ಆ ಕೆಲಸ ಮಾಡಲು ಸಮರ್ಥವಾಗಲಿಲ್ಲ. ಅವಳನ್ನು ಕೆಲಸಕ್ಕಿಟ್ಟುಕೊಂಡವರು ಕೆಲಸ ದಿಂದ ತೆಗೆದು ಹಾಕಿದರು. ಹೀಗಾಗಿ ಅವಳು ಭಿಕ್ಷಾಪಾತ್ರೆಯನ್ನು ನೆಚ್ಚಿ ಕೊಳ್ಳಬೇಕಾಯಿತು. ಮನೆ ಮನೆ ಅಲೆದು, ದೊರೆತುದಷ್ಟನ್ನು ಯಾವು ದಾದರೊಂದು ಗಿಡದಡಿಯಲ್ಲಿ ಕುಚ್ಚಿ ಹೊಟ್ಟೆ ಹೊರುತಿದ್ದಳು. ರಾತ್ರಿಯನ್ನು ಗಿಡದಡಿಯಲ್ಲಿಯೆ ಮಲಗಿ ಕಳೆಯುತಿದ್ದಳು. ಅವಳ ಈಗಿನ ಜೀವನಕ್ಕೂ ಹಿಂದಿನ ಜೀವನಕ್ಕೂ ಎಷ್ಟು ವೈಷಮ್ಯ! ಅವಳುಟ್ಟ ಸೀರೆ ನೂರಾರು ಕಡೆ ಯಲ್ಲಿ ಹರಿದಿತ್ತು! ತಲೆಯ ಮೇಲೆ ಇದ್ದ ಒಂದೆರಡು ಕೂದಲುಗಳೂ ಒರಟಾಗಿದ್ದವು. ದಯಾಳು ಪುರುಷನೊಬ್ಬ ಕರುಣೆಗೊಂಡು ಅವಳಿಗೆ ಹಳೆಯ ಕೊಳಕು ಬಟ್ಟೆಯೊಂದನ್ನು ಕೊಟ್ಟಿದ್ದ. ಅದನ್ನೆ ಅವಳು ಉಟ್ಟು ಕೊಂಡಿದ್ದಳು. ಅವಳ ದುರ್ಬಲವೂ ಸೌಂದರ್ಯ ಹೀನವೂ ಆದ ಶರೀರ ದಂತೆ ಅವಳುಟ್ಟ ಬಟ್ಟೆಯೂ ಕೊಳೆಯಾಗಿತ್ತಲ್ಲದೆ ತುಂಬ ಹರಿದಿದ್ದಿತು. ಆದರೆ ಅವಳ ವಯಸ್ಸು ಇನ್ನೂ ಮೂವತ್ತರ ಒಳಹೊರಗಿರಬಹುದು.

ವಿರಾಜಳಂತಹ ಸುಂದರ ಸ್ತ್ರೀಯನ್ನು ಈ ಭೂಮಂಡಲದಲ್ಲಿಯೆ ಕಾಣುವುದು ವಿರಳವೆನ್ನುವ ದಿನವೊಂದಿತ್ತು. ಆದರೆ ದೇವರು ಅವಳ ಗತಕಾಲದ ಸ್ವತ್ತನ್ನು ಅಪಹರಿಸಿ, ಅವಳ ಅಂದರೂಪವನ್ನು ವಿದ್ರೂಪ ಗೊಳಿಸಿದ. ಅವಳೂ ತನ್ನ ಪೂರ್ವ ಸ್ಥಿತಿಯನ್ನು ಮರೆತಿದ್ದಳು. ಕೇವಲ ಎರಡು ಮಾತುಗಳನ್ನು ಮಾತ್ರ ಮರೆತಿರಲಿಲ್ಲ. ಒಂದು, ಕೈಯೊಡ್ಡುವು ದೆಂದರೆ ಅವಳ ಪ್ರಾಣಕ್ಕೆ ಸಂಚಕಾರ ಬಂದಂತಾಗುತಿತ್ತು. ಜೀವನ ನಿರ್ವಹಣಕ್ಕಾಗಿ ಇತ್ತೀಚೆ ಭಿಕ್ಷಾಪಾತ್ರೆಯನ್ನು ಆಧಾರವಾಗಿಟ್ಟುಕೊಂಡರೂ ಪಾತ್ರೆ ಮುಂದೆ ಮಾಡುವಾಗ ಅವಳ ಗಂಟಲು ಕಟ್ಟಿದಂತಾಗಿ ಶಬ್ದಗಳು ಹೊರಬೀಳುತ್ತಿರಲಿಲ್ಲ. ತಾನು ಬಹು ದೂರದೇಶಕ್ಕೆ ಹೋಗಿ ಸಾಯಬೇ ಕೆಂಬುದೆ ಅವಳ ಎರಡನೆಯ ಆಸೆ. ತನ್ನ ಸಮಾಧಿ ಸ್ಥಾನ ಯಾವ ದೇಶದಲ್ಲಿದೆಯೆಂಬುದು, ಅವಳಿಗೆ ಗೊತ್ತಿರಲಿಲ್ಲ. ಆದರೆ ತಾನು ನಿತ್ಯ

ಈ ಮಾರ್ಗ ಆಕ್ರಮಣಮಾಡುವುದು ಆ ಸ್ಥಾನವನ್ನು ಮುಟ್ಟುವುದಕ್ಕಾಗಿಯೆಂಬುದನ್ನು ಮಾತ್ರ ಅವಳು ಬಲ್ಲಳು. ತನ್ನ ಈ ಅವಸ್ಥೆಯನ್ನು ಗಂಡನ ಕಣ್ಣಿಗೆಂದಿಗೂ ಬೀಳಗೊಡಬಾರದೆಂದು ಅವಳು ನಿರ್ಧರಿಸಿದ್ದಳು. ತಾನೆಂಥ ಅಪರಾಧವೇ ಮಾಡಿರಲಿ ಆದರೆ ಪತಿಯು ತನ್ನೀ ಅವಸ್ಥೆಯನ್ನು ಕಣ್ಣಾರೆ ನೋಡಿದರೆ ಅವನ ಹೃದಯ ಒಡೆದು ಹೋಗದಿರಲಾರದೆಂಬುದನ್ನು ಅವಳು ಒಂದು ಕ್ಷಣವೂ ಮರೆಯಲಿಲ್ಲ. ಆದುದರಿಂದಲೆ ಸಾಧ್ಯವಿದ್ದಷ್ಟು ದೂರ ಹೊರಟುಹೋಗಲು ಯತ್ನಿಸುತ್ತಿದ್ದಳು.

ವಿರಾಜ ಹೀಗೆ ಒಂದು ವರ್ಷ ಮುಂದೆ ಮುಂದೆ ಸಾಗಿದಳು. ಆದರೆ ಅವಳು ಹೋಗಿ ಮುಟ್ಟುವ ಸ್ಥಾನವಾವುದು? ಲಜ್ಜಾಹತವಾದ ತನ್ನ ಕಾದ ತಲೆಯನ್ನು ಸುಖವಾಗಿ ಒರಗಿಸಿ ಕೊನೆಗೊಮ್ಮೆ ಈ ಅಪಮಾನಿತ ಜೀವನವನ್ನು ಮೌನವಾಗಿ ಮುಗಿಸುವ ಸ್ಥಳವಾವುದು? ಈಗೆರಡು ದಿನಗಳಿಂದ ಅವಳು ಒಂದು ಮರದಡಿಯಲ್ಲಿಯೆ ಬಿದ್ದಿದ್ದಳು. ಎದ್ದೇಳುವಷ್ಟು ಶಕ್ತಿಯೂ ಅವಳಿಗಿರಲಿಲ್ಲ. ಮೆಲ್ಲಮೆಲ್ಲನೆ ಕೆಮ್ಮು-ಜ್ವರಗಳೂ ಪುನಃ ಅವಳನ್ನು ಮುತ್ತಿಬಿಟ್ಟವು; ಅಲ್ಲದೆ ಎದೆಯಲ್ಲಿ ನೋವೂ ಪ್ರಾರಂಭವಾಯಿತು. ಮೊದಲಿನಿಂದಲೂ ಅವಳು ದುರ್ಬಲ ಪ್ರಕೃತಿಯವಳು. ಅಂಥ ಸ್ಥಿತಿಯಲ್ಲಿಯೆ ನದಿಯಲ್ಲಿ ಹಾರಿದಳು. ಆಗ ತಾಕಿದ ಪೆಟ್ಟಿನಿಂದ ನಿಶ್ಚೇತನಾವಸ್ಥೆಯಲ್ಲಿಯೆ ಆಸ್ಪತ್ರೆ ಸೇರಿದಳು. ಪೂರ್ಣ ಗುಣಮುಖಳಾಗುವ ಮೊದಲೆ ಆಸ್ಪತ್ರೆಯಿಂದ ಬಿಡುಗಡೆ ಹೊಂದುವಂತಾದಳು. ಜೊತೆಗೆ ದೂರ ಪ್ರವಾಸದ ವ್ರತವನ್ನು ಬೇರೆ ಕೈಕೊಂಡಳು. ಕೆಲಸಲ ಅರೆಹೊಟ್ಟೆ, ಕೆಲಸಲ ಕೇವಲ ನೀರಿನಿಂದ, ಕೆಲಸಲ ಉಪವಾಸದಿಂದಲೆ ತನ್ನ ದಿನಗಳನ್ನು ಸಾಗಿಸಿದ್ದಳು. ಆದರೂ ಅವಳು ತನ್ನ ಪಯಣವನ್ನು ನಿಲ್ಲಿಸುವಂತಿರಲಿಲ್ಲ. ಈವರೆಗೂ ಅವಳಲ್ಲಿ ಸ್ವಲ್ಪ ಜಿಗುಟುತನವಿತ್ತು. ಅದರ ಬಲದಿಂದ ಈವರೆಗೆ ಎಲ್ಲ ಕಷ್ಟಗಳನ್ನು ಸಹಿಸಿದಳು. ಆದರೆ ಈಗ ನಡೆಯುವುದೂ ಅವಳಿಗೆ ಅಸಾಧ್ಯವಾಯಿತು. ಇಂದು ಕಂಣು ಮುಚ್ಚಿ ಮಲಗಿಕೊಂಡಾಗ ಮನದಲ್ಲಿಯೆ ಎಂದುಕೊಳ್ಳತೊಡಗಿದಳು. "ಈ ಗಿಡದಡಿಯಲ್ಲಿಯ ಭೂಮಿಯೆ ನನ್ನ ಸಮಾಧಿಸ್ಥಾನವೆ? ಇಷ್ಟು ದಿನಗಳವರೆಗೆ ಇಷ್ಟೊಂದು ದೇಶಕೋಶಗಳನ್ನು ಸುತ್ತಿದುದು ಈ ಸ್ಥಳ ಸೇರುವುದಕ್ಕಾಗಿಯೆ? ಇಷ್ಟು ದಿನಗಳಿಂದ ಕಾಲೆಳೆದು

ಎಳೆದು ಸೋತು ಸುಣವಾದುದು ಇದೇ ತುಂಡುಭೂಮಿಗಾಗಿಯೆ ? ಇನ್ನು ಪುನಃ ನಾನು ಏಳುವ ಆಸೆಯಿಲ್ಲವಷ್ಟೆ ? ''

ಹಗಲು ಕಳೆಯಿತು. ಮರಗಳ ತುಟ್ಟ ತುದಿಯಲ್ಲಿ ಚಿನ್ನಾಟ ಪಾಡುತಿದ್ದ ಸೂರ್ಯಾಸ್ತಸಮಯದ ಕಿರಣಗಳು ಅದೆಲ್ಲೊ ಮಾಯವಾದವು. ಹಳ್ಳಿಯಲ್ಲಿ ಸಂಜೆಯ ಆರತಿಯ ಶಂಖದ ದನಿಯು ಹವೆಯೊಂದಿಗೆ ಹರಿದು ವಿರಾಜಳ ಕಿವಿಯೊಳಗೆ ಇಳಿಯತೊಡಗಿತು. ತಟ್ಟನೆ ಅವಳ ಮುಚ್ಚಿದ ಕಣ್ಣುಗಳೆದುರಿನಲ್ಲಿ ಅಪರಿಚಿತ ರಮಣಿಯರ ಶಾಂತವೂ ಮಂಗಲವೂ ಆದ ಮೂರ್ತಿಗಳು ಕಾಣತೊಡಗಿದವು. ಅವರೆಲ್ಲರೂ ತಮ್ಮ ತಮ್ಮ ಕಾರ್ಯದಲ್ಲಿ ನಿರತರಾಗಿದ್ದರು. ಕೆಲವರು ದೀಪ ಹಚ್ಚುತಿದ್ದರು. ಕೆಲವರು ದೀಪವೆತ್ತಿಕೊಂಡು ಅತ್ತಿತ್ತ ಓಡಾಡುತಿದ್ದರು. ಕೆಲವರು ಕೊರಳಿಗೆ ಸೆರಗು ಸುತ್ತಿ ದೇವರಿಗೆ ನಮಸ್ಕರಿಸುತಿದ್ದರು. ಹಲವರು ತುಳಸಿ ಕಟ್ಟೆಯ ಮೇಲೆ ನೀಲಾಂಜನವನ್ನಿಟ್ಟು ದೇವಿಯ ಚರಣದಲ್ಲಿ ತಮ್ಮ ಮನದಿಚ್ಛೆಗಳನ್ನು ನಿವೇದಿಸಿಕೊಳ್ಳುತಿದ್ದರು. ಇವೆಲ್ಲವನ್ನೂ ವಿರಾಜ ಕಣ್ಣಾರೆ ನೋಡತೊಡಗಿದಳು ; ಕಿವಿಯಾರೆ ಕೇಳತೊಡಗಿದಳು. ಅನೇಕ ದಿನಗಳ ನಂತರ ಇಂದು ಅವಳ ಕಂಣಿನಲ್ಲಿ ನೀರು ಕದಡಿತು. ತಾನೂ ದೇವರೆದುರಿನಲ್ಲಿ ದೀಪವಿಟ್ಟು ಗಂಡನ ಮುಖವನ್ನು ಸ್ಮರಿಸಿ ಅವರ ಆಯುರಾರೋಗ್ಯ ಹೆಚ್ಚಲೆಂದು ದೇವನಲ್ಲಿ ಪ್ರಾರ್ಥಿಸಿಕೊಳ್ಳದೆ ಎಷ್ಟೊ ವರುಷಗಳು ಸರಿದು ಹೋದವೆಂದು ವಿರಾಜಳಿಗೆನಿಸಿತು. ಈ ಎಲ್ಲ ವಿಚಾರಗಳನ್ನು ಅವಳು ಪ್ರಯತ್ನಪೂರ್ವಕವಾಗಿ ತನ್ನ ಮನದಿಂದ ದೂರವಿಡುತ್ತ ಬಂದಿದ್ದಳು. ಆದರೆ ಅವಳಿಗೆ ಅದರಲ್ಲಿ ಗೆಲವುಂಟಾಗಲಿಲ್ಲ. ಶಂಖದನಿ ಕೇಳಿ ಅವಳ ತೃಷಿತ ಮನವು ಒಂದು ಕ್ಷಣ ಸಹ ತಡಮಾಡದೆ ಆ ಭಗಿನಿಯರ ಹೃದಯದಲ್ಲಿ ಸಮಾವೇಶವಾಯಿತು. ಅವಳ ಮಾನಸ ನೇತ್ರದೆದುರು, ಮನೆ, ಬಾಗಿಲು, ಅಂಗಳ, ತುಳಸಿ ಕಟ್ಟೆ, ದೀಪ— ಎಲ್ಲವೂ ಏಕಾಕಾರವಾದವು. ಅವೆಲ್ಲವೂ ತನಗೆ ಸುಪರಿಚಿತವಾದ್ದುದೆಂದು ಅವಳಿಗೆ ಅನುಭವವಾಯಿತು. ಈ ಎಲ್ಲ ಕಾರ್ಯಗಳಲ್ಲಿಯೂ ತನ್ನ ಕೈವಾಡವಿದ್ದೇ ಇದೆಯೆಂದು ಅವಳಿಗೆ ತೋರಿತು. ಇದರಿಂದ ಅವಳ ದುಃಖ ಶಮನವಾಯಿತು. ಅವಳೆಲ್ಲ ಆಸೆ-ಆಕಾಂಕ್ಷೆಗಳು ಇಂಗಿದವು ; ದುಃಖಬವಣೆಗಳಿಂದುಂಟಾದ ತಾಪವೂ ದೂರಾಯಿತು. ತನ್ಮಯತೆಯಿಂದ ಆ ಭಗಿನಿ

ಯರು ಮಾಡಿದಂತೆಯೆ ತಾನೂ ಮಾಡತೊಡಗಿದಳು. ಅಡುಗೆ ಮಾಡಲು ಅವರು ಅಡುಗೆಮನೆ ಸೇರಿದರು; ವಿರಾಜಳೂ ಅಡುಗೆಮನೆ ಸೇರಿದಳು. ಅಟ್ಟ ಬಳಿಕ ಅವರು ತಮ್ಮ ಪತಿಗಳಿಗೆ ಉಣಬಡಿಸಿದರು; ಅವಳೂ ಅದನ್ನೆ ಅನುಸರಿಸಿದಳು. ಮನೆಗೆಲಸಗಳಿಂದ ಮುಕ್ತರಾದ ಬಳಿಕ ಅವರು ನಿದ್ರಾಸಕ್ತರಾದ ತಮ್ಮ ಗಂಡಂದಿರ ಹಾಸಿಗೆಯ ಬಳಿಗೆ ಹೋದರು. ವಿರಾಜಳೂ ತನ್ನ ಗಂಡನ ಹಾಸಿಗೆಯ ಬಳಿ ಬಂದು ನಿಂತಳು. ಆದರೆ ಆಗ ಒಮ್ಮೆಲೆ ಅವಳಿಗೆ ನಡುಕ ಉಂಟಾಯಿತು. ನಿಜವಾಗಿಯೂ ಇವರು ತನ್ನ ಯಜಮಾನರೇ ಎಂದು ವಿರಾಜಳಿಗೆನಿಸಿತು. ರೆಪ್ಪೆ ಮಿಟುಕದೆ ನಿದ್ರಾಮಗ್ನ ನಾದ ಗಂಡನನ್ನು ನಿಟ್ಟಿಸುತ್ತಲೆ ರಾತ್ರಿಯನ್ನು ಕಳೆದಳು. ಮನೆ ಬಿಟ್ಟು ಹೊರಬಿದ್ದ ನಂತರ ಈವರೆಗೂ ಅವಳು ಗಂಡನ ಇಷ್ಟು ಸನಿಹದಲ್ಲಿ ಕುಳಿತಿರಲಿಲ್ಲ.

ಅವಳು ಮನದಲ್ಲಿಯೆ ಯೋಚಿಸ ತೊಡಗಿದಳು: "ನನ್ನ ಭಾಗ್ಯದಲ್ಲಿ ದೇವರು ಇದೆಂಥ ಸುಖಾನಂದವನ್ನು ಬರೆದಿಟ್ಟಿದ್ದಾನೆ! ಜಾಗರಣೆಯಲ್ಲಿ, ಅರೆನಿದ್ದೆಯಲ್ಲಿ, ನಿದ್ದೆಯಲ್ಲಿ, ಗಾಢ ನಿದ್ದೆಯಲ್ಲಿ ಈ ಸುಖಾನುಭವ ಹೊಂದಿ ಅದೆಷ್ಟು ಆನಂದದಿಂದ ನನ್ನೀ ರಾತ್ರಿ ಕಳೆಯುತ್ತಿದೆ!"

ಚಂಚಲಚಿತ್ತಳಾಗಿ ವಿರಾಜ ಎದ್ದು ಕುಳಿತಳು. ಪೂರ್ವ ದಿಗಂತವು ಇನ್ನು ಪೂರ್ಣವಾಗಿ ಸ್ವಚ್ಛವಾಗಿರಲಿಲ್ಲ. ಧೂಸರವರ್ಣದ ತಿಂಗಳ ಬೆಳಕು ಗಿಡಗಳ ತುಂಬ ಹೂವು ಅರಳಿದಂತೆ ಎಲೆಗಳ ಮಧ್ಯದಿಂದ ಹೊರಸೂಸಿ ಸುತ್ತಲೂ ಹರಡಿತ್ತು. ವಿರಾಜ ಮನದಲ್ಲಿಯೆ ಯೋಚಿಸತೊಡಗಿದಳು. "ನಾನು ನಿಜವಾಗಿಯೂ ಪವಿತ್ರಳಲ್ಲದಿದ್ದರೆ ಅವರಿಂದು ನನಗೇಕೆ ದರ್ಶನ ವಿತ್ತರು? ನನ್ನ ಪಾಪದ ಪ್ರಾಯಶ್ಚಿತ್ತವಾಯಿತೆಂದು ಸೂಚಿಸುವುದಕ್ಕಾ ಗಿಯೆ ನನ್ನ ಮಾನಸ ನೇತ್ರಗಳೆದುರು ಅವರು ದರ್ಶನವಿತ್ತಿರಬೇಕಲ್ಲವೆ? ಹಾಗಾದರೆ ನಾನು ಒಂದು ಕ್ಷಣ ಸಹ ತಡಮಾಡಕೂಡದು."

ಪ್ರಾತಃಕಾಲ ಯಾವಾಗ ಆಗುವುದೊ ಎಂದು ವಿರಾಜ ಕುತೂಹಲ ದಿಂದ ನಿರೀಕ್ಷಿಸತೊಡಗಿದಳು: ಈವರೆಗೂ ಅವಳ ಕಂಣಿನ ಮೇಲೆ ಒಂದು ತೆರೆಯಿತ್ತು. ಇಂದು ಆ ತೆರೆ ಹಾರಿ ಹೋಗಿ ಅವಳ ಹೃದಯವು ಆನಂದ ದಿಂದಲೂ ಮಾಧುರ್ಯದಿಂದಲೂ ತುಂಬಿ ತುಳುಕಿತು. ಅವಳು ಮನದಲ್ಲಿಯೆ

ಎಂದುಕೊಂಡಳು: "ನಮ್ಮಿಬ್ಬರ ಬೆಟ್ಟಿ ಇನ್ನು ಮುಂದೆ ಎಂದಾದರೂ ಘಟಿಸಲಿ, ಬಿಡಲಿ; ಆದರೆ ನಾನು ಅವರನ್ನು ಬಿಟ್ಟು ಒಂದು ಕ್ಷಣವೂ ಇರಲಾರೆ. ಅವರ ಸಾನ್ನಿಧ್ಯ ಪಡೆಯಲು ನನಗೆ ಈ ಮಾರ್ಗವಿದ್ದಿದ್ದರೂ ನಾನು ಈವರೆಗೂ ವ್ಯರ್ಥವಾಗಿ ಅವರ ವಿಯೋಗದುಃಖವನ್ನು ಸಹಿಸುತಿದ್ದೆನಲ್ಲ!" ಇದನ್ನು ನೆನಿಸಿ ವಿರಾಜಳಿಗೆ ದುಃಖ ಉಕ್ಕೇರಿ ಬಂತು. ತನ್ನ ಈ ಅಪರಾಧ ಅವಳ ಹೃದಯವನ್ನು ಶೂಲದಂತೆ ಇರಿಯತೊಡಗಿತು. ಪತಿದೇವನು ತನ್ನನ್ನು ಕರೆಯುತಿದ್ದಾನೆಂಬುದನ್ನು ಅದೇಕೆ ಖಚಿತವಾಗಿ ನಂಬಿದಳೊ ದೇವರೆ ಬಲ್ಲ!

ವಿರಾಜ ಸ್ಪಷ್ಟವಾಗಿ ನುಡಿದಳು: "ಅದೂ ಒಂದು ರೀತಿಯಲ್ಲಿ ನಿಜವೆ! ಅವರ ಅಪ್ಪಣೆಯಿಲ್ಲದೆ ಈ ನನ್ನ ದೇಹವನ್ನು ಹಾಳು ಮಾಡಲು ನಿಜವಾಗಿ ಇದು ನನ್ನದೇ? ನಾನು ತಪ್ಪಿತಸ್ಥಳೊ ಅಲ್ಲವೊ ಎಂದು ನಿರ್ಣಯಿಸುವ ಅಧಿಕಾರ ನನಗಿಲ್ಲ; ಅವರಿಗೊಬ್ಬರಿಗೆ ಮಾತ್ರ ಇದೆ. ಅದಕ್ಕೆ ಯೋಗ್ಯ ಶಾಸನ ಅವರೆ ಮಾಡುವವರು. ನಡೆದ ಸಂಗತಿಗಳನ್ನೆಲ್ಲ ಅವರ ಚರಣಾರವಿಂದಗಳಲ್ಲಿ ನಿವೇದಿಸಿ ನಾನು ನಿಶ್ಚಿಂತಳಾಗುವೆ!"

ಹೀಗೆ ಯೋಚಿಸಿ ವಿರಾಜ ಮನೆಯೆಡೆಗೆ ಮುಖವನ್ನು ಹಿಂದಿರುಗಿಸಿದಳು. ಇಂದು ಅವಳ ಶರೀರ ಅತ್ಯಂತ ದುರ್ಬಲಗೊಂಡಿತ್ತು. ಮುಂದಡಿಯಿಡುವಾಗ ಅವಳ ಪಾದಕ್ಕೆ ಭೂಮಿ ಬಹು ಬಿರುಸಾಗಿದೆಯೆಂದೆನಿಸುತಿತ್ತು. ಈ ದಿನ ಅವಳಿಗೆ ಗ್ಲಾನಿಯು ಎಷ್ಟೂ ಇರಲಿಲ್ಲ. ಅವಳಿಗೊಂದೆ ಯೋಚನೆ — ನಾನೆಂಥ ಭಯಂಕರ ತಪ್ಪು ಮಾಡಿದೆ. ಇದೆಂಥ ಅಹಂಕಾರ ನನ್ನಲ್ಲಿ ಮನೆಮಾಡಿತ್ತು! ನನ್ನ ಈ ಅಸಹ್ಯವಾದ, ನಾಚಿಕೆಗೇಡಾದ ಮುಖವನ್ನು ಎತ್ತಿಕೊಂಡು ವಿಶ್ವದೆದುರು ಪ್ರದರ್ಶಿಸುವಾಗ ನನಗೆ ಎಳ್ಳಷ್ಟೂ ನಾಚಿಕೆಯಾಗಲಿಲ್ಲ! ನನ್ನ ಗುಣ ದೋಷಗಳನ್ನೆಲ್ಲ ಪತಿಯಲ್ಲಿ ನಿವೇದಿಸಲು ನಾನು ಒಂಬತ್ತು ವರುಷದವಳಿರುವಾಗಲೆ, ಸ್ವತಃ ಭಗವಂತನೆ ನನಗಾ ಅಧಿಕಾರ ಕೊಟ್ಟಿದ್ದ. ಆದರೆ ಅವರೆದುರಿನಲ್ಲಿ ಮಾತ್ರ ನಾಚಿದೆನಲ್ಲ!

ಅಂಣನಿಗೆ ಪುಟ್ಟಿಯು ಒಂದು ಕ್ಷಣವೂ ಅವಕಾಶವೀಯುತಿದ್ದಿಲ್ಲ. ದುರ್ಗಾಪೂಜೆಯಲ್ಲಿ ತವರು ಮನೆಗೆ ಬಂದಂದಿನಿಂದ ಪುಷ್ಯ ಮಾಸದ ಸಂಕ್ರಾಂತಿಯ ವರೆಗೂ ಒಂದೂರಿನಿಂದ ಮತ್ತೊಂದೂರಿಗೆ, ಒಂದು ತೀರ್ಥ ಸ್ಥಳದಿಂದ ಮತ್ತೊಂದಕ್ಕೆ ಬಿಟ್ಟೂಬಿಡದೆ ಅಂಣನನ್ನು ಸುತ್ತಿಸಿದಳು. ಪುಟ್ಟಿಗೆ ಆಗ ಜೌವನ; ಜೊತೆಗೆ ಆರೋಗ್ಯಕರವಾದ ಸದೃಢ ದೇಹ; ಅಲ್ಲದೆ ಹೊಸ ಹುರುಪು ಬೇರೆ. ಅವಳಂತೆ ವೇಗವಾಗಿ ಊರಿಂದೂರಿಗೆ ಅಲೆಯುವುದು ನೀಲಾಂಬರನ ಶಕ್ತಿಗೆ ಮೀರಿದ್ದು. ಆತ ಪ್ರಯಾಸದಿಂದ ಸೋತು ಹೋಗಿದ್ದ. ಎಲ್ಲಿಯಾದರೂ ಸ್ವಸ್ಥವಾಗಿ ಕುಳಿತು ಒಂದಿಷ್ಟು ವಿಶ್ರಾಮ ಪಡೆದುಕೊಳ್ಳಲೂ ಅವನಿಗಿಚ್ಛೆಯಿರಲಿಲ್ಲ. ದೇಹದ ಅಣು ಅಣುವೂ ಮನೆಯ ಕಡೆಗೆ ಆಕರ್ಷಿಸಲ್ಪಡುತಿದ್ದುದರಿಂದ ಊರನ್ನಾವಾಗ ಕಂಡೇನೆಂದು ತವಕ ಪಡುತಿದ್ದ. ಊರನ್ನು ಕಾಣುವ ಆತುರತೆ ಅವನ ಮನದಲ್ಲಿ ರಾತ್ರಂದಿನ ತೋರುತಿದ್ದರೂ ಆತುರತೆಯ ಮೂಲ ಕಾರಣ ಅವನ ಬುದ್ಧಿಗೂ ಹೊಳೆಯಲಿಲ್ಲ. ಊರಲ್ಲಾದರೂ ಅಂಥದೇನಿದೆ? ಇಂಥ ಆರೋಗ್ಯಕರವಾದ ಊರಲ್ಲಿ ಅವನ ಮನವೇಕೆ ಚಂಚಲಗೊಳ್ಳುತಿದೆ? ಮೋಹಿನಿ ಪುಟ್ಟಿಗೆ ಆಗಾಗ ಪತ್ರ ಬರೆಯುತಿದ್ದರೂ ಅದರಲ್ಲಿ ಹೇಳಿಕೊಳ್ಳುವಂತಹದೇನೂ ಇರುತಿದ್ದಿಲ್ಲ. ಆದರೂ. ಆ ಹಾಳೂರೇ ಅವನ ಮನವನ್ನು ನಿರಂತರವೂ ಆಕರ್ಷಿಸುತಿದೆಯಲ್ಲ! ಮನೆಯ ಗೀಳಿನಿಂದ ಕೊರಗಿ ಕೃಶವಾದ ಅವನ ದೇಹ ಮತ್ತಿಷ್ಟು ಕೃಶವಾಗ ತೊಡಗಿತು.

ಪುಟ್ಟಿಗೆ ಒಂದೇ ಯೋಚನೆ — ಅಂಣನು ಹಿಂದಿನ ಹಳೆಯ ಚಿಂತೆಗಳನ್ನೆಲ್ಲ ಮರೆತು ಪುನಃ ಮೊದಲಿನಂತೆ ನಿಶ್ಚಿಂತೆಯಿಂದಿರಲಿ; ಸದಾ ಮಿನುಗುವ ಮುಗುಳು ನಗೆ ಅವನ ತುಟಿಯ ಮೇಲೆ ಪುನಃ ಸುಳಿಯಲಿ; ಅವನ ಬಾಯಿಯಲ್ಲಿ ಹಾಡು ಸದಾ ಗುಣುಗುಣಿಸಲಿ. ಅವನ ಕಂಠದಲ್ಲಿ ನಗುವು ಮೊದಲಿನಂತೆ ತುಂಬಿ ಬರಲಿ; ಹಾಗೂ ಆ ಗೆಲುನಗೆ ಅಕಾರಣವಾಗಿ ಅವನ ಮುಖ ಸೂಸಿ ಹರಿದು ಬರಲಿ! ಆದರೆ ತನ್ನೀ ಎಲ್ಲ ಆಸೆಗಳನ್ನು ನಿಷ್ಫಲಗೊಳಿಸಲು ಅಂಣನು ಬದ್ಧಕಂಕಣನಾಗಿದಾನೆಂದು ಪುಟ್ಟಿಗೆ ತೋರಿತು.

ಹೀಗಾಗಬಹುದೆಂದು ಮೊದಲು ಪುಟ್ಟಿಯೂ ಭಾವಿಸಿರಲಿಲ್ಲ. ಎರಡು ದಿನ ಕಳೆದ ಮೇಲೆ, ತಾನೆ ಸರಿಹೋದೀತೆಂದು ಅವಳು ಬಗೆದಿದ್ದಳು. ಆದರೆ ಎರಡೆರಡು ದಿನಗಳೆಂದು ನಾಲ್ಕೈದು ತಿಂಗಳು ಸಂದುಹೋದರೂ ನೀಲಾಂಬರನಲ್ಲಿ ಯಾವ ಮಾರ್ಪಾಟೂ ಕಾಣಬರಲಿಲ್ಲ. ಇದರಿಂದ ಪುಟ್ಟಿಯ ಚಿಂತೆಗೆ ಸೀಮೆಯೇ ಉಳಿಯದಂತಾಯಿತು.

ತೀರ್ಥಯಾತ್ರೆಗೆ ಹೊರಡುವ ದಿನ, ಮೋಹಿನಿಯ ಮಾತು-ಕತೆ ಕೇಳಿ, ವಿರಾಜಳ ಬಗ್ಗೆ ನೀಲಾಂಬರನಲ್ಲಿ ಕರುಣೆಯ ಸೆಲೆ ಉಕ್ಕೇರಿತ್ತು. ಅವನು ಮೋಹಿನಿಯ ಎಲ್ಲ ಮಾತುಗಳನ್ನೂ ನಂಬಿದ. ಈ ಕಾರಣದಿಂದಲೆ ಅಂಣ ಗುಣಮುಖನಾದ ಬಳಿಕ ಚಿಕ್ಕಂದಿನ ಮಾತುಗಳನ್ನೆಲ್ಲ ಸ್ಮರಿಸಿ ಅತ್ತಿಗೆಯನ್ನು ಮನದಲ್ಲಿಯೆ ಕ್ಷಮಿಸಿಬಿಡಬಹುದೆಂದು ಪುಟ್ಟಿ ಮನದಲ್ಲಿಯೆ ಆಸೆ ತಳೆದಳು. ಅವಳಿಗಿನ್ನೊಂದು ಆಸೆ — ಅಂಣನೆದುರು ಅತ್ತಿಗೆಯ ಮಧುರವಾದ ಸನ್ನಿವೇಶಗಳ ಪ್ರಸ್ತಾಪವೆತ್ತಿ ಅವನೆದೆಯಲ್ಲಿ ಅವಳ ಬಗ್ಗೆ ಕ್ಷಮಾಭಾವನೆಯನ್ನು ಉದ್ದೀಪಿಸಬೇಕು ಎಂದು. ಆದರೆ ಅಂತಹ ಅನುಕೂಲ ಪ್ರಸಂಗಗಳೇ ಒದಗಿರಲಿಲ್ಲವೆಂದು ಆಕೆ ಕಳವಳಗೊಂಡಳು. ಇತ್ತ ಅವಳ ಅಂಣನಲ್ಲಿಯೂ ಯಾವ ಸುಧಾರಣೆಯೂ ಕಾಣಲಿಲ್ಲ.

ಸ್ತ್ರೀಯು ಜೀವನದಲ್ಲಿ ಬೇಸರಗೊಂಡು ತನ್ನ ಗಂಡನನ್ನು ಅತ್ಯಂತ ಘೋರ ಸಂಕಟಕ್ಕೆ ಈಡುಮಾಡಿ ದೂರ ಸರಿಯುವಂತಹ ಕಾರಣವಾಗಲಿ ದುಃಖವಾಗಲಿ ಎಂತಹದಿದ್ದೀತೆಂಬ ಕಲ್ಪನೆಯೂ ಪುಟ್ಟಿಗೆ ಹೊಳೆಯಲಿಲ್ಲ; ಅತ್ತಿಗೆ ಒಳ್ಳೆಯವಳೆ ಕೆಟ್ಟವಳೆ ಎಂಬ ಬಗ್ಗೆ ಪುಟ್ಟಿಗೆ ಲಕ್ಷ್ಯವೇ ಇರಲಿಲ್ಲ. ಆದರೆ ಅವಳು ಗಂಡನನ್ನು ಬಿಟ್ಟು ಹೋದುದು ಪುಟ್ಟಿಯ ಕಂಣಿನಲ್ಲಿ ಮಹಾಪರಾಧವಾಗಿತ್ತು. ಆ ಬಗ್ಗೆ ಅವಳು ಅತ್ತಿಗೆಯ ಮೇಲೆ ಕೆಂಡಕಾರುತಿದ್ದಳು. ಆದರೆ ಅದೇ ದುರ್ದೈವಿ ಅತ್ತಿಗೆಯ ವಿಯೋಗ ವ್ಯಥೆಯಲ್ಲಿಯೆ ಅಂಣ ತೊಳಲಾಡುತಿರುವುದನ್ನು ಕಂಡು ಅವಳಿಗೆ ಅಂಣನ ಮೇಲೂ ಕೋಪ.

ಒಂದು ದಿನ ಬೆಳಿಗ್ಗೆ ಪುಟ್ಟಿ ಮುಖವುಬ್ಬಿಸಿಕೊಂಡು ಬಂದು "ಅಂಣಾ, ನಾವಿನ್ನು ಮನೆಗೆ ಹಿಂದಿರುಗೋಣ" ಎಂದಳು.

ನೀಲಾಂಬರ ಸ್ವಲ್ಪ ಅಚ್ಚರಿಪಟ್ಟು ತಂಗಿಯ ಮುಖವನ್ನೆ ನೋಡ ತೊಡಗಿದ. ಮಾಘಮಾಸ ಮುಗಿಯುವ ವರೆಗೆ ಪ್ರಯಾಗದಲ್ಲಿಯೆ ಉಳಿಯುವುದೆಂಬುದಾಗಿ ಮೊದಲೆ ನಿಶ್ಚಿತವಾಗಿತ್ತು.

ಅಂಣನ ಮನದಿಂಗಿತವನ್ನರಿತು ಪುಟ್ಟಿಯೆಂದಳು: "ನಾನಿನ್ನು ಒಂದು ದಿನವೂ ಇಲ್ಲಿ ಉಳಿಯಲಾರೆ. ನಾವು ನಾಳೆಯೆ ಹೊರಡಬೇಕು."

ಪುಟ್ಟಿ ಕೋಪಗೊಂಡಿದ್ದಾಳೆಂಬುದಾಗಿ ನೀಲಾಂಬರನಿಗೆ ಗೊತ್ತಾಯಿತು. ಅವಳನ್ನು ಶಾಂತವಾಗಿರಿಸಲು ದೀನವಾಣಿಯಲ್ಲಿ ನೀಲಾಂಬರನೆಂದ: "ಏಕಮ್ಮ — ಮನೆಗೆ ಈಗಲೆ ಮರಳಬೇಕೆಂದು ಅದೇಕೆ ಹೇಳುತ್ತಿರುವೆ?"

ಪುಟ್ಟಿಯು ಯತ್ನ ಪೂರ್ವಕವಾಗಿ ಕಂಬನಿ ತಡೆ ಹಿಡಿದಿದ್ದಳು. ಈಗ ಕಂಬನಿಯ ಕೋಡಿ ಹರಿದು ಬಂದಿತು. ಗದ್ಗದ ಕಂಠದಲ್ಲಿ — "ಇಲ್ಲಿ ಉಳಿಯುವುದರಿಂದೇನು ಲಾಭವಂಣಾ? ನಿನ್ನ ಮನವೂ ಇಲ್ಲಿ ನಿಲ್ಲುವಂತೆ ತೋರಲಿಲ್ಲ. ಮನೆ ಸೇರಬೇಕೆಂದು ನಿನ್ನ ಮನವು ತವಕಪಡುತ್ತಿದೆ. ಆ ಬವಣೆಯಿಂದ ನೀನು ದಿನದಿನಕ್ಕೆ ಬಡವಾಗುತ್ತಿರುವೆ. ನಾನಿನ್ನು ಯಾವ ಕಾರಣದಿಂದಲೂ ಇಲ್ಲಿ ನಿಲ್ಲಲಾರೆ, ಒಂದು ದಿನವೂ ಉಳಿಯಲಾರೆ."

ನೀಲಾಂಬರನು ಸ್ನೇಹಪೂರ್ವಕವಾಗಿ ಪುಟ್ಟಿಯ ಕೈಹಿಡಿದು ತನ್ನ ಬಳಿ ಕುಳ್ಳಿರಿಸಿ — "ಮನೆಗೆ ಹಿಂದಿರುಗುವುದರಿಂದ ನಾನು ಗುಣ ಹೊಂದುವೆನೆಂದು ಬಗೆದಿರುವೆಯಾ ಪುಟ್ಟೀ? ಈ ನನ್ನ ದೇಹ ಪೂರ್ವಸ್ಥಿತಿಗೆ ಬಂದೀತೆಂದು ನನಗೇ ನಂಬಿಕೆಯಿಲ್ಲವಮ್ಮ. ಮನೆಗೆ ತೆರಳುವುದೆ ನಿನ್ನ ಇಚ್ಛೆಯಾಗಿದ್ದರೆ ಅದಕ್ಕೆ ನನ್ನದೇನೂ ಅಡ್ಡಿಯಿಲ್ಲ. ಆಗುವುದೆಲ್ಲ ಮನೆ ತಲ್ಪಿದ ಬಳಿಕವೆ ಆಗಲಿ" ಎಂದ.

ಅಂಣನ ಮಾತು ಕೇಳಿ ಪುಟ್ಟಿ ಜೋರಾಗಿ ಅಳತೊಡಗಿದಳು. ಅಳುತ್ತಲೆ – "ಅಂಣಾ, ನೀನೇಕೆ ಅತ್ತಿಗೆಯ ಚಿಂತೆಯಲ್ಲಿಯೆ ಮುಳುಗಿರುವೆ? ಚಿಂತಿಸಿ ಚಿಂತಿಸಿಯೆ ನಿನ್ನ ಪಾಡು ಹೀಗಾದುದು" ಎಂದಳು.

"ನಾನು ಅವಳ ಚಿಂತೆಯಲ್ಲಿಯೆ ಮುಳುಗಿರುವೆನೆಂದು ನಿನಗಾರು ಹೇಳಿದರಮ್ಮಾ?"

ಪುಟ್ಟಿಯು ಅಷ್ಟೆ ಸೆಡವಿನಿಂದ — "ಯಾರೇಕೆ ಹೇಳಬೇಕು? ನಾನು ಸ್ವತಃ ಬಲ್ಲೆ" ಎಂದಳು.

"ನೀನೂ ಅವಳನ್ನು ಸ್ಮರಿಸುತ್ತಿಲ್ಲವೆ?"

ಕಂಬನಿಯೊರಸಿಕೊಂಡು ರುಷ್ಟಸ್ವರದಲ್ಲಿ—"ಇಲ್ಲ, ನಾನೆಂದಿಗೂ ಸ್ಮರಿಸುವುದಿಲ್ಲ. ಅವಳ ಸ್ಮರಣ ಮಾತ್ರದಿಂದಲೆ ಪಾಪ ತಟ್ಟುವುದು" ಎಂದಳು.

ನೀಲಾಂಬರ ತಬ್ಬಿಬ್ಬಾಗಿ – "ಏನೆಂದೆ?" ಎಂದ.

"ಆದರಿಂದ ಪಾಪ ತಟ್ಟುವುದಿಷ್ಟೆ ಅಲ್ಲ – ಅವಳ ಹೆಸರು ಉಚ್ಚರಿಸುವುದರಿಂದ ಬಾಯಿಯೂ ಅಶುದ್ಧವಾಗುವುದು; ಆದೇಕೆ, ಮೈ ತೊಳಕೊಳ್ಳಬೇಕಾಗುವುದು" ಎಂದೆನ್ನುತ್ತ ಪುಟ್ಟಿ ಅಣ್ಣನೆಡೆಗೆ ನೋಡಿದಳು. ಆಗ ಅಣ್ಣನ ಕಂಗಳಲ್ಲಿ ಸ್ನೇಹಭರಿತ ಕೋಮಲ ದೃಷ್ಟಿಯು ಮಾಯವಾಗಿತ್ತು. ತಂಗಿಯ ಮುಖವನ್ನು ನೋಡುತ್ತ ನೀಲಾಂಬರ ಗಡಚುದನಿಯಲ್ಲಿ "ಪುಟ್ಟೀ!" ಎಂದು ಚೀರಿದ.

ಅಣ್ಣನ ಈ ವಿಚಿತ್ರ ವರ್ತನೆಯಿಂದ ಪುಟ್ಟಿ ಭೂಮಿಗೆ ಇಳಿದು ಹೋದಳು. ಅವಳು ಅಣ್ಣನ ಮುದ್ದಿನ ಕಣಿಯಾಗಿದ್ದಳು. ಚಿಕ್ಕಂದಿನಲ್ಲಿ ಸಾವಿರ ತಪ್ಪು ಮಾಡಿದಾಗಲೂ ಅಣ್ಣನ ಇಂಥ ಬಿರುನೋಟ ಅವಳು ಕಂಡಿರಲಿಲ್ಲ; ಇಂಥ ಕರ್ಕಶ ದನಿಯ ಪರಿಚಯವೂ ಆಗಿರಲಿಲ್ಲ. ಇಂದು ದೊಡ್ಡವಳಾಗಿದ್ದರೂ ಅಣ್ಣನಿಂದ ಬೈಗಳನ್ನು ತಿಂದು ಲಜ್ಜೆ ತಿರಸ್ಕಾರಗಳಿಂದ ಅವಳ ಮುಖ ಕೆಳಗಾಯಿತು. ಹೆಚ್ಚು ಮಾತನಾಡದೆ ಅಲ್ಲಿಂದ ಓಟಕಿತ್ತು ಸೆರಗಿನಲ್ಲಿ ಮುಖ ಮುಚ್ಚಿ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಮಧ್ಯಾಹ್ನದ ಊಟದ ಸಮಯದಲ್ಲಿಯೂ ಅವಳು ಅಣ್ಣನ ಹತ್ತಿರಕ್ಕೆ ಬರಲಿಲ್ಲ. ಸಾಯಂಕಾಲವೂ ದಾಸಿಯೊಂದಿಗೆ ಬಡಿಸಿದ ತಟ್ಟೆ ಕಳುಹಿಸಿ ಮರೆಯಲ್ಲಿಯೆ ಕುಳಿತಳು.

ನೀಲಾಂಬರನೂ ಪುಟ್ಟಿಯನ್ನು ಕರೆಯಲೂ ಇಲ್ಲ; ಮಾತನಾಡಿಸಲೂ ಇಲ್ಲ.

ಸಂಧ್ಯಾ ಸಮಯ. ನೀಲಾಂಬರ ಸಂಧ್ಯಾಹ್ನಿಕವನ್ನು ಮುಗಿಸಿ ಅದೇ ಆಸನದ ಮೇಲೆ ಸುಮ್ಮನೆ ಕುಳಿತಿದ್ದ. ಪುಟ್ಟಿ ಸದ್ದಿಲ್ಲದೆ ಕೋಣೆಯನ್ನು ಹೊಕ್ಕು ಅಣ್ಣನ ಹಿಂದೆ ಮೊಣಕಾಲೂರಿ ಕುಳಿತಳು. ಸ್ವಲ್ಪ ಸಮಯ ತಡೆದು ಅಣ್ಣನ ಬೆನ್ನಿನಲ್ಲಿ ತನ್ನ ಮುಖ ಮರೆಸಿಕೊಂಡಳು. ದೂರು ಹೇಳುವಾಗ ಇಲ್ಲವೆ ಮೊರೆ ಹೋಗುವಾಗ ಪುಟ್ಟಿ ಹೀಗೆ ಮಾಡುವ ವಾಡಿಕೆ.

ಚಿಕ್ಕಂದಿನಲ್ಲಿ ತನ್ನ ತಪ್ಪಿಗಾಗಿ ಅತ್ತಿಗೆಯಿಂದ ಪೆಟ್ಟು ತಿಂದಾಗ ಅಂಣನ ಹತ್ತಿರ ಬಂದು ಈ ರೀತಿ ಮುಖ ಮರೆಸಿ ಕುಳಿತು ದೂರು ಹೇಳುತಿದ್ದಳು. ನೀಲಾಂಬರನಿಗೆ ಅವಳೀ ವರ್ತನೆಯ ಅರ್ಥವಾಯಿತು. ಅವನ ಕಂಣು ಗಳಲ್ಲಿ ನೀರುದುಂಬಿತು. ತಂಗಿಯ ತಲೆಯ ಮೇಲೆ ಕೈಯನ್ನಿಟ್ಟು ಕೋಮಲ ಸ್ವರದಲ್ಲಿ — "ಏನಮ್ಮ !" ಎಂದ.

ಪುಟ್ಟಿ ಮುಂದೆ ಬಂದು ಅಂಣನ ತೊಡೆಯಲ್ಲಿ ಮುಖ ಹುದುಗಿಸಿ ಬೋರಲು ಬಿದ್ದು ಅಳತೊಡಗಿದಳು. ಅವಳ ತಲೆಯ ಮೇಲೆ ಕೈಯನ್ನಿಟ್ಟು ನೀಲಾಂಬರ ಸುಮ್ಮನೆ ಕುಳಿತ. ಬಹಳ ಹೊತ್ತು ತಡೆದು ಗದ್ಗದ ಕಂಠ ದಲ್ಲಿ - "ಇನ್ನೆಂದಿಗೂ ಹಾಗೆ ಹೇಳುವುದಿಲ್ಲವಂಣಾ" ಎಂದಳು.

ಪುಟ್ಟಿಯ ತಲೆಯನ್ನು ನೇವರಿಸುತ್ತ ನೀಲಾಂಬರನೆಂದ: "ಆಗಲಿ, ಇನ್ನೆಂದಿಗೂ ಅಂಥ ಮಾತುಗಳನ್ನಾಡಬೇಡಮ್ಮ" ಎಂದು ಸಮಾಧಾನ ಪಡಿಸಿದ.

ಪುಟ್ಟಿಯು ಮೌನವಾಗಿ ಹಾಗೆಯೆ ಬಿದ್ದಿದ್ದಳು. ಅವಳ ಮನದಿಂಗಿತ ವನ್ನರಿತು ಮೃದು ದನಿಯಲ್ಲ ನೀಲಾಂಬರನೆಂದ: "ಅವಳು ನಿನಗೆ ಹಿರಿಯಳಮ್ಮ. ಅವಳು ನಿನ್ನ ಅತ್ತಿಗೆಯಷ್ಟೆ ಅಲ್ಲ; ನಿನಗೆ ಮಾತೃ ಸ್ವರೂಪಳು. ಅವಳು ನಿನ್ನನ್ನು ತಾಯಿಯಂತೆ ಸಲಹಿ ಮನುಷ್ಯಳನ್ನಾಗಿ ಮಾಡಿದಾಳೆ. ಅವಳ ವಿಷಯವಾಗಿ ಬೇರೆಯವರು ಏನೆ ಆಡಿಕೊಳ್ಳಲೊಲ್ಲ ರೇಕೆ, ಆದರೆ ನಿನ್ನ ಬಾಯಿಯಿಂದ ಇಂಥ ಮಾತು ಹೊರಟರೆ ಅದು ಅಕ್ಷಮ್ಯ ಅಪರಾಧವೆ ಸೈ."

ಕಂಣುಜ್ಜಿಕೊಳ್ಳುತ್ತ ಪುಟ್ಟಿಯೆಂದಳು: "ಅವಳು ನಮ್ಮನ್ನೆಲ್ಲ ತೊರೆದು ಹೋದಳೇಕೆ ?"

"ಅದರ ಕಾರಣವನ್ನು ನಾನು ಬಲ್ಲೆ; ಆ ಅಂತರ್ಯಾಮಿಯೂ ಬಲ್ಲ. ತಾನೇಕೆ ಹಾಗೆ ಮಾಡಿದಳೆಂಬ ಕಾರಣ ಸ್ವತಃ ಅವಳಿಗೂ ತಿಳಿ ಯದು. ಆಗ ಅವಳು ಹುಚ್ಚಿಯಾಗಿದ್ದಳು. ಸ್ವಲ್ಪವಾದರೂ ಪ್ರಜ್ಞೆ ಯಿದ್ದಿದ್ದರೆ, ಅವಳು ಆತ್ಮಹತ್ಯೆ ಮಾಡಿಕೊಳ್ಳುತಿದ್ದಳಲ್ಲದೆ ಅಂಥ ಕೆಲಸ ವನ್ನೆಂದಿಗೂ ಮಾಡುತ್ತಿರಲಿಲ್ಲ."

ಪುಟ್ಟಿ ಪುನಃ ಕಂಣೊರಸಿಕೊಂಡಳು. ಕಟ್ಟಿದ ಕಂಠದಿಂದ "ಆದರೆ ....ಈಗ....ಈಗೇಕೆ ಅವಳು ಮರಳಿ ಬರುವುದಿಲ್ಲವಂಣಾ?" ಎಂದಳು.

"ಏಕೆಂದು ವಿಚಾರಿಸುವೆಯಾ ತಂಗಿ? ಮರಳಿ ಬರಲು ಅವಳಿಗಾವ ಹಾದಿಯೂ ಉಳಿದಿಲ್ಲ. ಆದುದರಿಂದಲೆ ಬರುವುದಿಲ್ಲ" ಎಂದು ಅತಿ ಪ್ರಯಾಸದಿಂದ ತನ್ನನ್ನು ಸಾವರಿಸಿಕೊಂಡ. ಕ್ಷಣ ಹೊತ್ತು ಬಿಟ್ಟು — "ಮನೆ ಬಿಟ್ಟು ಹೋದಾಗಿನ ಅವಸ್ಥೆಯಲ್ಲಿ, ಮರಳಿ ಬರಲು ಇಂಬು ಇದ್ದಿದ್ದರೆ, ಅವಳು ಖಂಡಿತವಾಗಿ ಮರಳಿ ಬರುತ್ತಿದ್ದಳು; ಒಂದು ಕ್ಷಣವೂ ಎಲ್ಲಿಯೂ ನಿಲ್ಲುತಿದ್ದಿಲ್ಲ."

ಮುಖವನ್ನೆತ್ತದೆಯೆ ತಲೆಯಲ್ಲಾಡಿಸುತ್ತ ಪುಟ್ಟಿಯೆಂದಳು — "ಬಹುಶಃ ಅವಳು ...."

ನೀಲಾಂಬರ ಉತ್ತೇಜಿತನಾಗಿ — "ಅದು ನಿಜವಮ್ಮ. ಮನೆಗೆ ಮರಳಿ ಬರಲು ಅವಳಿಗೇನೊ ಮನಸ್ಸಿದೆ. ಆದರೆ ಪರಿಸ್ಥಿತಿ ವಿಪರೀತವಾಗಿದೆ. ಇಂಥ ಪೇಚಾಟ ನಿಜವಾಗಿಯೂ ಒಂದು ಕಠಿಣ ಶಿಕ್ಷೆಯೆಂದು ನಿನಗೆ ಗೊತ್ತಾಗಲಿಕ್ಕಿಲ್ಲ. ಆದರೆ ಕಂಣು ಮುಚ್ಚಿದಾಗಲೆ ನನಗೆ ಆ ತಾಪದ ಅನುಭವವಾಗುವುದು. ಈ ಕಾರಣದಿಂದಲೆ ನನ್ನ ಈ ಮೈಯು ದಿನ ದಿನಕ್ಕೆ ಬಡವಾಗುತ್ತಿದೆ. ಇದೊಂದೆ ನನಗೆ ಚಿಂತೆ."

ಪುಟ್ಟಿಯು ಅಳತೊಡಗಿದಳು.

ಕೈಯಿಂದ ಕಂಬನಿಗಳನ್ನೊರಸಿಕೊಂಡು ನೀಲಾಂಬರನೆಂದ: "ಅವಳಾವಾಗಲು ನನಗೆ ಹೇಳುತಿದ್ದಳು - ನನ್ನ ತೊಡೆಯ ಮೇಲೆ ತನ್ನ ತಲೆಯಿಟ್ಟು ಪ್ರಾಣ ಬಿಡಬೇಕು; ಸೀತೆ ಸಾವಿತ್ರಿಯರಂತೆ ತಾನಾಗಬೇಕು; ತನ್ನ ಮರಣಾನಂತರ ಅವರ ಬಳಿಯಲ್ಲಿಯೆ ತನಗೆ ಸ್ಥಾನ ದೊರೆಯಬೇಕು - ಎಂದು. ಇವೆ ಅವಳ ಹಿರಿಯಾಸೆಗಳು. ಆದರೆ ಪಾಪ, ಅವಳೆಲ್ಲ ಆಸೆ ಇದ್ದಕ್ಕಿದ್ದಂತೆಯೆ ಕಮರಿಬಿಟ್ಟವು."

ಪುಟ್ಟಿಯು ಸುಮ್ಮನೆ ಕೇಳುತಿದ್ದಳು.

ನೀಲಾಂಬರನು ತನ್ನ ಕಟ್ಟಿದ ಕಂಠವನ್ನು ಸರಿಪಡಿಸಿಕೊಂಡು ಹೇಳಿದ: "ಅವಳು ಅಪರಾಧಿನಿಯೆಂದು ನೀವೆಲ್ಲರೂ ನಂಬಿದ್ದೀರಿ. ಆದರೆ ಅದನ್ನು ವಿರೋಧಿಸುವಷ್ಟು ಬಲ ನನ್ನಲ್ಲಿಲ್ಲ. ಆದುದರಿಂದ ಬಾಯಿ ಮುಚ್ಚಿ

ತೆಪ್ಪಗೆ ಕುಳಿತು ಕೇಳುವ ಪ್ರಸಂಗ ಬಂದಿದೆ. ಆದರೆ ನಾನು ಭಗವಂತನ ಕಂಣಿಗೆ ಹೇಗೆ ಧೂಳು ಎರಚಬಲ್ಲೆ ? ಯಾರ ತಪ್ಪಿನ ಭಾರ ಹೊತ್ತುಕೊಂಡು ಅವಳ ಜೀವನ ಹಾಳಾಯಿತೆಂಬುದು ದೇವನಿಗೆ ತಿಳಿಯುವುದಿಲ್ಲವೇ? ನೀನೆ ಹೇಳು — ಅವಳು ಅಪರಾಧಿಯೆಂದು ನಾನಾವ ಬಾಯಿಯಿಂದ ಹೇಳಬಲ್ಲೆ ? ಅವಳನ್ನು ಹರಸದೆ ನಾನು ಹೇಗೆ ಇರಲಿ ? ಇಲ್ಲವಮ್ಮಾ, ಲೋಕದ ದೃಷ್ಟಿಯಲ್ಲಿ ಅವಳೆಷ್ಟೆ ಕಲಂಕಿತಳಾಗಿರಲಿ, ನಾನು ಮಾತ್ರ ಅವಳ ಮೇಲೆ ಯಾವ ದೋಷಾರೋಪಣೆಯನ್ನೂ ಮಾಡಲಾರೆ. ಯಾವ ಅಪರಾಧವನ್ನೂ ಹೊರಿಸಲಾರೆ. ನನ್ನ ಅಪರಾಧಗಳ ಮೂಲಕವೆ ನಾನು ಅವಳನ್ನು ಈ ಜನ್ಮದಲ್ಲಿ ಕಳೆದುಕೊಂಡೆ. ಆದರೆ ಮುಂದಿನ ಜನ್ಮದಲ್ಲಿಯೂ ಅವಳು ನನಗೇ ದೊರಕುವಂತೆ ಭಗವಂತನು ಅನುಗ್ರಹಿಸಲಿ.''

ಹೆಚ್ಚಿಗೆ ಮಾತನಾಡಲು ನೀಲಾಂಬರನಿಂದ ಸಾಧ್ಯವಾಗಲಿಲ್ಲ. ಇಷ್ಟು ಮಾತನಾಡುವಾಗಲೆ ಅವನ ಗಂಟಲು ಬಿಗಿದುಕೊಂಡಿತು. ಅದನ್ನು ನೋಡಿ ಪುಟ್ಟಿಯು ತ್ವರೆಯಿಂದೆದ್ದು ಅಂಣನ ಬಳಿ ಬಂದು ಅವನ ಕಂಬನಿಗಳನ್ನು ಒರೆಸತೊಡಗಿದಳು. ಆಗ ಅವಳಿಗೂ ಅಳು ಬಂದಿತು. ಅಂಣನು ಜರ್ರನೆ ಜರಿದು ಹೋಗುತಿದ್ದಾನೆಂದು ಒಮ್ಮೆಲೆ ಅವಳಿಗೆ ಭಾಸವಾಯಿತು. ಅದರಿಂದ ಪುಟ್ಟಿಯು ಅಳುತ್ತಳುತ್ತಲೆ – "ನಡೆ ಅಂಣಾ, ನಿನಗೆಲ್ಲಿ ಇಚ್ಛೆಯಿದ್ದೆಯೊ ಅಲ್ಲಿಗೆ ಹೋಗೋಣ. ನಿನ್ನೊಬ್ಬನನ್ನೆ ಬಿಟ್ಟಿರಲು ನನಗೆ ಸಾಧ್ಯವಿಲ್ಲ" ಎಂದಳು.

ಮೊಗವೆತ್ತಿ ನೀಲಾಂಬರ ಸ್ವಲ್ಪ ಮುಗುಳು ನಕ್ಕ.

ವಿರಾಜ ಶ್ರೀ ಜಗನ್ನಾಥಪುರಿಯ ಮಾರ್ಗದಿಂದ ಹಿಂದಿರುಗಿ ಬರುತ್ತಲಿದ್ದಳು. ಅದೇ ಹಾದಿಯಿಂದ ಅವಳು ತನ್ನ ಅಂತಿಮ ಶಯ್ಯೆಯನ್ನರಸುತ್ತ ಹೋಗಿದ್ದಳು. ಆ ಸ್ಥಾನವೆಲ್ಲಿದೆಯೆಂಬುದೂ ಅವಳಿಗೆ ಗೊತ್ತಿರಲಿಲ್ಲ. ಅವಳು ಅದೇ ಹಾದಿಯಿಂದ ಹೋಗುವಾಗ ಹಾಗೂ ಅದೇ ಹಾದಿಯಿಂದೀಗ ಮರಳುವಾಗ ಅದೆಷ್ಟು ಅಂತರ! ಈಗ ಅವಳು ಗೃಹಾಭಿಮುಖಿಯಾಗಿ ಹೊರಟಿದ್ದಳು. ಅವಳ ಶರೀರವು ಅತ್ಯಂತ ದುರ್ಬಲವಾಗಿತ್ತು. ಅಲ್ಲದೆ ನಡೆದು ನಡೆದು ಆಯಾಸಗೊಂಡಿದ್ದಿತು. ಆದುದರಿಂದ ಅವಳ ಶರೀರ ಅತ್ಯಂತ ಕಾತುರತೆಯಿಂದ "ಸ್ವಲ್ಪ ವಿಶ್ರಾಮವನ್ನಾದರೂ ತೆಗೆದುಕೊಳ್ಳು''

ಎಂದು ಒಂದೆ ಸವನೆ ವಿರಾಜಳಲ್ಲಿ ಮೊರೆಯಿಡುತಿತ್ತು. ಆದರೆ ಆಯಾಸದಿಂದ ಸೋತು ಹೋದ ತನ್ನ ಶರೀರದ ಈ ಮೊರೆ ಕೇಳಿ ವಿರಾಜ ಕೆರಳಿ ಕೆಂಡದಂತಾದಳು. ರೋಗ, ದುಃಖ, ಬವಣೆಗಳೊಂದಿಗೆ ನಿರಂತರ ಹೋರಾಟ ಹೂಡಿ ಅವಳ ಶರೀರ ಜರ್ಜರಿತವಾಗಿತ್ತು. ಈಗ ಅದೇ ಶರೀರಕ್ಕಾಗಿ ವಿಶ್ರಾಮಬೇಕೆಂಬ ದೀನವಾಣಿಯ ಅರಿಕೆ ಕೇಳಿ ವಿರಾಜ ಮುನಿದುಕೊಂಡಳು. ಅವಳಾವ ಕಾರಣದಿಂದಲೂ ಒಂದು ಕ್ಷಣ ಹೊತ್ತು ಸಹ ಕಳೆಯಲು ಸಿದ್ಧಳಾಗಲಿಲ್ಲ.

ಬಹು ಹಿಂದೆಯೆ ಅವಳಿಗೆ ದಮ್ಮು ಬೇನೆ ಇತ್ತು. ಈಗದು ಕ್ಷಯರೋಗಕ್ಕೆ ತಿರುಗಿದುದು ಅವಳಿಗೆ ತಿಳಿಯದಿರಲಿಲ್ಲ. ಆದರಿಂದ ಅವಳ ಕಳವಳಕ್ಕೆ ಅಂತ್ಯವೆ ಉಳಿಯದಂತಾಯಿತು. ವೇಳೆಗಳೆಯುವುದರಿಂದ ತನ್ನ ಗುರಿಯನ್ನು ಮುಟ್ಟಲಾರೆನೆಂಬ ವಿಚಾರ ಅವಳ ಮನದಲ್ಲಿ ಸುತ್ತತೊಡಗಿತು.

ಚಿಕ್ಕಂದಿನಿಂದಲೆ ವಿರಾಜಳಿಗೆ ಒಂದು ವಿಷಯದಲ್ಲಿ ಅತ್ಯಂತ ದೃಢ ವಿಶ್ವಾಸ. ಅದೇನೆಂದರೆ ಸ್ತ್ರೀಯು ನಿಷ್ಕಳಂಕಿತಳಿದ್ದರೆ ಮಾತ್ರ ಗಂಡನ ತೊಡೆಯ ಮೇಲೆ ಒರಗಿ ಪ್ರಾಣ ಬಿಡಲು ಸಾಧ್ಯ ಎಂದು. ಆದುದರಿಂದ ಅವಳು ತನ್ನ ಶರೀರವನ್ನೆ ಬಾರಿ ಬಾರಿ ಕೇಳಿ ತಿಳಿದುಕೊಳ್ಳಲಿಚ್ಛಿಸುತಿದ್ದಳು— ತಾನು ಪವಿತ್ರಳಹುದೋ ಅಲ್ಲವೊ ಎಂದು. ತಾನು ಈ ಪರೀಕ್ಷೆಯಲ್ಲಿ ಉತ್ತೀರ್ಣಳಾದರೆ ನಿರ್ಭಯದಿಂದಲೂ ಆನಂದದಿಂದಲೂ ಪರಲೋಕದಲ್ಲಿ ಪತಿಯ ನಿರೀಕ್ಷಣೆ ಮಾಡುತ್ತ ಕುಳಿತಿರಬಹುದೆಂಬಾಸೆ ಅವಳಿಗೆ. ಆದರೆ ದಾಮೋದರ ನದಿ ದಾಟಿ ಈಚೆ ಬದಿ ಸೇರಿದಾಗ ಅವಳ ಕಾಲುಗಳೆ ಸೇದಿ ಹೋದಂತಾದವು; ಬಾಯಿಯಿಂದ ರಕ್ತವೂ ಬೀಳತೊಡಗಿತು. ಹೆಜ್ಜೆ ಕಿತ್ತಿ ಮುಂದಿಡಲೂ ಅವಳಿಂದಾಗದೆ ಹೋಯಿತು. ಅದರಿಂದ ಹತಾಶಳಾಗಿ ವಿರಾಜ ಒಂದು ಗಿಡದಡಿಯಲ್ಲಿ ಕುಳಿತಳು. ಮುಂದೇನು ಗತಿ ಎಂಬ ಅಳುಕಿನಲ್ಲಿ ಅವಳು ಥರಥರವೆಂದು ನಡುಗತೊಡಗಿದಳು. ಮನದಲ್ಲಿಯೆ – "ಇಷ್ಟು ಪ್ರಯತ್ನಪಟ್ಟರೂ ನನ್ನ ಕೊನೆಯಾಸೆ ಕೈಗೂಡಲಿಲ್ಲವೆಂದ ಬಳಿಕ ನಾನೆಂಥ ಮಹಾಪರಾಧ ಮಾಡಿರಬೇಕು? ನನ್ನೀ ಜನ್ಮವೂ ನಿರರ್ಥಕವಾಯಿತು; ಮುಂದಿನ ಜನ್ಮ ಸಾರ್ಥಕವಾದೀತೆಂಬ ಆಸೆಯೂ ಉಳಿಯದಂತಾಯಿತು. ಇನ್ನೇನು ಗತಿ ನನಗೆ?"

ವಿರಾಜ ಪೂರ್ಣ ನಿರಾಶಳಾದಳು. ಅವಳು ಮಲಗಿದಲ್ಲಿಂದಲೆ ಕೈ ಜೋಡಿಸಿ ಗಂಡನ ಶ್ರೀ ಚರಣಗಳಲ್ಲಿ ತನ್ನ ಪ್ರಾರ್ಥನೆ ಸಲ್ಲಿಸುತಿದ್ದಳು.

ಮಾರನೆಯ ದಿನ ತಾರಕೇಶ್ವರ ಬಳಿಯಲ್ಲಿ ಎಲ್ಲಿಯೊ ಸಂತೆ ಇದ್ದಿರ ಬೇಕು. ಅದರಿಂದ ಬೆಳಗಿನಿಂದಲೆ ಆ ಮಾರ್ಗವಾಗಿ ಅನೇಕ ಬಂಡಿಗಳು ಹೋಗತೊಡಗಿದವು. "ನಿಮ್ಮ ಬಂಡಿಯಲ್ಲಿ ನನಗೆ ದಯವಿಟ್ಟು ಸ್ವಲ್ಪ ಸ್ಥಳ ಕೊಡುವಿರಾ" ಎಂದು ವಿರಾಜ ಸಾಹಸ ಮಾಡಿ ಒಬ್ಬ ಗಾಡಿಕಾರನನ್ನು ವಿಚಾರಿಸಿದಳು. ಅವಳ ಕರುಣಕ್ರಂದನ ಕೇಳಿ ಆ ಗಾಡಿಕಾರ ಅವಳನ್ನು ತನ್ನ ಬಂಡಿಯಲ್ಲಿ ಕುಳ್ಳಿರಿಸಿ. ತಾರಕೇಶ್ವರಕ್ಕೆ ಕರೆದೊಯ್ದನು. ವಿರಾಜ ಮನದಲ್ಲಿಯೆ ನಿಶ್ಚಯಿಸಿಕೊಂಡಿದ್ದಳು — "ತಾರಕೇಶ್ವರದಲ್ಲಿ ಯಾವುದಾದರೊಂದು ಗುಡಿಯಲ್ಲಿ ಬಿದ್ದರಾಯಿತು. ಗುಡಿಗೆ ಹೇಗೂ ಎಷ್ಟೊ ಜನ ಬಂದು ಹೋಗುವರು. ಅವರಲ್ಲಾರಾದರೊಬ್ಬರ ಮುಖಾಂತರ ನೆಗೆಂಣಿಗೆ ನನ್ನ ಸಮಾಚಾರ ತಿಳಿಯುವಂತೆ ಪ್ರಯತ್ನ ಪಡುವೆ— "

ಅನೇಕಾನೇಕ ರೋಗಗಳಿಂದ ಬಳಲುವ ಎಷ್ಟೊ ಸ್ತ್ರೀ-ಪುರುಷರು ಗುಡಿಯ ಸುತ್ತಲೂ ಅಸ್ತವ್ಯಸ್ತವಾಗಿ ಬಿದ್ದಿದ್ದರು. ಅವರ ಜೊತೆ ಸೇರಿದಾಗ ವಿರಾಜಳಿಗೆ ಅದೆಷ್ಟೊ ದಿನಗಳ ನಂತರ ಅಂದು ಸ್ವಲ್ಪ ನೆಮ್ಮದಿಯುಂಟಾಯಿತು. "ಇವರಂತೆ ನಾನೂ ಒಬ್ಬ ರೋಗಿಷ್ಠೆ. ನಾನು ಲೌಕಿಕ ಆಸೆಗಳಿಂದ ಮುಕ್ತಳಾದವಳಲ್ಲ. ಇವರಂತೆ ನಾನೂ ರೋಗ ಹಾಗೂ ಆಸೆ ಎರಡನ್ನೂ ನೆಚ್ಚಿಕೊಂಡು ಹೀಗೆಯೆ ಬಿದ್ದಿರುವೆ. ಇನ್ನಾರೂ ನನ್ನೆಡೆ ಕಂಣೆತ್ತಿ ನೋಡರು. ನನ್ನ ಬಗ್ಗೆ ಯಾರ ಕುತೂಹಲವೂ ಕೆರಳುವುದಿಲ್ಲ." ಅಂಥ ಘೋರ ಸಂಕಟದಲ್ಲಿದ್ದಾಗಲೂ ಈ ಎಲ್ಲ ವಿಷಯಗಳನ್ನು ಯೋಚಿಸುವಾಗ ವಿರಾಜಳ ಮನಸ್ಸಿಗೆ ಹರುಷವುಂಟಾಗುತಿತ್ತು. ಆದರೆ ಅವಳ ರೋಗ ಮಾತ್ರ ಹೆಚ್ಚಾಯಿತಲ್ಲದೆ ಗುಣವಾಗಲಿಲ್ಲ. ಆಗ ಮಾಘಮಾಸದ ವಿಪರೀತ ಚಳಿ; ಅಲ್ಲದೆ ಅವಳಿಗೆ ಹೊಟ್ಟೆಗೇನೂ ಇರಲಿಲ್ಲ. ನಿರಾಹಾರದಿಂದ ಆರು ದಿನಗಳನ್ನು ನೂಕಿದ್ದಳು. ಆದರೆ ಇನ್ನೊಂದು ಹಗಲು ಸಹ ಕಳೆಯಬಹುದೆಂಬ ಆಸೆ ಅವಳಿಗೂ ಉಳಿಯಲಿಲ್ಲ; ಅಲ್ಲದೆ ತನ್ನ ನೆಂಟರಾರೂ ಬರುವಂತೆಯೂ ತೋರಲಿಲ್ಲ. ಈಗ ಉಳಿದುದು ಸಾವು ಮಾತ್ರ. ಆದುದರಿಂದ ಅದನ್ನು ಎದುರುಗೊಳ್ಳುವ ಸಿದ್ಧತೆ ಮಾಡತೊಡಗಿದಳು.

ಅಂದು ಮೋಡ ಕವಿದಿದ್ದರಿಂದ ಸಂಜೆಯು ಮುನ್ನವೆ ಕತ್ತಲು ಗವಿದಂತಾಯಿತು. ವಿರಾಜಳು ಬಹಳ ರಕ್ತಕಾರಿದ್ದರಿಂದ ಜೀರ್ಣಶೀರ್ಣವಾದ ಅವಳ ದೇಹ ಒಮ್ಮೆಲೆ ನಿಶ್ಯಕ್ತವಾಯಿತು. ಮನದಲ್ಲಿಯೆ "ಇನ್ನು ನನ್ನ ಅವತಾರ ಮುಗಿಯಿತು" ಎಂದಂದುಕೊಂಡಳು. ಆಗಲೆ ಗುಡಿಯ ಹಿಂಭಾಗಕ್ಕೆ ಹೋಗಿ ಅಲ್ಲಿಯೆ ಮುಖ ಮುಚ್ಚಿ ಬಿದ್ದುಕೊಂಡಳು. ಮಧ್ಯಾಹ್ನ ದೇವರಾರತಿಯಾದ ಬಳಿಕ ದಿನದಂತೆ ಎದ್ದು ನಮಸ್ಕಾರ ಮಾಡಲು ಇಂದು ಅವಳಿಂದ ಸಾಧ್ಯವಾಗಲಿಲ್ಲ. ಆದುದರಿಂದ ಮನದಲ್ಲಿಯೆ ದೇವರನ್ನು ನಮಸ್ಕರಿಸಿದಳು.

ಇಷ್ಟು ದಿನಗಳವರೆಗೆ ವಿರಾಜ ಗಂಡನ ಅಡಿಯಲ್ಲಿಯೆ ತನ್ನ ಪ್ರಾರ್ಥನೆ ಸಲ್ಲಿಸುತ್ತಲಿದ್ದಳು. ಅವಳು ಅವಿವೇಕಿಯಲ್ಲ. ಈ ಲೋಕದಲ್ಲಿಯೆ ಗಂಡನೊಂದಿಗೆ ಸುಖಬಾಳುವೆ ಮಾಡಬೇಕೆಂಬುದೊಂದೆ ಉದ್ದೇಶದಿಂದ ಅವಳು ತನ್ನ ಕರ್ತವ್ಯಗಳನ್ನು ಮಾಡುತಿದ್ದಿಲ್ಲ; ಮುಂದಿನ ಜನ್ಮದಲ್ಲಿಯೂ ಈ ಅಧಿಕಾರ ಕಳೆದುಕೊಳ್ಳಬಾರದೆಂಬುದೆ ಅವಳ ಮನದಿಚ್ಛೆ. ಅರಿವಿಲ್ಲದೆ ಮಾಡಿದ ತನ್ನ ಪಾಪಗಳ ಪ್ರಾಯಶ್ಚಿತ್ತ ಈ ಜನ್ಮದಲ್ಲಿಯೆ ಭೋಗಿಸಿಬಿಡಬೇಕು, ಮುಂದಿನ ಜನ್ಮದಲ್ಲಿ ಭೋಗಿಸಲು ಅನುವೀಯಬಾರದೆಂಬುದೆ ಅವಳ ಆಂತರಿಕ ಇಚ್ಛೆ. ಆದರೆ ಹಗಲು ಮುಗಿಯ ಬಂದಾಗ ಅವಳ ಈ ವಿಚಾರ ಧಾರೆ ಒಮ್ಮೆಲೆ ವಿರುದ್ಧ ಹಾದಿಗೆ ಹೊರಳಿತು. ಒಮ್ಮೆಲೆ ವಿರಾಜಳಲ್ಲಿ ದಾಸ್ಯ ಭಾವ ಅಳಿದುಹೋಯಿತು. ಬದಲು ವಿದ್ರೋಹ ಭಾವ ಮೂಡಿತು. ಅಸ್ಪಷ್ಟವಾದ ಅಭಿಮಾನದ ದನಿಯೊಂದು ಅವಳ ಚಿತ್ತವೆಲ್ಲವನ್ನೂ ವ್ಯಾಪಿಸಿ ಅವರ್ಣನೀಯ ಮಾಧುರ್ಯದೊಂದಿಗೆ ಹೊರಹೊಮ್ಮಿತು. ಅದರೊಂದಿಗೆ ಮಗ್ನಳಾಗಿ – "ನೀವೇಕೆ ಹಾಗೆ ಹೇಳಬೇಕು!" ಎಂದು ಸ್ವಲ್ಪ ಸೆಡವಿನಿಂದ ಮನದಲ್ಲಿಯೆ ಪುನಃ ಪುನಃ ಹೇಳಿಕೊಳ್ಳತೊಡಗಿದಳು.

ವಿರಾಜಳ ಎಡಗೈಯ ಎಲುಬು ಮುರಿದಿತ್ತು. ಆದರೆ ಜಾರಿ ನೆಲದ ಮೇಲೆ ಯಾವಾಗ ಬಿದ್ದಿತ್ತೆಂಬುದು ವಿರಾಜಳಿಗೆ ಗೊತ್ತೇ ಇರಲಿಲ್ಲ. ಒಮ್ಮೆಲೆ ಆ ಭಾಗದಲ್ಲಿ ವೇದನೆಯಾದುದರಿಂದ ಆರ್ತಕಂಠದಲ್ಲಿ "ಅಮ್ಮಯ್ಯಾ!" ಎಂದು ಚೀರಿದಳು. ಆ ಮಾರ್ಗದಿಂದ ಜನರು ಅತ್ತಿತ್ತ ತೆರಪಿಲ್ಲದೆ ಓಡಾಡುತಿದ್ದರು. ಆ ದುರ್ಬಲವಾದ ಕೈಯನ್ನು ತುಳಿದ ವ್ಯಕ್ತಿ ಅದನ್ನು ತಿಳಿದು

ನಾಚಿಕೊಂಡ. ಅವನಿಗೆ ಆ ಕೈಯು ಕಂಡಿರಲಿಲ್ಲ. ತನ್ನ ನಿರ್ಲಕ್ಷ್ಯತನಕ್ಕಾಗಿ ಮನದಲ್ಲಿಯೆ ತುಂಬ ಕಳವಳಪಟ್ಟುಕೊಂಡ. ಅವಳ ಹತ್ತಿರ ಬಂದು —"ಓಹೊ! ಯಾರಮ್ಮಾ ನೀನು? ಬೀದಿಯ ಬದಿಯಲ್ಲಿ ಹೀಗೇಕೆ ಬಿದ್ದಿರುವೆ? ನನ್ನಿಂದ ತಪ್ಪಾಯಿತು. ಏನು, ನೋವು ಬಹಳಾಯಿತೆ?" ಎಂದು ಕಳಕಳಿಯಿಂದ ವಿಚಾರಿಸಿದ.

ತಟ್ಟನೆ ಮುಖದ ಮೇಲಿನ ಪರದೆ ಬದಿಗೆ ಸರಿಸಿ ವಿರಾಜ ಆ ವ್ಯಕ್ತಿಯನ್ನು ನೋಡಿದಳು. ಆ ಕೂಡಲೆ ಅಸ್ಫುಟ ದನಿಯೊಂದು ಅವಳ ಕಂಠದಿಂದ ಹೊರಹೊಮ್ಮಿತು. ಅವಳು ಹಾಗೆಯೆ ಮೌನವಾಗಿ ಉಳಿದಳು. ಆ ವ್ಯಕ್ತಿ ನೀಲಾಂಬರನಲ್ಲದೆ ಬೇರಾರೂ ಇರಲಿಲ್ಲ. ಅವನೂ ಒಂದು ಸಲ ಬಾಗಿ ನೋಡಿ ಅಲ್ಲಿಂದ ಹೊರಟು ಹೋದ.

ಸೂರ್ಯಾಸ್ತದ ಸಮಯ. ಪಶ್ಚಿಮಾಕಾಶವು ಶುಭ್ರವಾಗಿತ್ತು. ಸೂರ್ಯನ ಹೊಂಬಣ್ಣದ ಬಿಸಿಲು ಗುಡಿಯ ಕಳಸದ ಮೇಲೆಯೂ ಗಿಡಗಳ ತುದಿಗಳ ಮೇಲೆಯೂ ಬೀಳುತಿತ್ತು. ಸ್ವಲ್ಪ ದೂರ ನಿಂತುಕೊಂಡು ನಿಲಾಂಬರ ಪುಟ್ಟಿಗೆಂದ: "ನೋಡಮ್ಮಾ. ಅಕೊ, ಆ ಗಿಡದಡಿಯಲ್ಲಿ ದುರ್ಬಲಳಾದ ರೋಗಿಯೊಬ್ಬಳು ಬಿದ್ದಿದ್ದಾಳೆ — ನೋಡದೆಯೆ ನಾನು ಅವಳನ್ನು ತುಳಿದು ಬಿಟ್ಟೆ. ತಿಂಡಿ ತೀರ್ಥ ಏನಾದರೂ ಉಳಿದಿದ್ದರೆ ಅವಳಿಗೆ ಕೊಡು. ಪಾಪ, ಬಡ ಭಿಕ್ಷುಕಿ ಇರಬೇಕು."

ಆ ಹೆಂಗಸು ತಮ್ಮನ್ನೆ ನಿಟ್ಟಿಸಿ ನೋಡುತಿದ್ದಾಳೆಂದು ಪುಟ್ಟಿಗೆ ಗೊತ್ತಾಯಿತು. ಅವಳು ಮೆಲ್ಲನೆ ಆ ಹೆಂಗುಸಿನ ಬಳಿ ಹೋಗಿ ನಿಂತಳು. ಮುಖದ ಮೇಲೆ ಸೆರಗಿದ್ದುದರಿಂದ ಆ ಹೆಂಗುಸಿನ ಮುಖ ಚೆನ್ನಾಗಿ ಕಾಣುತ್ತಿರಲಿಲ್ಲ. ಆದರೂ ಆ ಮುಖವನ್ನೆಲ್ಲಿಯೊ ನೋಡಿದಂತೆ ಭಾಸವಾಯಿತು ಪುಟ್ಟಿಗೆ. "ಏನಮ್ಮಾ, ನಿಮ್ಮೂರಾವುದು?" ಎಂದು ಪುಟ್ಟಿ ವಿಚಾರಿಸಿದಳು. "ಸಪ್ತಗ್ರಾಮ" ಎಂದು ಆ ಹೆಂಗಸು ನಕ್ಕು ಬಿಟ್ಟಳು.

ವಿರಾಜಳಲ್ಲಿ ಎಲ್ಲಕ್ಕೂ ಮಧುರವಾದುದು ಅವಳ ಮುಗುಳು ನಗೆ. ಈ ಲೋಕದಲ್ಲಿ ಎಷ್ಟೊ ಅಪೂರ್ವ ವ್ಯಕ್ತಿಗಳಿದ್ದಾರೆ; ಕೇವಲ ಅವರ ಮುಗುಳು ನಗೆಯನ್ನೊಮ್ಮೆ ನೋಡಿದರೆ ಸಾಕು, ಆ ವ್ಯಕ್ತಿಗಳನ್ನೆಂದಿಗೂ ಮರೆಯುವಂತಿಲ್ಲ; ಅಂತಹುದು ಅವರ ಮುಗುಳು ನಗೆ. "ಅಯ್ಯೊ, ಇವರೇ ನನ್ನ

ಅತ್ತಿಗೆ!'' ಎಂದು ಕೂಗಿ ಪುಟ್ಟಿಯು ಒಮ್ಮೆಲೆ ಸೊರಗಿ ಕಡ್ಡಿಯಾದ ಅತ್ತಿಗೆಯ ದೇಹದ ಮೇಲೆ ಬೋರಲು ಬಿದ್ದು, ಅವಳ ಮುಖಕ್ಕೆ ಮುಖ ಹಚ್ಚಿ ಅಳತೊಡಗಿದಳು.

ಸ್ವಲ್ಪ ದೂರದಲ್ಲಿ ನಿಂತು ನೀಲಾಂಬರನು ಎಲ್ಲವನ್ನೂ ನೋಡುತಿದ್ದ. ಅತ್ತಿಗೆ ನಾದಿನಿಯರ ಮಾತುಕತೆ ಸ್ವಲ್ಪವೂ ಕೇಳಿಸುತಿದ್ದಿಲ್ಲವಾದರೂ ಅವನಿಗೆ ತಿಳಿಯದಿದ್ದ ಸಂಗತಿ ಯಾವುದೂ ಇರಲಿಲ್ಲ. ಅವನೂ ಸನಿಹಕ್ಕೆ ಬಂದು ನಿಂತು ಆ ಹೆಂಗುಸನ್ನು ಅಡಿಯಿಂದ ಮುಡಿಯುವರೆಗೆ ಚೆನ್ನಾಗಿ ನೋಡಿದ. ಬಳಿಕ ಶಾಂತವಾಗಿ: "ಇಲ್ಲಿ ಬೀದಿಯಲ್ಲಿ ಅಳಬೇಡ ಪುಟ್ಟೀ, ಎದ್ದೇಳು" ಎಂದ.

ನೀಲಾಂಬರ ತಂಗಿಯನ್ನು ಬದಿಗೆ ಸರಿಸಿದ. ಆ ಮೇಲೆ ಹೆಂಡತಿಯ ಕಾಷ್ಠಸಮವಾದ ಬಡದೇಹವನ್ನು ಮಗುವನ್ನೆತ್ತಿಕೊಳ್ಳುವಂತೆ ಎತ್ತಿಕೊಂಡು ತನ್ನ ನಿವಾಸಸ್ಥಾನಕ್ಕೆ ಹೋದ.

* * * * *

ಚಿಕಿತ್ಸೆಗಾಗಿ ವಿರಾಜಳನ್ನು ಆರೋಗ್ಯಕರವಾದ ಉತ್ತಮ ನಿವಾಸ ಸ್ಥಾನಗಳಿಗೆ ಕರೆದೊಯ್ಯಲು ಬಹು ಪ್ರಯತ್ನ ಮಾಡಿದ್ದಾಯಿತು. ಅವಳನ್ನು ಒಲಿಸುವುದರಲ್ಲಿಯೆ ಜನ ಬೇಸತ್ತರಲ್ಲದೆ ವಿರಾಜ ಹೊರಡಲು ಸಿದ್ಧಳಾಗಲಿಲ್ಲ. ಮನೆಬಿಟ್ಟು ತಾನೆಲ್ಲಿಯೂ ಹೋಗಲಾರೆನೆಂದು ಸ್ಪಷ್ಟವಾಗಿ ನುಡಿದುಬಿಟ್ಟಳು.

ಪುಟ್ಟಿಯನ್ನು ಮರೆಯಲ್ಲಿ ಕರೆದು ನಿಲಾಂಬರನೆಂದ: "ಇವಳಾದರೂ ಇನ್ನೆಷ್ಟು ದಿನ ಬದುಕಬಹುದು ಪುಟ್ಟೀ? ಅವಳನ್ನು ಅವಳ ಪಾಡಿಗೆ ಬಿಟ್ಟು ಬಿಡು. ಅವಳಿಗಾವ ಒತ್ತಾಯ ಮಾಡಬೇಡಿ."

ತಾರಕೇಶ್ವರದಲ್ಲಿ ಗಂಡನ ತೊಡೆಯ ಮೇಲೆ ತಲೆಯಿಟ್ಟು ವಿರಾಜ ಅನುನಯಸ್ವರದಲ್ಲಿ ಮೊಟ್ಟಮೊದಲು ಪ್ರಾರ್ಥಿಸಿಕೊಂಡಳು: – "ನನ್ನನ್ನು ಮನೆಗೆ ಕರೆದುಕೊಂಡು ಹೋಗಿ ನನ್ನ ಮಂಚದ ಮೇಲೆ ಮಲಗಿಸಿ." ತನ್ನ ಮನೆ-ಮಠ, ಅಲ್ಲಿಯ ವಸ್ತು, ತನ್ನ ಗಂಡ, ಇವೆಲ್ಲವುಗಳ ಬಗ್ಗೆ ಅವಳಿಗೆಷ್ಟು ಮಮತೆಯೆಂಬುದನ್ನು ಅವಳ ಮನೋಭಾವನೆಯನ್ನೂಹಿಸಬಲ್ಲವನೆ ಅರಿತುಕೊಳ್ಳಬಲ್ಲನು. ವಿರಾಜಳ ಸ್ಥಿತಿಯನ್ನರಿತ ಎಂಥವನಿಗೂ ಕಂಣಲ್ಲಿ ಕಂಬನಿ ಕದಡದೆ ಹೋಗುವಂತಿರಲಿಲ್ಲ. ಬಹುಶಃ ಇಡಿಯ ದಿನ ಅವಳು ಪ್ರಜ್ಞಾ

ಹೀನ ಅವಸ್ಥೆಯಲ್ಲಿಯೆ ಇರುತಿದ್ದಳು. ಆದರೆ ಜ್ವರದ ಬೇಗೆ ಇಳಿದಾಗ ಮನೆಯ ಪ್ರತಿಯೊಂದು ವಸ್ತುವನ್ನೂ ನಿಟ್ಟಿಸಿ ನೋಡುತಿದ್ದಳು.

ನೀಲಾಂಬರ ಬಹುಶಃ ಹೆಂಡತಿಯ ಹಾಸಿಗೆ ಬಿಟ್ಟು ಎಲ್ಲಿಗೂ ಹೋಗುತ್ತಿರಲಿಲ್ಲ. ಕಂಣಲ್ಲಿ ಕಂಬನಿದುಂಬಿಕೊಂಡು — "ಹೇ ಭಗವಂತನೆ, ನೀನು ಈಗಾಗಲೆ ಸಾಕಷ್ಟು ಶಿಕ್ಷೆ ಕೊಟ್ಟಿರುವೆ. ಈಗಲಾದರೂ ಅವಳನ್ನು ಕ್ಷಮಿಸು. ಪರಲೋಕ ಯಾತ್ರೆಗೆ ಸಿದ್ಧಳಾಗಿ ಕುಳಿತ ಅವಳಿಗೆ ಈ ಸಂಸಾರದ ಮೋಹ ಬಿಡುವಷ್ಟು ಶಕ್ತಿಯನ್ನು ಕೊಡು" ಎಂದು ಪ್ರಾರ್ಥಿಸುತಿದ್ದ.

ವಿರಾಜ ಒಂದು ದಿನ ಈ ಮನೆಯನ್ನು ತೊರೆದು ಹೋಗಿದ್ದಳು – ಈಗ ಅದೇ ಮನೆಗಾಗಿ ಅವಳ ತವಕವನ್ನು ನೋಡಿ ನೀಲಾಂಬರನ ಹೃದಯ ಪರಮಾಶ್ಚರ್ಯದಿಂದ ತುಂಬಿ ತುಳುಕಿತು. ವಿರಾಜ ಮರಳಿ ಬಂದು ಎರಡು ವಾರಗಳಾಗಿದ್ದವು. ನಿನ್ನೆಯಿಂದಲೆ ಅವಳಿಗೆ ಸನ್ನಿಪಾತ ಅಂಟಿಕೊಂಡಿತು. ದಿನವೆಲ್ಲವೂ ಯದ್ವಾ ತದ್ವಾ ಬಡಬಡಿಸಿ ಇದೀಗ ಸ್ವಲ್ಪ ಸಮಯ ಮೊದಲು ನಿದ್ದೆ ಹೋಗಿದ್ದಳು. ಸಾಯಂಕಾಲವಾದ ಬಳಿಕವೆ ಅವಳು ಕಣ್ದೆರೆದಳು. ಬಹಳ ಹೊತ್ತು ಅತ್ತು ಅತ್ತು ಪುಟ್ಟಿ ಅತ್ತಿಗೆಯ ಕಾಲುಬದಿ ನಿದ್ದೆ ಹೋಗಿದ್ದಳು. ಮೋಹಿನಿಯು ವಿರಾಜಳ ತಲೆಯ ಬದಿಯಲ್ಲಿ ಕುಳಿತಿದ್ದಳು. ಅವಳನ್ನು ನೋಡಿ "ನನ್ನ ನೆಗೆಂಣಿ ಎಲ್ಲಿ?" ಎಂದು ವಿಚಾರಿಸಿದಳು.

ಅಕ್ಕನ ಮುಖದ ಮೇಲೆ ಬಾಗಿ ಮೋಹಿನಿಯೆಂದಳು — "ಏನಕ್ಕ — ನಾನೇ ಮೋಹಿನಿ."

"ಪುಟ್ಟಿ ಎಲ್ಲಿ?"

ಪುಟ್ಟಿಯ ಕಡೆಗೆ ಬೆರಳು ಮಾಡಿ ತೋರಿಸುತ್ತ — "ನಿನ್ನ ಕಾಲುಬಳಿ ನಿದ್ದೆಹೋಗಿದ್ದಾಳೆ" ಎಂದಳು ಮೋಹಿನಿ.

"ಅವರೆಲ್ಲಿ?"

"ದೇವರ ಮನೆಯಲ್ಲಿ ಪೂಜೆ ಮಾಡುತಿದ್ದಾರೆ."

"ಹಾಗಾದರೆ ನಾನೂ ಪೂಜೆ ಮಾಡುವೆ" ಎಂದು ವಿರಾಜ ಮನದಲ್ಲಿಯೆ ಜಪಮಾಡತೊಡಗಿದಳು. ಬಹಳ ಸಮಯವಾದ ಬಳಿಕ ಎಡಗೈಯಿಂದ ಹಣೆ ಮುಟ್ಟಿ ನಮಸ್ಕಾರ ಮಾಡಿದಳು. ಬಳಿಕ ಅರೆಕ್ಷಣ ನೆಗೆಂಣಿಯ ಮುಖವನ್ನೆ ನೋಡಿ ಮೆಲ್ಲ ಮೆಲ್ಲನೆ — "ತಂಗೀ, ಬಹುಶಃ ನಾನಿಂದೆ

ಹೊರಡುವೆ. ಆದರೆ ನಿನ್ನನ್ನು ಪುನಃ ಹೊಂದಬೇಕೆಂದೂ, ಇಷ್ಟು ಸನಿಹ ದಲ್ಲಿಯೆ ಇಟ್ಟುಕೊಂಡಿರಬೇಕೆಂದೂ ನನ್ನ ಹಿರಿಯಾಸೆ ತಂಗೀ."

ವಿರಾಜಳನ್ನು ಬೀಳ್ಕೊಳ್ಳುವ ಸಮಯ ಬಂದಿದೆಯೆಂದು ಜನರೆಲ್ಲರಿಗೂ ನಿನ್ನೆಯೆ ತಿಳಿದಿತ್ತು. ಆದ್ದರಿಂದ ಅವಳ ಬಾಯಿಯಿಂದಲೆ ಈ ಮಾತು ಕೇಳಿ ಮೋಹಿನಿ ಕಂಬನಿ ಮಿಡಿಯುತ್ತ ಸುಮ್ಮನೆ ಕುಳಿತಳು.

ವಿರಾಜಳಿಗೆ ಈಗ ಪೂರ್ಣ ಅರಿವು ಬಂದಿತ್ತು. ದನಿಯನ್ನು ಮೃದು ವಾಗಿಸಿ — "ತಂಗೀ, ಸುಂದರಿಯನ್ನು ಸ್ವಲ್ಪ ಕರೆಕಳುಹುವೆಯಾ ?" ಎಂದಳು.

ಬಿಗಿದ ಕಂಠದಿಂದ ಮೋಹಿನಿ ಎಂದಳು : "ಈಗ ಅವಳನ್ನು ಕರೆದು ಏನು ಮಾಡುವುದು ಅಕ್ಕ ? ಅವಳಿಲ್ಲಿ ಬರಲಾರಳು."

"ಬರುವಳು; ಖಂಡಿತ ಬಂದೇ ಬರುವಳು. ಬೇಗ ಕರೆಕಳುಹು. ಅವಳನ್ನು ಕ್ಷಮಿಸಿ ಆಶೀರ್ವದಿಸುವೆ. ನನಗೆ ಯಾರ ಮೇಲೂ ಎಳ್ಳಷ್ಟೂ ಕೋಪವೂ ಇಲ್ಲ; ದ್ವೇಷವೂ ಇಲ್ಲ. ದೇವರು ನನ್ನನ್ನು ಕ್ಷಮಿಸಿ ನನ್ನ ಪತಿದೇವನನ್ನು ನನಗೆ ಮರಳಿ ಕೊಟ್ಟಿದಾನೆ. ನಾನೂ ಎಲ್ಲರನ್ನೂ ಕ್ಷಮಿಸಿ ಇಲ್ಲಿಂದ ಹೊರಡುವೆ."

ಅಳುತ್ತಳುತ್ತಲೆ ಮೋಹಿನಿ ಎಂದಳು – "ಇದೆಂತಹ ಮಾತು ಅಕ್ಕಾ ! ನೀನು ಯಾವ ಅಪರಾಧ ಮಾಡಿರದಿದ್ದರೂ ದೇವರು ನಿನ್ನನ್ನು ಶಿಕ್ಷಿಸಿದ. ಆದರೂ ಇಷ್ಟರಿಂದಲೆ ಅವನಿಗೆ ತೃಪ್ತಿಯಿಲ್ಲ. ಅವನು ನಿನ್ನನ್ನೂ ಸೆಳೆ ದೊಯ್ಯುವ ಯತ್ನದಲ್ಲಿದ್ದಾನೆ. ನಿನ್ನ ಕೈಯೊಂದನ್ನಂತೂ ಒಯ್ದುಬಿಟ್ಟ. ಕೊನೆಯ ಮಟ್ಟಿಗೆ ನಿನ್ನನ್ನು ಈ ಅವಸ್ಥೆಯಲ್ಲಿಯಾದರೂ ಬಿಟ್ಟುಬಿಟ್ಟರೆ..."

ವಿರಾಜ ನಗತೊಡಗಿದಳು. "ನನ್ನ ದುಷ್ಕೀರ್ತಿಯಂತೂ ಹಳ್ಳಿಯ ಲ್ಲೆಲ್ಲ ಹಬ್ಬಿದೆ. ಅಂತಹಳನ್ನು ನೀನು ಇಟ್ಟುಕೊಂಡು ಮಾಡುವುದಾದರೂ ಏನು ? ನಾನು ಜೀವಿಸಿರುವುದರಿಂದ ಯಾವ ಲಾಭವೂ ಇಲ್ಲ ತಂಗೀ."

ಪ್ರತಿವಾದಿಸುತ್ತ ಮೋಹಿನಿಯೆಂದಳು — "ಲಾಭವಿದ್ದೇ ಇದೆ ಅಕ್ಕ. ನಿನ್ನಮೇಲೆ ಹೊರಿಸಿದ ಆರೋಪಗಳು, ನಿನಗೆ ತೊಡಿದ ಕಲಂಕಗಳು ಎಲ್ಲವೂ ಬುಡವಿಲ್ಲದವು. ಆ ಬಗ್ಗೆ ನಮಗಾವ ಚಿಂತೆಯೂ ಇಲ್ಲ."

"ನಿಮಗೆ ಆ ಬಗ್ಗೆ ಚಿಂತೆಯಿರಲಿಕ್ಕಿಲ್ಲ ತಂಗೀ. ಆದರೆ ನನಗೆ ಮಾತ್ರ ಇದೆ. ನನ್ನ ಮೇಲೆ ಹೊರಿಸಿದ ಆರೋಪಗಳು ನಿರಾಧಾರವಾದವು

ಗಳಲ್ಲ. ಅವು ನಿಜಾಂಶಗಳೆ. ತಂಗೀ, ನನ್ನ ಅಪರಾಧ ಸಾಮಾನ್ಯವಾಗಿರಬಹುದು. ಆದರೆ ಅಂಥ ಅಪರಾಧ ಘಟಿಸಿದ ಬಳಿಕ ಹಿಂದೂ ಕುಟುಂಬದಲ್ಲಿ ನನ್ನಂಥ ಹೆಂಗುಸಿಗೆ ಎಡೆಯೆ ಇಲ್ಲ. ದೇವನು ದಯಾಹೀನನೆಂದು ನೀವು ಭಾವಿಸಿದ್ದೀರಿ. ಆದರೆ...."

ವಿರಾಜ ತನ್ನ ಮಾತನ್ನು ಪೂರ್ಣಗೊಳಿಸುವ ಮೊದಲೆ ಪುಟ್ಟಿಯು ಧಾರೆಗಟ್ಟೆ ಹರಿಯುತ್ತಿರುವ ಕಂಬನಿಗಳಿಂದ ಬಿಗಿದ ಕಂಠದಿಂದ "ಅಬ್ಬಾ - ದೇವರ ದಯವನ್ನೆಂತು ಬಂಣಿಸಲಿ !" ಎಂದು ಸಿಡಿದೆರಗಿದಳು.

ಪುಟ್ಟಿಯು ಅಳುತ್ತಳುತ್ತಲೆ ಈ ಎಲ್ಲ ಮಾತನ್ನು ಮೌನವಾಗಿ ಕೇಳುತಿದ್ದಳು. ಆದರೆ ಕೊನೆಯ ಮಾತು ಅವಳಿಗೆ ಸಹನವಾಗದ್ದರಿಂದಲೆ ಅವಳು ಹಾಗೆ ಸಿಡಿದಳು. ಪುಟ್ಟಿಯು ಅಳುತ್ತಲೆ — "ಇಲ್ಲಿಲ್ಲ, ದೇವರಲ್ಲಿ ಸ್ವಲ್ಪವೂ ದಯೆಯಿಲ್ಲ ; ನ್ಯಾಯಾನ್ಯಾಯ ವಿಚಾರ ಬುದ್ಧಿಯೂ ಇಲ್ಲ. ನಿಜವಾದ ಅಪರಾಧಿಗಳಿಗೆ ಯಾವ ಶಿಕ್ಷೆಯೂ ಆಗಲಿಲ್ಲ. ಶಿಕ್ಷೆಯಾದದ್ದು ನಮಗೆ; ಆದೂ ಕೂಡ ಕಠಿಣ ಶಿಕ್ಷೆ !"

ಪುಟ್ಟಿಯು ಒಂದೆ ಸವನೆ ಅಳುತಿದ್ದುದನ್ನು ನೋಡಿ ವಿರಾಜ ಮುಗುಳುನಕ್ಕಳು. ಆ ನಗೆ ಅದೆಷ್ಟು ಮಧುರವಾದುದು ! ಅದೆಷ್ಟು ಸ್ನೇಹಪೂರ್ಣವಾದುದು ! ವಿರಾಜ ಕೃತ್ರಿಮ ಕೋಪದಿಂದ — "ಸುಮ್ಮನಿರೆ ಹುಚ್ಚಿ, ಬೊಬ್ಬೆ ಹಾಕಬೇಡ" ಎಂದಳು.

ಚಟ್ಟನೆದ್ದು ಪುಟ್ಟಿಯು ಅತ್ತಿಗೆಯ ಕತ್ತನ್ನು ತಬ್ಬಿಕೊಂಡು ಏರುದನಿಯಲ್ಲಿ ಕೂಗತೊಡಗಿದಳು — "ನಮ್ಮನ್ನು ಬಿಟ್ಟು ಹೋಗಬೇಡ ಅತ್ತಿಗೆ ! ನಿನ್ನ ವಿಯೋಗವನ್ನು ನಾವಾರೂ ಸಹಿಸಲಾರೆವು. ನೀನು ಔಷಧೋಪಚಾರ ಹೊಂದು. ಯಾವುದಾದರೊಂದು ಒಳ್ಳೆಯ ಆರೋಗ್ಯ ಧಾಮಕ್ಕೆ ಹೋಗಿ ಸುಖವಾಗಿರು ಅತ್ತಿಗೆ ! ನಿನ್ನ ಕಾಲಿಗೆ ಬೀಳುವೆ, ಹೇಗಾದರೂ ಇನ್ನೆರಡು ದಿನ ಬಾಳು."

ಪುಟ್ಟಿಯು ಚೀರಾಟ ಕೇಳಿ ನೀಲಾಂಬರ ಪೂಜೆ ನಿಲ್ಲಿಸಿದ. ಭಯದಿಂದ ನಡುಗುವ ಕಾಲುಗಳಿಂದಲೆ ಮೆಲ್ಲಗೆ ಮರೆಗೆ ಬಂದು ನಿಂತುಕೊಂಡ. ಪುಟ್ಟಿಯು ಬಡಬಡಿಸುತ್ತ — "ಹೇಗಾದರೂ ಇನ್ನೆರಡು ದಿನ ಜೀವ ಹಿಡಿದುಕೊಂಡಿರು ಅತ್ತಿಗೆ" ಎಂದು ಬೇಡಿಕೊಳ್ಳತೊಡಗಿದಳು. ವಿರಾಜಳ ಕಂಣು

ಗಳಿಂದ ಕಂಬನಿಗಳೆರಡು ಜಾರಿದವು. ಸಾವಧಾನದಿಂದ ಅಕ್ಕನ ಕಂಬನಿ ಒರೆಸಿ ಮೋಹಿನಿಯು ಪುಟ್ಟಿಯನ್ನು ತನ್ನೆಡೆಗೆ ಸೆಳೆದುಕೊಂಡಳು. ವಿರಾಜ ಒಮ್ಮಿಗೆ ತಂಗಿಯ ಮಡಿಲಲ್ಲಿ ಮುಖ ಹುದುಗಿಸಿ, ಎಲ್ಲರನ್ನೂ ಅಳುವಂತೆ ಮಾಡಿ ತಾನೂ ಅಳತೊಡಗಿದಳು. ಬಹಳಷ್ಟು ಹೊತ್ತು ಒಂದೆ ಸವನೆ ಅತ್ತ ಬಳಿಕ ವಿರಾಜ ಇಳಿದನಿಯಲ್ಲಿ — "ಅಳಬೇಡಮ್ಮ ಪುಟ್ಟೀ. ನನ್ನೊಂದು ಮಾತು ಕೇಳು" ಎಂದಳು.

ನೀಲಾಂಬರ ಮರೆಯಲ್ಲಿ ನಿಂತು ಕೇಳತೊಡಗಿದ. ವಿರಾಜ ಪ್ರಜ್ಞೆಯಲ್ಲಿ ಮಾತನಾಡುತ್ತಿರುವುದನ್ನು ಕಂಡು ಅವಳ ಅವಸಾನ ಸಮೀಪಿಸಿತೆಂದು ಅವನು ತಿಳಿದುಕೊಂಡನು.

ವಿರಾಜ ಹೇಳತೊಡಗಿದಳು — "ಪುಟ್ಟೀ, ಪೂರ್ಣವಾಗಿ ಅರಿತುಕೊಳ್ಳದೆ ದೇವನನ್ನು ಶಪಿಸಬೇಡಮ್ಮ; ಪ್ರತಿಯೊಬ್ಬರ ವಿಷಯವನ್ನೂ ಭಗವಂತನು ಅತಿಸೂಕ್ಷ್ಮ ದೃಷ್ಟಿಯಿಟ್ಟುಕೊಂಡು ವಿಚಾರ ಮಾಡುತ್ತಾನೆ. ನನ್ನ ಈ ಪರಿಸ್ಥಿತಿಯಲ್ಲಿ ನನಗೆಂತಹ ದಯೆ ತೋರಿದ್ದಾನೆಂಬುದು ನಾನಲ್ಲದೆ ಬೇರಾರೂ ಅರಿಯರು. ಸಾವೆ ನನಗೀಗ ಜೀವನವಿದ್ದಂತೆ. ನಾನು ನಿಮ್ಮನ್ನಗಲಿದ ಬಳಿಕ ಎಲ್ಲವೂ ನಿಮಗೆ ತಿಳಿದು ಬರುವುದು. ದೇವರು ನನ್ನ ಒಂದು ಕಂಣು ಹಾಗೂ ಕೈಯನ್ನು ಸೆಳೆದುಕೊಂಡಿದ್ದಾನೆಂದು ನೀವು ದೂರುತ್ತಿದ್ದೀರಿ. ಆದರೆ ಇಂದಿಲ್ಲ ನಾಳೆಯಾದರೂ ಇವು ಹೋಗುವ ವಸ್ತುಗಳೆ. ಆದರೆ ಇಷ್ಟೆ ಶಿಕ್ಷೆಯಿತ್ತು ಅವನು ನನ್ನನ್ನು ನಿಮಗೆ ಒಪ್ಪಿಸಿದಾನೆ. ಇದನ್ನು ನೀವು ಅದೆಂತು ಮರೆಯಬಲ್ಲಿರಿ ಪುಟ್ಟೀ !"

"ಅವನು ಒಪ್ಪಿಸಿದುದು ಮಂಣು" ಎಂದು ಮೂದಲಿಸಿ ಪುಟ್ಟಿ ಅಳತೊಡಗಿದಳು.

ಭಗವಂತನ ದಯೆಯಲ್ಲಾಗಲಿ ಸೂಕ್ಷ್ಮ ದೃಷ್ಟಿಯಲ್ಲಾಗಲಿ ಪುಟ್ಟಿಗೆ ಸ್ವಲ್ಪವೂ ನಂಬುಗೆಯಾಗಲಿಲ್ಲ. ಬದಲು, ಭಗವಂತನು ಆರಂಭದಿಂದಲೂ ಅನ್ಯಾಯ, ಅತ್ಯಾಚಾರಗಳನ್ನೆ ಮಾಡಿದ್ದಾನೆಂದು ಅವಳಿಗೆನಿಸಿತು. ಸ್ವಲ್ಪ ಸಮಯ ತಡೆದು ವಿರಾಜಳೆಂದಳು — "ಪುಟ್ಟೀ, ನಿನ್ನಂಣ ಎಲ್ಲಿದ್ದಾರೆಯೆ ? ಅವರನ್ನು ಸ್ವಲ್ಪ ಕರೆ. ನೋಡಿ ಬಹಳ ಹೊತ್ತಾಯಿತು."

ನೀಲಾಂಬರ ಸನಿಹದಲ್ಲಿ, ಗೋಡೆಗೆ ಮರೆಯಾಗಿ ನಿಂತಿದ್ದ. ಅವನು ಬಂದ ಕೂಡಲೆ ಮೋಹಿನಿಯು ಹಾಸಿಗೆ ಬಿಟ್ಟು ದೂರ ಹೋಗಿ ನಿಂತಳು.

ನೀಲಾಂಬರ ವಿರಾಜಳ ತಲೆಯ ಬದಿ ಕುಳಿತ. ಹೆಂಡತಿಯ ಕೈಯನ್ನು ಅತಿ ಜತನದಿಂದ ಹಿಡಿದು ನಾಡಿ ಪರೀಕ್ಷಿಸತೊಡಗಿದ. ನಿಜವಾಗಿಯೂ ವಿರಾಜಳ ನಾಡಿ ಬಲಗುಂದಿತ್ತು. ಜ್ವರದ ಜೇಗೆಯಲ್ಲಿ ಹೀಗೆ ಬಡಬಡಿಸುತ್ತಿದ್ದಾಳೆಂದೂ ಬೇಗೆ ಕಡಮೆಯಾದಂತೆ ಅವಳ ಅವಸಾನ ಕಾಲವೂ ಸಮೀಪಿಸುವುದೆಂದೂ ನೀಲಾಂಬರ ಮರೆಯಲ್ಲಿ ನಿಂತಾಗಲೆ ಊಹಿಸಿದ್ದ. ನಾಡಿಯನ್ನು ಪರೀಕ್ಷಿಸಿದಾಗ ತನ್ನ ಊಹೆ ಸರಿಯೆಂದೆನಿಸಿತು.

"ನೀವೂ ಒಳ್ಳೆಯ ನಾಡಿ ಪರೀಕ್ಷಕರು!" ಎಂದು ವಿರಾಜ ಗೇಲಿಯಾಡಿ ನಗತೊಡಗಿದಳು.

ಇದೆಂತಹ ಮರ್ಮಾಂತಿಕ ಪರಿಹಾಸ! ನಾಡಿ ನೋಡಿದೊಡನೆಯೆ ಹತಾಶನಾಗಿ ನೀಲಾಂಬರನ ಮುಖ ಕಪ್ಪಿಟ್ಟಿತು. ಅವಳ ಚೇಷ್ಟೆಯಿಂದ ಅವನ ಹೃದಯಕ್ಕೆ ನೋವಾಗಿ ಮುಖ ಕಪ್ಪಿಟ್ಟಿತೆಂದು ಅಲ್ಲಿ ನಿಂತ ಜನ ಭಾವಿಸಿದರು. ಗಂಡನ ಮುಖ ವಿವರ್ಣವಾದುದನ್ನು ಬಹುಶಃ ವಿರಾಜಳೂ ನೋಡಿರಬಹುದು. ಪಶ್ಚಾತ್ತಾಪ ಪ್ರಕಟಿಸುತ್ತ ತಟ್ಟನೆ ನುಡಿದಳು. "ಅಲ್ಲ, ಹಾಗಲ್ಲ ನನ್ನ ಅರ್ಥ. ಹೇಳಿ, ಈಗ ಹೇಗಿದೆ ನನಗೆ? ಇನ್ನೂ ಎಷ್ಟು ಹೊತ್ತು ಜೀವಿಸಿರಬಲ್ಲೆ?"

ಬಳಿಕ ವಿರಾಜ ಅತ್ಯಂತ ಪ್ರಯಾಸದಿಂದ ತನ್ನ ತಲೆಯನ್ನು ಗಂಡನ ತೊಡೆಯ ಮೇಲಿರಿಸುತ್ತ—"ನನ್ನನ್ನು ಕ್ಷಮಿಸಿದಿರೊ ಇಲ್ಲವೊ ಎಂಬುದನ್ನು ಎಲ್ಲರ ಸಮಕ್ಷಮ ಹೇಳಿಬಿಡಿ" ಎಂದಳು. ನೀಲಾಂಬರನು ಬಿಗಿದ ಕಂಠದಿಂದ "ಕ್ಷಮಿಸಿದ್ದೇನೆ" ಎಂದು ಕಂಣನ್ನು ಒತ್ತಿಕೊಂಡ.

ವಿರಾಜ ಅರೆಕ್ಷಣ ಕಂಣು ಮುಚ್ಚಿ ಬಳಿಕ ಮೃದು ದನಿಯಲ್ಲಿ ಹೇಳತೊಡಗಿದಳು—"ಇಷ್ಟು ದಿನಗಳ ವರೆಗೆ ನಾನು ಈ ಕುಟುಂಬದ ಯಜಮಾನಿಯಾಗಿದ್ದೆ. ಈ ವರೆಗೆ ನಾನೆಷ್ಟೊ ತಪ್ಪುತಡೆ ಮಾಡಿರುವೆ. ನಿಮ್ಮೊಂದಿಗೆ ಅನೇಕ ಸಲ ಅನ್ಯಾಯವಾಗಿ ನಡೆದುಕೊಂಡಿರಬಹುದು. ಆದುದರಿಂದ ತಂಗೀ, ನನ್ನ ಮಾತನ್ನಿಷ್ಟು ಕೇಳು. ನನ್ನ ಮುದ್ದು ಸ್ವಾದಿನಿಯೆ, ನೀನೂ ಕೇಳು. ನಾನಿಂದು ಹೊರಡಲಿದ್ದೇನೆ. ನನ್ನೆಲ್ಲ ತಪ್ಪು ತಡೆಗಳನ್ನು ನನ್ನ ಅನ್ಯಾಯ ಉಪದ್ರವಗಳನ್ನು ನುಂಗಿ ನನ್ನನ್ನು ಬೀಳ್ಕೊಡಿರಿ."

ವಿರಾಜ ಕೈಯನ್ನು ಮುಂದೆ ಮಾಡಿ ಗಂಡನ ಚರಣಗಳನ್ನು ಹುಡುಕತೊಡಗಿದಳು. ನೀಲಾಂಬರನು ತನ್ನ ಕಾಲನ್ನು ಹೊರದೆಗೆದು ದಿಂಬಿನ

ಮೇಲೆ ಇಟ್ಟನು. ವಿರಾಜ ಗಂಡನ ಪಾದ ಧೂಳಿಯನ್ನು ತಲೆಗೆ ಸವರಿ ಕೊಳ್ಳುತ್ತ ಹೇಳಿದಳು: "ಎಷ್ಟೋ ದಿನಗಳಿಂದ ನಾನು ಅನೇಕ ದುಃಖ ಬವಣೆಗಳನ್ನು ಸಹಿಸಿದೆ. ಅವೆಲ್ಲವೂ ಇಂದು ಸಾರ್ಥಕವಾದವು. ಇನ್ನು ನನಗಾವ ಚಿಂತೆಯೂ ಇಲ್ಲ. ನನ್ನ ಈ ದೇಹ ಪವಿತ್ರವಾಗಿದೆ. ನಾನಿನ್ನು ಹೊರಟೆ. ಅದಕ್ಕಾಗಿ ಈಗಲೆ ಸಿದ್ಧಳಾಗಿರುವೆ" ಎಂದು ವಿರಾಜ ಮಗ್ನಳಾದಳು. ಗಂಡನ ತೊಡೆಯಲ್ಲಿ ಮುಖವಡಿಸಿ — "ನನ್ನನ್ನು ಹೀಗೆ ಇರಗೊಡಿ, ನನ್ನನ್ನು ಬಿಟ್ಟು ಎಲ್ಲಿಗೂ ಹೋಗಬೇಡಿ" ಎಂದು ಪ್ರಾರ್ಥಿಸಿಕೊಂಡಳು.

ವಿರಾಜ ಸುಮ್ಮನಾದಳು. ಹೆಚ್ಚಿಗೆ ಮಾತನಾಡುವಷ್ಟು ಶಕ್ತಿಯೂ ಅವಳಿಗಿರಲಿಲ್ಲ. ಅವಳು ಸೋತು ಹೋಗಿದ್ದಳು.

ಜನರೆಲ್ಲರೂ ಒಣಮುಖ ಮಾಡಿಕೊಂಡು ಅಲ್ಲಿಯೆ ಕುಳಿತರು. ಮಧ್ಯರಾತ್ರಿಯಾದ ಬಳಿಕ ವಿರಾಜ ಯದ್ವಾ ತದ್ವಾ ಬಡಬಡಿಸತೊಡಗಿದಳು. ನದಿಯಲ್ಲಿ ತಾನು ಹಾರಿದ ಸುದ್ದಿ, ಆಸ್ಪತ್ರೆಗೆ ತಾನು ಸೇರಿದ ವರ್ತಮಾನ, ಉದ್ದೇಶವಿಲ್ಲದೆ ಅತ್ತಿತ್ತ ಅಲೆದ ವೃತ್ತಾಂತ ಎಲ್ಲವನ್ನೂ ಹೇಳಿದಳು. ಆದರೆ ಈ ಎಲ್ಲ ಕಥೆಯಲ್ಲಿ ಮೊದಲಿನಿಂದ ಕೊನೆಯವರೆಗೆ ಒಂದೇ ಒಂದು ಮಾತು ಎದ್ದು ಕಾಣುತಿತ್ತು – ಕ್ಷಣ ಹೊತ್ತಿನ ತಪ್ಪಿನಿಂದ ಆ ಸತಿ-ಸಾಧ್ವಿಯ ಅತ್ಯಂತ ಕಠೋರವಾದ ಏಕಾಗ್ರವಾದ ಪತಿಪ್ರೇಮ ಅವಳ ಹೃದಯವನ್ನು ಒಂದೇ ಸವನೆ ಸುಡುತ್ತಿತ್ತು.''

ವಿರಾಜ ಮನೆಗೆ ಮರಳಿ ಬಂದ ಬಳಿಕ ಕೆಲ ದಿನಗಳಿಂದ ನೀಲಾಂಬರನು ಅವಳ ಬಳಿಯಲ್ಲಿಯೆ ಕುಳಿತು ಊಟ ಮಾಡಬೇಕಾಗಿ ಬಂದಿತು. ಅಂದು ವಿರಾಜ ಕೆಲ ಸಲ ನೆಗೆಂಣಿಯನ್ನು ಕೂಗಿ, ಕೆಲ ಸಲ ಪುಟ್ಟಿಯನ್ನು ಕೂಗಿ ಏನೇನೋ ಬಡಬಡಿಸತೊಡಗಿದಳು.

ಬೆಳಗು ಬೆಳಗಾಗುತ್ತಲೆ ಅವಳ ಬಡಬಡಿಕೆ ನಿಂತಂತಾಗಿ, ಶ್ವಾಸೋಚ್ಛ್ವಾಸ ಜೋರಾಗಿ ಪ್ರಾರಂಭವಾಯಿತು. ವಿರಾಜ ಪುನಃ ಕಣ್ದೆರೆಯಲೆ ಇಲ್ಲ; ಮಾತನ್ನೂ ಆಡಲಿಲ್ಲ. ಗಂಡನ ತೊಡೆಯಲ್ಲಿ ತಲೆಯಿಟ್ಟು ಸೂರ್ಯೋದಯ ಸಮಯ ಅವಳ ಜೀವನ ಲೀಲೆ ಸಮಾಪ್ತವಾಯಿತು.

ಈ ರೀತಿ ಓರ್ವ ದುಃಖಿನಿಯ ದುಃಖವು ಕೊನೆಗಂಡಿತು.